ಸೋಮವಾರ, ಅಕ್ಟೋಬರ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 299 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಅಗ್ರಿಕಲ್ಚರ್, ಆರ್ಟ್ಸ್ ಅಂಡ್ ಸೈನ್ಸ್ ಮತ್ತು ಎಐ ಆ್ಯಂಡ್ ಮಷೀನ್ ಲರ್ನಿಂಗ್ ಹೀಗೆ ವಿವಿಧ ಕೋರ್ಸ್‌ಗಳಲ್ಲಿ ಕಲಿಯುತ್ತಿರುವವರಿಗಾಗಿ ಲಭ್ಯವಿರುವ ಸ್ಕಾಲರ್‌ಷಿಪ್



ಆಳ-ಅಗಲ
ಮಹಾ 'ಹಣಾಹಣಿ'

ಕಾಶ್ಮೀರ: ಒಳನುಸುಳುವಿಕೆ ಅವ್ಯಾಹತ? 9
ಕಳಪೆ ಹೆಲ್ಮೆಟ್ ವಿರುದ್ಧ ಕಾರ್ಯಾಚರಣೆ 10
ಉಪ ಚುನಾವಣೆ ಗೆಲುವಿಗೆ 'ಕೈ' ರಣತಂತ್ರ 8



ವಕ್ಫ್ ಆಸ್ತಿ ವಿವಾದ: ಟಾಸ್ಕ್ ಫೋರ್ಸ್ ರಚನೆ

ವಿಜಯಪುರ: 'ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ಆಸ್ತಿ ಕುರಿತು ಉಂಟಾಗಿರುವ ಗೊಂದಲ, ವಿವಾದವನ್ನು ಪರಿಹರಿಸುವುದಕ್ಕಾಗಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗುವುದು. ಈ ಟಾಸ್ಕ್ ಫೋರ್ಸ್ 1974 ರ ಗೆಜೆಟ್ ಪೂರ್ವದ ಜಿಲ್ಲೆಯ ಎಲ್ಲ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿ, ಈಗ ಉಂಟಾಗಿರುವ ಗೊಂದಲ ಬಗೆಹರಿಸಲಿದೆ' ಎಂದು ಜಿಲ್ಲಾಉಸ್ತುವಾರಿ ಹಾಗೂ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು. 5

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಜನರ ಆತಂಕ, ಭಯವೇ ವಂಚಕರ ಬಂಡವಾಳ: ಸಿಇಆರ್‌ಟಿ–ಇನ್

ಸೈಬರ್ ವಂಚನೆ ತಡೆಗೆ ಕ್ರಮ

ನವದೆಹಲಿ (ಪಿಟಿಐ): ಸೈಬರ್ ಸುರಕ್ಷತಾ ಸಂಸ್ಥೆಯಾದ ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಸ್ಪಂದನಾ ತಂಡವು (ಸಿಇಆರ್‌ಟಿ–ಇನ್) ಸೈಬರ್ ವಂಚನೆಯ ಹತ್ತಕ್ಕೂ ಹೆಚ್ಚು ವಿಧಾನಗಳ ಕುರಿತ ಮಾಹಿತಿಯನ್ನು ಹಂಚಿಕೊಂಡಿದೆ.

ಡಿಜಿಟಲ್ ಅರೆಸ್ಟ್ ಸೇರಿ ವಿವಿಧ ರೀತಿಯ ವಂಚನೆಗಳ ಮೂಲಕ ಜನರ ಹಣ ಮತ್ತು ಖಾಸಗಿ ಮಾಹಿತಿಯನ್ನು ಹೇಗೆ ಕದಿಯಲಾಗುತ್ತದೆ ಎಂಬುದನ್ನು ವಿವರಿಸಲಾಗಿದೆ. ಈ ರೀತಿಯಲ್ಲಿ ವಂಚನೆಯ ಪ್ರಯತ್ನ ನಡೆದಾಗ ಜನರು ಯಾವ ರೀತಿಯ ಎಚ್ಚರಿಕೆ ವಹಿಸಬೇಕು ಎಂಬುದನ್ನೂ ತಿಳಿಸಲಾಗಿದೆ.

ಯಾವ ಯಾವ ರೀತಿ ವಂಚನೆ?

- **ಡಿಜಿಟಲ್ ಅರೆಸ್ಟ್:** ವಂಚಕರು ಸಿಬಿಐ, ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಸುಂಕಾಧಿಕಾರಿಗಳ ಸೋಗಿನಲ್ಲಿ ಸಂತ್ರಸ್ತರಿಗೆ ದೂರವಾಣಿ ಕರೆ ಮಾಡುತ್ತಾರೆ. ಆನಂತರ, 'ನೀವು ನಿಷೇಧಿತ ವಸ್ತುವನ್ನು ಆಮದು ಮಾಡಿಕೊಂಡಿದ್ದೀರಿ/ ಭಯೋತ್ಪಾದಕ ಕೃತ್ಯಗಳಿಗೆ ನಿಮ್ಮ ಮೊಬೈಲ್ ಬಳಕೆಯಾಗಿದೆ/ ದೊಡ್ಡ ಮಟ್ಟದ ಹಣಕಾಸು ವಂಚನೆ ಎಸಗಿದ್ದೀರಿ' ಎಂದು ಆರೋಪಿಸುತ್ತಾರೆ.


5ನೇ ಪುಟ ನೋಡಿ

ಜಾಗೃತಿಯೇ ರಕ್ಷಣೆಯ ದಾರಿ: ಪ್ರಧಾನಿ ನರೇಂದ್ರ ಮೋದಿ

'ಡಿಜಿಟಲ್ ಬಂಧನ'ದ ಹೆಸರಿನಲ್ಲಿ ನಡೆಯುತ್ತಿರುವ ಸೈಬರ್ ಅಪರಾಧಗಳಿಂದ ಸಮಾಜದ ಎಲ್ಲ ವರ್ಗದ ಜನರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಇಂತಹ ವಂಚನೆಯ ಪ್ರಯತ್ನಗಳು ನಡೆದಾಗ 'ನಿಲ್ಲಿ, ಯೋಚಿಸಿ ಮತ್ತು ಕ್ರಮ ಕೈಗೊಳ್ಳಿ' ಎಂಬ ನೀತಿಯನ್ನು ಅನುಸರಿಸಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ. .

ತಿಂಗಳ ಕೊನೆಯ ಭಾನುವಾರ ನಡೆಸುವ 'ಮನದ ಮಾತು' ಕಾರ್ಯಕ್ರಮದಲ್ಲಿ ಈ ವಿಷಯ ಪ್ರಸ್ತಾಪಿಸಿದರು.

'ಡಿಜಿಟಲ್ ಬಂಧನ'ದ ಹೆಸರಿನಲ್ಲಿ ನಡೆಯುವ ವಂಚನೆಯನ್ನು ತಡೆಯಲು ಎಲ್ಲ ತನಿಖಾ ಸಂಸ್ಥೆಗಳು ರಾಜ್ಯ ಸರ್ಕಾರದ ಜತೆಗೂಡಿ ಕೆಲಸ ಮಾಡುತ್ತಿವೆ. ಈ ಅಪರಾಧಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ' ಎಂದಿದ್ದಾರೆ.




ವ್ಯಕ್ತಿಗಳ ಮಾಹಿತಿ ಸಂಗ್ರಹಿಸಿದ ಬಳಿಕ ತನಿಖಾ ಸಂಸ್ಥೆಗಳ ಸೋಗಿನಲ್ಲಿ ಯಾವ ರೀತಿಯಾಗಿ ವಂಚನೆ ಮಾಡುತ್ತಾರೆ ಎಂಬುದರ ಕುರಿತು ಪ್ರಧಾನಿ ನರೇಂದ್ರ ಮೋದಿ ವಿಡಿಯೊವೊಂದನ್ನು ಹಂಚಿಕೊಂಡಿದ್ದಾರೆ.

ಕರೆ ಮಾಡಿ: ಬಂಧನದ ಹೆಸರಿನಲ್ಲಿ ಕರೆ ಮಾಡಿದರೆ, ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1930ಕ್ಕೆ ಕರೆ ಮಾಡಿ, ದೂರು ನೀಡಿ. ವೆಬ್‌ಸೈಟ್ ಮೂಲಕ ದೂರು ದಾಖಲಿಸಿ, ನಂತರ ಹತ್ತಿರದ ಪೊಲೀಸರಿಗೆ ಈ ಕುರಿತು ದೂರು ನೀಡಬೇಕು ಎಂದು ತಿಳಿಸಿದ್ದಾರೆ.

'ಕರೆ ಮಾಡಿದ ವ್ಯಕ್ತಿಯ ಜತೆ ನಡೆಸಿದ ಸಂವಹನವನ್ನು ರೆಕಾರ್ಡ್ ಮಾಡುವ ಜತೆಗೆ ಸ್ಕ್ರೀನ್‌ಶಾಟ್ ತೆಗೆದಿಟ್ಟುಕೊಳ್ಳಬೇಕು' ಎಂದಿದ್ದಾರೆ.

ಮಾರ್ಗಸೂಚಿಯಲ್ಲಿ ಹೇಳಿದ್ದೇನು?

- ಸರ್ಕಾರಿ ಸಂಸ್ಥೆಗಳು ಸಂವಹನಕ್ಕಾಗಿ ವಾಟ್ಸ್‌ಆ್ಯಪ್ ಅಥವಾ ಸ್ಕೈಪ್‌ನಂತಹ ವೇದಿಕೆಗಳನ್ನು ಬಳಕೆ ಮಾಡುವುದಿಲ್ಲ
- ಕರೆ ಮಾಡಿ ಹಣ ಅಕ್ರಮ ವರ್ಗಾವಣೆ, ಡ್ರಗ್ ಕಳ್ಳಸಾಗಣೆಯಂತಹ ಆರೋಪ ಮಾಡಿದ ಸಂದರ್ಭದಲ್ಲಿ ಆತಂಕಗೊಳ್ಳಬೇಡಿ. ನಿಮ್ಮ ಭಯ ಮತ್ತು ಆತುರವನ್ನೇ ವಂಚಕರು ಬಂಡವಾಳವಾಗಿ ಬಳಸಿಕೊಳ್ಳುತ್ತಾರೆ
- ಫೋನ್ ಅಥವಾ ಸಾಮಾಜಿಕ ಮಾಧ್ಯಮಗಳ ಮೂಲಕ ವೈಯಕ್ತಿಕ ಮಾಹಿತಿ, ಬ್ಯಾಂಕ್ ಮಾಹಿತಿಯನ್ನು ಹಂಚಿಕೊಳ್ಳಬೇಡಿ
- ವಂಚಕರಿಗೆ ಪ್ರತಿಕ್ರಿಯಿಸುವ ಮುನ್ನ ತಾಳ್ಮೆಯಿಂದ ಯೋಚಿಸಿ. ಒತ್ತಡದಲ್ಲಿದ್ದಾಗ ಹಣ ವರ್ಗಾವಣೆ ಮಾಡಬೇಡಿ
- ತನಿಖಾ ಸಂಸ್ಥೆಗಳು ತಕ್ಷಣ ಹಣ ವರ್ಗಾವಣೆ ಮಾಡುವಂತೆ ಎಂದಿಗೂ ಒತ್ತಡ ಹೇರುವುದಿಲ್ಲ
- ಫೋನ್ ಅಥವಾ ಅನ್‌ಲೈನ್ ಮೂಲಕ ಹಣಕ್ಕೆ ಬೇಡಿಕೆ ಇಟ್ಟಲ್ಲಿ ಬಹುತೇಕ ಅದು ಆನ್‌ಲೈನ್ ವಂಚನೆಯೇ ಆಗಿರುತ್ತದೆ
- ಆನ್‌ಲೈನ್ ವಂಚನೆಯ ಅನುಮಾನ ಬಂದರೆ, ಸಂಬಂಧಿತ ಸಂಸ್ಥೆಗಳನ್ನು ಸಂಪರ್ಕಿಸಿ ಪರಿಶೀಲಿಸಿ
- ಎಚ್ಚರಿಕೆಯಿಂದ ಇರುವುದು ಆನ್‌ಲೈನ್ ವಂಚನೆಯಿಂದ ಪಾರಾಗುವ ಪ್ರಮುಖ 'ಅಸ್ತ್ರ'



ಮತ್ತೆ 50 ವಿಮಾನಕ್ಕೆ ಬೆದರಿಕೆ

ನವದೆಹಲಿ (ಪಿಟಿಐ): ಭಾರತದ ವಿವಿಧ ವಿಮಾನಯಾನ ಸಂಸ್ಥೆಗಳ ಸುಮಾರು 50 ವಿಮಾನಗಳಿಗೆ ಬಾಂಬ್ ಬೆದರಿಕೆಯ ಹುಸಿ ಸಂದೇಶಗಳು ಭಾನುವಾರ ಬಂದಿವೆ ಎಂದು ಮೂಲಗಳು ತಿಳಿಸಿವೆ.

ಕಳೆದ 14 ದಿನಗಳಲ್ಲಿ ವಿವಿಧ ವಿಮಾನಯಾನ ಸಂಸ್ಥೆಗಳ 350 ವಿಮಾನಗಳಿಗೆ ಇಂತಹ ಕರೆ, ಸಂದೇಶಗಳು ಜಾಲತಾಣಗಳ ಮೂಲಕ ಬಂದಿವೆ.

'15 ವಿಮಾನಗಳಲ್ಲಿ ಬಾಂಬ್ ಇಡಲಾಗಿದೆ ಎಂದು ಸಂದೇಶ ಬಂದಿತ್ತು. ಪರಿಶೀಲಿಸಿದಾಗ, ಅದು ಹುಸಿ ಎಂದು ತಿಳಿಯಿತು' ಎಂದು ಅಕಾಸಾ ಏರ್ ಸಂಸ್ಥೆಯು ತಿಳಿಸಿದೆ. ಇಂಡಿಗೊ ಸಂಸ್ಥೆಯ 18 ಮತ್ತು ವಿಸ್ತಾರಾ ಸಂಸ್ಥೆಯ 17 ವಿಮಾನಗಳಿಗೆ ಇಂತಹ ಸಂದೇಶಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

10 ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ

ಲಖನೌ/ತಿರುಪತಿ: ಪ್ರಮುಖ ಹೋಟೆಲ್‌ಗಳಾದ 'ಮ್ಯಾರಿಯೆಟ್', 'ಪಿಕಡಿಲಿ', 'ಲೆಮನ್ ಟ್ರೀ' ಹಾಗೂ 'ಕ್ಲಾರ್ಕ್ಸ್ ಅವಧ್' ಸೇರಿದಂತೆ ಲಖನೌನ 10 ಹೋಟೆಲ್‌ಗಳಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. 55 ಸಾವಿರ ಡಾಲರ್ (ಸುಮಾರು ₹46.25 ಲಕ್ಷ) ನೀಡುವಂತೆ ಬೇಡಿಕೆ ಇಡಲಾಗಿದೆ.

'ಹೋಟೆಲ್‌ನ ನೆಲಮಹಡಿಯಲ್ಲಿ ಕಪ್ಪು ಬ್ಯಾಗ್‌ನಲ್ಲಿ ಬಾಂಬ್ ಇರಿಸಲಾಗಿದೆ. ನನಗೆ 55 ಸಾವಿರ ಡಾಲರ್ ಬೇಕು. ಇಷ್ಟು ಹಣವನ್ನು ನೀಡದಿದ್ದರೆ ನಾನು ಬಾಂಬ್ ಸ್ಫೋಟಿಸುತ್ತೇನೆ. ಎಲ್ಲೆಡೆ ರಕ್ತ ಚೆಲ್ಲಲಿದೆ' ಎಂದು ಇ–ಮೇಲ್‌ನಲ್ಲಿ ಬರೆಯಲಾಗಿತ್ತು. ಬಾಂಬ್ ನಿಷ್ಕ್ರಿಯಗೊಳಿಸಲು ಯತ್ನಿಸಿದರೂ ಬಾಂಬ್ ಸ್ಫೋಟಿಸಲಿದೆ ಎಂದು ಬರೆಯಲಾಗಿತ್ತು.

'ಬೆದರಿಕೆ ಬಂದ ಎಲ್ಲ ಹೋಟೆಲ್‌ಗಳ ಭದ್ರತೆಯನ್ನು ಹೆಚ್ಚಿಸಲಾಯಿತು. ಎಲ್ಲೆಡೆ ಶೋಧಕಾರ್ಯವನ್ನೂ ನಡೆಸಲಾಯಿತು. ಆದರೆ, ಯಾವುದೇ ವಸ್ತು ದೊರೆಯಲಿಲ್ಲ' ಎಂದು ಪೊಲೀಸರು ವಿವರಿಸಿದರು.

'ತಿರುಪತಿಯಲ್ಲಿನ 6 ಹೋಟೆಲ್‌ಗಳಿಗೂ ಬಾಂಬ್ ಬೆದರಿಕೆ ಸಂದೇಶ ಬಂದಿವೆ. ಈ ಎಲ್ಲವೂ ಹುಸಿ ಸಂದೇಶಗಳಾಗಿದ್ದವು' ಎಂದು ಪೊಲೀಸ್ ತಿಳಿಸಿದರು.

ಮುಕ್ತ ವಿ.ವಿ ಕುಲಪತಿಗೆ ನೋಟಿಸ್

ಮಾಹಿತಿ ನೀಡದ ಕೆಎಸ್‌ಒಯು: ಮಾಹಿತಿ ಆಯೋಗ ಕ್ರಮ

ಪ್ರಜಾವಾಣಿ ವಾರ್ತೆ

ಮೈಸೂರು: ಅರ್ಜಿದಾರರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಮಾಹಿತಿ ನೀಡದ್ದರಿಂದ ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವರು ಖುದ್ದಾಗಿ ನ.6ರಂದು ವಿಚಾರಣೆಗೆ ಹಾಜರಾಗುವಂತೆ 'ರಾಜ್ಯ ಮಾಹಿತಿ ಆಯೋಗ'ವು ನೋಟಿಸ್ ನೀಡಿದೆ. ಹೀಗೆ ಖುದ್ದು ಹಾಜರಾಗುವಂತೆ ಆಯೋಗವು ಕುಲಪತಿಯೊಬ್ಬರಿಗೆ ಸೂಚಿಸಿರುವುದು ಇದೇ ಮೊದಲು ಎನ್ನಲಾಗಿದೆ.

'ಕುಲಸಚಿವರ ವಿಭಾಗಕ್ಕೆ 2023ರ ಜ.10ರಿಂದ ಜ.20ರವರೆಗೆ ಬಂದಿರುವ ಅಂಚೆ ಅಥವಾ ಖುದ್ದಾಗಿ ಬಂದ ಪತ್ರಗಳ ಸ್ವೀಕೃತಿಯ ದಾಖಲಾತಿ ಪುಸ್ತಕದ ದೃಢೀಕೃತ ಪ್ರತಿಗಳನ್ನು ನೀಡಬೇಕು' ಎಂದು ಇಲ್ಲಿನ ವಿಜಯನಗರ ನಿವಾಸಿ ಆರ್.ಎನ್. ಸತ್ಯನಾರಾಯಣ ಅವರು 2024ರ ಮೇ.6ರಂದು ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ವಿಶ್ವವಿದ್ಯಾಲಯ ಉತ್ತರ ನೀಡಿರಲಿಲ್ಲ.

ಮಾಹಿತಿಯನ್ನು ಕಾಲಮಿತಿಯಲ್ಲಿ ನೀಡದೇ, ಕಚೇರಿಗೆ ಅಲೆದಾಡಿಸಿದ್ದಾರೆಂದು ಅರ್ಜಿದಾರರು, 2024ರ ಜುಲೈ 7ರಂದು ಮೇಲ್ಮನವಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದರು.

5ನೇ ಪುಟ ನೋಡಿ

ಬಾಂದ್ರಾ ರೈಲು ನಿಲ್ದಾಣದಲ್ಲಿ ಅವಘಡ, ಇಬ್ಬರ ಸ್ಥಿತಿ ಗಂಭೀರ

ಕಾಲ್ತುಳಿತ, 10 ಜನರಿಗೆ ಗಾಯ

ಮುಂಬೈ (ಪಿಟಿಐ): ಗೋರಖಪುರಕ್ಕೆ ತೆರಳುವ ರೈಲು ಏರಲು ಮುಂದಾದವರಿಂದ ಬಾಂದ್ರಾ ನಿಲ್ದಾಣದಲ್ಲಿ ನೂಕುನುಗ್ಗಲು ಉಂಟಾಗಿದ್ದರಿಂದ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ 10 ಮಂದಿಗೆ ಗಾಯಗಳಾಗಿವೆ ಎಂದು ಮುಂಬೈ ವಿಪತ್ತು ನಿಯಂತ್ರಣ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ. ಹತ್ತು ಮಂದಿಯ ಪೈಕಿ ಇಬ್ಬರಿಗೆ ಗಂಭೀರ ಗಾಯಗಳಾಗಿವೆ.

ದೀಪಾವಳಿ ಮತ್ತು ಛತ್ ಹಬ್ಬಗಳ ಕಾರಣಕ್ಕೆ ಊರಿಗೆ ತೆರಳಲು ಜನರು ಬಾಂದ್ರಾ ರೈಲು ನಿಲ್ದಾಣದಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ರೈಲು ಪ್ಲಾಟ್‌ಫಾರ್ಮ್‌ಗೆ ಬರುತ್ತಿದ್ದಾಗ, ಕಾಯ್ದಿರಿಸದ ಆಸನಗಳ ಬೋಗಿಗಳತ್ತ ಜನರು ಒಮ್ಮೆಗೇ ನುಗ್ಗಿದರು ಎಂದು ಮೂಲಗಳು ಹೇಳಿವೆ. ನಸುಕಿನ 2.45ರ ಸುಮಾರಿಗೆ, ರೈಲು ನಿಧಾನವಾಗಿ ಸಾಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಇಬ್ಬರು ಪ್ರಯಾಣಿಕರಿಗೆ ಮಾತ್ರ ಗಾಯಗಳಾಗಿವೆ ಎಂದು ಪಶ್ಚಿಮ ರೈಲ್ವೆ ಹೇಳಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

> **ಸಾರ್ವಜನಿಕ ಆಸ್ತಿಗಳ ನಿರ್ವಹಣೆಯಲ್ಲಿ ಉದಾಸೀನ ತಳೆದರೆ ಇಂತಹ ಅವಘಡಗಳು ನಡೆಯುತ್ತವೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

ಈ ಕಾಲ್ತುಳಿತಕ್ಕೆ ಸಂಬಂಧಿಸಿದ್ದು ಎನ್ನಲಾದ ಕೆಲವು ವಿಡಿಯೊಗಳು ಸಾಮಾಜಿಕ ಜಾಲತಾಣಗಳ ಮೂಲಕ ಹರಿದಾಡಿವೆ. ಒಂದು ವಿಡಿಯೊದಲ್ಲಿ, ಕಾಲಿಗೆ ಗಾಯಗಳಾದ ವ್ಯಕ್ತಿಯೊಬ್ಬರು ಪ್ಲಾಟ್‌ಫಾರ್ಮ್ ಮೇಲೆ ಬಿದ್ದಿದ್ದಾರೆ. ಇತರರು ಈ ವ್ಯಕ್ತಿಯನ್ನು ಗಮನಿಸದೆ ರೈಲು ಹತ್ತುತ್ತಿರುವುದು ದಾಖಲಾಗಿದೆ. ಕಾಲ್ತುಳಿತ ಸಂಭವಿಸಿದಾಗ ಪ್ಲಾಟ್‌ಫಾರ್ಮ್ ಸಂಖ್ಯೆ ಒಂದರತ್ತ ರೈಲು ಬರುತ್ತಿತ್ತು.

ರೈಲ್ವೆ ಸಚಿವರ ವಿರುದ್ಧ ಟೀಕೆ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಬುಲೆಟ್ ರೈಲು ಯೋಜನೆಯಲ್ಲಿ ಬಹಳ ತೊಡಗಿಸಿಕೊಂಡಿರುವ ಕಾರಣ ಮುಂಬೈನ ರೈಲು ಪ್ರಯಾಣಿಕರನ್ನು ಕಡೆಗಣಿಸಲಾಗಿದೆ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಟೀಕಿಸಿದ್ದಾರೆ.

10ನೇ ಪುಟ ನೋಡಿ



ಕಾಲ್ತುಳಿತದಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರು ಪ್ಲಾಟ್‌ಫಾರ್ಮ್ ಮೇಲೆ ಬಿದ್ದಿದ್ದರು –ಪಿಟಿಐ ಚಿತ್ರ

ವಾಣಿಜ್ಯ ವಾಹನ ಚಾಲಕ, ಮಾಲೀಕರ ದುಡಿಮೆಗೆ ಹೊಡೆತ

ಬಾಡಿಗೆಗೆ ಖಾಸಗಿ ವಾಹನ ಬಳಕೆ

ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಖಾಸಗಿ ಬಳಕೆಗೆ ಎಂದು ಖರೀದಿಸಿದ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪ್ರಯಾಣಿಕರನ್ನು ಒಯ್ಯಲು ಬಳಸುವವರ ಪ್ರಮಾಣ ಜಾಸ್ತಿಯಾಗುತ್ತಿದೆ. ಇದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವುದರ ಜೊತೆಗೆ ವಾಣಿಜ್ಯ ವಾಹನಗಳಲ್ಲಿ ದುಡಿಮೆಯನ್ನೇ ನಂಬಿ ಬದುಕುತ್ತಿರುವವರಿಗೆ ಹೊಡೆತ ನೀಡಿದೆ.

ವಾಣಿಜ್ಯ ವಾಹನಗಳಿಗೆ ಮಾಲೀಕರು ಅಧಿಕ ತೆರಿಗೆ ಪಾವತಿ ಮಾಡಬೇಕು. ಅವು ಹಳದಿ ಬಣ್ಣದ ನಂಬರ್ ಪ್ಲೇಟ್ ಹೊಂದಿರುತ್ತವೆ. ಸ್ವಂತಕ್ಕೆ ಬಳಸುವ ವಾಹನಗಳಿಗೆ ತೆರಿಗೆ ಕಡಿಮೆ ಇರುತ್ತದೆ. ಈ ವಾಹನಗಳು ಬಿಳಿ ಬಣ್ಣದ ನಂಬರ್‌ಪ್ಲೇಟ್ ಹೊಂದಿರುತ್ತವೆ. ತೆರಿಗೆ ತಪ್ಪಿಸಲು ಸ್ವಂತ ಬಳಕೆಯ ವಾಹನಗಳನ್ನು ಖರೀದಿಸಿ ಅದನ್ನು ವಾಣಿಜ್ಯ ವಾಹನಗಳಂತೆ ಬಳಸುತ್ತಿರುವುದೇ ಸಮಸ್ಯೆಗೆ ಕಾರಣವಾಗಿದೆ.



ಬಿಳಿ ನಂಬರ್‌ಪ್ಲೇಟ್ ಹೊಂದಿರುವ ವಾಹನ

'ಬೆಂಗಳೂರಿನಲ್ಲಿಯೇ ಸಾವಿರಾರು ಖಾಸಗಿ ವಾಹನಗಳನ್ನು ನಿಯಮ ಉಲ್ಲಂಘಿಸಿ ಬಾಡಿಗೆ ಸೇವೆ ಒದಗಿಸಲು ಬಳಸಲಾಗುತ್ತಿದೆ. ಹಲವು ಆ್ಯಪ್ ಮೂಲಕ ಬುಕ್ಕಿಂಗ್ ಮಾಡಿಸಿಕೊಳ್ಳಲಾಗುತ್ತಿದೆ' ಎಂದು ವಾಣಿಜ್ಯ ವಾಹನಗಳ ಚಾಲಕರು ದೂರಿದರು.


2Bನೇ ಪುಟ ನೋಡಿ

'ಶೀಘ್ರ ಮಾರ್ಗದರ್ಶಿ ಸೂತ್ರ'



'ಸ್ವಂತ ವಾಹನಗಳು ಬಾಡಿಗೆ ಆಧಾರದಲ್ಲಿ ಸಂಚರಿಸುವಾಗ ಸಿಕ್ಕಿಬಿದ್ದರೆ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಹಲವು ಬಾರಿ ಎಲ್ಲಿಯೋ ನಿಲ್ಲಿಸಿರುತ್ತಾರೆ. ಚಾಲಕನೂ ಇರುವುದಿಲ್ಲ. ಇದ್ದರೂ ಬಾಡಿಗೆ ಆಧಾರದಲ್ಲಿ ಬಂದಿರುವುದನ್ನು ಒಪ್ಪಿಕೊಳ್ಳುವುದಿಲ್ಲ. ಅದಕ್ಕಾಗಿ ಮಾರ್ಗದರ್ಶಿ ಸೂತ್ರ ತಯಾರಿಸಲಾಗುವುದು. ಅದನ್ನು ಮೀರುವ ಸ್ವಂತ ಬಳಕೆ ವಾಹನಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಬಾಡಿಗೆಗೆ ಸಂಚರಿಸಿದರೆ ನೋಟಿಸ್



'ಖಾಸಗಿ ಬಳಕೆಯ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಸಿದ್ದು ಕಂಡು ಬಂದರೆ ಅಂಥ ವಾಹನಗಳ ಮಾಲೀಕರಿಗೆ ನೋಟಿಸ್ ನೀಡಲಾಗುವುದು. ಅವರ ಚಾಲನಾ ಪರವಾನಗಿ ಪತ್ರ ಮತ್ತು ವಾಹನದ ನೋಂದಣಿ ಪ್ರಮಾಣಪತ್ರವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು' ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಎಚ್ಚರಿಕೆ ನೀಡಿದರು.



ಬೆಂಗಳೂರು ಚಿನ್ನದ ಹಬ್ಬದೊಂದಿಗೆ ಈ ಬಾರಿ ಆಚರಿಸಿ ಧನ್ತೇರಾಸ್ ಮತ್ತು ದೀಪಾವಳಿ !

ಮನೆಗೆ ತಂದುಕೊಳ್ಳಿ ಸುವರ್ಣ ಭವಿಷ್ಯವನ್ನು!!

3.5 ಕೆಜಿ ವರೆಗೆ ಚಿನ್ನದ ಬಹುಮಾನಗಳು

ಬಂಪರ್ ಬಹುಮಾನ 1 ಕೆಜಿ ಚಿನ್ನ

3 ನೇ ಆವೃತ್ತಿ

100 ಕೆಜಿ ವರೆಗೆ ಬೆಳ್ಳಿ ಬಹುಮಾನಗಳು

ಅನುಕೂಲವಾದ ಡಿಜಿಟಲ್ ಕೂಪನ್ ಗಳು

Bengaluru GOLD Shopping Festival ™

3rd Oct-16th Nov 2024



ಆಯೋಜಿಸಿದವರು

THE JEWELLERS' ASSOCIATION® BENGALURU

ಸಹ-ಪ್ರಾಯೋಜಕರು

Jewels Of India® Bangalore

ಹೆಚ್ಚಿನ ಮಾಹಿತಿಗಾಗಿ www.goldfestival.in ಅಥವಾ ಕರೆಮಾಡಿ 89517 89988

ಅಧಿಕೃತ ಲಾಜಿಸ್ಟಿಕ್ ಪಾಲುದಾರ: Sequel Global precious logistics

ತಂತ್ರಜ್ಞಾನ ಪಾಲುದಾರ: SalesWizz Simple, Fast & Secure

ವ್ಯಾಪಾರ ಮಾಧ್ಯಮ ಪಾಲುದಾರ: The Art of Jewellery® INDIA'S No.1 JEWELLERY MAGAZINE

* ಬದಲಾವಣೆಗೆ ಒಳಪಟ್ಟಿರುತ್ತದೆ

INSTAGRAM FACEBOOK YOUTUBE

ಬಂಗಾರದಲ್ಲಿನ ಹೂಡಿಕೆ ಜೀವನಪೂರ್ತಿ ಸುರಕ್ಷೆ

ABARAN TIMELESS JEWELLERY (P) LTD. All Bengaluru Branches	**C. KRISHNIAH CHETTY GROUP** All Bengaluru Branches	**GRT JEWELLERS PVT LTD** All Bengaluru Branches	**JOS ALUKKAS ENTERPRISES PVT LTD** All Bengaluru Branches	**JOYALUKKAS INDIA LTD** All Bengaluru Branches
KALYAN JEWELLERS INDIA LTD. All Bengaluru Branches	**LALITHAA JEWELLERY MART LIMITED** All Bengaluru Branches	**MALABAR GOLD LTD** All Bengaluru Branches	**NEELKANTH GOLD & DIAMONDS PVT LTD.** All Bengaluru Branches	**SHREE SAI GOLD PALACE** All Bengaluru Branches

SENCO GOLD & DIAMONDS All Bengaluru Branches | **SRI KRISHNA DIAMONDS & JEWELLERY** Bengaluru

Aabushan Jewellery | Anand Jewels & Diamonds | Arjunaa Jewellers | Chemmanur Jewellers | Josco Jewellers | M P Swarna Mahal | Panchkesari Badera Jewellers (LLP) | PMJ Gems & Jewellers Pvt Ltd. | Rajamahal Fancy Jewellers | S K Ayodhyarama Setty & Sons | Sheelvant & Sons Jewels Pvt. Ltd. | Simha Jewellers Pvt. Ltd.

H V S Jewellers (Tiptur) | Kumara Jewellers | MOH By Manpasand | MPS Jewellers | National Gold & Diamonds | Nikhaar Jewels Private Limited | Panduranga Bommayya Vernekar | Prakash Jewellers

Arjun Jewellers | Aura Jewels | Brindavan Gems & Jewellers | Khea Finest Bespoke Jewellery | Motis Concept Jewels | Mukesh Jewellers | Navyaa Aabharan | Om Jewels | R. H. Radhakrishna Gupta Jewellers Pvt. Ltd. | Rajalaxmi Jewells | Shree Bhagyalaxmi Jewellers | Sree Rama Jewels | Sri Ganesh Diamonds & Jewellery (Rajajinagar) | Sri Ganesh Diamonds & Jewellery (Sadashivnagar) | Sri Ganesh Jewellers (Nagarbhavi) | Vishwas Jewels Pvt Ltd.

Anand Jewellers | Ananya Jewels | Apranje Jewellers Private Limited | Aswathanarayana Jewellery | Barsane Jewels LLP | Bhadraiah Abharana Bhandar | Bhagya Lakshmi Gold Palace | Dhanalakshmi Jewellers | Geetha Jewells | Heera Jewellery | Hiranyam | Inder Jewellery Pvt Ltd | Kudur Jewellers | Mahaveer Jewellers | Mayur Jewellers (Bagloor) | Mayur Jewellers (Bidadi) | Mitesh Jewels | Moti's | My Silver | N S Jewells | Navarathna Jewellers | Pawan Jewellers | Pragati Jewels & Diamonds | Prakash Jewels & Diamonds | Ramlal Mohanlal Jewellers | S.K. Jewellers | Sagar Jewellers | Shree Samarth Jewellers | Sonal Jewels | Sree Chinnamma Devi Photo Frame Works | Sri Dhanalakshmi Jewellers | Sri Gokul Jewellers & Diamonds | Sri Kundan Jewellers | Sri Manohar Jewellers | Sri Varamahalakshmi Jewellers | Srikanteswara Jewellery Mart | Tayi Jewellers | Uttam Jewel Palace | Varaa Jewels Pvt. Ltd. | Vijay Jewellers | Vivant Gold Diamonds

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಬಾಲಿವುಡ್ ನಟ ಮಾಧುರಿ ದೀಕ್ಷಿತ್ ಹಾಗೂ ನಟ ಕಾರ್ತಿಕ್ ಆರ್ಯನ್ ಅವರು ಪುಣೆಯಲ್ಲಿ 'ಭೂಲ್ ಭುಲೈಯಾ 3' ಚಲನಚಿತ್ರದ ಪ್ರಚಾರದಲ್ಲಿ ಪಾಲ್ಗೊಂಡರು



'ಎಚ್.ಡಿ. ಕುಮಾರಸ್ವಾಮಿ ನಾಯಕತ್ವದ ಅಗ್ನಿಪರೀಕ್ಷೆ' 8
ಲಡಾಖ್ ಸಹಜ ಸ್ಥಿತಿ ಮುಂದಿನ ಗುರಿ: ಎಸ್.ಜೈಶಂಕರ್ 9
'ಪ್ರವರ್ಗಕ್ಕೆ ಹಳ್ಳಿಕಾರ ಸೇರ್ಪಡೆ, ಪರಿಶೀಲನೆ' 5
ಇಸ್ರೇಲ್ ದಾಳಿಗೆ ಗಾಜಾದಲ್ಲಿ 22 ಸಾವು 11

'ಟೆಲಿ ಮನಸ್' ಸಹಾಯವಾಣಿಯಡಿ ಐಐಐಟಿ–ಬಿ ಸಹಯೋಗದಲ್ಲಿ ನಿಮ್ಹಾನ್ಸ್‌ನಿಂದ ಸೇವೆ

ಮನೋವ್ಯಾಧಿಗೆ ವಿಡಿಯೊ ಕೌನ್ಸಿಲಿಂಗ್

• ವರುಣ ಹೆಗಡೆ

ಬೆಂಗಳೂರು: ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಡಿಯೊ ಕರೆಗಳ ಮೂಲಕವೂ ಆಪ್ತ ಸಮಾಲೋಚಕರನ್ನು ಸಂಪರ್ಕಿಸಿ, ಪರಿಹಾರೋಪಾಯ ಕಂಡುಕೊಳ್ಳುವ ಅವಕಾಶವನ್ನು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) 'ಟೆಲಿ ಮನಸ್' ಸಹಾಯವಾಣಿಯಡಿ ಒದಗಿಸಲಾಗಿದೆ.

ಕೌಟುಂಬಿಕ ಸಮಸ್ಯೆ, ಆರ್ಥಿಕ ಸಂಕಷ್ಟ, ಉದ್ಯೋಗ ನಷ್ಟ, ಶೈಕ್ಷಣಿಕ ಒತ್ತಡ ಸೇರಿ ವಿವಿಧ ಕಾರಣಗಳಿಂದ ಎಲ್ಲ ವಯೋಮಾನದವರು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಒಳಗುತ್ತಿದ್ದಾರೆ. ಈ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರಿಗೆ ನೆರವಾಗಲು ಸಂಸ್ಥೆಯು 2022ರಲ್ಲಿ 'ಟೆಲಿ ಮನಸ್' ಉಚಿತ ಸಹಾಯವಾಣಿಯನ್ನು ಪ್ರಾರಂಭಿಸಿತ್ತು. ಈ ಸಹಾಯವಾಣಿಗೆ ದೇಶದ ವಿವಿಧೆಡೆಯಿಂದ ದೂರವಾಣಿ ಕರೆಗಳು ಬರುತ್ತಿದ್ದು, ಈವರೆಗೆ 15 ಲಕ್ಷ ಕರೆಗಳನ್ನು ಸ್ವೀಕರಿಸಲಾಗಿದೆ.

ಟೆಲಿ ಮನಸ್: 15 ಲಕ್ಷ ಕರೆಗಳ ಮೈಲಿಗಲ್ಲು

2022 ಅ.10	ಸಹಾಯವಾಣಿ ಲೋಕಾರ್ಪಣೆ
2023 ಏ.26	1 ಲಕ್ಷ ಕರೆಗಳು ಸ್ವೀಕಾರ
2023 ಡಿ.11	5 ಲಕ್ಷ ಕರೆಗಳು ಸ್ವೀಕಾರ
2024 ಮೇ 28	10 ಲಕ್ಷ ಕರೆಗಳು ಸ್ವೀಕಾರ
2024 ಅ.22	15 ಲಕ್ಷ ಕರೆಗಳು ಸ್ವೀಕಾರ

ಎರಡೂವರೆ ವರ್ಷಗಳ ಪ್ರಯತ್ನದ ಬಳಿಕ 'ಟೆಲಿ ಮನಸ್' ಅಡಿ ವಿಡಿಯೊ ಕರೆ ಪ್ರಾರಂಭಿಸಲಾಗಿದೆ. ಮೊಬೈಲ್ ನೆರವಿನಿಂದ ಕರೆ ಮಾಡಬಹುದು

ಟಿ.ಕೆ.ಶ್ರೀಕಾಂತ್, ಐಐಐಟಿ-ಬಿ ಇ-ಆರೋಗ್ಯ ಸಂಶೋಧನಾ ವಿಭಾಗದ ಮುಖ್ಯಸ್ಥ

ಕೆಲ ಸಂಕೀರ್ಣ ಸಮಸ್ಯೆಗಳನ್ನು ದೂರವಾಣಿ ಕರೆಗಳ ಮೂಲಕ ನಿವಾರಿಸುವುದು ಕಷ್ಟ ಸಾಧ್ಯವಾದ್ದರಿಂದ ಪ್ರಾಯೋಗಿಕವಾಗಿ ಉಚಿತ ವಿಡಿಯೊ ಕರೆ ಪ್ರಾರಂಭಿಸಲಾಗಿದೆ.

ಸಂಸ್ಥೆಯ ಬೆಂಗಳೂರು ಹಾಗೂ ಧಾರವಾಡದ ಕೇಂದ್ರದಲ್ಲಿ ಟೆಲಿ ಮನಸ್ ಘಟಕ ಕಾರ್ಯನಿರ್ವಹಿಸುತ್ತಿದೆ. ವಾರದ ಎಲ್ಲ ದಿನಗಳಲ್ಲಿ 24 ಗಂಟೆಗಳೂ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸ-ಲಾಗುತ್ತಿದೆ. ಅಂತರರಾಷ್ಟ್ರೀಯಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ–ಬಿ) ಈ ಸಹಾಯವಾಣಿಗೆ ತಾಂತ್ರಿಕ ನೆರವು ಒದಗಿಸುತ್ತಿದೆ. ವಿಡಿಯೊ ಕರೆಗೆ ಸಂಬಂಧಿಸಿದಂತೆಯೂ ಐಐಐಟಿ–ಬಿ ರೂಪುರೇಷೆ ಸಿದ್ಧಪಡಿಸಿತ್ತು. ರಾಜ್ಯದಲ್ಲಿ ಪ್ರಾರಂಭಿಸಲಾದ ವಿಡಿಯೊ ಕರೆ ಸೇವೆಯನ್ನು ಮುಂದಿನ ದಿನಗಳಲ್ಲಿ ದೇಶದಾದ್ಯಂತ ವಿಸ್ತರಿಸಲು ಉಭಯ ಸಂಸ್ಥೆಗಳು ನಿರ್ಧರಿಸಿವೆ.

ಕರೆ ಹೆಚ್ಚಳ: ಟೆಲಿ ಮನಸ್ ಸಹಾಯವಾಣಿಗೆ ಬರುವ ದೂರವಾಣಿ ಕರೆಗಳ ಸಂಖ್ಯೆ ಏರುಗತಿ ಪಡೆದಿದೆ. ಪ್ರತಿನಿತ್ಯ ಸರಾಸರಿ 3,500 ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ನಿಮ್ಹಾನ್ಸ್ ವಿಶ್ಲೇಷಣೆ ಪ್ರಕಾರ ಈ ಸಹಾಯವಾಣಿಗೆ 15ರಿಂದ 30 ವರ್ಷದೊಳಗಿನವರು ಅಧಿಕ ಸಂಖ್ಯೆಯಲ್ಲಿ ಕರೆ ಮಾಡುತ್ತಿದ್ದಾರೆ.

2Bನೇ ಪುಟ ನೋಡಿ

ವಿಡಿಯೊ ಕರೆ ಹೇಗೆ?

ಟೆಲಿ ಮನಸ್ ಅಡಿ ವಿಡಿಯೊ ಕರೆ ಸೇವೆ ಪಡೆಯುವವರು ಸ್ಮಾರ್ಟ್ ಫೋನ್ ಮೂಲಕ ಸಹಾಯವಾಣಿ ಸಂಖ್ಯೆ 14416ಕ್ಕೆ ಕರೆ ಮಾಡಬೇಕು. ಈ ವೇಳೆ ಆಪ್ತ ಸಮಾಲೋಚಕರು ಅಥವಾ ಮನೋರೋಗಿಗಳು ವಿಡಿಯೊ ಕರೆ ಬಯಸಿದಲ್ಲಿ, ಕಂಪ್ಯೂಟರ್ ಜನರೇಟೆಡ್ ವಿಡಿಯೊ ಕರೆಯ ಲಿಂಕ್, ವ್ಯಕ್ತಿಯ ದೂರವಾಣಿ ಸಂಖ್ಯೆಗೆ ರವಾನೆಯಾಗಲಿದೆ. ಈ ಲಿಂಕ್ ಕ್ಲಿಕ್ಕಿಸಿದಾಗ ವಿಡಿಯೊ ಕರೆಯ ಅವಕಾಶ ತೆರೆದುಕೊಳ್ಳಲಿದೆ. ತುರ್ತು ಅಥವಾ ಅಗತ್ಯ ಸಂದರ್ಭದಲ್ಲಿ ಮಾತ್ರ ವಿಡಿಯೊ ಕಾಲ್ ಸೇವೆಯನ್ನು ಬಳಕೆ ಮಾಡಲಾಗುತ್ತದೆ.





ಅತ್ತಿಬೆಲೆ ಗಡಿಯಲ್ಲಿಯ ಪಟಾಕಿ ಅಂಗಡಿಯಲ್ಲಿ ಖರೀದಿಯಲ್ಲಿ ತೊಡಗಿದ್ದ ಗ್ರಾಹಕರು

ಪಟಾಕಿ ಅಂಗಡಿಗೆ ಅಂಕುಶ ಜನರಲ್ಲಿ ಕುಗ್ಗದ ಉತ್ಸಾಹ

ಪ್ರಜಾವಾಣಿ ವಾರ್ತೆ

ಆನೇಕಲ್: ಕಳೆದ ವರ್ಷ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಗೋದಾಮಿಗೆ ಬೆಂಕಿ ತಗುಲಿ 16 ಮಂದಿ ಜೀವಂತವಾಗಿ ಸುಟ್ಟುಹೋದ ಕರಾಳ ಘಟನೆ ಈ ಬಾರಿಯ ಪಟಾಕಿ ವಹಿವಾಟಿಗೆ ಹೊಡೆತ ನೀಡಿದೆ.

ಪ್ರತಿವರ್ಷ ದೀಪಾವಳಿಗೂ ಮುನ್ನ ಗಡಿಭಾಗದಲ್ಲಿ ಪಟಾಕಿ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತಿರುತ್ತಿದ್ದವು. ಕರ್ನಾಟಕ–ತಮಿಳುನಾಡು ಗಡಿಭಾಗವಾದ ಅತ್ತಿಬೆಲೆ ಸುತ್ತಮುತ್ತ ಒಂದೇ ಸ್ಥಳದಲ್ಲಿ 40ಕ್ಕೂ ಹೆಚ್ಚು ಅಂಗಡಿ ಇರುತ್ತಿದ್ದವು. ತಾಲ್ಲೂಕಿನ ಹೆಬ್ಬಗೋಡಿ, ಬೊಮ್ಮಸಂದ್ರ, ಚಂದಾಪುರ, ತಿರುಮಗೊಂಡನಹಳ್ಳಿ ಗೇಟ್, ನೆರಳೂರು, ಯಾರಂಡಹಳ್ಳಿ, ಅತ್ತಿಬೆಲೆಯವರೆಗೂ ಪಟಾಕಿ ಅಂಗಡಿಗಳದ್ದೇ ಅಬ್ಬರ ಇರುತ್ತಿತ್ತು.

ಈ ಬಾರಿ ಪಟಾಕಿ ಅಂಗಡಿಗೆ ಪರವಾನಗಿ ನೀಡಲು ಸರ್ಕಾರ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ನಿರ್ಬಂಧ ಹೆಚ್ಚಾದ ಹಿನ್ನೆಲೆಯಲ್ಲಿ ಪಟಾಕಿ ಅಂಗಡಿಗಳ ಸಂಖ್ಯೆ ಕಡಿಮೆಯಾಗಿದೆ.

ಇದರಿಂದ ತಪ್ಪಿಸಿಕೊಳ್ಳಲು ವರ್ತಕರು ನೆರೆಯ ಹೊಸೂರಿಗೆ ವಲಸೆ ಹೋಗಿದ್ದಾರೆ. ಹೊಸೂರು ಸುತ್ತಮುತ್ತ ನೂರಾರು ಪಟಾಕಿ ಅಂಗಡಿಗಳು ತಲೆ ಎತ್ತಿವೆ.

ಕಳೆದ ವರ್ಷ ಸಂಭವಿಸಿದ ಪಟಾಕಿ ದುರಂತದ ಹಿನ್ನೆಲೆಯಲ್ಲಿ ಸರ್ಕಾರ ಪಟಾಕಿ ಮಳಿಗೆ ತೆರೆಯಲು ಕಟ್ಟುನಿಟ್ಟಿನ ನಿರ್ಬಂಧ ವಿಧಿಸಿದೆ. ಪಟಾಕಿ ಅಂಗಡಿ ಮತ್ತು ಗೋದಾಮು ಬಳಿ ಅಗ್ನಿಶಾಮಕ ವ್ಯವಸ್ಥೆ, ಮರಳಿನ ಸಂಗ್ರಹ ಮತ್ತು ಮಳಿಗೆಯಿಂದ ಹೊರಬರಲು ವಿಶಾಲವಾದ ಬಾಗಿಲು ಸೇರಿದಂತೆ ಹಲವು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಅಗ್ನಿಶಾಮಕ ದಳ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸ್ಥಳೀಯ ಪುರಸಭೆ ಜಂಟಿ ಸಮೀಕ್ಷೆ ನಡೆಸಿ ಸಲ್ಲಿಸಿದ ವರದಿಯಲ್ಲಿ ಸುರಕ್ಷತೆಗಾಗಿ ಕೆಲವು ಶಿಫಾರಸುಗಳನ್ನು ಮಾಡಲಾಗಿತ್ತು. ಅದರ ಅನ್ವಯ ಕಾಯಂ ಪರವಾನಗಿ ಹೊಂದಿರುವವರು ಮಾತ್ರ ಪಟಾಕಿ ಅಂಗಡಿ ತೆರೆಯಲು ಅವಕಾಶ ನೀಡಲಾಗಿದೆ.

2Bನೇ ಪುಟ ನೋಡಿ

ಹಸಿರು ಪಟಾಕಿಗೆ ಮಾತ್ರ ಅವಕಾಶ

ಅಂಗಡಿಗಳಲ್ಲಿ ಹಸಿರು ಪಟಾಕಿ ಮಾತ್ರ ಮಾರಾಟ ಮಾಡಲಾಗುತ್ತಿದೆ ಎಂದು ಬೋರ್ಡ್ ಹಾಕಲಾಗಿದೆ. ಕಳೆದ ಒಂದು ವಾರದಿಂದ ವ್ಯಾಪಾರ ನಡೆಯುತ್ತಿದೆ. ವಾರಂತ್ಯದಲ್ಲಿ ಪಟಾಕಿ ಖರೀದಿಸಲು ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಹಕರು ಅತ್ತಿಬೆಲೆಗೆ ಬಂದಿದ್ದರು. ಹಾಗಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ರಾಷ್ಟ್ರೀಯ ಹೆದ್ದಾರಿಯ 44ರಲ್ಲಿ ಕಿ.ಮೀಗಟ್ಟಲೇ ವಾಹನಗಳ ಸಾಲು ಕಂಡು ಬಂತು. ಅತ್ತಿಬೆಲೆ ಫ್ಲೈಓವರ್ ದಾಟಿ ಆರ್‌ಟಿಒ ಕಚೇರಿವರೆಗೂ ವಾಹನಗಳ ಸಾಲು ಇತ್ತು. ಬೆಂಗಳೂರು ಹಾಗೂ ಇತರ ಕಡೆಗಳಿಂದ ಬಂದ ಗ್ರಾಹಕರು ಸರತಿ ಸಾಲಿನಲ್ಲಿ ನಿಂತು ಪಟಾಕಿ ಖರೀದಿಸುತ್ತಿದ್ದರು.



2Bನೇ ಪುಟ ನೋಡಿ

ಲಾಲ್‌ಬಾಗ್: 1860ರಲ್ಲಿ ಬ್ರಿಟಿಷರಿಂದ ನಿರ್ಮಾಣ • ನವೀಕರಣ ಶೀಘ್ರ ಆರಂಭಕ್ಕೆ ಒತ್ತಾಯ

ಬಿರುಕುಬಿಟ್ಟ ಬ್ಯಾಂಡ್‌ಸ್ಟ್ಯಾಂಡ್



ಬಿರುಕು ಬಿಟ್ಟಿರುವ ಬ್ಯಾಂಡ್‌ಸ್ಟ್ಯಾಂಡ್ ಬೀಳದಂತೆ ತಡೆಯಲು ಮರದ ಕಂಬಗಳ ನೆರವು ನೀಡಲಾಗಿದೆ – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಸ್ಯಕಾಶಿ' ಲಾಲ್‌ಬಾಗ್‌ನ ಆಕರ್ಷಣೀಯ ಕೇಂದ್ರಗಳಲ್ಲಿ ಒಂದಾಗಿರುವ ಗಾಜಿನ ಮನೆಯ ಮುಂಭಾಗ-ದಲ್ಲಿರುವ ವಾದ್ಯ ರಂಗಮಂಟಪದಲ್ಲಿ (ಬ್ಯಾಂಡ್ ಸ್ಟ್ಯಾಂಡ್) ಬಿರುಕು ಬಿಟ್ಟಿದೆ. ಇದನ್ನು ಬ್ರಿಟಿಷರ ಕಾಲದಲ್ಲಿ ನಿರ್ಮಿಸಲಾಗಿತ್ತು.

ಬ್ರಿಟಿಷರು 1860ರಲ್ಲಿ ಲಾಲ್‌ಬಾಗ್‌ನಲ್ಲಿ ಬ್ಯಾಂಡ್ ಸ್ಟ್ಯಾಂಡ್ ಪ್ರಾರಂಭಿಸಿದರು. ಇಲ್ಲಿ ವಾರಕ್ಕೊಂದು ಬಾರಿ ಇಂಗ್ಲಿಷ್ ವಾದ್ಯ ಸಂಗೀತ ಕಾರ್ಯಕ್ರಮ ನಡೆಯುತ್ತಿತ್ತು. 2000ರಲ್ಲಿ ತೇಗದ ಮರದಿಂದ (ಟೀಕ್‌ವುಡ್) ಬ್ಯಾಂಡ್ ಸ್ಟ್ಯಾಂಡ್ ಅನ್ನು ಪುನರ್ ನಿರ್ಮಿಸಲಾಗಿತ್ತು. ಇದರ ಮೇಲ್ಚಾವಣಿಯನ್ನು ಮರದ ಹಲಗೆಗಳಿಂದ ನಿರ್ಮಿಸಲಾಗಿತ್ತು.

ಮುಖ್ಯಾಂಶಗಳು
- ಬ್ಯಾಂಡ್‌ಸ್ಟ್ಯಾಂಡ್ ಪುನರ್ ನಿರ್ಮಿಸಲು ಸಮಿತಿ ರಚನೆ
- ತಜ್ಞರ ಸಲಹೆ ಪಡೆದು ಶಾಶ್ವತ ಪರಿಹಾರಕ್ಕೆ ಚಿಂತನೆ

'ಮಳೆ–ಗಾಳಿಗೆ ಮೇಲ್ಚಾವಣಿ ಸೋರಲು ಪ್ರಾರಂಭಿಸಿತು. ಮೇಲ್ಚಾವಣಿಯಲ್ಲಿ ಮಳೆ ನೀರು ಸಂಗ್ರಹಗೊಂಡ ಪರಿಣಾಮ ಶೇಕಡ 30ರಷ್ಟು ಹಾಳಾಗಿದೆ. ಇದರಿಂದ, ಇಲ್ಲಿ ಬಿರುಕು ಕಾಣಿಸಿಕೊಂಡಿದೆ. ಬ್ಯಾಂಡ್ ಸ್ಟ್ಯಾಂಡ್ ಕುಸಿಯದಂತೆ ಹಗ್ಗದಿಂದ ಕಟ್ಟಲಾಗಿದೆ. ಕಟ್ಟಡ ಕುಸಿಯದಂತೆ ಅಲ್ಲಲ್ಲಿ ಕಬ್ಬಿಣದ ರಾಡ್‌ಗಳನ್ನು ಅಳವಡಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

2Bನೇ ಪುಟ ನೋಡಿ

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ
ವಿದ್ಯಾರ್ಥಿವೇತನ/ಪ್ರೋತ್ಸಾಹ ಧನ ಅಭಿಯಾನ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

I. ವಿದ್ಯಾರ್ಥಿವೇತನ ಕಾರ್ಯಕ್ರಮ



2024–25ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. 1 – 8ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ ರೂ. 6 ಲಕ್ಷ ಹಾಗೂ 9–10ನೇ ತರಗತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ ರೂ.2.5 ಲಕ್ಷಗಳು.

Website ವಿವರ
https://ssp.postmatric.karnataka.gov.in/

Bio Metric e-Authentication : ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (9 ಮತ್ತು 10ನೇ ತರಗತಿ), ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕಡ್ಡಾಯವಾಗಿ Bio Metric e-Authentication ಗೆ ಒಳಗಾಗಬೇಕಾಗಿರುತ್ತದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ **ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿ ಮತ್ತು EDCS ನಾಗರಿಕ ಸೇವಾ ಕೇಂದ್ರಗಳಾದ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ Bio Metric e-Authentication ಮಾಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಸೇವೆಯು ಉಚಿತವಾಗಿದ್ದು, EDCS ನಾಗರಿಕ ಸೇವಾ ಕೇಂದ್ರಗಳಲ್ಲಿ ವಿದ್ಯಾರ್ಥಿಯು ಯಾವುದೇ ಹಣ ಪಾವತಿಸುವಂತಿಲ್ಲ.**

II. ಪ್ರೋತ್ಸಾಹ ಧನ ಕಾರ್ಯಕ್ರಮ: ಎಸ್. ಎಸ್. ಎಲ್. ಸಿ. ಪ್ರೋತ್ಸಾಹ ಧನ

10ನೇ ತರಗತಿ/ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

III. ಮೆಟ್ರಿಕ್ ನಂತರದ ಪ್ರೋತ್ಸಾಹ ಧನ

12ನೇ ತರಗತಿ/ಪಿ.ಯು.ಸಿ, ಪಾಲಿಟೆಕ್ನಿಕ್ ಡಿಪ್ಲೋಮಾ, ಐ.ಟಿ.ಐ., ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

Website ವಿವರ
https://sw.kar.nic.in/swprizemoney/Home.aspx



ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಿರುವುದು.

IV. ಆಧಾರ್ ಸೀಡಿಂಗ್

ವಿದ್ಯಾರ್ಥಿವೇತನ/ಪ್ರೋತ್ಸಾಹ ಧನ ಕಾರ್ಯಕ್ರಮದಡಿ ಮಂಜೂರಾದ ಮೊತ್ತವನ್ನು ವಿದ್ಯಾರ್ಥಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದ್ದು, ಸದರಿ ಪ್ರಕ್ರಿಯೆಗೆ ವಿದ್ಯಾರ್ಥಿಯ ಆಧಾರ್ ಸಂಖ್ಯೆಯನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ.

V. ವಿದ್ಯಾರ್ಥಿಯು ಕೈಗೊಳ್ಳಬೇಕಾದ ಕ್ರಮಗಳು

1. ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿ, ತಮ್ಮ ಆಧಾರ್ Active ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಆಧಾರ್ ವಿವರಗಳನ್ನು ಹಾಗೂ Biometric ವಿವರಗಳನ್ನು Update ಮಾಡಿಸುವುದು.
2. ಬ್ಯಾಂಕ್ ಖಾತೆ Active ಇರುವ ಬಗ್ಗೆ ಹಾಗೂ ಸದರಿ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಆಗಿರುವ ಬಗ್ಗೆ ಖಚಿತ ಮಾಡಿಕೊಳ್ಳುವುದು.
3. ಒಂದುವೇಳೆ ತಮ್ಮ ಆಧಾರ್ ಬ್ಯಾಂಕ್ ಖಾತೆಯೊಂದಿಗೆ ಸೀಡಿಂಗ್ ಆಗದೇ ಇದ್ದಲ್ಲಿ, ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಜೋಡಣೆ ಮಾಡಲು ಕ್ರಮವಹಿಸುವುದು ಅಥವಾ ಅಂಚೆ ಕಛೇರಿಯಲ್ಲಿ IPPB ಖಾತೆಯನ್ನು ತೆರೆಯುವುದು.
4. ಆಧಾರ್ ಜೋಡಣೆ ಬಗ್ಗೆ DBT Karnataka Mobile App ನಲ್ಲಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಇಲಾಖೆಯ ಸಹಾಯವಾಣಿ: 9482300400

@swd.gok

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಮನೋವ್ಯಾಧಿಗೆ ವಿಡಿಯೊ ಕೌನ್ಸಿಲಿಂಗ್

ಎರಡನೇ ಮುಖಪುಟದಿಂದ...

ಒತ್ತಡಕ್ಕೆ ಒಳಗಾದವರು, ವ್ಯಥೆಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆಗೆ ಒಳಗಾದವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆತ್ಮಹತ್ಯೆಯ ಆಲೋಚನೆ ಮಾಡುತ್ತಿರುವವರು, ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು, ಜ್ಞಾಪಕ ಶಕ್ತಿ ತೊಂದರೆ ಇರುವವರು, ಆರ್ಥಿಕ ಸಂಕಷ್ಟ ಎದುರಿಸುತ್ತಿರುವವರು ಹೆಚ್ಚಾಗಿ ಕರೆ ಮಾಡುತ್ತಿದ್ದಾರೆ.

'ವ್ಯಕ್ತಿಯ ಮನಸ್ಥಿತಿ ತಿಳಿಯಲು ಕೆಲ ಪ್ರಕರಣಗಳಲ್ಲಿ ಮುಖಾಮುಖಿ ಸಮಾಲೋಚನೆ ಅತ್ಯಗತ್ಯ. ಆದ್ದರಿಂದ ವಿಡಿಯೊ ಕರೆ ಅವಕಾಶ ಕಲ್ಪಿಸಲಾಗಿದೆ. ಮಾನಸಿಕ ಆರೋಗ್ಯದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದ ಸಹಾಯವಾಣಿಗೂ ಮನೋ ವ್ಯಾಧಿಗೆ ಸಂಬಂಧಿಸಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಕರೆಗಳು ಬರುತ್ತಿವೆ' ಎಂದು ನಿಮ್ಹಾನ್ಸ್ ವೈದ್ಯರೊಬ್ಬರು ತಿಳಿಸಿದರು.

ಬಾಲಕಿಗೆ ಕಿರುಕುಳ

ಮುಜಾಫ್ಫರ್‌ನಗರ (ಪಿಟಿಐ): 15 ವರ್ಷದ ಬಾಲಕಿಗೆ ಇಬ್ಬರು ಶಾಲಾ ಸಹಪಾಠಿಗಳು ಲೈಂಗಿಕ ಕಿರುಕುಳ ನೀಡಿ, ಬೆದರಿಕೆ ಹಾಕಿರುವ ಘಟನೆ ಉತ್ತರ ಪ್ರದೇಶದ ಹಳ್ಳಿಯೊಂದರಲ್ಲಿ ನಡೆದಿದೆ.

ಬಾಲಕರು ಲೈಂಗಿಕ ಕಿರುಕುಳ ನೀಡಿ, ನಂತರ ಕೊಲೆ ಮಾಡಲು ಯತ್ನಿಸಿದ್ದು, ಬಾಲಕಿ ಅವರಿಂದ ತಪ್ಪಿಸಿಕೊಂಡಿದ್ದಾಳೆ ಎಂದು ಬಾಲಕಿಯ ಕುಟುಂಬದವರು ದೂರು ದಾಖಲಿಸಿದ್ದಾರೆ.

ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಉತ್ತರ v/s ದಕ್ಷಿಣ' ಕೃತಿ ಬಿಡುಗಡೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ

ನ್ಯಾಯ ಕೇಳಿದರೆ ದೇಶದ್ರೋಹಿ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ–ರಾಜ್ಯಗಳ ನಡುವೆ ದಶಕಗಳಿಂದಲೂ ತಿಕ್ಕಾಟವಿದೆ. ಹಿಂದೆ, ರಾಜ್ಯಗಳ ಸಮಸ್ಯೆಗಳನ್ನು ಆಲಿಸಿ, ಚರ್ಚಿಸಿ, ಒಮ್ಮತದ ತೀರ್ಮಾನಕ್ಕೆ ಬಂದು ಪರಿಹಾರ ನೀಡಲಾಗುತ್ತಿತ್ತು. ಆದರೆ, ಈಗ ಸಮಸ್ಯೆಗಳನ್ನೂ ಆಲಿಸದೇ, ನ್ಯಾಯ ಕೇಳಿದವರನ್ನೇ ದೇಶದ್ರೋಹಿ ಎನ್ನುವಂತಹ ಬದಲಾವಣೆಯ ವಾತಾವರಣ ನಿರ್ಮಾಣವಾಗಿದೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ಕಾನ್‌ಕ್ಲೇವ್ ಮಾಧ್ಯಮ ಮತ್ತು ಪ್ರಕಾಶನ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ಪಿ.ಸುರೇಶ ಅವರು ಕನ್ನಡಕ್ಕೆ ಅನುವಾದಿಸಿರುವ 'ದಕ್ಷಿಣ V/S ಉತ್ತರ' ಕೃತಿಯನ್ನು (ಇಂಗ್ಲಿಷ್ ಮೂಲ: ನೀಲಕಂಠನ್ ಆರ್.ಎಸ್.) ಬಿಡುಗಡೆ ಮಾಡಿ ಅವರು ಮಾತನಾಡಿದರು.

'60ರ ದಶಕದಲ್ಲಿ ತಮಿಳುನಾಡಿನಲ್ಲಿ ಹಿಂದಿ ಹೇರಿಕೆ ವಿರೋಧಿಸಿ ಪ್ರತ್ಯೇಕ ದೇಶದ ಕೂಗು ಎದ್ದಿತ್ತು. ಆಗ ಕೇಂದ್ರ ಸರ್ಕಾರ, ಅವರನ್ನು ದೇಶದ್ರೋಹಿಗಳು ಎನ್ನಲಿಲ್ಲ. ಬದಲಿಗೆ, ಅವರೊಂದಿಗೆ ಚರ್ಚಿಸಿ, 'ಹಿಂದಿ ಆಡಳಿತ ಭಾಷೆ, ರಾಷ್ಟ್ರಭಾಷೆಯಲ್ಲ' ಎಂದು ಸ್ಪಷ್ಟಪಡಿಸಿದ ಬಳಿಕ ಆ ರಾಜ್ಯದಲ್ಲಿ ಚಳವಳಿ ನಿಧಾನವಾಗಿ ತಣ್ಣಗಾಗಿತ್ತು' ಎಂದು ನೆನಪು ಮಾಡಿದರು.

'ದೇಶದ ಆರ್ಥಿಕತೆಗೆ ನಮ್ಮ ರಾಜ್ಯದಿಂದ ಶೇ 30 ರಿಂದ 35ರಷ್ಟು ಕೊಡುಗೆ ನೀಡುತ್ತಿದ್ದೇವೆ. ಆದರೆ ಪ್ರಸ್ತುತ ಸಂಸತ್ತಿನಲ್ಲಿ ರಾಜ್ಯದ ಪ್ರಾತಿನಿಧ್ಯದ ಪಾಲು ಶೇ 20ರಿಂದ 22ರಷ್ಟು ಮಾತ್ರ. ಕ್ಷೇತ್ರ ಮರುವಿಂಗಡಣೆಯಾದರೆ ಇದು ಶೇ20ಕ್ಕಿಂತ ಕಡಿಮೆಯಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

'ಈ ಕೃತಿಯಲ್ಲಿ ಪ್ರಧಾನವಾಗಿ ಆದಾಯದ ಹಂಚಿಕೆ ಬಗ್ಗೆ ಉಲ್ಲೇಖಿಸಿದ್ದಾರೆ. ದೇಶದ ಸಾಮಾಜಿಕ, ಆರೋಗ್ಯ, ಶಿಕ್ಷಣ ಕ್ಷೇತ್ರಗಳ ಸೂಚ್ಯಂಕಗಳ ಬಗ್ಗೆಯೂ ಸರಳವಾಗಿ ಅರ್ಥವಾಗುವಂತೆ ಬರೆದಿದ್ದಾರೆ' ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, 'ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡುವ ಅನುದಾನವನ್ನು ನ್ಯಾಯಯುತವಾಗಿ, ಹೆಚ್ಚು ಸಮಾನತೆಯಿಂದ ಹಂಚಿಕೆ ಮಾಡಬೇಕು. ಪ್ರಸ್ತುತ ಕರ್ನಾಟಕದಲ್ಲಿ ಶೇ 72ರಷ್ಟು ಸ್ವಂತ ಸಂಪನ್ಮೂಲದಿಂದ ಯೋಜನೆಗಳು ನಡೆಯುತ್ತಿವೆ. ಆದರೆ, ಬಿಹಾರದಲ್ಲಿ ಶೇ 77ರಷ್ಟು ವೆಚ್ಚ ಕೇಂದ್ರದ ಅನುದಾನದಿಂದ ನಡೆಯುತ್ತಿದೆ. ಈ ರಾಜ್ಯಗಳಿಗೆ ನಮ್ಮ ಸಂಪನ್ಮೂಲವೇ ಪೂರೈಕೆಯಾಗುತ್ತಿದೆ' ಎಂದು ಹೇಳಿದರು.

'ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವೆ ತಾರತಮ್ಯದ ಕುರಿತು ಚರ್ಚೆಯಾಗುತ್ತಿರುವ ಹೊತ್ತಲ್ಲಿ ಈ ಕೃತಿ ಬಂದಿರುವುದು ಸೂಕ್ತವಾಗಿದೆ. ರಾಜ್ಯದ ಎಲ್ಲ ಭಾಗದಲ್ಲೂ ಈ ಕೃತಿಯನ್ನು ಬಿಡುಗಡೆ ಮಾಡಿ, ಜನ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ' ಎಂದರು.

ಕೆ.ಎಸ್.ನಾಗೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.



ನಗರದಲ್ಲಿ ಭಾನುವಾರ ಕಾನ್‌ಕ್ಲೇವ್ ಮಾಧ್ಯಮ ಮತ್ತು ಪ್ರಕಾಶನ ಆಯೋಜಿಸಿದ್ದ ಕೆ.ಪಿ. ಸುರೇಶ (ಎಡಭಾಗದವರು) ಅವರು ಅನುವಾದಿಸಿರುವ 'ದಕ್ಷಿಣ Vs ಉತ್ತರ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ 'ನಮ್ಮ ನಾಡು ನಮ್ಮ ಆಳ್ವಿಕೆ' ಸಂಘಟನೆಯ ಕವಿರಾಜ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಎಚ್‌.ಬಿ.ಕೆ ಸಮೂಹ ಸಂಸ್ಥೆಗಳ ಅಧ್ಯಕ್ಷ ಸಿ.ಎಂ ಫೈಜ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಕ್ಷೇತ್ರ ವಿಂಗಡಣೆಯಲ್ಲೂ ಅನ್ಯಾಯದ ಹುನ್ನಾರ'

'ಭವಿಷ್ಯದಲ್ಲಿ ಲೋಕಸಭಾ ಕ್ಷೇತ್ರಗಳ ವಿಂಗಡಣೆಯಲ್ಲೂ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಮಾಡುವ ಹುನ್ನಾರಗಳು ನಡೆಯುತ್ತಿವೆ. ಇದಕ್ಕಾಗಿ 2021–22ರಲ್ಲಿ ನಡೆಯಬೇಕಿದ್ದ ಜನ ಗಣತಿಯನ್ನು ಉದ್ದೇಶಪೂರ್ವಕವಾಗಿ 2026ರವರೆಗೆ ವಿಳಂಬ ಮಾಡಿದ್ದಾರೆ' ಎಂದು ಕೃಷ್ಣ ಬೈರೇಗೌಡ ಆರೋಪಿಸಿದರು.

'1971ರ ನಂತರದ ಜನಗಣತಿ ಆಧಾರದಲ್ಲೇ 2026ರವರೆಗೆ ಕ್ಷೇತ್ರ ಪುನರ್ವಿಂಗಡಣೆ ಮಾಡಬೇಕು ಎಂಬುದಾಗಿ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿತ್ತು. ಮುಂದಿನ ವರ್ಷ ಆ ನಿಯಮದ ಗಡುವು ಮುಗಿಯುತ್ತದೆ. ಅದಕ್ಕಾಗಿಯೆ 2026ರ ನಂತರ ಜನಗಣತಿ ಮಾಡುವ ಸಾಧ್ಯತೆ ಇದೆ. ಹಾಗೆ ಮಾಡಿದರೆ, ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆ ಹೆಚ್ಚಾಗಿದ್ದು, 70 ರಿಂದ 80 ಕ್ಷೇತ್ರಗಳು ಹೆಚ್ಚಾಗುತ್ತವೆ. ದಕ್ಷಿಣದ ರಾಜ್ಯಗಳಲ್ಲಿರುವ ಲೋಕಸಭಾ ಕ್ಷೇತ್ರಗಳ ಸಂಖ್ಯೆ 12 9 ರಿಂದ 103ಕ್ಕೆ ಇಳಿಯಬಹುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನ ಬಳಕೆಗೆ ಸೂಚನೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ನೀಡಲಾಗುತ್ತಿರುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಪರಿಣಾಮ ಕಾರಿಯಾಗಿ ಬಳಸಲು ಸಂಬಂಧಿತ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಅವರು ಸೂಚಿಸಿದರು.

ವಿಧಾನಸೌಧದಲ್ಲಿ ನಡೆದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಬಳಕೆ ಹಾಗೂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು, 'ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಉಪಯೋಜನೆಗಳ ಅನುದಾನ ಬಳಕೆಯಲ್ಲಿ ಪ್ರಗತಿ ಸಾಧ್ಯವಾಗಿದೆ. ಆದರೆ ಇನ್ನೂ ಹೆಚ್ಚಿನ ಕೆಲಸ ಆಗಬೇಕು' ಎಂದರು.



'2024ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ ಅನುದಾನದಲ್ಲಿ ಶೇ 87ರಷ್ಟು ಮತ್ತು ಟಿಎಸ್‌ಪಿ ಅನುದಾನದಲ್ಲಿ ಶೇ 83ರಷ್ಟು ಬಳಕೆಯಾಗಿದೆ. ಅನುದಾನ ಬಳಸಿಕೊಂಡು ಕೈಗೊಂಡ ಕಾರ್ಯಕ್ರಮಗಳಿಂದ ಪ್ರಗತಿಯೂ ಸಾಧ್ಯವಾಗಿದೆ. ಆದರೆ ಇನ್ನಷ್ಟು ಪರಿಣಾಮಕಾರಿಯಾಗಿ ಬಳಕೆ ಮಾಡುವ ಹೊಣೆಗಾರಿಕೆ ಅಧಿಕಾರಿಗಳ ಮೇಲೆ ಇದೆ' ಎಂದರು.

ಕನ್ನಡ ಶಾಲೆಗಳ ನಿರ್ಲಕ್ಷ್ಯ: ರಾಜ್ಯೋತ್ಸವದಂದು ಕರಾಳ ದಿನ

ಬೆಂಗಳೂರು: ರಾಜ್ಯ ಸರ್ಕಾರ 1995ರ ನಂತರದ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸದೆ ನಿರ್ಲಕ್ಷ್ಯಿಸಿದೆ ಎಂದು ಆರೋಪಿಸಿರುವ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘ (ಕೃಪ), ರಾಜ್ಯೋತ್ಸವವನ್ನು ಕರಾಳ ದಿನವಾಗಿ ಆಚರಿಸಲು ನಿರ್ಧರಿಸಿದೆ.

ಸಂಘದ ಪದಾಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಅನುದಾನಕ್ಕೆ ಒಳಪಡಿಸಲು ಆಗ್ರಹಿಸಿ 30 ವರ್ಷಗಳಿಂದ ಹೋರಾಟ, ಧರಣಿ ಸತ್ಯಾಗ್ರಹ ನಡೆಸಿದರೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಆತ್ಮಹತ್ಯೆಯಂಥ ಅನೇಕ ಘಟನೆಗಳು ನಡೆದರೂ ಕನಿಷ್ಠ ಕರುಣೆ ತೋರಿಸದ ಸರ್ಕಾರದ ನಡೆ ಖಂಡನೀಯ' ಎಂದರು.

'ನವೆಂಬರ್ ತಿಂಗಳಲ್ಲಿ ಕನ್ನಡದ ನಾಡು ನುಡಿ ಕುರಿತು ಭಾಷಣ ಮಾಡುವ ನಾಯಕರು, ಕನ್ನಡ ಸಾಹಿತಿಗಳು, ಪ್ರಗತಿಪರ ಚಿಂತಕರಿಗೆ ನಮ್ಮ ಶಾಲೆಗಳ ಶಿಕ್ಷಕರು ಕಾಣಿಸುತ್ತಿಲ್ಲ. ಶಿಕ್ಷಕರು 30 ವರ್ಷಗಳಿಂದ ಕನ್ನಡ ಕಲಿಸಿ, ಬಿಡಿಗಾಸು ಪಡೆಯದೆ ನಿವೃತ್ತಿ ಹೊಂದುತ್ತಿದ್ದಾರೆ. ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸದ ಸರ್ಕಾರದ ನಡೆಯನ್ನು ಖಂಡಿಸಿ ಖಾಸಗಿ ಶಾಲೆಗಳ ಶಿಕ್ಷಕರು ಮತ್ತು ಆಡಳಿತ ಮಂಡಳಿಯ ಸದಸ್ಯರು ಕನ್ನಡ ರಾಜ್ಯೋತ್ಸವದಂದು ಕಪ್ಪು ಪಟ್ಟಿ ಧರಿಸಿ, ಕರಾಳ ದಿನವಾಗಿ ಆಚರಿಸಲು ನಿರ್ಧರಿಸಿದ್ದಾರೆ' ಎಂದರು.

'ಶಾಲೆಗಳ ಮಾನ್ಯತೆ ನವೀಕರಣ, ಆರ್‌ಟಿಇ ಮರುಚಾಲನೆ, ಆರ್‌ಟಿಇ ಶುಲ್ಕ ಮರುಪಾವತಿ, ಗ್ರ್ಯಾಚುಯಿಟಿ ಇತ್ಯಾದಿ ಸಮಸ್ಯೆಗಳ ವಿರುದ್ಧ ನ್ಯಾಯಾಲಯದ ಮೊರೆ ಹೋಗಲು ಕೂಡಾ ಸಭೆಯಲ್ಲಿ ಒಕ್ಕೊರಲಿನ ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದರು.

ಬಾಡಿಗೆಗೆ ಖಾಸಗಿ ವಾಹನ ಬಳಕೆ

ಒಂದನೇ ಪುಟದಿಂದ...

'ಕೆಲವು ಆ್ಯಪ್‌ಗಳನ್ನು ನಿಷೇಧಿಸಿದರೂ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ. ಐಟಿ–ಬಿಟಿ ಕಂಪನಿಗಳಲ್ಲಿ 'ಕಾರ್ ಪೂಲಿಂಗ್' ಮೂಲಕ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಕೆ ಮಾಡಲಾಗುತ್ತಿದೆ' ಎಂದು ವಾಣಿಜ್ಯ ವಾಹನಗಳ ಚಾಲಕರು ದೂರಿದರು.

'ಸ್ವಂತ ಬಳಕೆಯ ವಾಹನಗಳನ್ನು ಬಾಡಿಗೆಗೆ ಬಳಸುವುದರಿಂದ ವಾಣಿಜ್ಯ ಸಾರಿಗೆ ಸಂಚಾರದ ವಾಹನಗಳನ್ನು ಹೊಂದಿರುವ ನಮಗೆ ಶೇ 60ರಷ್ಟು ಹೊಡೆತ ಬಿದ್ದಿದೆ. ಸಾರಿಗೆ ಇಲಾಖೆ ಈ ಬಗ್ಗೆ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ. ಇದರಿಂದ ಒಂದಾದ ಮೇಲೆ ಒಂದು ಆ್ಯಪ್‌ಗಳು ಹುಟ್ಟಿಕೊಳ್ಳುತ್ತಲೇ ಇವೆ' ಎಂದು ಬೃಹತ್ ಬೆಂಗಳೂರು ಟ್ಯಾಕ್ಸಿ ಡ್ರೈವರ್ ಯೂನಿಯನ್ ಅಧ್ಯಕ್ಷ ಅಶ್ವಥ್ ಪಿ. ಅಸಮಾಧಾನ ವ್ಯಕ್ತಪಡಿಸಿದರು.

'ಕದ್ದುಮುಚ್ಚಿ ಕೆಲವು ವಾಹನಗಳ ಮಾಲೀಕರು ವಾಣಿಜ್ಯ ಸಂಚಾರ ನಡೆಸುತ್ತಿದ್ದಾರೆ. ಕೆಲವರು ಸಂಘಟನೆಗಳನ್ನು ಕಟ್ಟಿಕೊಂಡು ಕಾರ್ಯಾಚರಿಸುತ್ತಿದ್ದಾರೆ. ಬೆಂಗಳೂರಿನ ಚಲನಚಿತ್ರ ವಾಹನ ಚಾಲಕರ ಸಂಘದಲ್ಲಿ ಹಳದಿ ನಂಬರ್ ಪ್ಲೇಟ್ ಹೊಂದಿರುವ ಐದಾರು ವಾಹನಗಳಷ್ಟೇ ಇವೆ. 75 ಟ್ಯಾಕ್ಸಿಗಳು ಬಿಳಿ ನಂಬರ್‌ಪ್ಲೇಟ್ ಹೊಂದಿವೆ. ಇದಲ್ಲದೇ ಸಂಘದಲ್ಲಿ ಇಲ್ಲದ 50ಕ್ಕೂ ಅಧಿಕ ಸ್ವಂತ ವಾಹನಗಳನ್ನು ಬಾಡಿಗೆಗೆ ಸಂಚಾರಕ್ಕೆ ಬಳಸಲಾಗುತ್ತಿದೆ. ಈ ಬಗ್ಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ಕರ್ನಾಟಕ ಟ್ಯಾಕ್ಸಿ ಡ್ರೈವರ್ಸ್ ಆರ್ಗನೈಸೇಶನ್ ಸದಸ್ಯ ರಮೇಶ್ ಸಿ. ದೂರಿದರು.

'ಇತ್ತೀಚೆಗೆ ಇದೇ ರೀತಿ ಬಾಡಿಗೆ ಮಾಡಿದ್ದ ವಾಹನದ ಬಗ್ಗೆ ಸಾರಿಗೆ ಇಲಾಖೆಗೆ ಮಾಹಿತಿ ನೀಡಿದ್ದೆ. ಆರ್‌ಟಿಒ ಬಂದು ವಾಹನವನ್ನು ವಶಕ್ಕೆ ಪಡೆದಿದ್ದರು. ಅದರ ಚಾಲಕ ಜೀವಬೆದರಿಕೆ ಒಡ್ಡಿದ್ದರು. ಚಲನಚಿತ್ರ ವಾಹನ ಚಾಲಕರ ಸಂಘದ ಅಧ್ಯಕ್ಷರ ಕುಮ್ಮಕ್ಕಿನಿಂದ ಈ ರೀತಿ ಮಾಡಿದ್ದಾರೆ ಎಂದು ಪೊಲೀಸರಿಗೆ ದೂರು ಕೂಡ ನೀಡಿದ್ದೆ. ಆದರೂ ಖಾಸಗಿ ವಾಹನಗಳನ್ನು ಬಾಡಿಗೆಗೆ ಸಂಚರಿಸುವುದು ನಿಯಂತ್ರಣವಾಗಿಲ್ಲ' ಎಂದು ರಮೇಶ್ ತಿಳಿಸಿದರು.

'ವಾಣಿಜ್ಯ ಸಂಚಾರದ ವಾಹನಗಳನ್ನೇ ನಂಬಿದ ನಮ್ಮಂಥವರ ಹೊಟ್ಟೆಗೆ ಹೊಡೆಯುವ ಇಂಥ ವಾಹನಗಳ ಮೇಲೆ ಸಾರಿಗೆ ಸಚಿವರು, ಇಲಾಖೆಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂಬುದು ಅವರ ಆಗ್ರಹವಾಗಿದೆ.

'ಆರ್ಟ್ ಫಾರ್ ಹೋಪ್'ಗೆ ಅರ್ಜಿ

ಬೆಂಗಳೂರು: ಹೂಂಡೈ ಮೋಟಾರ್ ಇಂಡಿಯಾ ಲಿಮಿಟೆಡ್ (ಎಚ್‌ಎಂಐಎಲ್) ಇದರ ಸಿಎಸ್‌ಆರ್ ಅಂಗವಾದ ಹೂಂಡೈ ಮೋಟಾರ್ ಇಂಡಿಯಾ ಫೌಂಡೇಷನ್ (ಐಎಫ್) ಸಿಎಸ್‌ಆರ್ ಯೋಜನೆಯ ಅಂಗವಾಗಿ 'ಆರ್ಟ್ ಫಾರ್ ಹೋಪ್'ನ 4ನೇ ಆವೃತ್ತಿಯನ್ನು ಆರಂಭಿಸಿದೆ. ಪ್ರತಿಭಾವಂತ ಕಲಾವಿದರನ್ನು ಬೆಳಕಿಗೆ ತರುವ ಈ ಯೋಜನೆಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

ಹಿಂದಿನ ಮೂರು ಆವೃತ್ತಿಗಳಲ್ಲಿ ಈ ಯೋಜನೆಯ ಮೂಲಕ 100ಕ್ಕೂ ಹೆಚ್ಚು ಕಲಾವಿದರು ಮತ್ತು ಕಲಾ ತಂಡಗಳಿಗೆ ಒಟ್ಟು ₹1.05 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ. ಈ ವರ್ಷ ಚಿತ್ರಕಲೆ, ಶಿಲ್ಪಕಲೆ, ಡಿಜಿಟಲ್ ಕಲೆ, ಪ್ರದರ್ಶನ ಕಲೆ, ಸಂಗೀತ ಕಲೆ ಮತ್ತು ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ಪ್ರದರ್ಶಿಸಲು ಅವಕಾಶ ನೀಡಲಾಗಿದೆ ಎಂದು ಹೂಂಡೈ ಕಾರ್ಪೊರೇಟ್ ಕಮ್ಯುನಿಕೇಷನ್ ಮುಖ್ಯಸ್ಥ ಪುನೀತ್ ಆನಂದ್ ತಿಳಿಸಿದ್ದಾರೆ.

ನ.10ರ ಒಳಗೆ ಅರ್ಜಿ ಸಲ್ಲಿಸಬೇಕು. ನವೆಂಬರ್–ಡಿಸೆಂಬರ್ ಯೋಜನೆ ಅನುಷ್ಠಾನದ ಅವಧಿಯಾಗಿದೆ. ಅಂಗವಿಕಲ ಕಲಾವಿದರೂ ಸೇರಿದಂತೆ ಒಟ್ಟು 40 ಕಲಾವಿದರಿಗೆ ತಲಾ ₹1 ಲಕ್ಷ ಪ್ರೋತ್ಸಾಹಧನ ನೀಡಲಾಗುವುದು. 10 ಸಮೂಹ ಸಂಸ್ಥೆಗಳಿಗೆ ₹2 ಲಕ್ಷ ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಕಲಾವಿದರು hyundaiartforhope.com ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ contactus@hyundaiartforhope.comಗೆ ಇ–ಮೇಲ್ ಕಳಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

'ಆರೋಗ್ಯ ವಿವಿ ಯಲ್ಲಿ ಅವ್ಯವಹಾರ'

ಬೆಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಭ್ರಷ್ಟಾಚಾರ ಹಾಗೂ ಅವ್ಯವಹಾರ ನಡೆದಿದೆ' ಎಂದು ವಿವಿಯ ಸಿಂಡಿಕೇಟ್ ಮಾಜಿ ಸದಸ್ಯ ವೇಣುಗೋಪಾಲ ಆರೋಪಿಸಿ ದರು. ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳ ಶುಲ್ಕ ಶೈಕ್ಷಣಿಕ ಚಟುವಟಿಕೆಗಳಿಗೆ ಬಳಕೆಯಾಗದೆ ವಿವಿಯ ಕಟ್ಟಡಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Part-Time Jobs

BEST JOB Opportunity Looking for Retired, VRS, Homemakers, Age Minimum 40 Years Income 50K Monthly: 9886641282/ 6362220162

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE SELLING

General

South

30' X 40' North East facing plot with compound wall and gate available for Sale in Karnasrilayout, Kodinalli, Old Madras Road. Contact Mr. Shankar Rao, Advocate, Indiranagar, Bangalore. Mobile No : 9959883493 - NO BROKERS PLEASE-

BUSINESS

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

ಲಾಲ್‌ಬಾಗ್: ಬಿರುಕುಬಿಟ್ಟ ಬ್ಯಾಂಡ್‌ಸ್ಟ್ಯಾಂಡ್

ಎಡರನೇ ಮುಖಪುಟದಿಂದ...

'ಬ್ಯಾಂಡ್ ಸ್ಟ್ಯಾಂಡ್ ಸಂರಕ್ಷಿಸುವ ಉದ್ದೇಶದಿಂದ ಅ.ನ. ಯಲ್ಲಪ್ಪರೆಡ್ಡಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಇದನ್ನು ತೆರವುಗೊಳಿಸಲು ಈ ಸಮಿತಿ ಅನುಮತಿ ನೀಡಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಹೊಸದಾಗಿ ಬ್ಯಾಂಡ್ ಸ್ಟ್ಯಾಂಡ್ ನಿರ್ಮಿಸಲಾಗುವುದು' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'24 ವರ್ಷಗಳ ಹಿಂದೆ ಬ್ಯಾಂಡ್ ಸ್ಟ್ಯಾಂಡ್ ನಿರ್ಮಿಸಲಾಗಿತ್ತು. ಮೇಲ್ಚಾವಣಿಗೆ ಹಲಗೆಗಳನ್ನು ಹಾಕಿದ ಕಾರಣದಿಂದ ಬಿರುಕು ಬಿಟ್ಟಿದೆ. ಇದರ ಸೌಂದರ್ಯಕ್ಕೆ ಯಾವುದೇ ಧಕ್ಕೆ ಆಗದಂತೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರಿನ ಮರ ವಿಜ್ಞಾನ ಸಂಶೋಧನಾ ಸಂಸ್ಥೆ ಹಾಗೂ ಇತರ ತಜ್ಞರ ಸಲಹೆಗಳನ್ನು ಪಡೆದು ಕೊಳ್ಳಲಾಗುತ್ತಿದೆ' ಎಂದರು.

'ಸಂಗೀತ ಪ್ರೇಮಿಗಳ ಆಕರ್ಷಕ ಕೇಂದ್ರವಾಗಿದ್ದ ಬ್ಯಾಂಡ್ ಸ್ಟ್ಯಾಂಡ್ ತೋಟಗಾರಿಕೆ ಇಲಾಖೆ ನಿರ್ಲಕ್ಷ್ಯದಿಂದ ಕುಸಿದಿದೆ. ಈಗ ಇದನ್ನು ತೆರವುಗೊಳಿಸಿ ಪುನರ್ ನಿರ್ಮಿಸುವ ಚರ್ಚೆ ನಡೆಯುತ್ತಿದೆ. ಇದರ ಹಿಂದಿನ ಸೌಂದರ್ಯಕ್ಕೆ ಧಕ್ಕೆ ಆಗದಂತೆ ನವೀಕರಿಸಬೇಕು. ವಾರಕ್ಕೆ ಒಂದು ಬಾರಿ ಇಲ್ಲಿ ವಾದ್ಯ ನುಡಿಸಲು ಅವಕಾಶ ಕಲ್ಪಿಸಬೇಕು' ಎಂದು ವಾಯುವಿಹಾರಿ ಜಯಕುಮಾರ್ ಒತ್ತಾಯಿಸಿದರು. 'ಈಗಾಗಲೇ ಬ್ಯಾಂಡ್ ಸ್ಟ್ಯಾಂಡ್ ಶಿಥಿಲವಾಗಿದ್ದು, ಕುಸಿಯುವ ಹಂತಕ್ಕೆ ತಲುಪಿದೆ. ಇದು ಕುಸಿಯದಂತೆ ಹಗ್ಗದಿಂದ ಕಟ್ಟಲಾಗಿದೆ. ಏನಾದರೂ ಅನಾಹುತ ಸಂಭವಿಸುವ ಮುನ್ನ ಇದನ್ನು ತೆರವುಗೊಳಿಸಿ, ನೂತನ ಕಾಮಗಾರಿ ಪ್ರಾರಂಭಿಸಬೇಕು' ಎಂದು ಸಂಗೀತ ಪ್ರೇಮಿ ಸುರೇಶ್ ಹೇಳಿದರು.

ಪಟಾಕಿ ಅಂಗಡಿಗೆ ಅಂಕುಶ ಜನರಲ್ಲಿ ಕುಗ್ಗದ ಉತ್ಸಾಹ

ಎರಡನೇ ಮುಖಪುಟದಿಂದ...

ಕಳೆದ ವರ್ಷ ಸಂಭವಿಸಿದ ಪಟಾಕಿ ದುರಂತದ ಹಿನ್ನೆಲೆಯಲ್ಲಿ ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಲೋಪದೋಷಗಳನ್ನು ಪತ್ತೆಹಚ್ಚಿ ಜಂಟಿ ಸಮೀಕ್ಷೆಯಲ್ಲಿ ವರದಿ ಮಾಡಲಾಗಿದೆ. ಲೋಪದೋಷ ಸರಿಪಡಿಸಿಕೊಂಡವರಿಗೆ ಮಾತ್ರ ಅಂಗಡಿ ತೆರೆಯಲು ಅನುಮತಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದರಿಂದಾಗಿ ಅತ್ತಿಬೆಲೆ ಪುರಸಭಾ ವ್ಯಾಪ್ತಿಯಲ್ಲಿ 6 ಮಳಿಗೆ ಮತ್ತು ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 15 ಪಟಾಕಿ ಅಂಗಡಿ ತೆರೆಯಲು ಅನುಮತಿ ನೀಡಲಾಗಿದೆ. ಚಂದಾಪುರ ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 11 ಪಟಾಕಿ ಅಂಗಡಿ ತೆರೆದಿವೆ. ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 1 ಮಳಿಗೆಗೆ ಮಾತ್ರ ಪರವಾನಗಿ ದೊರೆತಿದೆ.

ಹಸಿರು ಪಟಾಕಿಗೆ ಮಾತ್ರ ಅವಕಾಶ

ಎರಡನೇ ಮುಖಪುಟದಿಂದ...



'ಎಂಟು ವರ್ಷಗಳಿಂದ ಅತ್ತಿಬೆಲೆಯಲ್ಲಿ ಪಟಾಕಿ ಅಂಗಡಿ ಇಟ್ಟುಕೊಂಡಿದ್ದೇನೆ. ಕಳೆದ ವರ್ಷ ದುರಂತ ನಡೆದ ಕಾರಣ ನಷ್ಟ ಉಂಟಾಗಿತ್ತು. ಈ ವರ್ಷ ಉತ್ತಮ ವ್ಯಾಪಾರವಾಗುತ್ತಿದೆ. ₹50–₹5 ಸಾವಿರದವರೆಗೆ ವೈವಿಧ್ಯಮಯ ಪಟಾಕಿ ದೊರೆಯುತ್ತವೆ. ಹಸಿರು ಪಟಾಕಿಗಳಿಗೆ ಮಾತ್ರ ಸರ್ಕಾರ ಅನುಮತಿ ನೀಡಿದೆ' ಎಂದು ವರ್ತಕರೊಬ್ಬರು ಹೇಳಿದರು.

ಬೆಂಗಳೂರಿನ ಐ.ಟಿ ಉದ್ಯೋಗಿ ಅನೀಶ್ ಪಟಾಕಿ ಕೊಳ್ಳಲು ಅತ್ತಿಬೆಲೆಗೆ ಬಂದಿದ್ದರು. ₹15 ಸಾವಿರ ಬೆಲೆಯ ಪಟಾಕಿ ಖರೀದಿಸಿದ್ದಾಗಿ ಅವರು ಹೇಳಿದರು. ಕಳೆದ ವರ್ಷಕ್ಕಿಂತ ಈ ಸಲ ಶೇ.15 ರಿಂದ 20ರಷ್ಟು ಬೆಲೆ ಹೆಚ್ಚಾಗಿದೆ. ಆದರೂ ಪಟಾಕಿ ಕೊಳ್ಳಲು ಅತ್ತಿಬೆಲೆ ಸೂಕ್ತ ಸ್ಥಳ. ಪ್ರತಿವರ್ಷ ಅತ್ತಿಬೆಲೆಯಲ್ಲಿ ಪಟಾಕಿ ಖರೀದಿಸುತ್ತಿರುವುದಾಗಿ ಹೇಳಿದರು.

ಅನುರಾಧಾ ದೇಸಾಯಿಗೆ 'ಆದರ್ಶ ಜೈನ ಮಹಿಳಾರತ್ನ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೊ ಟೆಲಿಮೆಟ್ರಿ ಡೇಟಾ ಅಕ್ವಿಸಿಷನ್ ಸಿಸ್ಟಮ್ ಮುಖ್ಯಸ್ಥೆ ಅನುರಾಧಾ ಬಿ.ದೇಸಾಯಿ ಅವರಿಗೆ ಪಂಡಿತರತ್ನ ಎ.ಶಾಂತಿರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿಯನ್ನು ಭಾನುವಾರ ಪ್ರದಾನ ಮಾಡಲಾಯಿತು.

ಟ್ರಸ್ಟ್‌ನ 36ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿ, 'ಸತತ ಪರಿಶ್ರಮದಿಂದ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯ' ಎಂದು ತಿಳಿಸಿದರು.

'ಕತ್ತಲಾಗುವ ಮೊದಲು ಊಟ ಮಾಡುವ ಜೈನರ ಆಹಾರ ಪದ್ಧತಿ ವೈಜ್ಞಾನಿಕವಾಗಿದೆ. ಅದೇ ರೀತಿ ಜೀವಿಸು ಮತ್ತು ಇತರರನ್ನು ಜೀವಿಸಲು ಬಿಡು ಎಂಬ ಜೈನ ಧರ್ಮದ ನಿಯಮ ಕೂಡ ಇಂದು ಎಲ್ಲರಿಗೂ ಅಗತ್ಯ' ಎಂದು ಹೇಳಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪದ್ಮರಾಜ ಎನ್.ದೇಸಾಯಿ ಮಾತನಾಡಿ, 'ವಿವಿಧ ಕ್ಷೇತ್ರಗಳ ಸಾಧಕರನ್ನು ಮಕ್ಕಳು ಸ್ಫೂರ್ತಿಯಾಗಿ ಸ್ವೀಕರಿಸಬೇಕು. ಅದು ಮುಂದೆ ನಿಮಗೂ ಸಾಧನೆ ಮಾಡಲು ಪ್ರೇರಣೆ ಯಾಗುತ್ತದೆ' ಎಂದು ಸಲಹೆ ನೀಡಿದರು.



ಪಂಡಿತರತ್ನ ಎ.ಶಾಂತಿರಾಜಶಾಸ್ತ್ರಿ ಟ್ರಸ್ಟ್‌ನ 36ನೇ ವಾರ್ಷಿಕೋತ್ಸವದಲ್ಲಿ 'ಇಸ್ರೋದ ಟೆಲಿಮೆಟ್ರಿ ಡೇಟಾ ಅಕ್ವಿಷನ್ ಸಿಸ್ಟಮ್' ಮುಖ್ಯಸ್ಥೆ ಅನುರಾಧಾ ಬಿ.ದೇಸಾಯಿ ಅವರಿಗೆ 'ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಹೊಂಬುಜ ಜೈನಮಠದ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಟ್ರಸ್ಟ್ ಚೇರ್ಮನ್ ಎಸ್. ಜಿತೇಂದ್ರಕುಮಾರ್, ವ್ಯವಸ್ಥಾಪಕ ಧರ್ಮದರ್ಶಿ ನೇಮಚಂದ್ರ ಡಿ., ಧರ್ಮದರ್ಶಿಗಳಾದ ಡಿ.ವಿ. ಪ್ರವೀಣ್ ಕುಮಾರ್, ಜೆ. ಸುರೇಶ್ ಕುಮಾರ್, ಎಂ.ಜೆ. ಇಂದ್ರಕುಮಾರ್, ಪಿ.ವೈ. ರಾಜೇಂದ್ರ ಕುಮಾರ್, ಎ.ಸಿ. ವಿದ್ಯಾಧರ್, ಪದ್ಮರಾಜ ದಂಡಾವತಿ, ಮಹಾವೀರ ಜೈನ್ ಭಾಗವಹಿಸಿದ್ದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

'ರಸ್ತೆ ಗುಂಡಿ ಮುಚ್ಚಿ'



ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ. ಈ ಗುಂಡಿಗಳನ್ನು ಮುಚ್ಚದ ಪರಿಣಾಮ ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು, ಗಾಯಗೊಳ್ಳುವ ಸಾಧ್ಯತೆಗಳಿವೆ. ಮಳೆ ಬಂದಾಗ ಗುಂಡಿಗಳಲ್ಲಿ ನೀರು ತುಂಬಿರುವ ಕಾರಣ, ವಾಹನ ಸವಾರರು ಬಿದ್ದು ಗಾಯಗೊಂಡ ಉದಾಹರಣೆಗಳೂ ಇವೆ. ಇದೇ ರಸ್ತೆಯಲ್ಲಿ ಆದಿತ್ಯ ಕಲ್ಯಾಣ ಮಂಟಪದ ಸಮೀಪವಿರುವ ಮೋರಿಯ ಬಳಿ ಮಳೆ ನೀರು ನಿಲ್ಲುತ್ತಿದ್ದು, ದ್ವಿಚಕ್ರ ವಾಹನ ಸವಾರರು ಸಾಗುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಬಿಬಿಎಂಪಿ ಅಧಿಕಾರಿಗಳು ಗುಂಡಿಗಳನ್ನು ಮುಚ್ಚಲು ಕ್ರಮವಹಿಸುವ ಜತೆಗೆ ಮೋರಿ ಬಳಿ ನೀರು ನಿಲ್ಲದಂತೆ ಪರಿಹಾರ ಒದಗಿಸಬೇಕು.

ರಾಮಚಂದ್ರ, ಸಪ್ತಗಿರಿ ಲೇಔಟ್ ನಿವಾಸಿ

'ಅಪಾಯ ತಂದೊಡ್ಡುವ ರಸ್ತೆ ಗುಂಡಿ'



ಚಾಮರಾಜಪೇಟೆ ಕಡೆಯಿಂದ ರಾಮಕೃಷ್ಣ ಆಶ್ರಮ ವೃತ್ತದ ಕಡೆ ಸಾಗಲು ಬಳಸುವ ದೊಡ್ಡ ಬಸವಣ್ಣ ರಸ್ತೆಯಲ್ಲಿ (ಬುಲ್ ಟೆಂಪಲ್ ರಸ್ತೆ) ಶೆಲ್ ಪೆಟ್ರೋಲ್ ಬಂಕ್ ಬಳಿ, ಬಿಬಿಎಂಪಿ ನಿರ್ಮಿಸಿರುವ ಬಸ್ ನಿಲ್ದಾಣದ ಮುಂಭಾಗ ಬೃಹದಾಕಾರದ ಗುಂಡಿ ಬಿದ್ದಿದೆ. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ಚುನಾವಣೆ ಪ್ರಚಾರಕ್ಕೆ ಬರುತ್ತಾರೆಂಬ ಕಾರಣಕ್ಕೆ ರಸ್ತೆಗೆ ಮರು ಡಾಂಬರೀಕರಣ ಮಾಡಲಾಗಿತ್ತು. ಅಲ್ಪಾವಧಿಯಲ್ಲಿ ಬೃಹದಾಕಾರದ ಗುಂಡಿಗಳು ಈ ರಸ್ತೆಯಲ್ಲಿ ಕಾಣಿಸುತ್ತಿವೆ. ವೇಗವಾಗಿ ಬರುವ ವಾಹನ ಸವಾರರು, ಗುಂಡಿ ತಪ್ಪಿಸುವ ವೇಳೆ ಅಪಘಾತಕ್ಕೆ ಒಳಗಾಗುವ ಸಾಧ್ಯತೆಯಿದೆ. ಹಲವು ದಿನಗಳಿಂದ ಈ ಗುಂಡಿಗಳು ಹಾಗೆಯೇ ಇದ್ದು, ಬಿಬಿಎಂಪಿ ಅಧಿಕಾರಿಗಳು ಈ ಕಡೆಗೆ ಗಮನ ಹರಿಸುತ್ತಿಲ್ಲ. ಮಳೆ ಬಂದರೆ ನೀರು ತುಂಬಿಕೊಂಡ ಗುಂಡಿಗಳನ್ನು ಗುರುತಿಸುವುದೇ ಕಷ್ಟ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ವೆಂಕಟೇಶ್, ಚಾಮರಾಜಪೇಟೆ ನಿವಾಸಿ

'ಕೇಬಲ್, ಕಸ ತೆರವುಗೊಳಿಸಿ'



ರಾಜರಾಜೇಶ್ವರಿ ನಗರದ ಜಯಣ್ಣ ಬಡಾವಣೆಯ ಮುಖ್ಯ ರಸ್ತೆಯಲ್ಲಿ ಹಲವು ತಿಂಗಳಿಂದ ಕೇಬಲ್‌ನೊಂದಿಗೆ ಕಸದ ರಾಶಿ ಬಿದ್ದಿದ್ದು, ಬಿಬಿಎಂಪಿಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಗಾಳಿ ಬೀಸಿದಾಗ, ಈ ಕಸ ರಸ್ತೆಗಳಿಗೂ ಹರಡಿಕೊಳ್ಳುತ್ತದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು, ಕೇಬಲ್ ಹಾಗೂ ಕಸವನ್ನು ತೆರವು ಮಾಡಬೇಕು.

ಟಿ.ಇ.ಶ್ರೀನಿವಾಸ್, ಜಯಣ್ಣ ಬಡಾವಣೆ ನಿವಾಸಿ

'ಬಸ್ ನಿಲ್ದಾಣದ ಸುತ್ತ ಹಾಳಾದ ರಸ್ತೆ'



ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರವೇಶ ಕಲ್ಪಿಸುವ ರಸ್ತೆಯುದ್ದಕ್ಕೂ ಬೃಹದಾಕಾರದ ಗುಂಡಿಗಳು ಬಿದ್ದಿವೆ. ಸಂಪೂರ್ಣವಾಗಿ ಹದಗೆಟ್ಟಿರುವ ಈ ರಸ್ತೆಯ ಮೂಲಕವೇ ಬಿಎಂಟಿಸಿಯ ಎಲ್ಲ ಬಸ್‌ಗಳು ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರವೇಶಿಸಬೇಕಿದೆ. ಗುಂಡಿಗಳನ್ನು ತಪ್ಪಿಸಿಕೊಂಡು ಬಸ್‌ಗಳನ್ನು ನಿಲ್ದಾಣದೊಳಕ್ಕೆ ತರಲು ಮತ್ತು ಹೊರಕ್ಕೆ ಕೊಂಡೊಯ್ಯಲು ಚಾಲಕರು ಹರಸಾಹಸಪಡುವಂತಾಗಿದೆ. ಬಸ್‌ಗಳು ನಿಧಾನ ಗತಿಯಲ್ಲಿ ಸಂಚರಿಸುವುದರಿಂದ ವಿಪರೀತ ದಟ್ಟಣೆಯೂ ಆಗುತ್ತಿದೆ. ಮಳೆ ಬಂದಲ್ಲಿ ಇನ್ನಷ್ಟು ಸಮಸ್ಯೆ ತಲೆದೋರಲಿದೆ. ಕೇಂದ್ರ ಸ್ಥಳದಲ್ಲಿಯೇ ಹೀಗಾದರೆ, ಉಳಿದ ರಸ್ತೆಗಳ ಕಥೆ ಏನು? ಆದಷ್ಟು ಬೇಗ ಸಮಸ್ಯೆಗೆ ಮುಕ್ತಿ ಒದಗಿಸಬೇಕು.

ಪ್ರತೀಕ್, ಸಾರ್ವಜನಿಕ

'ಜಾತಿ ಮತ್ತು ಲಿಂಗತ್ವ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಚರ್ಚೆ

'ಮಹಿಳಾ ಚಳವಳಿಗಳಲ್ಲಿ ದಲಿತ ಪ್ರಶ್ನೆ ಅಹಿತಕರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳಾ ಚಳವಳಿಗಳಲ್ಲಿ ದಲಿತ ಪ್ರಶ್ನೆ ಎತ್ತಿದಾಕ್ಷಣ ವಾತಾವರಣ ಅಹಿತಕರವಾಗುವ ಪರಿಸ್ಥಿತಿ ಇದೆ' ಎಂದು ಪ್ರಾಧ್ಯಾಪಕಿ ಭಾರತಿ ದೇವಿ.ಪಿ ಅವರು ಹೇಳಿದರು.

ದು.ಸರಸ್ವತಿ ಅವರು ಅನುವಾದಿಸಿರುವ, ಶರ್ಮಿಳಾ ರೆಗೆ ಅವರ 'ರೈಟಿಂಗ್ ಕಾಸ್ಟ್/ರೈಟಿಂಗ್ ಜೆಂಡರ್' ಕೃತಿಯ ಕನ್ನಡಾನುವಾದ 'ಜಾತಿ ಮತ್ತು ಲಿಂಗತ್ವ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ತ್ರೀವಾದವು ಅಬ್ರಾಹ್ಮಣೀ ದೃಷ್ಟಿಕೋನಗಳನ್ನು ರೂಢಿಸಿಕೊಳ್ಳಲೇ ಇಲ್ಲ. ಸ್ತ್ರೀವಾದವು ಫುಲೆಯವರ ದೃಷ್ಟಿಕೋನಗಳನ್ನು, ಅಂಬೇಡ್ಕರ್ ಅವರ ದೃಷ್ಟಿಕೋನಗಳನ್ನು ಒಳಗೊಳ್ಳಬೇಕಿತ್ತು. ಭಾರತದ ಸ್ತ್ರೀವಾದವು 70-80ರ ದಶಕದ ಮೇಲ್ವರ್ಗಗಳ ಮತ್ತು ಪ್ರಬಲ ಜಾತಿಗಳ ಮಹಿಳೆಯರಿಂದಲೇ ತುಂಬಿಹೋಗಿದೆ. ಎಲ್ಲ ಜಾತಿಗಳ ಮಹಿಳೆಯರನ್ನೂ ಏಕಾಕೃತಿಯಾಗಿ ಪರಿಗಣಿಸುವ ಸ್ತ್ರೀವಾದವದು. ಅದು ಸ್ತ್ರೀವಾದದಲ್ಲಿ ದಲಿತ ಪ್ರಶ್ನೆಯನ್ನು ಎತ್ತುವುದೇ ಇಲ್ಲ ಎಂಬ ಪ್ರತಿಪಾದನೆಯ ಭಾಗವಾಗಿ ಶರ್ಮಿಳಾ ಅವರ ಈ ಕೃತಿ ರೂಪುಗೊಂಡಿದೆ' ಎಂದರು.

'ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಜಾತಿ ಕುರಿತ ಚರ್ಚೆಗಳು, ಏಣಿ-ಶ್ರೇಣಿ, ಶುದ್ಧ-ಅಶುದ್ಧ ಎಂಬ ಸಂಕಥನಗಳನ್ನೇ ಸುತ್ತುತ್ತವೆಯೇ ಹೊರತು, ಅದರೊಳಗೆ ಸ್ತ್ರೀವಾದವನ್ನು ಹುಡುಕುವುದಿಲ್ಲ. ಮಹಿಳಾ ಅಧ್ಯಯನ ಕೇಂದ್ರಗಳಲ್ಲಿ ನಡೆಯುವ ಚರ್ಚೆ-ಸಂವಾದ-ಜಿಜ್ಞಾಸೆಗಳು ಸ್ತ್ರೀವಾದದ ಸುತ್ತ ಇರುತ್ತದೆಯೇ ಹೊರತು, ಅವುಗಳಲ್ಲಿ ದಲಿತ ಪ್ರಶ್ನೆ ಎದುರಾಗುವುದಿಲ್ಲ' ಎಂದರು.

'ಕನ್ನಡದ ಸ್ಥಿತಿಯೂ ಭಿನ್ನವಾಗೇನೂ ಇಲ್ಲ. 90ರ ದಶಕದ ನಂತರ ಅಲ್ಲೊಬ್ಬರು, ಇಲ್ಲೊಬ್ಬರು ಸ್ತ್ರೀವಾದದಲ್ಲೂ ದಲಿತ ಪ್ರಶ್ನೆಯನ್ನು ಗಟ್ಟಿಯಾಗಿ ಎತ್ತಿದರಷ್ಟೇ.



'ಜಾತಿ ಮತ್ತು ಲಿಂಗತ್ವ' ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ, ಫುಲೆ-ಅಂಬೇಡ್ಕರ್ ವಾದಿ ಧಮ್ಮ ಸಂಘಿನಿ ರಮಾಫೋರಕ್ ಮತ್ತು ಲೇಖಕಿ .ವಿ. ನೇತ್ರಾವತಿ ಚರ್ಚೆಯಲ್ಲಿ ತೊಡಗಿದ್ದರು. ಪ್ರೊ.ಪಿ.ಭಾರತಿ ದೇವಿ, ರಂಗ ನಿರ್ದೇಶಕ ಕೆ. ಪಿ. ಲಕ್ಷ್ಮಣ ಮತ್ತು ಲೇಖಕಿ ದು.ಸರಸ್ವತಿ ಇದ್ದರು ಪ್ರಜಾವಾಣಿ ಚಿತ್ರ

> **ಮಹಿಳೆಯರ ಲೈಂಗಿಕತೆಯನ್ನು ನಿಯಂತ್ರಿಸುವ ಮೂಲಕ ಜಾತಿ ವ್ಯವಸ್ಥೆಯನ್ನು ಗಟ್ಟಿಯಾಗಿ ಉಳಿಸಿಕೊಳ್ಳಲಾಗುತ್ತದೆ ಎಂಬುದು ಈ ಕೃತಿಯ ಒಳನೋಟಗಳಲ್ಲಿ ಒಂದು**
> **ಧಮ್ಮ ಸಂಘಿನಿ ರಮಾಫೋರಕ್**
> ಅಧ್ಯಕ್ಷೆ, ರಿಪಬ್ಲಿಕನ್ ಆರ್‌ಎಎಂಐಎ

ಉಳಿದೆಲ್ಲಾ ಸಂದರ್ಭದಲ್ಲೂ ಸ್ತ್ರೀವಾದ ಎಂಬುದು ಜಾತಿರಹಿತ ಪರಿಕಲ್ಪನೆಯಾಗಿಯಷ್ಟೇ ಇತ್ತು' ಎಂದರು.

ರಂಗ ನಿರ್ದೇಶಕ ಕೆ.ಪಿ.ಲಕ್ಷ್ಮಣ ಮಾತನಾಡಿ, 'ಬ್ರಾಹ್ಮಣ ಪುರುಷರೂ ದಲಿತರನ್ನು ಶೋಷಿಸುತ್ತಾರೆ, ಬ್ರಾಹ್ಮಣ ಮಹಿಳೆಯರೂ ದಲಿತರನ್ನು ದೂಷಿಸುತ್ತಾರೆ. ಆದರೆ, ಬ್ರಾಹ್ಮಣರಲ್ಲೇ ಮಹಿಳೆಯರು ಎದುರಿಸುವ ಶೋಷಣೆಯನ್ನು ದಲಿತರು ಹೇಗೆ ನೋಡಬೇಕು. ಈ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ, ಅದು ನಾವು ನಮ್ಮ ಸಮುದಾಯಗಳ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆ ಎಂಬಲ್ಲಿಗೆ ಬಂದು ನಿಲ್ಲುತ್ತೇವೆ' ಎಂದರು.

ರವಿಶಂಕರ ಗುರೂಜಿಗೆ ಫಿಜಿ ಗೌರವ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ ಅವರಿಗೆ ಫಿಜಿ ಗಣರಾಜ್ಯವು ಅತ್ಯುನ್ನತ ಪೌರ ಸನ್ಮಾನವನ್ನು ಪ್ರದಾನ ಮಾಡಿ ಗೌರವಿಸಿದೆ.

ಮಾನವ ಸ್ಫೂರ್ತಿಯನ್ನು ನಿರಂತರವಾಗಿ ಎತ್ತಿ ಹಿಡಿಯಲು ಅವರು ಮಾಡುತ್ತಿರುವ ಕಾರ್ಯಕ್ಕಾಗಿ, ವಿವಿಧ ಸಮುದಾಯಗಳನ್ನು ಶಾಂತಿ ಮತ್ತು ಸಾಮರಸ್ಯದ ಮೂಲಕ ಒಂದಾಗಿ ತರುವ ಅವರ ಕಾರ್ಯಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಫಿಜಿ ಗಣರಾಜ್ಯ ತಿಳಿಸಿದೆ.

'ಹಾನರರಿ ಆಫಿಸರ್ ಆಫ್ ದಿ ಆರ್ಡರ್ ಆಫ್ ಫಿಜಿ' ಬಿರುದನ್ನು ಫಿಜಿ ಗಣರಾಜ್ಯದ ಅಧ್ಯಕ್ಷ ಎಚ್.ಇ.ರತು ವಿಲಿಯಮ್ ಕಟೋನಿವರ್ ನೀಡಿದರು. ಬಳಿಕ ಸಂವಾದ ಕಾರ್ಯಕ್ರಮ ನಡೆಯಿತು. ಫಿಜಿಯ ಉಪ ಪ್ರಧಾನಿ ವಿಲಿಯಮ್ ಗಾವ್ರೋಕ ಮತ್ತು ಫಿಜಿಯ ಸಂಯುಕ್ತ ರಾಷ್ಟ್ರಗಳ ವಸತಿ ಸಂಯೋಜಕ ಡಿರ್ಕ್ ವಾಗೆನರ್ ಭಾಗವಹಿಸಿದ್ದರು.



ಎಚ್.ಇ.ರತು ವಿಲಿಯಮ್ ಕಟೋನಿವರ್ ಅವರು ಶ್ರೀ ರವಿಶಂಕರ ಗುರೂಜಿ ಅವರಿಗೆ 'ಹಾನರರಿ ಆಫಿಸರ್ ಆಫ್ ದಿ ಆರ್ಡರ್ ಆಫ್ ಫಿಜಿ' ಬಿರುದನ್ನು ಪ್ರದಾನ ಮಾಡಿದರು

ಇಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್‌ನ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವ ಕಾರಣ, ಪೀಣ್ಯ ಎನ್-7 ವಿಭಾಗದ ವ್ಯಾಪ್ತಿಯ ಪ್ರದೇಶಗಳಲ್ಲಿ ಸೋಮವಾರ ಬೆಳಿಗ್ಗೆ 10 ರಿಂದ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಮಂಜುನಾಥ ನಗರ, ತಿಮ್ಮಯ್ಯ ರಸ್ತೆ, ಭೋವಿ ಕಾಲೊನಿ, ಮಹಾಗಣಪತಿ ನಗರ, ಪುಷ್ಪಾಂಜಲಿ ಅಪಾರ್ಟ್‌ಮೆಂಟ್, ಶಿವನಹಳ್ಳಿ ಪಾರ್ಕ್, ಆದರ್ಶ ನಗರ, ಯುನಿಕ್ಸ್ ಕಾಲೊನಿ, ಇಂದಿರಾ ನಗರ, ಮಂಜುನಾಥ ನಗರ, ಲಕ್ಷ್ಮೀನಗರ, ಕರ್ನಾಟಕ ಲೇಔಟ್, ಕಮಲಾ ನಗರ, ವಿ.ಜೆ.ಎಸ್.ಎಸ್.ಲೇಔಟ್, ವಾರ್ಡ್ ಕಚೇರಿ ಸುತ್ತಮುತ್ತ.

ನಾಗಪುರ, ಮಹಾಲಕ್ಷ್ಮಿ ಪುರ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಶಂಕರಮಠ, ಪೈಪ್ ಲೈನ್ ರಸ್ತೆ, ಜೆ.ಸಿ. ನಗರ, ಕುರುಬರಹಳ್ಳಿ, ರಾಜಾಜಿನಗರ 2ನೇ ಬ್ಲಾಕ್, ಇ.ಎಸ್.ಐ. ಆಸ್ಪತ್ರೆ, ಕಮಲಾ ನಗರ ಮುಖ್ಯರಸ್ತೆ, ಮೈಕೊ ಲೇಔಟ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿ ಲೇಔಟ್, ಇಸ್ಕಾನ್ -ಎಫ್. ಎಸ್.ಐ.ಟಿ.ರಸ್ತೆ, ಬಿ.ಎನ್.ಇ.ಎಸ್. ಕಾಲೇಜು, ಬಿ.ಇ.ಎಲ್.ಎಸ್. ಕಾಲೇಜು, ಬೆಲ್ ಸೋಪ್‌ವನ್ ಅಪಾರ್ಟ್‌ಮೆಂಟ್, ಇಂಡಲ್ ಏರಿಯಾ, ಎಸ್ಟೀಮ್ ಕ್ಲಾಸಿಕ್ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

30ರವರೆಗೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಟೆಲಿಕಾಂ ಸ್ಟೇಷನ್‌ನ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಇರುವುದರಿಂದ ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ಅ.28 ರಿಂದ 30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಒಬಳೇಶ್ ಕಾಲೊನಿ, ವಿ.ಎಸ್.ಗಾರ್ಡನ್, ರಾಯಪುರ, ಬಿನ್ನಿಪೇಟೆ, ಪಾದರಾಯನಪುರ, ಜೆ.ಜೆ. ಆರ್.ನಗರ, ಗೋಪಾಲನ್ ಮಾಲ್, ಮೈಸೂರು ರಸ್ತೆ 1,2 ಮತ್ತು 3ನೇ ಕ್ರಾಸ್, ಶಾಮಣ್ಣ ಗಾರ್ಡನ್, ಹೊಸಹಳ್ಳಿ ಮುಖ್ಯರಸ್ತೆ, ಅಂಜನಪ್ಪ ಗಾರ್ಡನ್, ಹೂವಿನ ಉದ್ಯಾನ, ಹೊಸ ಪೊಲೀಸ್ ಕ್ವಾಟ್ರಸ್, ಎಸ್.ಡಿ. ಮಠ, ಮಾಮೂಲ್ ಪೇಟೆ, ಕಾಟನ್‌ಪೇಟೆ, ಅಕ್ಕಿಪೇಟೆ, ಸುಲ್ತಾನ್ ಪೇಟೆ, ಪೊಲೀಸ್ ರಸ್ತೆ, ಗೋಪಾಲನ್ ಅಪಾರ್ಟ್‌ಮೆಂಟ್, ಗಂಗಪ್ಪ ಗಾರ್ಡನ್, ಭುವನೇಶ್ವರಿ ನಗರ, ಪ್ರೆಸ್ಟೀಜ್ ವುಡ್ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜಾತಿ ಗಣತಿಗೆ ವಿರೋಧ ಸಲ್ಲದು: ಬಿ.ಆರ್.ಪಾಟೀಲ

ಕಲಬುರಗಿ: 'ಜಾತಿ ಗಣತಿ ವಿರೋಧಿಸುವ ಬದಲು ಅದನ್ನು ಸ್ವಾಗತಿಸಬೇಕು. ವರದಿ ಜಾರಿ ಬಳಿಕ ಅದರಲ್ಲಿನ ಏರುಪೇರು ಮತ್ತು ನ್ಯೂನತೆಗಳ ಬಗ್ಗೆ ಚರ್ಚೆಯಾದರೆ ಸರ್ಕಾರವೇ ಮುಂದೆ ಕ್ರಮ ತೆಗೆದುಕೊಳ್ಳಲಿ' ಎಂದು ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್. ಪಾಟೀಲ ಹೇಳಿದರು.

ನಗರದಲ್ಲಿ ಭಾನುವಾರ ನಡೆದ 12ನೇ ರಾಜ್ಯ ಮಟ್ಟದ ಕದಳಿ ಮಹಿಳಾ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಜನಸಂಖ್ಯೆಯ ಬಲ ತೋರಿಸಿ ಯಾರ ಮೇಲೂ ಬಲ ಪ್ರಯೋಗ ಮಾಡುವಂತಿಲ್ಲ. ಅದು ನಮ್ಮ ಅಸ್ಮಿತೆ, ಸಮಾಜದ ಗೌರವದ ಪ್ರಶ್ನೆಯಾಗಿದೆ. ಇಂತಹ ಸಂಕೀರ್ಣ ಸಮಾಜದಲ್ಲಿ ಯಾರು ಯಾರನ್ನು ತುಳಿದಿದ್ದಾರೆ? ಯಾರು ತುಳಿತಕ್ಕೆ ಒಳಪಟ್ಟಿದ್ದಾರೆ? ಯಾರು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದಾರೆ? ಸಮಾಜದ ದೃಷ್ಟಿಯಿಂದ ಯಾರು ಕೆಳ ಮಟ್ಟದಲ್ಲಿದ್ದಾರೆ ಎಂಬೆಲ್ಲ ಅಂಶಗಳು ಅದರಲ್ಲಿವೆ' ಎಂದರು.

ALVA'S Institute of Engineering & Technology
ALVA'S Education Foundation®
Mijar, Moodubidire -574227, Karnataka
AUTONOMOUS Affiliated to VTU, Belgavi, Approved By AICTE, NEW Delhi
A+ Accreditation by NAAC & NBA Accreditation
REQUIRES FACULTY
ECE | CSE | AIML | ISE | CSD | DATA SCIENCE
IOT & CYBER SECURITY | MBA | ENGLISH
Professor | Associate Professor
Assistant Professor
Pay Scale: At Par with 7th Pay
Qualification: As per AICTE Norms
- Candidate should possess good academic background.
- Candidate should have Good Communication Skill
- Commitment towards work
Eligible candidates mail your updated bio data to
principalaiet08@gmail.com within 7 days





TVS XL100 | TVS Jupiter 125 ZYADA KA FAYDA | TVS NTORQ 125 PLAY SMART | TVS RAIDER THE WICKED RIDE
www.tvsmotor.com

Finance Partners: TVS CREDIT, IDFC FIRST Bank ALWAYS YOU FIRST, L&T Finance, SHRIRAM Finance, TATA CAPITAL Count on us | ICICI Bank, HDFC BANK Up to ₹7500^ Instant Discount using EasyEMI on Credit Card

* Ex-showroom price of TVS XL 100 HDKS variant in Karnataka. # Finance will be at the sole discretion of the financier and is valid with select financiers only. ^ Scheme valid till 31st October, 2024 on selected vehicles. Finance plans are mutually exclusive and cannot be clubbed with each other. Accessories shown may not be part of the standard fitment. T&C apply. Offers and schemes cannot be clubbed. Limited period offer.

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com ಅಧಿಕೃತ ಮುಖ್ಯ ವಿತರಕರು: ಬೆಂಗಳೂರು: ಜಯನಗರ: ಭಾರತ್ ಟಿವಿಎಸ್ ದೂ: 8971572817, ರಾಜಾಜಿನಗರ: ಬ್ರಿಡ್ಜ್‌ಸ್ಟೋನ್ ಟಿವಿಎಸ್ ದೂ: 8971624526, ನಾಗರಭಾವಿ: ಗ್ಲೋಬಲ್ 7619375566, ಮಹಾಲಕ್ಷ್ಮಿ ಲೇಔಟ್: ಗ್ಲೋಬಲ್ ಟಿವಿಎಸ್ ದೂ: 7619265566, ಬಸವೇಶ್ವರನಗರ: ಗ್ಲೋಬಲ್ ಟಿವಿಎಸ್ ದೂ: 9606019180, ದೊಮ್ಮಲೂರು: ಪಿ.ಆರ್.ಎನ್ ಟಿವಿಎಸ್ ದೂ: 6366936909, ಹಲಸೂರು: ಪಿ.ಆರ್.ಎನ್ ಟಿವಿಎಸ್ ದೂ: 6366936931, ಚಾಮರಾಜಪೇಟೆ: ಪಿ.ಆರ್.ಎನ್ ಟಿವಿಎಸ್ ದೂ: 6366936922, ಕೋರಮಂಗಲ: ಎನ್.ಆರ್.ಜಿ.ಸಿ ಟಿವಿಎಸ್ ದೂ: 9900860960, ಹೆಬ್ಬಗೋಡಿ: ಬೆಂಗಳೂರು ಟಿವಿಎಸ್ ದೂ: 8151095959/ 080-41141555, ಹರಲೂರು: ಬೆಂಗಳೂರು ಟಿವಿಎಸ್ ದೂ: 8494959555/ 8970859555, ಬನಶಂಕರಿ: ಸಿನರ್ಜಿ ಟಿವಿಎಸ್ ದೂ: 8792499451, ಬೊಮ್ಮನಹಳ್ಳಿ: ಸಿನರ್ಜಿ ಟಿವಿಎಸ್ ದೂ: 8792499454, ಕನಕಪುರ ರಸ್ತೆ: ಧನ್‌ಚರಣ್ ಟಿವಿಎಸ್ ದೂ: 9916183232, ಜಾಲಹಳ್ಳಿ ಕ್ರಾಸ್: ಪ್ರಕೃತಿ ಟಿವಿಎಸ್ ದೂ: 917814508304, ಗಂಗಾನಗರ: ಪ್ರಕೃತಿ ಟಿವಿಎಸ್ ದೂ: 7814508304, ಭದ್ರಪ್ಪ ಲೇಔಟ್: ಪ್ರಕೃತಿ ಟಿವಿಎಸ್ ದೂ: 7814508304, ಕಲ್ಯಾಣ ನಗರ: ಪಿ.ಆರ್.ಎನ್ ಟಿವಿಎಸ್ ದೂ: 6366936908, ಬೊಮ್ಮನಹಳ್ಳಿ: ಅರುಣಗಿರಿ ಟಿವಿಎಸ್ ದೂ: 9141954101, ಹೆಚ್.ಎಸ್.ಆರ್ ಲೇಔಟ್: ಕುಬೇರ ಟಿವಿಎಸ್ ದೂ: 8971601956, ಬೆಳ್ಳಂದೂರು: ಇಂಡಿಯನ್ ಟಿವಿಎಸ್ ದೂ: 9900500123, ಬನ್ನೇರುಘಟ್ಟ ರೋಡ್: ನಿಯೋ ಟಿವಿಎಸ್ ದೂ: 8971628452, ಮಾರತಹಳ್ಳಿ: ತ್ರಿಜಲ್ ಟಿವಿಎಸ್ ದೂ: 8971599450, ವೈಟ್‌ಫೀಲ್ಡ್: ತ್ರಿಜಲ್ ಟಿವಿಎಸ್ ದೂ: 8971598119, ಯಲಹಂಕ: ಹೇಮಂತ್ ಟಿವಿಎಸ್ ದೂ: 9740180379, ವಿದ್ಯಾರಣ್ಯಪುರ: ಹೇಮಂತ್ ಟಿವಿಎಸ್ ದೂ; 9740180379, ದೊಡ್ಡಬಳ್ಳಾಪುರ: ಹೇಮಂತ್ ಟಿವಿಎಸ್ ದೂ; 9740180379, ರಾಜರಾಜೇಶ್ವರಿ ನಗರ: ಸೋಲಾರ್ ಟಿವಿಎಸ್ 9066032272, ಕೆಂಗೇರಿ: ಸೋಲಾರ್ ಟಿವಿಎಸ್ 9066032272, ಕೃಷ್ಣಾರಾಜಪುರಂ: ಸುರ್ಯಪ್ರತಾಪ್ ಟಿವಿಎಸ್ 9870327108, ಥಣಿಸಂದ್ರ: ಸುರ್ಯಪ್ರತಾಪ್ ಟಿವಿಎಸ್ 9986716999/9449847671, ಟಿನ್ ಫ್ಯಾಕ್ಟರಿ: ಡಿಂಪಲ್ ಟಿವಿಎಸ್ ದೂ: 8147117435 / 36 ಲಾಲ್‌ಬಾಗ್ ರಸ್ತೆ: ಹಿಮಾಲಯ ಟಿವಿಎಸ್ 9513077787, ಕೋರಮಂಗಲ: ಫ್ಲಾಗ್‌ಶಿಪ್ ಟಿವಿಎಸ್ 9008684578, ಬಿಟಿಎಂ ಲೇಔಟ್: ಸಿನರ್ಜಿ ಟಿವಿಎಸ್ 8792499453, ಮಾರನಹಳ್ಳಿ: ಸಿನರ್ಜಿ ಟಿವಿಎಸ್ 8951890800, ಬಿ.ಹೆಚ್.ಇ.ಎಲ್ ಮೈಸೂರು ರೋಡ್: ಪ್ರಕೃತಿ ಟಿವಿಎಸ್ 9972448917, ಅತ್ತಿಬೆಲೆ: ಬಾಲಕೃಷ್ಣ ಟಿವಿಎಸ್ 8971703849, ಜಿಗಣಿ: ಶ್ರೀ ಬಾಲಾಜಿ ಟಿವಿಎಸ್ 9845762549, ಹೊಸಕೋಟೆ: ನಿತಿನ್ ಟಿವಿಎಸ್ 7811021081, ನೆಲಮಂಗಲ: ನವಯುಗ್ ಟಿವಿಎಸ್ 8971630975, ಕನಕಪುರ: ಅಂಜನಾದ್ರಿ ಟಿವಿಎಸ್ 9066064491, ರಾಮನಗರ: ಸಮರ್ಥ ಟಿವಿಎಸ್ 9066064383, ಕೋಲಾರ: ಸರವಣ ಟಿವಿಎಸ್ 9900403317, ಕೆ.ಜಿ.ಎಫ್: ಸರವಣ ಟಿವಿಎಸ್ 9900403317, ಚಿಕ್ಕಬಳ್ಳಾಪುರ: ಮಾರುತಿ ಟಿವಿಎಸ್ 6360700285, ತುಮಕೂರು: ಶ್ರೀ ಬಾಲಾಜಿ ಟಿವಿಎಸ್ 8971657342, ಶ್ರೀಗಿರಿ ಟಿವಿಎಸ್ 8971657691, ತಿಪಟೂರು: ನಿಕಿತ ಟಿವಿಎಸ್ 8971675903, ಚೆನ್ನಪಟ್ಟಣ: ಸಮರ್ಥ್ ಟಿವಿಎಸ್ 9513949993. ಹಾಸನ; ಶ್ರೀ ಕೃಷ್ಣ ಟಿವಿಎಸ್ 9739306696, (ಬ್ರಾಂಚ್) ಜಯ್‌ನಗರ: ಶ್ರೀ ಕೃಷ್ಣಾ ಟಿವಿಎಸ್ ದೂ: 7829928314. ಅಧಿಕೃತ ವಿತರಕರು: ಬೆಂಗಳೂರು: ಮಾಗಡಿ ಮೈನ್ ರೋಡ್: ಸೋಲಾರ್ ಟಿವಿಎಸ್ ದೂ: 080-23400193, ಮತ್ತಿಕೆರೆ: ಫಾಸ್ಟ್‌ಬೈಕ್ ಟಿವಿಎಸ್ ದೂ: 9986837771, ಬಸವೇಶ್ವರನಗರ: ಸ್ಪೀಡ್ ಟಿವಿಎಸ್ ದೂ: 080-41287182, ಮಲ್ಲೇಶ್ವರಂ: ಕುಬೇರ ಟಿವಿಎಸ್, ದೂ: 7624988146, ಹನುಮಂತ ನಗರ: ಸ್ಕಂದ ಟಿವಿಎಸ್ ದೂ: 9008533899, ಶಿವಾಜಿನಗರ: ಅಂಬಿಕಾ ಟಿವಿಎಸ್ ದೂ: 9980510555, ಮಡಿವಾಳ: ಇಂಡಿಯನ್ ಟಿವಿಎಸ್ ದೂ: 9916870260, ವಿಜ್ಞಾನನಗರ; ಸೆಂಚ್ಯೂರಿ ಟಿವಿಎಸ್ ದೂ: 9886823174, ಹೆಣ್ಣೂರು: ನಕ್ಷತ್ರ ಟಿವಿಎಸ್ ದೂ: 9738101956, ತಾವರೆಕೆರೆ: ಕಿರಣ್ ಟಿವಿಎಸ್ ದೂ: 080 28434049, ಸುಂಕದಕಟ್ಟೆ: ನಮನ ಟಿವಿಎಸ್ ದೂ: 9900307123, ಬೈದರಹಳ್ಳಿ: ಸ್ವಸ್ತಿಕ್ ಟಿವಿಎಸ್ ದೂ: 9141151132, ಎಲೆಕ್ಟ್ರಾನಿಕ್ ಸಿಟಿ: ಶ್ರೀ ಟಿವಿಎಸ್ 9845260065, ಬೇಗೂರು ರೋಡ್: ದೇವಾ ಟಿವಿಎಸ್ 9538313497, ಗೊಟ್ಟಿಗೆರೆ: ಎಸ್.ಬಿ. ಟಿವಿಎಸ್ ದೂ: 9845762549, ವರ್ತೂರು: ಹೃತಿಕ್ ಟಿವಿಎಸ್ ದೂ: 9886100299, ಚಂದಾಪುರ: ಮುರಳಿ ಟಿವಿಎಸ್ ದೂ: 9448081601, ಆನೇಕಲ್: ಶ್ರೀ ವೆಂಕಟೇಶ್ವರ ಟಿವಿಎಸ್ ದೂ: 7411626961, ಚನ್ನಪಟ್ಟಣ: ಕೆಎಂ ಟಿವಿಎಸ್ ದೂ: 9845188443, ದಾಬಸ್ ಪೇಟ್: ನವಯುಗ ಟಿವಿಎಸ್ ದೂ: 080 27734188, ದೇವನಹಳ್ಳಿ: ಸುಪ್ರತೀಕ್ ಟಿವಿಎಸ್ ದೂ: 9845832523, ವಿಜಿಪುರ; ಶ್ರೀ ದುರ್ಗಾ ಟಿವಿಎಸ್ 8892762610, ಬಾಗಲೂರು; ಮಾದವ ಟಿವಿಎಸ್ ದೂ: 9620000329, ಮಾಗಡಿ: ಶ್ರೀ ನರಸಿಂಹ ಟಿವಿಎಸ್ ದೂ: 9742248691, ಬಾಗೇಪಲ್ಲಿ; ಶ್ರೀ ಸಾಯಿ ಟಿವಿಎಸ್ ದೂ: 9945513446, ಗೌರಿಬಿದನೂರು: ಸಾಯಿ ಟಿವಿಎಸ್ ದೂ: 9448310962. ಮಾಲೂರು: ಸರವಣ ಟಿವಿಎಸ್ 9449715731, ಶ್ರೀನಿವಾಸಪುರ: ವಿಘ್ನೇಶ್ ಟಿವಿಎಸ್ 9972885552, ತುರುವೇಕೆರೆ: ಗದ್ದೆ ಕೆಂಪಮ್ಮ ಟಿವಿಎಸ್ ದೂ: 9986155108. ಮಧುಗಿರಿ: ಶ್ರೀ ಸ್ಕಂದ ಟಿವಿಎಸ್ ದೂ: 9242455433. ಪಾವಗಡ: ಅಗಸ್ತ್ಯ ಟಿವಿಎಸ್ 9740021528, ಕೊರಟಗೆರೆ: ರಾಯಲ್ ಟಿವಿಎಸ್ 9743936348, ಕುಣಿಗಲ್: ಶ್ರೀ ಮಾರುತಿ ಟಿವಿಎಸ್ ದೂ: 9945938606. ಹೊನ್ನುಡುಕ್ಕೆ; ಶ್ರೀ ಎಸ್.ಎಲ್.ವಿ. ಟಿವಿಎಸ್ 9845802853, ಚಿಕ್ಕನಾಯಕನಹಳ್ಳಿ: ವಿಜಯಶ್ರೀ ಟಿವಿಎಸ್ ದೂ: 9742429149. ಸಿರಾ: ಸಪ್ತಗಿರಿ ಟಿವಿಎಸ್ ದೂ: 9844354422, ಅರಕಲಗುಡು; ವೈ.ಜಿ. ಟಿವಿಎಸ್ 9448413894, ಬೇಲೂರು; ಶ್ರೀ ಕೃಷ್ಣ ಟಿವಿಎಸ್ 9448330165, ಹೊಳೆನರಸೀಪುರ; ಸಾಗರ ಟಿವಿಎಸ್ 9448721807, ಚೆನ್ನರಾಯಪಟ್ಟಣ; ಮಹಾಲಕ್ಷ್ಮಿ ಟಿವಿಎಸ್ 99945722711, ಸಕ್ಲೇಶ್‌ಪುರ; ಸೋನಾ ಬೈಕ್ ಟಿವಿಎಸ್ 9739046149, ಹಳೇಬೀಡು: ರವಿ ಟಿವಿಎಸ್ 8747939399.

dentsu/pv blr/10/24

ನಲಪಾಡ್ ಬ್ರಿಗೇಡ್‌ನ ಕಲಬುರಗಿ ಘಟಕದ ಅಧ್ಯಕ್ಷೆಯಿಂದ ₹ 20 ಲಕ್ಷ ಸುಲಿಗೆ ಯತ್ನ

ಮೊಬೈಲ್‌ನಲ್ಲಿ 8 ಮಂದಿಯ ಖಾಸಗಿ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್ ಅವರಿಂದ ಹಣ ಸುಲಿಗೆಗೆ ಪ್ರಯತ್ನಿಸಿದ್ದ ಪ್ರಕರಣದಲ್ಲಿ ಬಂಧಿತರಾಗಿರುವ ನಲಪಾಡ್ ಬ್ರಿಗೇಡ್‌ನ ಕಲಬುರಗಿ ಘಟಕದ ಅಧ್ಯಕ್ಷೆ ಮಂಜುಳಾ ಪಾಟೀಲ ಹಾಗೂ ಆಕೆಯ ಪತಿ ಶಿವರಾಜ್ ಪಾಟೀಲ್ ಅವರನ್ನು ಸಿಸಿಬಿ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ಮಂಜುಳಾ ಫೋನ್‌ಗಳಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಸೇರಿದಂತೆ ಎಂಟು ಮಂದಿಯ ಖಾಸಗಿ ವಿಡಿಯೊ ಪತ್ತೆಯಾಗಿದ್ದು, ಅವುಗಳ ನೈಜತೆ ಪರಿಶೀಲನೆ ನಡೆಸಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಪೊಲೀಸರು ನಿರ್ಧರಿಸಿ-ದ್ದಾರೆ.

ಮಾಲೀಕಯ್ಯ ಗುತ್ತೇದಾರ್ ಅವರ ಪುತ್ರ ರಿತೇಶ್ ಗುತ್ತೇದಾರ್ ದೂರು ಆಧರಿಸಿ ಕಲಬುರಗಿಯ ಆಳಂದ ರಸ್ತೆಯ ವಿಜಯನಗರ ಕಾಲೊನಿ ನಿವಾಸಿಗಳಾದ ಮಂಜುಳಾ ಪಾಟೀಲ ಹಾಗೂ ಆಕೆಯ ಪತಿ ಶಿವರಾಜ್ ಪಾಟೀಲ ಅವರನ್ನು ಪೊಲೀಸರು ಬಂಧಿಸಿದ್ದರು.

ಆಕೆಯಿಂದ ವಶಪಡಿಸಿಕೊಂಡ ಆರು ಮೊಬೈಲ್‌ಗಳ ಪರಿಶೀಲನೆ ವೇಳೆ ರಾಜಕೀಯ ಮುಖಂಡರು, ಅಧಿಕಾರಿಗಳ ವಿಡಿಯೊ ತುಣುಕುಗಳು ಸಿಕ್ಕಿದ್ದು, ಹಲವರಿಂದ ಹಣ ಸುಲಿಗೆಗೆ ಯತ್ನಿಸಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

‘ಸನ್ಮಾನದ ಹೆಸರಿನಲ್ಲಿ ಮಾಜಿ ಸಚಿವರಿಗೆ ಮಂಜುಳಾ ಪಾಟೀಲ ಕರೆ ಮಾಡಿ ನಲಪಾಡ್ ಬ್ರಿಗೇಡ್ ಅಧ್ಯಕ್ಷೆ ಎಂದು ಪರಿಚಯಿಸಿಕೊಂಡಿದ್ದಳು. ನಂತರ ನಿತ್ಯ ಸಂದೇಶ ಕಳುಹಿಸಿ, ವಿಡಿಯೊ ಕರೆ ಮಾಡುತ್ತಿದ್ದಳು. ಇಬ್ಬರೂ ದಿನ ಸಲುಗೆಯಿಂದ ಮಾತನಾಡುತ್ತಿದ್ದರು. ಈ ನಡುವೆ ಮೊಬೈಲ್ ಹಾಗೂ ವಿಡಿಯೊ ಕರೆಗಳನ್ನು ರೆಕಾರ್ಡ್ ಮಾಡಿಕೊಂಡು ಮಾಲೀಕಯ್ಯ ಗುತ್ತಿಗೆದಾರ್ ಅವರಿಂದ ₹ 20 ಲಕ್ಷ ಸುಲಿಗೆಗೆ ಯತ್ನಿಸಿದ್ದಾಳೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಾನು ಕಳುಹಿಸಿರುವ ಕೆಲವೊಂದು ಸಂದೇಶವನ್ನು ಅಳಿಸಿ ಹಾಕಿದ್ದಾಳೆ. ಅದನ್ನು ಮರುಜಪ್ತಿ ಮಾಡುವ ಸಲುವಾಗಿ ಮೊಬೈಲ್ ಅನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗುವುದು. ಹಲವರ ಖಾಸಗಿ ವಿಡಿಯೊ ಪತ್ತೆಯಾಗಿದೆ. ಆರೋಪಿಗಳು ಬೇರೆ ಬೇರೆ ಮೊಬೈಲ್ ಸಂಖ್ಯೆಯಲ್ಲಿ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಹಾಗೂ ಮೊಬೈಲ್ ಹಾಗೂ ವಿಡಿಯೊ ಕರೆಗಳನ್ನು ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿಕೊಂಡು ಹಣ ಸುಲಿಗೆಗೆ ಪ್ರಯತ್ನಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ಕಲಬುರಗಿಯ ಅವರ ನಿವಾಸಕ್ಕೆ ಕರೆದೊಯ್ದು ಮಹಜರು ನಡೆಸಲಾಗುವುದು’ ಎಂದು ಮೂಲಗಳು ಹೇಳಿವೆ.

ಪತಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಪತ್ನಿ ಮತ್ತು ಆಕೆಯ ಮಾಜಿ ಪ್ರಿಯಕರನ ಖಾಸಗಿ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಿದ ಪತಿ ವಿರುದ್ಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

26 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಅನ್ವಯ ಆಕೆಯ ಪತಿ ಪ್ರಸನ್ನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘2016ರಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲದ ಪ್ರಸನ್ನ ಅವರನ್ನು ಮಹಿಳೆ ಮದುವೆಯಾಗಿ, ಬ್ಯಾಡರಹಳ್ಳಿಯಲ್ಲಿ ವಾಸವಾಗಿದ್ದಾರೆ. ಕುಟುಂಬ ನಿರ್ವಹಣೆಗೆ ಸಹಕರಿಸದೆ ಕ್ರಿಕೆಟ್ ಬೆಟ್ಟಿಂಗ್ ಆಡುವುದು, ಪಾನಮತ್ತನಾಗಿ ಮನೆಗೆ ಬಂದು ದೈಹಿಕ ಹಿಂಸೆ ನೀಡುತ್ತಿದ್ದ ಪತಿಯ ಕಿರುಕುಳಕ್ಕೆ ದೂರುದಾರ ಮಹಿಳೆ ಬೇಸತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ದೂರುದಾರ ಮಹಿಳೆಯು ತನ್ನ ಮಾಜಿ ಪ್ರಿಯಕರನೊಂದಿಗಿನ ಖಾಸಗಿ ಕ್ಷಣಗಳ ಫೋಟೊ ಮತ್ತು ವಿಡಿಯೊ ಮಾಡಿಟ್ಟುಕೊಂಡಿದ್ದರು. ಅವುಗಳನ್ನು ಪತ್ನಿಯ ಮೊಬೈಲ್ ಫೋನ್‌ನಿಂದ ತನ್ನ ಫೋನ್‌ಗೆ ಪತಿ ಕಳುಹಿಸಿಕೊಂಡಿದ್ದ. ಅವುಗಳನ್ನು ಜಾಲತಾಣಗಳಲ್ಲಿ ಪ್ರಕಟಿಸುವುದಾಗಿ ಕಿರುಕುಳ ನೀಡುತ್ತಿದ್ದ ಮತ್ತು ಇಬ್ಬರಿಗೂ ಜೀವ ಬೆದರಿಕೆಯೊಡ್ಡಿದ್ದಾನೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

ಫುಡ್ ಡೆಲಿವರಿ ನೌಕರನ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಹಣ ಗಳಿಸುವ ಉದ್ದೇಶದಿಂದ ಮಾದಕವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆಹಾರ ಪದಾರ್ಥಗಳ ಡೆಲಿವರಿ ನೌಕರರನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಒಡಿಶಾದ ರೋಶನ್ ಕುಮಾರ್ ದಲೈ ಅವರನ್ನು ಬಂಧಿಸಿ, ₹9 ಲಕ್ಷ ಮೌಲ್ಯದ 4 ಕೆ.ಜಿ. 475 ಗ್ರಾಂ. ಗಾಂಜಾ, ಕೃತ್ಯಕ್ಕೆ ಬಳಸುತ್ತಿದ್ದ ಮೊಬೈಲ್, ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಿದ್ದಾರೆ.

‘ಮೂರು ವರ್ಷಗಳಿಂದ ಮಹದೇವಪುರದ ಮಹೇಶ್ವರಿ ನಗರದಲ್ಲಿ ನೆಲೆಸಿದ್ದ ರೋಶನ್, ಸ್ವಿಗ್ಗಿ ಮತ್ತು ಜೊಮ್ಯಾಟೊದಲ್ಲಿ ಆಹಾರ ಪದಾರ್ಥಗಳನ್ನು ಡೆಲಿವರಿ ಮಾಡುವ ಕೆಲಸ ಮಾಡುತ್ತಿದ್ದ. ಸುಲಭವಾಗಿ ಹಣ ಗಳಿಸಲು ಒಡಿಶಾ ರಾಜ್ಯದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ನಗರಕ್ಕೆ ತಂದು ಪರಿಚಿತ ಗ್ರಾಹಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ 20 ಗ್ರಾಂ., 50 ಗ್ರಾಂ. ಪ್ಯಾಕೆಟ್ ಮಾಡಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂಬುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

12 ದ್ವಿಚಕ್ರ ವಾಹನ ಬೆಂಕಿಗಾಹುತಿ



ಬೆಂಗಳೂರು: ನಗರದ ಉಲ್ಲಾಳ ಮುಖ್ಯ ರಸ್ತೆಯಲ್ಲಿರುವ ಡಾಮಿನೋಸ್ ಪಿಜ್ಜಾ ಕಟ್ಟಡದ ನೆಲಮಾಳಿಗೆಯಲ್ಲಿ ನಿಲುಗಡೆ ಮಾಡಿದ್ದ 12 ದ್ವಿಚಕ್ರ ವಾಹನಗಳು ಭಾನುವಾರ ಬೆಳಗಿನ ಜಾವ ಬೆಂಕಿಗಾಹುತಿಯಾಗಿವೆ.

ಉಲ್ಲಾಳ ಮುಖ್ಯರಸ್ತೆಯಲ್ಲಿ ಸಚಿನ್ ಬೋರೇಗೌಡ ಎಂಬುವರು ಡಾಮಿನೋಸ್ ಪಿಜ್ಜಾ ಮಳಿಗೆ ನಡೆಸುತ್ತಿದ್ದಾರೆ. ಆಹಾರ ಪದಾರ್ಥಗಳ ಡೆಲಿವರಿಗೆ ಬಳಸುವ ಬೈಕ್‌ಗಳನ್ನು ಕಟ್ಟಡದ ನೆಲಮಾಳಿಗೆಯಲ್ಲಿ ನಿಲುಗಡೆ ಮಾಡಲಾಗಿತ್ತು.

ಭಾನುವಾರ ಮುಂಜಾನೆ 3 ಗಂಟೆ ಸುಮಾರಿಗೆ ಶಾರ್ಟ್ ಸರ್ಕೀಟ್ ಉಂಟಾಗಿ, ಬೆಂಕಿ ಕಾಣಿಸಿಕೊಂಡ ಪರಿಣಾಮ 11 ಎಲೆಕ್ಟ್ರಿಕ್ ಬೈಕ್‌ಗಳು, ಒಂದು ಬಜಾಜ್ ಪಲ್ಸರ್ ಹಾಗೂ ಜನರೇಟರ್ ಸುಟ್ಟು ಹೋಗಿವೆ.

ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಬೆಂಕಿ ನಂದಿಸಿದರು. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಾಲಕ, ನಿರ್ವಾಹಕನ ಮೇಲೆ ಹಲ್ಲೆ

ಬೆಂಗಳೂರು: ಬಿಎಂಟಿಸಿ ಬಸ್ ನಿರ್ವಾಹಕ ಹಾಗೂ ಚಾಲಕನ ಮೇಲೆ ದುಷ್ಕರ್ಮಿಗಳು ಹಲ್ಲೆ ಮಾಡಿರುವ ಘಟನೆ ಟ್ಯಾನರಿ ರಸ್ತೆಯಲ್ಲಿ ನಡೆದಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಡಿ.ಜೆ.ಹಳ್ಳಿ ಠಾಣೆ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು, ನಿರ್ವಾಹಕ ಶಿವಕುಮಾರ್ ಮತ್ತು ಚಾಲಕ ಗಗನ್ ಮೇಲೆ ಹಲ್ಲೆ ಮಾಡಿದ್ದಾರೆ. ರಸ್ತೆಯಲ್ಲೇ ಹೊಡೆದಾಡುತ್ತಿರುವ ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಯಲಹಂಕ ಹಾಗೂ ಶಿವಾಜಿನಗರ ಮಾರ್ಗದ ಬಸ್ ಅನ್ನು ಚಾಲಕ ಸಂಜೆ 5.25ರ ಸುಮಾರಿಗೆ ಟ್ಯಾನರಿ ರಸ್ತೆಯ ಕೆನರಾ ಬ್ಯಾಂಕ್ ನಿಲ್ದಾಣದಲ್ಲಿ ನಿಲ್ಲಿಸಿದ್ದರು. ಈ ವೇಳೆ ಅಲ್ಲಿಗೆ ವಾಹನದಲ್ಲಿ ಬಂದ ಆರೋಪಿಗಳು, ಒಳ ಪ್ರವೇಶಿಸಿ ಗಗನ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಲಾರಂಭಿಸಿದ್ದಾರೆ. ಈ ವೇಳೆ ತಡೆಯಲು ಮುಂದಾದ ಶಿವಕುಮಾರ್ ಅವರನ್ನೂ ಸಹ ಬಸ್‌ನಿಂದ ಹೊರಗಡೆ ಎಳೆದು ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಗಗನ್ ನೀಡಿರುವ ದೂರಿನ ಅನ್ವಯ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿರುವ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ.

ಪೊಲೀಸರ ವೇಷದಲ್ಲಿ ವಂಚನೆ

ತುಮಕೂರು: ಸೈಬರ್ ಆರೋಪಿಗಳು ವಂಚನೆಗೆ ಹೊಸ ಹಾದಿ ಹುಡುಕಿದ್ದು, ಪೊಲೀಸ್ ವೇಷ ತೊಟ್ಟು ವಿಡಿಯೊ ಕರೆ ಮಾಡಿ, ಅಮಾಯಕರನ್ನು ಹೆದರಿಸಿ ಹಣ ಪೀಕುತ್ತಿದ್ದಾರೆ. ಇತ್ತೀಚೆಗೆ ಇಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. ನಗರದ ನಿವೃತ್ತ ಉಪನ್ಯಾಸಕರೊಬ್ಬರು ಸೈಬರ್ ಬಲೆಗೆ ಬಿದ್ದು ಬರೋಬ್ಬರಿ ₹65 ಲಕ್ಷ ಕಳೆದುಕೊಂಡಿದ್ದಾರೆ.

ಅ.16ರಂದು ಎಂ.ಪಿ.ಶಂಕರಪ್ಪ ಎಂಬುವರಿಗೆ ವಿಡಿಯೊ ಕರೆ ಮಾಡಿದ ವಂಚಕರು ಮಹಾರಾಷ್ಟ್ರದ ಪೊಲೀಸರು ಎಂದು ಪರಿಚಯಿಸಿಕೊಂಡಿದ್ದಾರೆ. ಮಾನವ ಕಳ್ಳಸಾಗಾಣೆ ಪ್ರಕರಣದಲ್ಲಿ ಆರೋಪಿ ನಿಮ್ಮ ಹೆಸರು ಹೇಳಿದ್ದಾರೆ ಎಂದು 24ರವರೆಗೂ ನಿರಂತರವಾಗಿ ಕರೆ ಮಾಡಿ ಬೆದರಿಸಿದ್ದಾರೆ.

25ರಂದು ಕರೆ ಮಾಡಿ ಹಣ ನೀಡದಿದ್ದರೆ ಬಂಧಿಸಲಾಗುವುದು ಎಂದು ಹೇಳಿದ್ದಾರೆ. ಶಂಕರಪ್ಪ ತಮ್ಮ ಬ್ಯಾಂಕ್ ಖಾತೆಗಳಿಂದ ಹಂತ ಹಂತವಾಗಿ ₹65,00,057 ಹಣ ಸೈಬರ್ ಕಳ್ಳರು ತಿಳಿಸಿದ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ಮೋಸ ಹೋಗಿದ್ದು ಗೊತ್ತಾದ ನಂತರ ದೂರು ನೀಡಿದ್ದಾರೆ.

ಆನ್‌ಲೈನ್ ಟ್ರೇಡಿಂಗ್: ₹9.54 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಆನ್‌ಲೈನ್ ಷೇರು ವಹಿವಾಟಿನ ಹೆಸರಿನಲ್ಲಿ ಇಬ್ಬರು ಉದ್ಯಮಿಗಳು ಹಾಗೂ ಖಾಸಗಿ ಸಂಸ್ಥೆ ಉದ್ಯೋಗಿಗೆ ಒಟ್ಟು ₹9.54 ಕೋಟಿ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

ಉದ್ಯಮಿಗಳಿಬ್ಬರು ಕ್ರಮವಾಗಿ ₹ 6.56 ಕೋಟಿ ಮತ್ತು ₹1.38 ಕೋಟಿ ಹಾಗೂ ನಗರದ ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಆಗಿರುವ ಮಹಿಳೆ ₹ 1.60 ಕೋಟಿ ಕಳೆದುಕೊಂಡಿದ್ದಾರೆ. ಈ ಸಂಬಂಧ ಕೇಂದ್ರ ವಿಭಾಗದ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅಪರಿಚಿತ ವ್ಯಕ್ತಿಯೊಬ್ಬರು ಮೂವರನ್ನು ವಾಟ್ಸ್‌ಆ್ಯಪ್ ಗ್ರೂಪ್ (ಜೆಜೆ77 ಇನ್‌ವೆಸ್ಟಿಂಗ್ ಇನ್ ಇಂಡಿಯಾ ಮತ್ತು ಜೆ3364 ಮೇನ್ ಪುಲ್ ಅಪ್ ಲೇಔಟ್ ಎಕ್ಸ್‌ಚೆಂಜ್ ಗ್ರೂಪ್)ಗೆ ಸೇರಿಸಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಹಣ ಗಳಿಸುವ ಬಗ್ಗೆ ಸಲಹೆ ನೀಡಲಾಗಿತ್ತು. ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ವ್ಯವಹಾರ ಮಾಡಲು ಸಲಹೆ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಂಚಕರ ಮಾರ್ಗದರ್ಶನದಂತೆ ಮೂವರು ಸಂತ್ರಸ್ತರು ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು, ಅವರು ಸೂಚಿಸಿದ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದಾರೆ. ಸೆ.8 ಮತ್ತು ಅ.23 ರ ಅವಧಿಯಲ್ಲಿ ಉದ್ಯಮಿಗಳಿಬ್ಬರು 24 ಖಾತೆಗಳಿಗೆ ₹7 ಕೋಟಿಗೂ ಅಧಿಕ ಹಣ ವರ್ಗಾವಣೆ ಮಾಡಿದ್ದರು. ಮಹಿಳೆ ₹ 1.61 ಕೋಟಿಯನ್ನು ಆರು ಖಾತೆಗಳಿಗೆ ಹಾಕಿದ್ದಾರೆ. ಬಳಿಕ ಅವರಿಗೆ ಹಣ ನೀಡದೆ ವಂಚನೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿನಿಗೆ ಮುತ್ತು ನೀಡಿದ ಭದ್ರತಾ ಸಿಬ್ಬಂದಿ ಬಂಧನ

ಬೆಂಗಳೂರು: ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಪೇಯಿಂಗ್ ಗೆಸ್ಟ್‌ನಲ್ಲಿ (ಪಿ.ಜಿ.) ವಾಸವಿದ್ದ ಕಾಲೇಜು ವಿದ್ಯಾರ್ಥಿನಿಗೆ ಮುತ್ತು ನೀಡಿದ ಭದ್ರತಾ ಸಿಬ್ಬಂದಿ ರುದ್ರಯ್ಯ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ 19 ವರ್ಷದ ಯುವತಿ ಸಮೀಪದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅ.24ರ ರಾತ್ರಿ 11.30ರ ಸುಮಾರಿನಲ್ಲಿ ಪಿ.ಜಿಯ ಸ್ಟೇರ್‌ಕೇಸ್ ಮೇಲಿಟ್ಟಿದ್ದ ಲೈಟರ್ ತೆಗೆದುಕೊಳ್ಳಲು ಯುವತಿ ಹೋದ ಸಂದರ್ಭದಲ್ಲಿ ರುದ್ರಯ್ಯ ಆಕೆಯನ್ನು ತಬ್ಬಿಕೊಂಡು ಮುತ್ತು ನೀಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಪಿ.ಜಿ. ಮಾಲೀಕರು ಮತ್ತು ಮಹಿಳಾ ವಾರ್ಡನ್‌ಗೆ ಕರೆ ಮಾಡಿ ವಿಚಾರ ತಿಳಿಸಿದ್ದಾರೆ. ಮಾಲೀಕರು ಹಾಗೂ ವಾರ್ಡನ್ ಸ್ಥಳಕ್ಕೆ ಬಂದು, ಯುವತಿಯನ್ನು ಸಂತೈಸಿ, ಭದ್ರತಾ ಸಿಬ್ಬಂದಿ ಎಸಗಿದ್ದ ಕೃತ್ಯ ರೆಕಾರ್ಡ್ ಆಗಿದ್ದ ಸಿಸಿಟಿವಿ ದೃಶ್ಯಾವಳಿ ಅಳಿಸಿ ಹಾಕಿಸಿದ್ದರು.

‘ಸಂತ್ರಸ್ತೆ ನೀಡಿದ ದೂರಿನ ಅನ್ವಯ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಪಿ.ಜಿ ಮಾಲೀಕರು ಮತ್ತು ವಾರ್ಡನ್ ಸಿಸಿಟಿವಿ ದೃಶ್ಯಾವಳಿ ಅಳಿಸಿ ಹಾಕಿ ಯಾರೊಂದಿಗೂ ಹೇಳದಂತೆ ಬೆದರಿಸಿದ್ದರು ಎಂದು ಸಂತ್ರಸ್ತೆ ಆರೋಪಿಸಿದ್ದಾರೆ. ಹಾಗಾಗಿ ಅವರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

₹ 32 ಲಕ್ಷ ವಂಚನೆ

ಮ್ಯಾಟ್ರಿಮೊನಿ ವೆಬ್‌ಸೈಟ್‌ನಲ್ಲಿ ಸಂಪರ್ಕಕ್ಕೆ ಬಂದು, ವಿವಾಹ ಆಗುವುದಾಗಿ ನಂಬಿಸಿದ್ದ ಯುವತಿ ಒಬ್ಬಳು ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರಿಗೆ ₹ 32 ಲಕ್ಷ ವಂಚಿಸಿರುವ ಘಟನೆ ನಡೆದಿದೆ.

ಈ ಸಂಬಂಧ ಲಕ್ಷ್ಮಣ ನಗರದ ನಿವಾಸಿ ಪ್ರವೀಣ್ ಜಾದವ್ ಅವರು ಸೆನ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ಪ್ರವೀಣ್ ಜಾದವ್ ಅವರಿಗೆ ಮ್ಯಾಟ್ರಿಮೊನಿ ಸೈಟ್‌ನಲ್ಲಿ ನಿಹಾರಿಕ ಮೆನನ್ ಎಂಬುವರ ಪರಿಚಯವಾಗಿ, ಇಬ್ಬರೂ ಮೊಬೈಲ್‌ನಲ್ಲಿ ನಿತ್ಯ ಮಾತನಾಡುತ್ತಿದ್ದರು. ಕೊಚ್ಚಿಯಲ್ಲಿ ವಾಸವಿದ್ದು, ರಫ್ತು ವ್ಯವಹಾರ ಮತ್ತು ಟ್ರೇಡಿಂಗ್ ಮಾಡುತ್ತಿರುವುದಾಗಿ ಯುವತಿ ಹೇಳಿಕೊಂಡಿದ್ದಾಳೆ. ತನ್ನ ಫೋಟೊವನ್ನು ಕಳುಹಿಸಿ, ಮದುವೆಯಾಗುವುದಾಗಿ ಯುವಕನಿಗೆ ಭರವಸೆ ನೀಡಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭಾಂಶ ಗಳಿಸಬಹುದು ಎಂಬ ಯುವತಿಯ ಮಾತು ನಂಬಿ, ಆಕೆ ಸೂಚಿಸಿದ ಖಾತೆಗಳಿಗೆ ಯುವಕ ಹಣ ವರ್ಗಾವಣೆ ಮಾಡುತ್ತಿದ್ದ. ಆರಂಭದಲ್ಲಿ ಒಂದು ಲಕ್ಷ ರೂಪಾಯಿಗೆ ₹ 20 ಸಾವಿರ ಲಾಭಾಂಶ ತೋರಿಸಿದ್ದಾರೆ. ನಂತರ ವಿವಿಧ ಬ್ಯಾಂಕ್ ಖಾತೆಗಳಿಗೆ ಆರ್‌ಟಿಜಿಎಸ್, ನೆಫ್ಟ್ ಮೂಲಕ ಹಂತ ಹಂತವಾಗಿ ₹ 32 ಲಕ್ಷ ವರ್ಗಾವಣೆ ಮಾಡಿದ್ದಾರೆ. ನಂತರ ಹಣ ವಾಪಸ್ ನೀಡದೆ ಯುವತಿ ವಂಚನೆ ಮಾಡಿದ್ದಾಳೆ’ ಎಂದು ತಿಳಿಸಿದರು.

‘ಕಲಿಕೆ ನಿರಂತರವಾಗಿರಲಿ’

ಪ್ರಜಾವಾಣಿ ವಾರ್ತೆ

ಯಲಹಂಕ: ವಿದ್ಯಾರ್ಥಿಗಳು ಕೇವಲ ಪರೀಕ್ಷೆಗಾಗಿ ಕಲಿಯದೆ, ಸಮೃದ್ಧವಾದ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ನಿರಂತರ ಅಧ್ಯಯನಶೀಲರಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ನ (ಕ್ಯಾಂಪಸ್ ನೇಮಕಾತಿ ಮುಖ್ಯಸ್ಥ) ಕಾರ್ತಿಕ್ ಕೃಷ್ಣಮೂರ್ತಿ ಹೇಳಿದರು.

ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಉದ್ಭವ್-2024' ಮೊದಲನೇ ವರ್ಷದ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸ್ಪರ್ಧಾತ್ಮಕ ಯುಗದಲ್ಲಿ ಕೈಗಾರಿಕಾ ವಲಯಗಳ ಬೇಡಿಕೆ ಮತ್ತು ನಿರೀಕ್ಷೆಗೆ ಅನುಗುಣವಾಗಿ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಕೆಲಸದ ಬಗ್ಗೆ ಭಯಬೇಡ, ಜಾಗೃತಿ ಇರಲಿ. ಭಾರತದಲ್ಲಿ ಎಲ್ಲರಿಗೂ ಉದ್ಯೋಗಗಳು ಲಭ್ಯವಿದ್ದು, ಅವುಗಳನ್ನು ಸರಿಯಾದ ರೀತಿಯಲ್ಲಿ ಪಡೆದುಕೊಳ್ಳುವ ಮಾರ್ಗಗಳನ್ನು ಕಂಡುಕೊಳ್ಳಬೇಕು‘ ಎಂದು ಸಲಹೆ ನೀಡಿದರು.

ಸ್ಯಾಮ್‌ಸಂಗ್ ಸೆಮಿಕಂಡಕ್ಟರ್‌ನ ಭಾರತೀಯ ಸಂಶೋಧನಾ ಸಂಸ್ಥೆಯ ಸಹ ನಿರ್ದೇಶಕ ಶಿವಸ್ವರೂಪ್.ಕೆ ಮಾತನಾಡಿ, ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ಬದ್ಧತೆ ಮತ್ತು ಸಮರ್ಪಣಾ ಮನೋಭಾವವನ್ನು ಬೆಳಸಿಕೊಂಡು, ಒಂದು ತಂಡದ ರೀತಿಯಲ್ಲಿ ಕಾರ್ಯನಿರ್ವಹಿಸಿದಾಗ ಯಶಸ್ಸು ನಿಶ್ಚಿತ ಎಂದು ಅಭಿಪ್ರಾಯಪಟ್ಟರು.

ವಿವಿಧ ವಿಭಾಗಗಳಲ್ಲಿ ಗಣನೀಯ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಮತ್ತು ಪಾರಿತೋಷಕ ನೀಡಿ ಗೌರವಿಸಲಾಯಿತು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪ್ರಧಾನ ವ್ಯವಸ್ಥಾಪಕ(ಸೈನಿಕ ಸಂವಹನ) ಕಾಮೇಶ್ ಕಸಾನ, ಏಟ್ರಿಯಾ ಸಮೂಹಸಂಸ್ಥೆಯ ಅಧ್ಯಕ್ಷ ಸಿ.ಎಸ್. ಸುಂದರ್‌ರಾಜು, ಟ್ರಸ್ಟಿ ಕೆ.ನಾಗರಾಜು, ಪ್ರಾಂಶುಪಾಲ ರಾಜೇಶ್.ಎಸ್, ಉಪಪ್ರಾಂಶುಪಾಲರಾದ ನಳಿನಾಕ್ಷಿ.ಎನ್ ಮತ್ತಿತರರು ಉಪಸ್ಥಿತರಿದ್ದರು.



ಜಾತ್ರೆ... ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆಯ ಮಾರಮ್ಮದೇವಿ ಜಾತ್ರಾ ಮಹೋತ್ಸವ ಭಾನುವಾರದಿಂದ ಆರಂಭವಾಗಿದ್ದು, ಬಡಾವಣೆಯ ಪ್ರಮುಖ ಬೀದಿಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು

‘ಪುರುಷನನ್ನೂ ಬಲಿಪಡೆವ ಪಿತೃಪ್ರಧಾನ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿತೃಪ್ರಧಾನ ವ್ಯವಸ್ಥೆಯು ಪುರುಷನನ್ನೂ ಬಲಿಪಡೆದುಕೊಳ್ಳುತ್ತದೆ ಎಂಬುದು ಅಮೆರಿಕದ ಸ್ತ್ರೀವಾದಿ ಬೆಲ್ ಹುಕ್ಸ್ ಅವರ ಪ್ರತಿಪಾದನೆ. ಚಿತ್ರದುರ್ಗದ ರೇಣುಕಸ್ವಾಮಿಯ ಕೊಲೆ ಪ್ರಕರಣವನ್ನು ಈ ನೆಲೆಯಲ್ಲೂ ವಿಶ್ಲೇಷಿಸಬಹುದು’ ಎಂದು ಸಂಶೋಧಕ ಅರುಣ್ ಜೋಳದಕೂಡ್ಲಿಗಿ ಹೇಳಿದರು.

ಲೇಖಕಿ ಎಚ್.ಎಸ್.ಶ್ರೀಮತಿ ಅವರು ಅನುವಾದಿಸಿರುವ ಬೆಲ್ ಹುಕ್ಸ್ ಅವರ ಸಾಲ್ವೇಶನ್ ಕೃತಿಯ ಕನ್ನಡರೂಪ, ‘ಬಂಧಮುಕ್ತ’ವನ್ನು ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು. ‘ಕರಿಯ ಜನಾಂಗದ ಮಹಿಳೆಯರ ಮೇಲೆ ಬಿಳಿಯ ಮಹಿಳೆಯರು ಹೇಗೆ ದೌರ್ಜನ್ಯ ನಡೆಸುತ್ತಿದ್ದರು ಎಂಬುದನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ’ ಎಂದರು.

‘ಬಿಳಿಯ ಜನಾಂಗದ ವ್ಯಕ್ತಿಗಳ ವರ್ತನೆ ಮತ್ತು ಪ್ರತಿಪಾದನೆಗಳ ಕಾರಣದಿಂದ ಕರಿಯ ಜನಾಂಗದ ವ್ಯಕ್ತಿಗಳು ತಮ್ಮ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳುತ್ತಿದ್ದರು. ಇದೂ ಸಹ ಪಿತೃಪ್ರಧಾನ ವ್ಯವಸ್ಥೆಯ ಒಂದು ರೂಪ ಎಂಬುದನ್ನು ಈ ಕೃತಿಯಲ್ಲಿ ಪ್ರತಿಪಾದಿಸಲಾಗಿದೆ. ಭಾರತದಲ್ಲಿ ಈಗಾಗಲೇ ಹಲವೆಡೆ ಬೆಲ್ ಹುಕ್ಸ್ ಅವರ ಕೃತಿ ಮತ್ತು ಪ್ರತಿಪಾದನೆಗಳು ಚರ್ಚೆಯಾಗುತ್ತಿವೆ. ಈಗ ಕನ್ನಡಕ್ಕೂ ಬಂದಿದೆ’ ಎಂದರು.

‘ಈ ಕೃತಿಯಲ್ಲಿನ ಪ್ರತಿಪಾದನೆಗಳನ್ನು ಅಂಬೇಡ್ಕರ್ ಅವರ ಚಿಂತನೆಗಳೊಂದಿಗೆ ಬೆಸೆದು ನೋಡಬೇಕು. ಎರಡೂ ಚಿಂತನೆಗಳನ್ನು ಬಳಸಿಕೊಂಡು ನಮ್ಮಲ್ಲಿನ ಪುರುಷ ಪ್ರಾಧಾನ್ಯ ಮತ್ತು ಶ್ರೇಣಿ ವ್ಯವಸ್ಥೆಯನ್ನು ಹೊಸರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು’ ಎಂದರು.

ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಮಾತನಾಡಿ, ‘ಈಗಿನ ನಮ್ಮ ರಾಜಕೀಯ ಮುಖಂಡರಿಗೆ, ಕೆಲ ಚಿಂತಕರು ಮತ್ತು ಸಾಹಿತಿಗಳಿಗೆ ಸ್ತ್ರೀವಾದ ಎಂದರೆ ಏನು ಎಂಬುದೇ ಗೊತ್ತಿಲ್ಲ. ಸ್ತ್ರೀವಾದದ ವಿವಿಧ ಆಯಾಮಗಳನ್ನು ಬೆಲ್ ಹುಕ್ಸ್ ಪ್ರತಿಪಾದಿಸಿದ್ದಾರೆ’ ಎಂದರು.

ಪುಸ್ತಕದ ಅನುವಾದಕಿ ಮತ್ತು ಲೇಖಕಿ ಎಚ್.ಎಸ್.ಶ್ರೀಮತಿ, ಪತ್ರಕರ್ತ ಗುರುಪ್ರಸಾದ್ ಇದ್ದರು.

ಕೋಡಿಯಲ್ಲಿ ಕೊಚ್ಚಿ ಹೋದ ವಿದ್ಯಾರ್ಥಿನಿ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಮಂದಾರಗಿರಿ ಬೆಟ್ಟದ ಹಿಂಭಾಗದ ಮೈದಾಳ ಕೆರೆಯ ಕೋಡಿ ನೀರಿನಲ್ಲಿ ಭಾನುವಾರ ಸಂಜೆ ಸೆಲ್ಫಿ ತೆಗೆದುಕೊಳ್ಳಲು ಹೋಗಿ ಹಂಸ (20) ಎಂಬ ಎಂಜಿನಿಯರಿಂಗ್ ವಿದ್ಯಾರ್ಥಿನಿ ಕಾಲು ಜಾರಿ ಬಿದ್ದು, ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಕೋಡಿ ಹರಿಯುವ ಕಡೆ ಸುಮಾರು ಹದಿನೈದು ಅಡಿ ಆಳದಲ್ಲಿರುವ ಕಲ್ಲಿನ ಬಂಡೆಯ ಮಧ್ಯೆ ಸಿಕ್ಕಿ ಹಾಕಿಕೊಂಡಿರ-ಬಹುದು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಅಂದಾಜಿಸಿದ್ದಾರೆ.

ನೀರು ತುಂಬಾ ವೇಗವಾಗಿ ಹರಿಯುತ್ತಿದ್ದು, ರಕ್ಷಣಾ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ.

ಗುಬ್ಬಿ ತಾಲ್ಲೂಕಿನ ಶಿವರಾಂಪುರ ಗ್ರಾಮದ ನಿವಾಸಿಯಾದ ಹಂಸ ಎಸ್‌ಐಟಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಸ್ನೇಹಿತರ ಜತೆಗೆ ಮಂದಾರಗಿರಿ ಬೆಟ್ಟಕ್ಕೆ ಹೋದಾಗ ಘಟನೆ ಸಂಭವಿಸಿದೆ.

ಮಲರ್‌ವಿಳಿಗೆ ಅನುವಾದ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನಂತಹ ಅನೇಕರಿಗೆ ಜಗತ್ತಿನ ಶ್ರೇಷ್ಠ ಕೃತಿಗಳನ್ನು ಓದಲು ಪ್ರೋತ್ಸಾಹಿಸಿದವರು ಕಿ.ರಂ. ನಾಗರಾಜ ಮತ್ತು ಪಿ.ಲಂಕೇಶ್. ಅಷ್ಟೇ ಅಲ್ಲ, ನಾವು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ತಪ್ಪು ಮಾಡಿದಾಗ ಅದನ್ನು ಗಮನಿಸಿ ತಿದ್ದುತ್ತಿದ್ದರು’ ಎಂದು ಸಂಸ್ಕೃತಿ ಚಿಂತಕ ಶೂದ್ರ ಶ್ರೀನಿವಾಸ್ ಹೇಳಿದರು.

ನಗರದ ಕನ್ನಡ ಭವನದಲ್ಲಿ ಭಾನುವಾರ ಸಂಸ ಥಿಯೇಟರ್ ಮತ್ತು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ‘ಕೆ.ಎನ್.ವಿಜಯಲಕ್ಷ್ಮಿ ಅನುವಾದ ಕಾವ್ಯ ಕಮ್ಮಟ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ’ ಅವರು ಮಾತನಾಡಿದರು.

‘ನಮಗೆ ಕಿ.ರಂ. ಮತ್ತು ಲಂಕೇಶ್ ಎರಡು ವಿಶ್ವವಿದ್ಯಾಲಯಗಳಿದ್ದಂತೆ. ವಾರದಲ್ಲಿ 4 ದಿನಗಳಾದರೂ ಇವರ ಮನೆಗಳಲ್ಲಿ ಹಲವು ವಿಷಯಗಳ ಕುರಿತು ಚರ್ಚೆ, ಸಂವಾದ ನಡೆಯುತ್ತಿದ್ದವು’ ಎಂದು ಸ್ಮರಿಸಿದರು.

‘ಕಿ.ರಂ. ಅವರ ಪತ್ನಿ ಕೆ.ಎನ್.ವಿಜಯಲಕ್ಷ್ಮಿ ಅವರು ಸ್ವಲ್ಪ ತಡವಾಗಿ ಅನುವಾದ ಕ್ಷೇತ್ರವನ್ನು ಪ್ರವೇಶಿಸಿದರು. ನಂತರದಲ್ಲಿ ಹಲವು ನಾಟಕಗಳು, ಕವಿತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ’ ಎಂದು ಅವರು ಹೇಳಿದರು.



ಕೆ.ಎನ್. ವಿಜಯಲಕ್ಷ್ಮಿ ಅನುವಾದ ಪ್ರಶಸ್ತಿಯನ್ನು ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಮಲರ್‌ವಿಳಿ ಕೆ. ಅವರಿಗೆ ಪ್ರದಾನ ಮಾಡಲಾಯಿತು. ಧನಗೂರು ಷಡಕ್ಷರ ಪೀಠದ ಅಧ್ಯಕ್ಷ ಕೂಡ್ಲೂರು ವೆಂಕಟಪ್ಪ, ಸಂಸ ಥಿಯೇಟರ್‌ನ ಗೌರವಾಧ್ಯಕ್ಷ ಎಂ. ಜಯರಾಮು, ಕೆ.ಎನ್. ಸಹನ, ಚಿಂತಕ ಶೂದ್ರ ಶ್ರೀನಿವಾಸ್, ಕೆ.ಎನ್. ಚಂದನ, ಕೆ.ಎನ್. ಕವನ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಾರ್ಯಕ್ರಮದಲ್ಲಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಮಲರ್‌ವಿಳಿ ಕೆ. ಅವರಿಗೆ ‘2024ನೇ ಸಾಲಿನ ಕೆ.ಎನ್.ವಿಜಯಲಕ್ಷ್ಮಿ ಅನುವಾದ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಕಿ.ರಂ. ಮತ್ತು ವಿಜಯಲಕ್ಷ್ಮಿ ದಂಪತಿಯ ಪುತ್ರಿಯರಾದ ಕೆ.ಎನ್. ಸಹನ, ಕೆ.ಎನ್. ಚಂದನ, ಕೆ.ಎನ್. ಕವನ ಉಪಸ್ಥಿತರಿದ್ದರು

ಮಗನಿಂದ ಹಲ್ಲೆ ತಂದೆ ಸಾವು

ಅಥಣಿ (ಬೆಳಗಾವಿ ಜಿಲ್ಲೆ): ಮದ್ಯವ್ಯಸನಿ ಮಗನಿಂದಲೇ ಹಲ್ಲೆಗೊಳಗಾಗಿದ್ದ ತಂದೆಯು ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

ಅಥಣಿ ತಾಲ್ಲೂಕಿನ ಮದಭಾವಿ ಗ್ರಾಮದಲ್ಲಿ ಅ.24ರಂದು ಮಲ್ಲು ತುಕಾರಾಮ ವನಖಾಂಡೆ (89) ಅವರ ಮೇಲೆ ಅವರ ಮಗ ಬಾಳಸಾಬ ಮಲ್ಲು ವನಖಾಂಡೆ ಹಲ್ಲೆ ನಡೆಸಿದ್ದರು.

ನಗರದಲ್ಲಿ ಇಂದು

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ದಿನೇಶ್ ಗುಂಡೂರಾವ್, ಶರಣ ಪ್ರಕಾಶ ಪಾಟೀಲ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ, ಆರೋಗ್ಯ ಇಲಾಖೆ, ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಭಾಂಗಣ, ಕೋಟೆ, ಕೆ.ಆರ್. ರಸ್ತೆ, ಬೆಳಿಗ್ಗೆ 9.30

ಕವಿಗೋಷ್ಠಿ, ಕಮಲಾ ಹಂಪನಾ ದತ್ತಿ ಉಪನ್ಯಾಸ ಹಾಗೂ ಪ್ರಶಸ್ತಿ ಪ್ರದಾನ: ಕವಿಗೋಷ್ಠಿ ಅಧ್ಯಕ್ಷತೆ: ಎಲ್. ಹನುಮಂತಯ್ಯ, ಪ್ರಶಸ್ತಿ ಪ್ರದಾನ: ಎನ್.ಎನ್. ಮುಕುಂದರಾಜ್, ಆಶಯ ಭಾಷಣ: ಎಚ್.ಎಲ್. ಪುಷ್ಪ, ದತ್ತಿ ಉಪನ್ಯಾಸ: ವಿನಯಾ ಒಕ್ಕುಂದ, ಪ್ರಶಸ್ತಿ ಪುರಸ್ಕೃತರು: ಬಾಳಾಸಾಹೇಬ ಲೋಕಾಪುರ, ಚಾಂದಿನಿ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಕನ್ನಡ ಜನಶಕ್ತಿ ಕೇಂದ್ರ, ನಾಡೋಜ ಡಾ. ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4



ಕಮಲಾ ಹಂಪನಾ

51ನೇ ಸಂಸ್ಥಾಪನ ದಿನ: ಮುಖ್ಯ ಅತಿಥಿ: ರುಕ್ಮಿಣಿ ಬ್ಯಾನರ್ಜಿ, ಉಪಸ್ಥಿತಿ: ರಿಷಿಕೇಶ್ ಟಿ. ಕೃಷ್ಣನ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ), ಬನ್ನೇರುಘಟ್ಟ ರಸ್ತೆ, ಸಂಜೆ 5.30

ಚಿತ್ರಾವಳಿ



ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ‘ಸಿಟಿ ವಿತ್ ಬೆಸ್ಟ್ ರೆಕಾರ್ಡ್ ಆಫ್ ಪಬ್ಲಿಕ್ ಇನ್ವಾಲ್‌ಮೆಂಟ್ ಇನ್ ಟ್ರಾನ್ಸ್‌ಪೋರ್ಟ್’ ವಿಭಾಗದಲ್ಲಿ ಬಿಎಂಟಿಸಿಗೆ ‘ಅವಾರ್ಡ್ ಆಫರ್ ಎಕ್ಸಲೆನ್ಸ್ ಇನ್ ಅರ್ಬನ್ ಟ್ರಾನ್ಸ್‌ಪೋರ್ಟ್’ ನೀಡಿ ಗೌರವಿಸಿತು. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರಲಾಲ್ ಅವರು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು



ಜಾಗೃತಿ ಸಪ್ತಾಹದ ಅಂಗವಾಗಿ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ರಾಷ್ಟ್ರದ ಏಳಿಗೆಗಾಗಿ ಸಮಗ್ರತೆಯ ‘ವಿಜಿಥಾನ್’ ಸಂಸ್ಕೃತಿ, ಜಾಗರಣಾ ವಾಕಥಾನ್‌ನಲ್ಲಿ ವಿವಿಧ ಕಂಪನಿಗಳ ಅಧಿಕಾರಿಗಳು ಭಾಗವಹಿಸಿದ್ದರು



ದೀಪಾವಳಿ ಹಬ್ಬದ ಪ್ರಯುಕ್ತ ಮಲ್ಲೇಶ್ವರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ವ್ಯಾಪಾರಿಗಳು ಇಟ್ಟುಕೊಂಡಿದ್ದ ವಿವಿಧ ವಿನ್ಯಾಸಗಳ ಮಣ್ಣಿನ ಹಣತೆಗಳನ್ನು ಜನರು ಭಾನುವಾರ ಖರೀದಿಸಿದರು

ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಸಿ.ಎನ್. ಮಂಜುನಾಥ್ ಅಭಿಮತ

‘ಪಾರ್ಶ್ವವಾಯು ಚಿಕಿತ್ಸೆಗೆ ಹೆಚ್ಚಿನ ಆದ್ಯತೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ವರದಿಯಾಗುತ್ತಿರುವ ಮರಣ ಪ್ರಕರಣಗಳಲ್ಲಿ ಹೃದಯಾಘಾತ ಮತ್ತು ಪಾರ್ಶ್ವವಾಯು ಕಾಯಿಲೆಯಿಂದಲೇ ಶೇ 30ರಷ್ಟು ಮಂದಿ ಮೃತಪಡುತ್ತಿದ್ದಾರೆ. ಈ ಕಾಯಿಲೆಗಳ ಚಿಕಿತ್ಸೆಗೆ ಹೆಚ್ಚಿನ ಆದ್ಯತೆ ನೀಡಬೇಕು’ ಎಂದು ಸಂಸದರೂ ಆಗಿರುವ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ಬೆಂಗಳೂರು ಪಾರ್ಶ್ವವಾಯು ಸೇವಾ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ವಿಚಾರ ಸಂಕಿರಣ ಹಾಗೂ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.



ಕಾರ್ಯಕ್ರಮಕ್ಕೆ ಡಾ.ಸಿ.ಎನ್. ಮಂಜುನಾಥ್ ಚಾಲನೆ ನೀಡಿದರು. ಬೆಂಗಳೂರು ಪಾರ್ಶ್ವವಾಯು ಸೇವಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

‘ದೇಶದಲ್ಲಿ ಪಾರ್ಶ್ವವಾಯು ಪೀಡಿತರಿಗೆ ಪುನಶ್ಚೇತನ ಕೇಂದ್ರಗಳ ಕೊರತೆ ನೀಗಿಸಲು ಸರ್ಕಾರಗಳು ಕ್ರಮವಹಿಸಬೇಕಿದೆ. ಹೃದಯಾಘಾತದಂತೆ ಪಾರ್ಶ್ವವಾಯು ಸಮಸ್ಯೆಗೂ ತುರ್ತಾಗಿ ಚಿಕಿತ್ಸೆ ಒದಗಿಸಬೇಕು. ನಿಗದಿತ ಅವಧಿಯಲ್ಲಿ ಚಿಕಿತ್ಸೆ ನೀಡದಿದ್ದರೆ ಅಂಗವಿಕಲರಾಗುವ ಸಾಧ್ಯತೆ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಪಾರ್ಶ್ವವಾಯು ಸಾಮಾನ್ಯವಾಗಿದ್ದು, ಜನರಲ್ಲಿ ಈ ಸಮಸ್ಯೆ ಬಗ್ಗೆ ಅರಿವು ಮೂಡಬೇಕು. ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಪಾರ್ಶ್ವವಾಯು ಚಿಕಿತ್ಸಾ ಘಟಕಗಳು ಕಡ್ಡಾಯವಾಗಿ ಇರಬೇಕು. ‘ಆಯುಷ್ಮಾನ್ ಭಾರತ್’ ಯೋಜನೆಯಡಿ ಪಾರ್ಶ್ವವಾಯುವಿಗೆ ಸಂಬಂಧಿಸಿದ ಚಿಕಿತ್ಸೆಗಳನ್ನು ಅಳವಡಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗುವುದು’ ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ‘ಜೀವಕ್ಕೆ ಅಪಾಯವನ್ನು ತಂದೊಡ್ಡುವ ಪಾರ್ಶ್ವವಾಯು ಸಮಸ್ಯೆ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಿ ಇರಬೇಕು. ಈ ಸಮಸ್ಯೆಯು ಅಧಿಕ ರಕ್ತದೊತ್ತಡದಂತಹ ಸಮಸ್ಯೆ ಇರುವವರಿಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಪಾರ್ಶ್ವವಾಯು ಪೀಡಿತರ ಚಿಕಿತ್ಸೆಗೆ ರಾಜ್ಯದಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದು ಹೇಳಿದರು.

ಬೆಂಗಳೂರು ಪಾರ್ಶ್ವವಾಯು ಸೇವಾ ಸಂಸ್ಥೆಯ ಅಧ್ಯಕ್ಷ ಮೋಹನ್ ರಾಮ್, ಕಾರ್ಯದರ್ಶಿ ಡಾ.ಅಮಿತ್ ಕುಲಕರ್ಣಿ, ಕರ್ನಾಟಕ ಸ್ಟ್ರೋಕ್ ಫೌಂಡೇಷನ್ ಸಂಸ್ಥೆಯ ಅಧ್ಯಕ್ಷ ಡಾ.ಜಿ. ಟಿ. ಸುಭಾಷ್, ಉಪಾಧ್ಯಕ್ಷ ಡಾ. ವಿಕ್ರಂ ಹುಡೇದ್ ಹಾಗೂ ಕಾರ್ಯದರ್ಶಿ ಡಾ. ಸೂರ್ಯನಾರಾಯಣ ಶರ್ಮ ಉಪಸ್ಥಿತರಿದ್ದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ

‘ಕುಂಟುತ್ತಾ ಸಾಗಿದೆ ಕನ್ನಡದ ಬೆಳವಣಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ವಿವಿಧ ರಾಜ್ಯ ಭಾಷೆಗಳ ಬೆಳವಣಿಗೆಗೆ ಹೋಲಿಸಿದರೆ ಕನ್ನಡ ಭಾಷೆಯು ಕುಂಟುತ್ತಾ ಸಾಗಿದೆ. ನಮ್ಮ ಭಾಷೆಯ ಬೆಳವಣಿಗೆ ಹೀಗೆಯೇ ಸಾಗಿದರೆ ಭವಿಷ್ಯದಲ್ಲಿ ಕನ್ನಡವು ಆಡು ಭಾಷೆಯಾಗಿ ಮಾತ್ರ ಉಳಿಯಲಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ಕನ್ನಡ ತಂತ್ರಾಂಶ ಬಳಕೆಯಲ್ಲಿ ಸಾರ್ವಜನಿಕರು ಮತ್ತು ಸರ್ಕಾರದ ಪಾತ್ರ’ ಸಮಾವೇಶ ಉದ್ಘಾಟಿಸಿ, ಮಾತನಾಡಿದರು.

‘2011ರ ಜನಗಣತಿ ಪ್ರಕಾರ ಕಳೆದ 40 ವರ್ಷಗಳಿಗೆ ಹೋಲಿಸಿದಲ್ಲಿ ಹಿಂದಿ ಭಾಷೆ ಶೇ 66 ರಷ್ಟು ವೇಗದಲ್ಲಿ ಬೆಳವಣಿಗೆ ಹೊಂದುತ್ತಿದೆ. ತಮಿಳು, ತೆಲುಗು, ಮಲಯಾಳಂ, ಕಾಶ್ಮೀರಿ ಸೇರಿ ವಿವಿಧ ಭಾಷೆಗಳು ಶೇ 8ರಿಂದ ಶೇ 9ರಷ್ಟು, ಇಲ್ಲಿಯದೇ ಭಾಷೆಯಾದ ತುಳು ಶೇ 7ರಷ್ಟು ವೇಗದಲ್ಲಿ ಬೆಳವಣಿಗೆ ಯಾಗುತ್ತಿದೆ. ಆದರೆ, ಕನ್ನಡ ಭಾಷೆಯ ಬೆಳವಣಿಗೆ ಶೇ 3.73 ರಷ್ಟು ಮಾತ್ರ ಇದೆ. ಇಡೀ ಭಾರತದಲ್ಲಿ ಅತ್ಯಂತ ಕಡಿಮೆ ವೇಗದಲ್ಲಿ ಬೆಳೆಯುತ್ತಿರುವ ರಾಜ್ಯ ಭಾಷೆ ಇದಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.



ಪುರೋಷತ್ತಮ ಬಿಳಿಮಲೆ ಅವರು ಚಂಡೆ ಬಾರಿಸುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದರು. ಆರ್‌.ಎ. ಪ್ರಸಾದ್, ಲೇಖಕಿ ಡಾ. ವಸುಂಧರಾ ಭೂಪತಿ ಹಾಗೂ ಎಂ. ನಾಗರಾಜ್ ಯಾದವ್ ಉಪಸ್ಥಿತರಿದ್ದರು.

‘ಕನ್ನಡ ನಮ್ಮ ಹೃದಯ ಭಾಷೆ ಯಾಗದ ಹೊರತು ಬೆಳವಣಿಗೆ ಸಾಧ್ಯ ವಿಲ್ಲ. ಉದ್ಯೋಗ, ಶಿಕ್ಷಣ ಸೇರಿ ವಿವಿಧೆಡೆ ಕನ್ನಡ ಅನುಷ್ಠಾನದ ತೀರ್ಮಾನ ವನ್ನು ರಾಜ್ಯ ಸರ್ಕಾರ ಕೈಗೊಂಡರೆ, ಸುಪ್ರೀಂ ಕೋರ್ಟ್ ಅದಕ್ಕೆ ತಡೆಯೊಡ್ಡ ಲಿದೆ. ಜಾಗತೀಕರಣದಿಂದ ಕನ್ನಡಕ್ಕೆ ಅಸ್ತಿತ್ವ ಇಲ್ಲವಾಗಿದೆ’ ಎಂದರು. ವಿಧಾನ ಪರಿಷತ್ತಿನ ಸದಸ್ಯ ಎಂ. ನಾಗರಾಜ್ ಯಾದವ್, ‘ಭಾಷೆ ಉಳಿಸಲು ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣದಲ್ಲಿ ಕನ್ನಡ ಬಳಕೆಗೆ ಒತ್ತು ನೀಡಬೇಕು. ಕನ್ನಡ ತಂತ್ರಾಂಶ ಬಳಕೆ ಹೆಚ್ಚಬೇಕು’ ಎಂದರು.

ಕನ್ನಡ ಗಣಕ ಉಚಿತ ತರಬೇತಿ ಕೇಂದ್ರದ ಸಂಸ್ಥಾಪನಾಧ್ಯಕ್ಷ ಆರ್‌.ಎ. ಪ್ರಸಾದ್, ‘ಕನ್ನಡ ತಂತ್ರಾಂಶವನ್ನು ಆಡಳಿತದಲ್ಲಿ ಜಾರಿ ಮಾಡದಿದ್ದರೆ ಕನ್ನಡ ಕೀಳು ಮಟ್ಟಕ್ಕೆ ತಲುಪಲಿದೆ. ಎಲ್ಲ ಭಾಷೆಗಳ ತಂತ್ರಾಂಶಗಳನ್ನು ತಯಾರು ಮಾಡಿಕೊಳ್ಳುವ ಉದ್ದಿಮೆ ಕರ್ನಾಟಕ ದಲ್ಲಿದೆ. ನಮ್ಮ ಭಾಷೆಯ ತಂತ್ರಾಂಶಗಳು ಇದ್ದರೂ ಅವನ್ನು ಬಳಕೆ ಮಾಡುತ್ತಿಲ್ಲ. ಕಡ್ಡಾಯವಾಗಿ ಬಳಕೆ ಮಾಡಿದಲ್ಲಿ 10 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಕನ್ನಡಿಗರಿಗೆ ಸಿಗುತ್ತವೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಇಂಗ್ಲಿಷ್ ಮಾಧ್ಯಮದ ಅಭ್ಯರ್ಥಿಗಳಿಗೆ ಆದ್ಯತೆ ನೀಡುತ್ತಿದೆ. ಸರ್ಕಾರದ ಆಡಳಿತದಲ್ಲಿ ಕನ್ನಡ ಬಳಸದಿರುವುದು ದುರಂತ’ ಎಂದು ಬೇಸರ ವ್ಯಕ್ತಪಡಿಸಿದರು.

ವಿಎಒ ಹುದ್ದೆಗೆ ಪರೀಕ್ಷೆ: ಶೇ 80ರಷ್ಟು ಹಾಜರು

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿಯ (ವಿಎಒ) ಒಂದು ಸಾವಿರ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ ನಡೆಸಿದ ಲಿಖಿತ ಪರೀಕ್ಷೆ ಸುಗಮವಾಗಿ ನಡೆದಿದೆ. ಶೇ 80 ರಷ್ಟು ಮಂದಿ ಹಾಜರಾಗಿದ್ದರು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಬೆಂಗಳೂರಿನ 88 ಕೇಂದ್ರ ಸೇರಿದಂತೆ ರಾಜ್ಯದಾದ್ಯಂತ ಒಟ್ಟು 1,173 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಒಟ್ಟು 4.79 ಲಕ್ಷ ಅಭ್ಯರ್ಥಿಗಳ ಪೈಕಿ 4.16 ಲಕ್ಷ ಮಂದಿ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದರು ಎಂದು ವಿವರಿಸಿದರು. ಕಲಬುರಗಿ, ವಿಜಯಪುರ, ಯಾದಗಿರಿ ಜಿಲ್ಲೆಗಳನ್ನು ಅತಿ ಸೂಕ್ಷ್ಮ ಎಂದು ಪರಿಗಣಿಸಿದ್ದು, ಆ ಜಿಲ್ಲೆಗಳಲ್ಲಿ ಹೆಚ್ಚಿನ ವಿಶೇಷ ನಿಗಾ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿಸಿದರು.

ಭೂನ್ಯಾಯ ಮಂಡಳಿಗೆ ಸದಸ್ಯರ ಆಯ್ಕೆ

ಯಲಹಂಕ: ಬೆಂಗಳೂರು ನಗರಜಿಲ್ಲೆ, ಯಲಹಂಕ ತಾಲ್ಲೂಕು ಭೂನ್ಯಾಯ ಮಂಡಳಿಯ ನೂತನ ಸದಸ್ಯರಾಗಿ ಮಾರೇನಹಳ್ಳಿ ನಾಗರಾಜ್, ಎಸ್‌.ಕೆ.ಕಿರಣ್‌ಕುಮಾರ್, ಶೆಟ್ಟಿಗೆರೆ ಅಪ್ಪಾಜಿ ಹಾಗೂ ವೈ.ಸಿ.ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಸಾರ್ವಜನಿಕ ಸೂಚನೆ
(ದಿವಾಳಿತನ ಮತ್ತು ಪಾಪರುಗಿರಿ ಸಂಹಿತೆ, 2016
ಸೆಕ್ಷನ್ 130(1) (ಬಿ) ಅಡಿಯಲ್ಲಿ 130(2)ರಂತೆ)

ಶ್ರೀ ಎಸ್ ಆರ್ ರಾಮಪ್ರಸಾದ್–ಮೆ. ಸುರಾ ಲೆದರ್ಸ್ ಪ್ರೈವೇಟ್ ಲಿಮಿಟೆಡ್ (CIN: U01911KA1992PTC013830) ನ ವೈಯಕ್ತಿಕ ಜಾಮೀನುದಾರರು ಇವರ ಸಾಲದಾತರ ಗಮನಕ್ಕೆ

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಬೆಂಗಳೂರು, ಇವರು ತಮ್ಮ 22ನೇ ಅಕ್ಟೋಬರ್ 2024 ರ ಆದೇಶದ ಪ್ರಕಾರ, ನಂ. 1930, 30ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು 560 070 –ಇಲ್ಲಿ ವಾಸವಾಗಿರುವ ಶ್ರೀ. ಎಸ್ ಆರ್ ರಾಮಪ್ರಸಾದ್ ರ ವಿಷಯದಲ್ಲಿ ದಿವಾಳಿತನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆದೇಶಿಸಿದೆ ಎಂಬ ನೋಟೀಸನ್ನು ಈ ಮೂಲಕ ನೀಡಲಾಗುತ್ತಿದೆ. (ಆದೇಶದ ಪ್ರತಿಯು 25ನೇ ಅಕ್ಟೋಬರ್ 2024ರಂದು ಸ್ವೀಕೃತವಾಗಿದೆ)
ಕ್ಲೇಮುಗಳನ್ನು ಸಲ್ಲಿಸಲು 25ನೇ ನವೆಂಬರ್ 2024 ರಂದು ಕೊನೆಯ ದಿನವಾಗಿರುತ್ತದೆ. ಸಾಲದಾತರು ತಮ್ಮ ಕ್ಲೇಮುಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮ/ವೈಯಕ್ತಿಕ ಬಟವಾಡೆ/ರಿಜಿಸ್ಟರ್ಡ್ ಪೋಸ್ಟ್/ಸ್ಪೀಡ್ ಪೋಸ್ಟ್/ಕೊರಿಯರ್ ಮೂಲಕ ದಿವಾಳಿತನ ಟ್ರಸ್ಟಿಯವರಿಗೆ ತಲುಪಿಸುವುದು.

ದಿವಾಳಿತನ ಟ್ರಸ್ಟಿಯವರ ವಿವರಗಳು:
ರವೀಂದ್ರ ಬೆಳೆಯೂರ್
IBBI/IPA-001/IP-P00189/2017-18/10368
‘ಶ್ರೀವತ್ಸ’, 428, 19ನೇ ಬಿ ಕ್ರಾಸ್, ಜಯನಗರ 3ನೇ ಹಂತ, ಬೆಂಗಳೂರು – 560 011
ಟೆಲಿಫೋನ್: 91 80 26540193, ಇ ಮೈಲ್: ravi@beleyur.com

ಕ್ಲೇಮುಗಳಿಗೆ ಸುಳ್ಳು/ ತಪ್ಪಾದ ಪುರಾವೆಗಳನ್ನು ಸಲ್ಲಿಸುವುದು, ದಿವಾಳಿತನ ಮತ್ತು ಪಾಪರುಗಿರಿ ಸಂಹಿತೆ, 2016 ಮತ್ತು ಇತರ ಯಾವುದೇ ಅನ್ವಯಿಕ ಕಾನೂನಿನ ಪ್ರಕಾರ ದಂಡ ಅಥವಾ ಸೆರೆವಾಸದ ಶಿಕ್ಷೆಗೆ ಅರ್ಹವಾಗುತ್ತದೆ.

ಸಹಿ/–
ರವೀಂದ್ರ ಬೆಳೆಯೂರ್
ದಿನಾಂಕ: 26ನೇ ಅಕ್ಟೋಬರ್ 2024
ಸ್ಥಳ: ಬೆಂಗಳೂರು
Reg. No. IBBI/IPA-001/IP-P00189/2017-18/10368

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA


We are a leading newspaper and magazine publishing group in Karnataka. We invite applications for the following position in our organisation.

Executive-Maintenance/Production

Department : Production
Qualification : BE or Diploma (Electrical, Mechanical or Mechatronics)
Experience : 4 years and above
Job Location : Kumbalgodu (Bangalore), Mangalore


Requirement:
- Should have hands on experience in maintenance and service of High-speed web offset press, Mail room, utility equipment
- Should be thorough in breakdown maintenance, predictive maintenance, preventive and autonomous maintenance.
- Should be willing to work in shifts including night shift.
- Should be able to communicate both in English and Kannada.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in





ಶಿಕ್ಷಣ



ವಿದ್ಯಾರ್ಥಿ ವೇತನ ಕೈಪಿಡಿ

ಕೆವಿಬಿ ಸ್ಕಾಲರ್‌ಶಿಪ್

ಮೆಡಿಕಲ್, ಎಂಜಿನಿಯರಿಂಗ್, ಅಗ್ರಿಕಲ್ಚರ್, ಆರ್ಟ್ಸ್ ಅಂಡ್ ಸೈನ್ಸ್ ಮತ್ತು ಎಐ ಆ್ಯಂಡ್ ಮಷೀನ್ ಲರ್ನಿಂಗ್ ವಿಭಾಗಗಳಲ್ಲಿ ಮೊದಲ ವರ್ಷದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕರೂರ್ ವೈಶ್ಯ ಬ್ಯಾಂಕ್ ಆರ್ಥಿಕ ನೆರವು ನೀಡುತ್ತದೆ.

ಅರ್ಹತೆ: ಮೆಡಿಕಲ್, ಎಂಜಿನಿಯರಿಂಗ್, ಅಗ್ರಿಕಲ್ಚರ್, ಆರ್ಟ್ಸ್ ಆ್ಯಂಡ್ ಸೈನ್ಸ್, ಬ್ಯಾಂಕಿಂಗ್-ಸಂಬಂಧಿತ ಫೈನಾನ್ಶಿಯಲ್ ಕೋರ್ಸ್‌ಗಳು ಮತ್ತು ಎಐ ಆ್ಯಂಡ್ ಮಷೀನ್ ಲರ್ನಿಂಗ್‌ನಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ಮೊದಲ ವರ್ಷಕ್ಕೆ ದಾಖಲಾಗಿರಬೇಕು.

ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು.
ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ಒಟ್ಟು ₹ 6,00,000ವನ್ನು ಮೀರಬಾರದು.
ಕರೂರ್ ವೈಶ್ಯ ಬ್ಯಾಂಕ್ ಮತ್ತು ಬಡ್ಡಿ4ಸ್ಟಡಿಯ ಉದ್ಯೋಗಿಗಳ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ.
ಸ್ವ-ಬಂಡವಾಳದ ಕೋರ್ಸ್‌ಗಳು
ಈ ವಿದ್ಯಾರ್ಥಿವೇತನದ ಅಡಿಯಲ್ಲಿ ಬರುವುದಿಲ್ಲ.
ಸರ್ಕಾರಿ ಅಥವಾ ಸರ್ಕಾರಿ-ಅನುದಾನಿತ ಕಾಲೇಜುಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳು ಮಾತ್ರವೇ ಅರ್ಹರಾಗಿರುತ್ತಾರೆ.
ಆರ್ಥಿಕ ಸಹಾಯ: ವಾರ್ಷಿಕ ₹ 1,00,000 (ಬಹು-ವಾರ್ಷಿಕ ಸ್ಕಾಲರ್‌ಶಿಪ್)
ಅರ್ಜಿ ಸಲ್ಲಿಸಲು ಕೊನೆ ದಿನ: 28-11-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/KVBSP1

ಲೂಯಿಸ್ ಡ್ರೇಫಸ್ ಅಗ್ರಿ-ಸ್ಕಾಲರ್ಸ್

ಇದು ಲೂಯಿಸ್ ಡ್ರೇಫಸ್ ಕಂಪನಿಯ ಉಪಕ್ರಮವಾಗಿದ್ದು, ಅಗ್ರಿಕಲ್ಚರ್‌ನಲ್ಲಿ ಪದವಿಪೂರ್ವ ಕೋರ್ಸ್‌ಗಳನ್ನು ಮಾಡುತ್ತಿರುವ ಸೌಲಭ್ಯವಂಚಿತ ವರ್ಗದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ಒದಗಿಸಲಿದೆ.
ಅರ್ಹತೆ: ಅಗ್ರಿಕಲ್ಚರ್‌ನಲ್ಲಿ ಪದವಿಪೂರ್ವ ಕೋರ್ಸ್‌ಗಳ ಮೊದಲನೇ ಅಥವಾ ಎರಡನೇ ವರ್ಷದಲ್ಲಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ.
ಅಭ್ಯರ್ಥಿಗಳು ತಮ್ಮ 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು.
ವಾರ್ಷಿಕ ಆದಾಯವು ₹ 8 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ₹ 50,000ದವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 31-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/DASPL1

ಜಿಎಸ್‌ಕೆ ಸ್ಕಾಲರ್ಸ್ ಪ್ರೋಗ್ರಾಂ

ಜಿಎಸ್‌ಕೆ ಸ್ಕಾಲರ್ಸ್ ಪ್ರೋಗ್ರಾಂ ಭಾರತದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಮೊದಲ ವರ್ಷದ ಎಂಬಿಬಿಎಸ್ ಅಭ್ಯಾಸ ಮಾಡುತ್ತಿರುವಂಥ ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯ ಅರ್ಹ ವಿದ್ಯಾರ್ಥಿಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ.
ಅರ್ಹತೆ: 12ನೇ ತರಗತಿಯಲ್ಲಿ ಕನಿಷ್ಠ ಶೇ 65 ಅಂಕಗಳನ್ನು ಹೊಂದಿದ್ದ ಮೊದಲ-ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹6,00,000ಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ವಾರ್ಷಿಕ ₹ 1,00,000ದವರೆಗೆ.
ಅರ್ಜಿ ಸಲ್ಲಿಸಲು ಕೊನೆ ದಿನ: 18-11-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/GSKP4

ಕೋಟಕ್ ಕನ್ಯಾ

ಕೋಟಕ್ ಮಹೀಂದ್ರಾ ಗ್ರೂಪ್ 12ನೇ ತರಗತಿಯ ನಂತರ ವೃತ್ತಿಪರ ಶಿಕ್ಷಣ ಪಡೆಯಲು ಹಂಬಲಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡಲಿದೆ.
ಅರ್ಹತೆ: ಭಾರತದಾದ್ಯಂತ ಇರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 6,00,000ಕ್ಕಿಂತ ಕಡಿಮೆ ಇರಬೇಕು.
ಮಾನ್ಯತೆ ಪಡೆದ ಎನ್‌ಆರ್‌ಎಫ್/ ಎನ್‌ಎಎಸಿ ಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ 2024-25 ಶೈಕ್ಷಣಿಕ ವರ್ಷದಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಬಿಡಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷಗಳು), ಬಿ.ಎಸ್‌ಸಿ ನರ್ಸಿಂಗ್, ಬಿ.ಫಾರ್ಮಸಿ, ಇಂಟಿಗ್ರೇಟೆಡ್ ಬಿಎಸ್-ಎಂಎಸ್/ಬಿಎಸ್-ರಿಸರ್ಚ್ ಇನ್ ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ (ಡಿಸೈನ್, ಆರ್ಕಿಟೆಕ್ಚರ್, ಇತ್ಯಾದಿ) ಇತರ ವೃತ್ತಿಪರ ಕೋರ್ಸ್‌ಗಳ ಮೊದಲ ವರ್ಷಕ್ಕೆ ಪ್ರವೇಶ ಪಡೆದಿರಬೇಕು.
ಆರ್ಥಿಕ ಸಹಾಯ: ವರ್ಷಕ್ಕೆ ₹1.5 ಲಕ್ಷ
ಅರ್ಜಿ ಸಲ್ಲಿಸಲು ಕೊನೆ ದಿನ: 31-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/KKGS3

ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಗುಣಮಟ್ಟದ ತರಬೇತಿಯನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನೀಡಲಿದೆ.
ಅರ್ಹತೆ: ಡಿ-ನೋಟಿಫೈಡ್, ಅಲೆಮಾರಿ ಮತ್ತು ಅರೆ-ಅಲೆಮಾರಿ ಬುಡಕಟ್ಟುಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮುಕ್ತವಾಗಿರುತ್ತದೆ.
12ನೇ ತರಗತಿಯ ನಂತರ ಜೆಇಇ, ನೀಟ್, ಕ್ಲಾಟ್, ಎನ್‌ಡಿಎ, ನಾನ್-ಕಮಿಷನ್ಡ್ ಮಿಲಿಟರಿ ರ‍್ಯಾಂಕ್ಸ್, ಸಿಎ-ಸಿಪಿಟಿ, ಬ್ಯಾಂಕಿಂಗ್, ಇನ್ಶೂರೆನ್ಸ್, ಪಿಎಸ್‌ಯು, ಎಸ್‌ಎಸ್‌ಸಿ, ಆರ್‌ಆರ್‌ಬಿ, ರಾಜ್ಯ ಮತ್ತು ಕೇಂದ್ರೀಯ ಪೊಲೀಸ್ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಪಡೆದುಕೊಳ್ಳಲು ಆಸಕ್ತರಾಗಿರಬೇಕು.
ಕುಟುಂಬದ ವಾರ್ಷಿಕ ಆದಾಯವು ₹2,50,000 ಅಥವಾ ಕಡಿಮೆ ಇರಬೇಕು. 12ನೇ ತರಗತಿಯಲ್ಲಿ ಕಲಿಯುತ್ತಿರಬೇಕು ಅಥವಾ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವಷ್ಟು ಕನಿಷ್ಠ ಅರ್ಹತಾ ಅಂಕಗಳನ್ನು ಪಡೆದುಕೊಂಡಿರಬೇಕು (ಅಭ್ಯರ್ಥಿಯು ಎದುರಿಸಲು ಬಯಸುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಅವಲಂಬಿಸಿ) ಆದರೆ ಪ್ರಸ್ತುತ 12ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ಕನಿಷ್ಠ ಶೇ 50 ಅಂಕಗಳನ್ನು ಪಡೆದಿರಬೇಕು.
ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಇತರ ಯಾವುದೇ ಯೋಜನೆಗಳಿಂದ ಈ ರೀತಿಯ ಪ್ರಯೋಜನಗಳನ್ನು (ಕೋಚಿಂಗ್ ತರಗತಿಗಳ ಮೊದಲಿಗೆ) ಪಡೆದುಕೊಂಡಿರಬಾರದು.
ಆರ್ಥಿಕ ಸಹಾಯ: ₹1,20,000ದ ವರೆಗಿನ ಕೋಚಿಂಗ್ ಶುಲ್ಕ ಮತ್ತು ಇತರ ಹೆಚ್ಚುವರಿ ಪ್ರಯೋಜನಗಳು.
ಅರ್ಜಿ ಸಲ್ಲಿಸಲು ಕೊನೆ ದಿನ: 04-11-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/FCDNT1

ಪ್ರಜಾವಾಣಿ ರಸಪ್ರಶ್ನೆಗೆ ನೋಂದಣಿ ಆರಂಭ

ಆರು ವಲಯಗಳಲ್ಲಿ ಸ್ಪರ್ಧೆ

- ಬೆಂಗಳೂರು ನಗರ
- ಮೈಸೂರು
- ಧಾರವಾಡ
- ಬಾಗಲಕೋಟೆ
- ಕಲಬುರಗಿ
- ದಾವಣಗೆರೆ

ಈ ಆರು ವಲಯಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿವುದು. ಆರೂ ವಲಯಗಳಲ್ಲಿ ವಿಜೇತರಾದವರಿಗೆ ರಾಜ್ಯಮಟ್ಟದಲ್ಲಿ ಅಂತಿಮ ಸ್ಪರ್ಧೆಯನ್ನು ಆಯೋಜಿಸಲಾಗುವುದು. ಈ ವರ್ಷ ಈ ವಿಜೇತ ವಿದ್ಯಾರ್ಥಿಗಳಿಗಾಗಿ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನೂ ಆಯೋಜಿಸಲಾಗಿದೆ.

ಇನ್ನೇಕೆ ತಡ, ಕ್ಯೂ.ಆರ್. ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಿ

ಪ್ರಜಾವಾಣಿ QUIZ CHAMPIONSHIP

ಕ್ವಿಜ್‌ನ ನೋಂದಣಿಗಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ನವೆಂಬರ್ ತಿಂಗಳಿನಿಂದ ಜನವರಿ ಅಂತ್ಯದವರೆಗೂ ಕರ್ನಾಟಕದಾದ್ಯಂತ ಮಕ್ಕಳೆಲ್ಲ ಪ್ರಚಲಿತ ವಿದ್ಯಮಾನಗಳತ್ತ ಗಮನ ನೀಡುತ್ತಾರೆ. ಶಿಕ್ಷಕರೂ ಪತ್ರಿಕೆಗಳಿಂದ ಯಾರು ಏನಾದರು, ಯಾರಿಗೆ ಯಾವ ಪ್ರಶಸ್ತಿ ಲಭಿಸಿತು, ಕ್ರೀಡೆಯಲ್ಲಿ ಗೆದ್ದವರು ಯಾರು, ನಿವೃತ್ತರಾದವರು ಯಾರು? ಬಾಹ್ಯಾಕಾಶದಲ್ಲಿ ಏನೆಲ್ಲ ಸಾಧನೆಗಳಾದವು, ಹೀಗೆ ಹಲವಾರು ವಿಷಯಗಳತ್ತ ಹದ್ದಿನ ಕಣ್ಣಿಟ್ಟು ಕಾಯುತ್ತಾರೆ.

ಕಾರಣ, ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್ ರಾಜ್ಯದೆಲ್ಲೆಡೆ ಸಂಚರಿಸುತ್ತದೆ. ಐದು ವಲಯಗಳಲ್ಲಿ ಮೊದಲ ಸುತ್ತು, ಎರಡನೆಯ ಸುತ್ತು ಮತ್ತು ಅಂತಿಮ ಸುತ್ತಿನಲ್ಲಿ ಆಯ್ಕೆಯಾದವರು ಅಂತಿಮ ಹಣಾಹಣಿಗೆ ಬೆಂಗಳೂರಿಗೆ ಬರುತ್ತಾರೆ.

ಪ್ರತಿ ವರ್ಷವೂ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಈ ಚಾಂಪಿಯನ್‌ಶಿಪ್‌ಗಾಗಿ ಎದುರು ನೋಡುತ್ತಾರೆ.

ರಸಪ್ರಶ್ನೆಯಲ್ಲಿ ಪಾಲ್ಗೊಳ್ಳುವುದರಿಂದ ಮಕ್ಕಳಲ್ಲಿ ಪ್ರಚಲಿತ ಜ್ಞಾನ, ಸಾಮಾನ್ಯ ಜ್ಞಾನ ಹೆಚ್ಚುತ್ತದೆ. ಜೊತೆಗೆ ದೃಕ್ ಶ್ರವಣದ ಪ್ರಶ್ನೆಗಳನ್ನೂ ಕೇಳುವುದರಿಂದ ಅವರಲ್ಲಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಹೆಚ್ಚುತ್ತದೆ. ವಿಶ್ಲೇಷಿಸುವ ವಿವೇಚನಾ ಶಕ್ತಿಯೂ ಬೆಳೆಯುತ್ತದೆ. ಎಲ್ಲಕ್ಕೂ ಮುಖ್ಯವಾಗಿ ಸೋಲು-ಗೆಲುವುಗಳನ್ನು ಸ್ವೀಕರಿಸುವ ಮನೋಸ್ಥೈರ್ಯ ಹೆಚ್ಚಾಗುತ್ತದೆ.

ಪತ್ರಿಕೆಗಳನ್ನು ಓದುತ್ತಲೇ, ಜಾಗತಿಕ ವಿದ್ಯಮಾನಗಳತ್ತ ಒಂದು ಕಣ್ಣಿಡುವುದು, ಜೊತೆಗೆ ಓದಿದ್ದನ್ನು ಅರಗಿಸಿಕೊಳ್ಳುವುದು, ಎಂದರೆ ನೆನಪಿನಲ್ಲಿಟ್ಟುಕೊಳ್ಳುವುದು. ಕೇಳಿದ ತಕ್ಷಣ ಉತ್ತರಿಸುವುದು, ಕೆಲವೊಮ್ಮೆ ಎಲ್ಲ ಗೊತ್ತಿದ್ದರೂ ಕೇಳಿದಾಗ ಕೂಡಲೆ ನೆನಪಾಗುವುದಿಲ್ಲ. ಇನ್ನೊಬ್ಬರು ಉತ್ತರಿಸಿದಾಗ ಈ ಉತ್ತರ ನಮಗೂ ಗೊತ್ತಿತ್ತು ಎಂದೆಲ್ಲ ಎನಿಸತೊಡಗುತ್ತದೆ. ಇಂಥ ಕಾರಣಗಳಿಗೆ ಅಂಕ ಕಳೆದುಕೊಂಡು, ಕೊನೆಯ ಹಂತದಲ್ಲಿ ಗೆಲುವಿನ ಮುಂದೆ ಮುಗ್ಗರಿಸುವ ವಿದ್ಯಾರ್ಥಿಗಳು ಪ್ರತಿವರ್ಷವೂ ಕಾಣಸಿಗುತ್ತಾರೆ.

ನೋಂದಣಿಯೊಂದಿಗೆ ನಿಮ್ಮ ತಯಾರಿ ಹೀಗಿರಲಿ

ಪ್ರತಿದಿನವೂ ಪೌಷ್ಠಿಕಾಂಶವುಳ್ಳ ಆಹಾರ ಸೇವಿಸಿರಿ. ಮೊಟ್ಟೆ, ಬಾಳೆಹಣ್ಣು, ಮೊಳಕೆ ಕಾಳು ನಿಮ್ಮ ಆಹಾರದಲ್ಲಿರಲಿ.

ಯಾವುದೇ ಕಾರಣಕ್ಕೂ ಧಾವಂತಕ್ಕೆ ಬೀಳದಂತೆ ಮನಸು ಶಾಂತವಾಗಿರಿಸಿಕೊಳ್ಳುವುದು ರೂಢಿಸಿಕೊಳ್ಳಿ.

ಇದಕ್ಕಾಗಿ ದೀರ್ಘ ಉಸಿರಾಟದ ಅಭ್ಯಾಸ ಮಾಡಿಕೊಳ್ಳಿ. ಪ್ರಶ್ನೆಗಳನ್ನು ಕೇಳಿದಾಗ ಶಾಂತಚಿತ್ತರಾಗಿ ಉತ್ತರಿಸುವುದು ಸಾಧ್ಯವಾಗುತ್ತದೆ.


ಕರ್ನಾಟಕದ ಇತಿಹಾಸ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಕ್ರೀಡೆ, ವಿಜ್ಞಾನ, ಬಾಹ್ಯಾಕಾಶ, ಆಟೊಮೊಬೈಲ್ಸ್, ವ್ಯಕ್ತಿಗಳು, ಪ್ರಶಸ್ತಿಗಳು ಹೀಗೆ ವಿಭಾಗವಾರು ವಿಂಗಡಿಸಿಕೊಳ್ಳಿ. ಓದುವ ಸಾಮಗ್ರಿಗಳನ್ನು ಒಟ್ಟಿಗೆ ಕಲೆಹಾಕಿ ಎಲ್ಲವನ್ನೂ ಕಲಸುಮೇಲೊಗರ ಮಾಡಿಕೊಳ್ಳುವ ಬದಲು, ಯೋಜಿಸಿ, ವಿಂಗಡಿಸಿಕೊಂಡಾಗ ನೆನಪಿಡುವುದು ಸುಲಭವಾಗುತ್ತದೆ.

ರಸಪ್ರಶ್ನೆ ಸ್ಪರ್ಧೆಗಳು ಕೇವಲ ನೆನಪಿನ ಶಕ್ತಿಯನ್ನು ಪರಿಶೀಲಿಸುವುದಿಲ್ಲ. ನಿಮ್ಮ ಜಾಣ್ಮೆ ಹಾಗೂ ಚಾಕಚಕ್ಯತೆಯನ್ನು ಪರಿಶೀಲಿಸುತ್ತವೆ. ನಿಮ್ಮ ಆತ್ಮಶಕ್ತಿಯನ್ನು ಒರೆಗೆ ಹಚ್ಚುತ್ತದೆ. ಆತ್ಮಶಕ್ತಿಯನ್ನು ಹೆಚ್ಚಿಸುತ್ತದೆ. ಉಳಿದ ಮಕ್ಕಳೊಡನೆ ನಿಮ್ಮ ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡುತ್ತದೆ.

ಇವೆಲ್ಲವನ್ನೂ ನಿಭಾಯಿಸುವವರೆ ನಿಜವಾದ ಚಾಂಪಿಯನ್ ಆಗಿ ಹೊರಹೊಮ್ಮುತ್ತಾರೆ. ಉಳಿದವರು ತಮ್ಮ ಸಾಮರ್ಥ್ಯವನ್ನು ಆತ್ಮಾವಲೋಕನ ಮಾಡಿಕೊಂಡು ಮುಂದಿನ ವರ್ಷದ ಸ್ಪರ್ಧೆಯ ತಯಾರಿಗೆ ಸಜ್ಜಾಗುತ್ತಾರೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ವಸಾಮರ್ಥ್ಯ ಬೆಳೆಸಿಕೊಳ್ಳುವ ಬಗೆಯನ್ನು ಅರಿತುಕೊಳ್ಳುತ್ತಾರೆ. ಸೋಲು ಗೆಲುವಿಗಿಂತ ಪಾಲ್ಗೊಳ್ಳುವಿಕೆ ಈ ಕಾರಣದಿಂದ ಮುಖ್ಯವಾಗುತ್ತದೆ. ಆಲ್ ದ ಬೆಸ್ಟ್..

ನಾಸಾದಲ್ಲಿ ಉದ್ಯೋಗ ಪಡೆಯುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ದ್ವಿತೀಯ ಪಿಯು ಓದುತ್ತಿದ್ದು ಮುಂದಿನ ಶಿಕ್ಷಣವನ್ನು ಅಮೆರಿಕದಲ್ಲಿ ಕಲಿತು, ನಾಸಾ ಸಂಸ್ಥೆಯಲ್ಲಿ ಉದ್ಯೋಗವನ್ನು ಮಾಡುವ ಆಸೆಯಿದೆ. ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ಪಿಯು ಓದುತ್ತಿರುವಾಗಲೇ ಮುಂದಿನ ಭವಿಷ್ಯದ ಬಗ್ಗೆ ಸ್ಪಷ್ಟವಾದ ಯೋಜನೆಯಿರುವುದು ಶ್ಲಾಘನೀಯ. ಪಿಯುಸಿ ನಂತರ, ಏರೋಸ್ಪೇಸ್/ಏರೋನಾಟಿಕಲ್ ಎಂಜಿನಿಯರಿಂಗ್ ಕೋರ್ಸ್ ಅನ್ನು ಇಲ್ಲಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಮಾಡಿ, ಸ್ನಾತಕೋತ್ತರ ಶಿಕ್ಷಣವನ್ನು ಅಮೆರಿಕದಲ್ಲಿ ಮಾಡಬಹುದು.

ವಿದೇಶಿ ಶಿಕ್ಷಣಕ್ಕೆ ಅನೇಕ ಪೂರ್ವಸಿದ್ಧತೆಗಳಿರುತ್ತವೆ. ಉದಾಹರಣೆಗೆ, ಗ್ರಾಜುಯೇಟ್ ರೆಕಾರ್ಡ್ ಎಕ್ಸಾಮ್ (ಜಿಆರ್‌ಇ), ಇಂಗ್ಲಿಷ್ ಭಾಷಾ ಪ್ರೌಢಿಮೆ ಪರೀಕ್ಷೆ, ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಗಳು, ವೀಸಾ ಪ್ರಕ್ರಿಯೆ, ಸ್ಕಾಲರ್‌ಷಿಪ್, ಹಾಸ್ಟೆಲ್ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಿದ್ಧತೆಗಳನ್ನು ನೀವು ಎರಡನೇ ವರ್ಷದ ಎಂಜಿನಿಯರಿಂಗ್ ಮಾಡುವಾಗ ಪ್ರಾರಂಭಿಸಬಹುದು. ವೃತ್ತಿಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=AwlDno1YduQ

2. ನಾನು ಈ ವರ್ಷ ಎಂಟೆಕ್ ಮುಗಿಸಿದ್ದು, ಮುಂದೇನು ಎನ್ನುವ ವಿಚಾರದಲ್ಲಿ ಗೊಂದಲವಿದೆ. ಯಾವ ಆಯ್ಕೆ ಸೂಕ್ತವಾಗಬಹುದು?

ಹೆಸರು, ಊರು ತಿಳಿಸಿಲ್ಲ.

ನೀವು ಬಿ.ಟೆಕ್ ಯಾವ ವಿಭಾಗದಲ್ಲಿ ಮಾಡಿದ್ದೀರಿ ಎಂದು ತಿಳಿಸಿಲ್ಲ. ಎಂಟೆಕ್ ನಂತರ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಪ್ರಮುಖವಾಗಿ ಮೂರು ಆಯ್ಕೆಗಳಿವೆ. ಆದರೆ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ ಮತ್ತು ಒಲವಿರುವ ಕ್ಷೇತ್ರದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳುವುದು ಸೂಕ್ತ.

- ಕಾರ್ಪೊರೇಟ್ ಸಂಸ್ಥೆಗಳಲ್ಲಿ ಉದ್ಯೋಗವನ್ನು ಅರಸಬಹುದು.
- ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಮಗೆ ಒಲವಿರುವ ಸರ್ಕಾರಿ ಕ್ಷೇತ್ರದಲ್ಲಿ ಉದ್ಯೋಗವನ್ನು ಅರಸಬಹುದು.
- ಸಂಶೋಧನೆ/ಅಧ್ಯಾಪಕ ವೃತ್ತಿಯಲ್ಲಿ ಆಸಕ್ತಿಯಿದ್ದರೆ ಪಿಎಚ್.ಡಿ ಮಾಡಬಹುದು.

ಪಿಎಚ್.ಡಿ ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=Mb4PKUb35_Q

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ

ಅಧ್ಯಾಯ–3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

20) **1813ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳು ಯಾವುವು?**

ಉತ್ತರ : (..ಹಿಂದಿನ ಸಂಚಿಕೆಯಿಂದ)
ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬರತೊಡಗಿದರು. ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

21) **1833ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳನ್ನು ಬರೆಯಿರಿ**

ಉತ್ತರ : ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ; 1. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು.
2. ಭಾರತದ ಎಲ್ಲ ವ್ಯಾಪಾರಿ ಸರಕುಗಳನ್ನು "ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ" ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
3. ದೇಶಿ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತ್ತು.
4. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಯಲ್ಲಿ ಉಳಿದ ಸದಸ್ಯರ ಜೊತೆ ಗವರ್ನರ್ ಜನರಲ್‌ನಿಗೆ ಯಾವುದಾದರೂ ವಿಷಯದ ಮೇಲೆ ಒಮ್ಮತ ಮೂಡದಿದ್ದಾಗ ಅವನು ಬಹುಮತದ ನಿರ್ಣಯವನ್ನು ತಿರಸ್ಕರಿಸಲು ಇದ್ದ ಕಾರಣಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕಾಯಿತು.
5. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು ಈ ಕಾಯ್ದೆಯು ನಿರ್ದೇಶಿಸಿತು.
6. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬೇಕಾಯಿತು.
7. ಎಲ್ಲ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು. ಈ ಕಾಯ್ದೆಯು 1830ರ ದಶಕದ ಭಾರತದ ಆಂತರಿಕ ಮತ್ತು ಇಂಗ್ಲೆಂಡಿನಲ್ಲಿದ್ದ ವಿವಿಧ ರಾಜಕೀಯ ವಿದ್ಯಮಾನಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ

22) **ಭಾರತ ಸರ್ಕಾರದ ಕಾಯ್ದೆ – 1858 ಪ್ರಮುಖಾಂಶಗಳನ್ನು ಬರೆಯಿರಿ**

ಉತ್ತರ:– ಈ ಕಾಯ್ದೆಯನ್ನು 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕು. ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು. ನವಂಬರ್ 1, 1858ರಂದು ಬ್ರಿಟಿಷ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು.
ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ, 1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.
2. ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ "ಲಾರ್ಡ್ ಕ್ಯಾನಿಂಗ್" ನೇಮಕಗೊಂಡರು.
3. "ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.
4. ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ (ಕೌನ್ಸಿಲ್ ಆಫ್ ಇಂಡಿಯಾ) ಅಸ್ತಿತ್ವಕ್ಕೆ ಬಂದಿತು.

23) **1861ರ ಭಾರತೀಯ ಪರಿಷತ್ ಕಾಯ್ದೆಯಲ್ಲಿರುವ ಅಂಶಗಳು ಯಾವುವು?**

ಉತ್ತರ. 1861ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು: (1) ವೈಸರಾಯ್ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ ಮಾಡಲಾಯಿತು.
(2) ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರವನ್ನು ಗವರ್ನರ್ ಜನರಲ್‌ಗೆ ನೀಡಲಾಯಿತು.

24) **1892ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?**

ಉತ್ತರ:– 1892ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು:– 1. ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಹೆಚ್ಚುವರಿ ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಲಾಯಿತು.
2. ಶಾಸನ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಅಧಿಕಾರವನ್ನು ಹೆಚ್ಚಿಸಿ ಅವುಗಳಲ್ಲಿ ಬಜೆಟ್ ಬಗ್ಗೆ ಚರ್ಚಿಸುವ ಅಧಿಕಾರವನ್ನು ನೀಡಲಾಯಿತು.
3. ಆರು ದಿನಗಳ ಮುಂಚೆ ಮುನ್ಸೂಚನೆ ನೀಡಿ ಸಾರ್ವಜನಿಕ ಆಸಕ್ತಿಯ ವಿಷಯಗಳ ಬಗ್ಗೆ ಸರಕಾರವನ್ನು ಪ್ರಶ್ನಿಸುವ ಹಕ್ಕನ್ನು ನೀಡಲಾಯಿತು

25) **1909 ಭಾರತೀಯ ಪರಿಷತ್ ಕಾಯ್ದೆ ಕುರಿತು ಬರೆಯಿರಿ**

ಉತ್ತರ:– ಈ ಕಾಯ್ದೆಯನ್ನು 'ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ' ಎಂತಲೂ ಕರೆಯುವರು. ಏಕೆಂದರೆ, ಲಾರ್ಡ್ ಮಿಂಟೋ ಭಾರತದ ವೈಸ್‌ರಾಯ್ ಆಗಿದ್ದರು. ಲಾರ್ಡ್ ಮಾರ್ಲೆ ಭಾರತದ ಸಕ್ರೆಟರಿ ಆಫ್ ಸ್ಟೇಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಈ ಕಾಯ್ದೆಯನ್ನು ಬಳಸಿಕೊಂಡರು.
ಈ ಕಾಯ್ದೆಯ ಪ್ರಮುಖ ಅಂಶಗಳು 1. ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.
2. ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
3. ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.
4. ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಜಾರಿಗೆ ತರಲಾಯಿತು

25) **1919 ಭಾರತೀಯ ಪರಿಷತ್ ಕಾಯ್ದೆ ಕುರಿತು ಬರೆಯಿರಿ**

ಉತ್ತರ:– ಈ ಕಾಯ್ದೆಯನ್ನು ಮಾಂಟೆಗೋ–ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆ ಎಂತಲೂ ಕರೆಯುವರು. ಮೊದಲನೆಯ ಮಹಾಯುದ್ಧ(1914–1918)ದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನಲೆಯಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು. ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋ ಅವರು ಬ್ರಿಟನ್ನಿನ ಸಂಸತ್ತಿನಲ್ಲಿ ಆಗಸ್ಟ್ 1917ರಲ್ಲಿ 'ಭಾರತೀಯರಿಗೆ ಹಂತ ಹಂತವಾಗಿ ಜವಾಬ್ದಾರಿ ಸರಕಾರವನ್ನು ನೀಡುವುದೇ ಬ್ರಿಟಿಷ್ ಸರಕಾರದ ಗುರಿ' ಎಂದು ಮಾಡಿದ ಘೋಷಣೆಯ ಹಿನ್ನೆಲೆಯಲ್ಲಿ (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHS

APPLICATIONS OF DERIVATIVES

MAXIMA AND MINIMA

11. Determine the values of x for which the function $f(x)=\frac{x}{\log x};\ (x\neq 1)$ **is increasing and for which it is decreasing.**

Soln :– Given that $f(x)=\frac{x}{\log x}$

(……Contd)

Again, $f'(x)<0$, if $\log x-1<0$
i.e., if $\log x<1$; i.e., if $0<x<e,\ x\neq 1$
Thus, $f(x)$ is decreasing for $0<x<e,\ x\neq 1$

12. Show that when x is positive

$$e^x>1+x+\frac{x^2}{2}$$

Soln :– Consider, $e^x>1+x+\frac{x^2}{2}$

Let $f(x)=e^x-\left(1+x+\frac{x^2}{2}\right)$

$$\therefore f'(x)=e^x-1-x$$
$$=\left\{1+x+\frac{x^2}{2!}+\frac{x^3}{3!}+......\right\}-1-x$$
$$=\frac{x^2}{2!}+\frac{x^3}{3!}+.....>0,\ \text{for all } x>0$$

$\therefore f(x)$ is an increasing function for all $x>0$
Also, $f(0)=e^0-1=0;\ f(x)>0$ for all $x>0$

$$\therefore e^x>1+x+\frac{x^2}{2}$$

13. Find for what values of 'k' the function $x^3-kx^2+48x+1$ **will increase as x increases for all values of x.**

Soln :– Let $f(x)=x^3-kx^2+48x+1$
On differentiating the above function
we get, $f'(x)=3x^2-2kx+48$
$f'(x)$ will be perfect square if its descriminant is zero.

$$\Rightarrow \Delta=\sqrt{4k^2-4.3.48}=2\sqrt{k^2-144}=0$$
$$\therefore k^2=144\ (\text{or})\ k=\pm 12$$

Hence $f'(x)=3x^2-2(\pm 12)x+48$
$$=3x^2\pm 24x+48=3\left(x^2\pm 8x+16\right)$$
$$=3\left(x\pm 4\right)^2>0 \text{ for all } x.$$

Hence $f(x)$ is an increasing function for all x if $k=\pm 12$

14. When does a function have a maximum?

Ans:- A function f(x) is said to have a maximum at a point x = a, if the value of the function at x = a (i.e., f(a)), is greater than any other value that f (x) can have for $a-h<x<a+h$, where h is a small positive real number. The value f(a) is called the maximum value.

15. When does a function have a minimum?

Ans:- A function f(x) is said to have a minimum at a point x = a, if the value of the function at x = a (i.e., f(a)), is less than any other value that f(x) can have for $a-h<x<a+h$, where h is a small positive real number. The value f(a) is called the minimum value.

16. Sum of two numbers is 48. Find the numbers when their product is maximum

Ans:- Let one number be 'x' and the other number be 48 – x
The product of the two numbers is x (48 – x)
To know for what value of 'x' is f (x) maximum, differentiate f(x).

$$f(x)=48x-x^2$$
$$f'(x)=48-2x$$

For maxima or minimum, $f'(x)=0$
$$\Rightarrow 48-2x=0$$
$$\therefore x=24$$

On further differentiating $f'(x)=48-2x$
we get, $f''(x)=-2$ (the value is always – ve).
Thus $f(x)$ attains maximum at $x=24$.
Hence, the required numbers are 24 & 24.

17. A line AB of length 8 cm is divided into two parts AP and PB by a point P. Find the position of P, if AP^2+BP^2 **is minimum.**

Soln :– Given that, AB = 8cm
If $AP=x\,\text{cm},\ PB=AB-AP=(8-x)\,\text{cm}$

Consider, $AP^2+PB^2=x^2+(8-x)^2$
$$=2x^2-16x+64$$

Let, $f(x)=2x^2-16x+64$
$$\Rightarrow f'(x)=4x-16$$

For maxima (or) minima, $f'(x)=0\Rightarrow x=4$
Now, $f''(x)=4$ is always positive.
Thus, $f(x)$ attains minimum at $x=4$
AP^2+BP^2 is minimum when $AP=PB=4\text{cm}$
Thus, P is the mid point of AB.

18. Show that the function $2x^3-9x^2+12+7$ **attains its maximum value at x = 1**

Soln :– Let $y=2x^3-9x^2+12+7$
differentiating w.r.t x, we get;
$$\frac{dy}{dx}=6x^2-18x+12$$
differentiating again w.r.t x, we get;
$$\frac{d^2y}{dx^2}=12x-18$$

For the function to have a maximum, $\frac{dy}{dx}=0$
$$\Rightarrow 6x^2-18x+12=0\Rightarrow 6\left(x^2-3x+2\right)=0$$
$$\Rightarrow (x-2)(x-1)=0,\ \therefore x=2,\ 1$$
$$\left(\frac{d^2y}{dx^2}\right)_{x=1}=12-8=-6<0$$


$\therefore$ At x = 1 the function has maximum.

(Contd……)

ಸಂಕ್ಷಿಪ್ತ ಸುದ್ದಿ

ಆಳ್ವಾಸ್ ವಿರಾಸತ್ ಪ್ರಶಸ್ತಿ: ಪಂ. ವೆಂಕಟೇಶ್ ಕುಮಾರ್ ಆಯ್ಕೆ

ಮೂಡುಬಿದಿರೆ (ದಕ್ಷಿಣ ಕನ್ನಡ): 'ಹಿಂದೂಸ್ಥಾನಿ ಗಾಯಕ ಪಂಡಿತ್ ಎಂ. ವೆಂಕಟೇಶ್ ಕುಮಾರ್ ಅವರನ್ನು 2024ನೇ ಸಾಲಿನ 'ಆಳ್ವಾಸ್ ವಿರಾಸತ್' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದ್ದಾರೆ.



ಎಂ. ವೆಂಕಟೇಶ್ ಕುಮಾರ್

'ನಾಡು ನುಡಿಯ ರಾಷ್ಟ್ರೀಯ ಸಾಂಸ್ಕೃತಿಕ ವೈಭವ ಆಳ್ವಾಸ್ ವಿರಾಸತ್ ಕಾರ್ಯಕ್ರಮವು ಇಲ್ಲಿ 2024ರ ಡಿ.1ರಿಂದ 16ರವರೆಗೆ ನಡೆಯಲಿದ್ದು ಈ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ಗೌರವವು ₹ 1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ' ಎಂದರು.

ಪರೀಕ್ಷೆ: ಪೂರ್ಣ ತೋಳಿನ ಅಂಗಿಗೆ ಕತ್ತರಿ!



ಕೊಪ್ಪಳ: ನಗರದಲ್ಲಿ ಭಾನುವಾರ ಗ್ರಾಮ ಆಡಳಿತಾಧಿಕಾರಿ ಹುದ್ದೆ ನೇಮಕಾತಿಗಾಗಿ ನಡೆದ ಪರೀಕ್ಷೆಯಲ್ಲಿ ಪೂರ್ಣ ತೋಳಿನ ಅಂಗಿ ಧರಿಸಿ ಬಂದಿದ್ದ ಅಭ್ಯರ್ಥಿಗಳು ಅಂಗಿಯ ತೋಳನ್ನು ಅರ್ಧಕ್ಕೆ ಕತ್ತರಿಸಿ ಹೊರಗಿಟ್ಟು ಪರೀಕ್ಷೆ ಬರೆಯಬೇಕಾಯಿತು.

ಪೂರ್ಣ ತೋಳಿನ ಅಂಗಿ ಧರಿಸಿ ಪರೀಕ್ಷಾ ಕೇಂದ್ರಕ್ಕೆ ಬಂದವರಿಗೆ ಭದ್ರತಾ ಸಿಬ್ಬಂದಿ ಕೊಠಡಿಯೊಳಗೆ ಬಿಡಲು ನಿರಾಕರಿಸಿದರು. ಈ ಬಗ್ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳಿಗೆ ಸೂಚಿಸಲಾಗಿತ್ತು. ಇದರಂತೆ ಅವರು ಕ್ರಮ ಕೈಗೊಂಡಿದ್ದರಿಂದ ಅಭ್ಯರ್ಥಿಗಳು ಪೂರ್ಣ ತೋಳಿನ ಅರ್ಧ ಭಾಗ ಕತ್ತರಿಸಿ ಪರೀಕ್ಷೆಗೆ ಹಾಜರಾದರು.

ಎಐಯುಟಿಯುಸಿ: ರಾಜ್ಯ ಸಮಿತಿ ಪದಾಧಿಕಾರಿಗಳ ಆಯ್ಕೆ

ಮೈಸೂರು: ಎಐಯುಟಿಯುಸಿ ರಾಜ್ಯ ಸಮಿತಿಯ ನೂತನ ಅಧ್ಯಕ್ಷರಾಗಿ ಕೆ. ಸೋಮಶೇಖರ್ ಬಳ್ಳಾರಿ ಆಯ್ಕೆಯಾದರು.


ಇಲ್ಲಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ನಡೆದ ಎಐಯುಟಿಯುಸಿಯ ನಾಲ್ಕನೇ ರಾಜ್ಯ ಸಮ್ಮೇಳನದ ಪ್ರತಿನಿಧಿಗಳ ಸಮಾವೇಶದಲ್ಲಿ ರಾಜ್ಯ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ರಾಜ್ಯ ಉಪಾಧ್ಯಕ್ಷರಾಗಿ ಕೆ.ವಿ. ಭಟ್, ದೇವದಾಸ್, ಡಿ.ನಾಗಲಕ್ಷ್ಮಿ, ಎಂ. ಉಮಾದೇವಿ, ಎನ್.ಎಸ್. ವೀರೇಶ್, ಚಂದ್ರಶೇಖರ ಮೇಟಿ, ಟಿ.ಸಿ. ರಮಾ, ಪಿ.ಎಸ್. ಷಣ್ಮುಗಂ, ತಾಯಿದಾಸ್, ಎಚ್.ಟಿ. ಮಲ್ಲಿಕಾರ್ಜುನ್, ಮಂಜುನಾಥ್ ಕೈದಾಳೆ ಹಾಗೂ ಕಾರ್ಯದರ್ಶಿಯಾಗಿ ಕೆ. ಸೋಮಶೇಖರ್ ಯಾದಗಿರಿ ಆಯ್ಕೆಯಾದರು.

ಸೆಕ್ರೆಟರಿಯೇಟ್ ಸದಸ್ಯರಾಗಿ ಡಿ.ಉಮಾದೇವಿ, ವಿ.ಜಿ. ದೇಸಾಯಿ, ಎಸ್.ಎಂ. ಶರ್ಮ, ಜಿ. ಹನುಮೇಶ್, ಗಂಗಾಧರ ಬಡಿಗೇರ, ಪ್ರಮೋದ್, ಪಿ.ಎಸ್. ಸಂಧ್ಯಾ, ಮಂಜುನಾಥ್ ಕುಕ್ಕವಾಡ, ಮಹೇಶ ನಾಡಗೌಡ ಆಯ್ಕೆಯಾದರು. 33 ಕಾರ್ಯಕಾರಿ ಸದಸ್ಯರು ಸೇರಿದಂತೆ ಒಟ್ಟು 171 ಮಂದಿಯನ್ನು ಸಮಿತಿಗೆ ಆಯ್ಕೆ ಮಾಡಲಾಯಿತು. ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಬಲವಾದ ಹೋರಾಟ ರೂಪಿಸಲು ನಿರ್ಣಯಿಸಲಾಯಿತು.

'ವಿಎಚ್‌ಪಿ ಕಾರ್ಯಕ್ರಮಕ್ಕೆ ಹೋದರೆ ತಪ್ಪೇನು'

ಮಂಗಳೂರು: 'ನಾನು ಹಿಂದೂ, ನನ್ನ ಧರ್ಮ ಬಿಡಲು ಸಿದ್ಧನಿಲ್ಲ. ಬೇರೆ ಧರ್ಮವನ್ನು ನಾನು ವಿರೋಧಿಸಲ್ಲ. ವಿಶ್ವ ಹಿಂದು ಪರಿಷತ್‌ನವರು ತಮ್ಮ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದ್ದರಿಂದ ಹೋಗಿದ್ದೆ. ಇದರಲ್ಲಿ ತಪ್ಪೇನಿದೆ? ನಾನು ಅಲ್ಲಿ ಭಾಷಣ ಮಾಡಿಲ್ಲ. ಅವರು ನನ್ನನ್ನು ಗೌರವಿಸಿದರು. ನಾನು ಬಿಜೆಪಿ ಕಾರ್ಯಕ್ರಮ ಅಥವಾ ಬಿಜೆಪಿ ಕಚೇರಿಗೆ ಹೋಗಿಲ್ಲ' ಎಂದು ಶಾಸಕ ಅಶೋಕ್ ಕುಮಾರ್ ರೈ ಸ್ಪಷ್ಟಪಡಿಸಿದರು.



ಅಶೋಕ್ ಕುಮಾರ್ ರೈ

ಪುತ್ತೂರಲ್ಲಿ ನಡೆದ ವಿಎಚ್‌ಪಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕೆ ಕೆಲವರು ವ್ಯಕ್ತಪಡಿಸಿರುವ ಟೀಕೆಗೆ ಪ್ರತಿಕ್ರಿಯಿಸಿದ ಅವರು, 'ನನ್ನನ್ನು ಶಾಸಕನ್ನಾಗಿ ಮಾಡಿದ್ದು ಕಾಂಗ್ರೆಸ್. ನಾನು ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರುವ ಪ್ರಶ್ನೆಯೇ ಇಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

'ಬೆಂಗಳೂರು ಕಂಬಳ ವಿರೋಧಿಸಿ ಹೈಕೋರ್ಟ್‌ಗೆ ಪೆಟಾ ಅರ್ಜಿ ಸಲ್ಲಿಸಿದೆ. ಅವರಿಗೆ ಅಮೆರಿಕದಿಂದ ಹಣ ಬರುತ್ತದೆ. ಇಲ್ಲಿ ಹೋರಾಡುತ್ತಾರೆ. ಒಂದು ಪ್ರಾಣಿಯನ್ನೂ ಅವರು ಸಾಕುವುದಿಲ್ಲ. ಬೇಕಿದ್ದರೆ ನಮ್ಮ ಕೋಣಗಳನ್ನು ಕೊಡುತ್ತೇವೆ. ಒಂದು ತಿಂಗಳು ಸಾಕಲಿ ನೋಡೋಣ' ಎಂದರು.

ಹೊನವಾಡ ರೈತರಿಗೆ ನೋಟಿಸ್ ನೀಡಿಲ್ಲ– ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿಕೆ

ವಕ್ಫ್ ಆಸ್ತಿ ವಿವಾದ: ಟಾಸ್ಕ್ ಫೋರ್ಸ್ ರಚನೆ

ಪ್ರಜಾವಾಣಿ ವಾರ್ತೆ

ವಿಜಯಪುರ: 'ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ಆಸ್ತಿ ಕುರಿತು ಉಂಟಾಗಿರುವ ಗೊಂದಲ, ವಿವಾದವನ್ನು ಪರಿಹರಿಸುವ ನಿಟ್ಟನಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗುವುದು. ಈ ಟಾಸ್ಕ್ ಫೋರ್ಸ್ 1974 ರ ಗೆಜೆಟ್ ಪೂರ್ವದ ಜಿಲ್ಲೆಯ ಎಲ್ಲ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿ, ಈಗ ಉಂಟಾಗಿರುವ ಗೊಂದಲ ಬಗೆಹರಿಸಲಿದೆ' ಎಂದು ಜಿಲ್ಲಾಉಸ್ತುವಾರಿ ಹಾಗೂ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.



ಎಂ.ಬಿ ಪಾಟೀಲ

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಕ್ಫ್ ಆಸ್ತಿ ವಿಷಯವಾಗಿ ವಿಜಯಪುರ ಜಿಲ್ಲೆಯಲ್ಲಿ ಕೆಲ ರಾಜಕಾರಣಿಗಳು ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ. ಹಿಂದೂಗಳ ಭೂಮಿಯನ್ನು ಮುಸ್ಲಿಮರಿಗೆ ಹಂಚಲಾಗುತ್ತಿದೆ ಎಂದು ಮಾಧ್ಯಮಗಳ ಮೂಲಕ ರಾಜ್ಯ, ರಾಷ್ಟ್ರಮಟ್ಟದಲ್ಲಿ ವಿವಾದ ಎಬ್ಬಿಸಿದ್ದಾರೆ' ಎಂದು ದೂರಿದರು.

'ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದಲ್ಲಿ ರೈತರಿಗೆ ಸೇರಿದ 1,200 ಎಕರೆ ಭೂಮಿ ವಕ್ಫ್ ಆಸ್ತಿಯಾಗಿದೆ ಎಂದು ಗೊಂದಲ ಉಂಟು ಮಾಡಲಾಗಿದೆ. ಹೊನವಾಡದಲ್ಲಿ 10 ಎಕರೆ 29 ಗುಂಟೆ ಮಾತ್ರ ವಕ್ಫ್ ಆಸ್ತಿ ಇದೆ. ಈ ಕುರಿತ ವಿವಾದ ಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ. ಉಳಿದಂತೆ ಒಂದೇ ಒಂದು ಎಕರೆ ರೈತರ ಭೂಮಿ ವಕ್ಫ್ ಆಸ್ತಿಯಲ್ಲ. ಈ ಸಂಬಂಧ ಯಾರಿಗೂ ನೋಟಿಸ್ ನೀಡಿಲ್ಲ. ರೈತರ ಹೆಸರಿನಲ್ಲೇ ಆಸ್ತಿ ಇದೆ. ಉತಾರದಲ್ಲೂ ರೈತರ ಹೆಸರೇ ಇದೆ' ಎಂದು ಸ್ಪಷ್ಟಪಡಿಸಿದರು.

'ವಿಜಯಪುರ ಜಿಲ್ಲೆಯಲ್ಲಿ ಈ ಮೊದಲು ಒಟ್ಟು 14,201 ಎಕರೆ ವಕ್ಫ್ ಆಸ್ತಿ ಇತ್ತು. ಇದರಲ್ಲಿ 1,459 ಎಕರೆ ಭೂಮಿ ಇನಾಂ ರದ್ದು ಕಾಯ್ದೆಯಡಿ ವಕ್ಫ್ ಕೈತಪ್ಪಿ ಹೋಗಿದೆ. ಭೂಸುಧಾರಣೆ ಕಾಯ್ದೆಯಡಿ 11,835 ಎಕರೆ ರೈತರಿಗೆ ಹಂಚಿಕೆಯಾಗಿದೆ ಮತ್ತು ವಿವಿಧ ಯೋಜನೆಗಳಿಗೆ 939 ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಇನ್ನುಳಿದಂತೆ ಕೇವಲ 773 ಎಕರೆ ಮಾತ್ರ ವಕ್ಫ್ ಹೆಸರಿನಲ್ಲಿ ಇದೆ' ಎಂದರು.

'ಇನಾಂ ರದ್ದು ಕಾಯ್ದೆ ಮತ್ತು ಭೂಸುಧಾರಣೆ ಕಾಯ್ದೆಯಡಿ ರೈತರಿಗೆ ಹಂಚಿಕೆಯಾಗಿರುವ ಆಸ್ತಿ ಕುರಿತು ಇದುವರೆಗೂ ಇಂಡೀಕರಣ ಆಗದೇ ಇರುವುದರಿಂದ ವಕ್ಫ್ ಹೆಸರು ಇದ್ದು, ಇದನ್ನು ತೆಗೆದುಹಾಕುವ ಸಂಬಂಧ ಕಾನೂನು ಸಲಹೆ ಪಡೆದು ಸರ್ಕಾರ ಮುಂದಿನ ಹೆಜ್ಜೆ ಇಡಲಿದೆ' ಎಂದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪ ವಿಭಾಗಾಧಿಕಾರಿ ಅಬೀದ ಗದ್ಯಾಳ, ವಿಜಯಪುರ ತಹಶೀಲ್ದಾರ್ ಪ್ರಶಾಂತ ಚನಗೊಂಡ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ವಕ್ಫ್ ಇಲಾಖೆ ಅಧಿಕಾರಿ ತಬಸ್ಸುಮ್ ಎಂ. ಮೊಹಸೀನ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

'15 ಸಾವಿರ ಎಕರೆ ಕಬಳಿಸಲು ಹುನ್ನಾರ'

ಬೆಂಗಳೂರು: 'ರಾಜ್ಯ ಸರ್ಕಾರವು ವಕ್ಫ್ ಮಂಡಳಿ ಜತೆ ಸೇರಿ ವಿಜಯಪುರ ಜಿಲ್ಲೆಯಲ್ಲಿ ರೈತರಿಂದ 15 ಸಾವಿರ ಎಕರೆ ಕೃಷಿ ಭೂಮಿ ಕಬಳಿಸಲು ಮುಂದಾಗಿದೆ' ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಆರೋಪಿಸಿದ್ದಾರೆ.

'ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಕೃಷಿ ಮಾಡಿಕೊಂಡು ಬಂದಿದ್ದ ರೈತರಿಗೆ ವಕ್ಫ್ ಮಂಡಳಿ ನೋಟಿಸ್ ನೀಡಿದೆ. ವಕ್ಫ್ ಹೆಸರಿನಲ್ಲಿ ರೈತರಿಂದ ಭೂಮಿ ಕಿತ್ತುಕೊಳ್ಳಲು ಹೊರಟಿದೆ. ಇವರಲ್ಲಿ ಬಹುತೇಕರು ಪರಿಶಿಷ್ಟ ಸಮುದಾಯದವರು. ಅವರಿಗೆ ನೋಟಿಸ್ ಕೊಟ್ಟು ಭೂಮಿ ಕಿತ್ತುಕೊಳ್ಳುವ ಮೂಲಕ ತುಘಲಕ್ ಆಡಳಿತ ಹೇರಲು ಪ್ರಯತ್ನಿಸಿದೆ' ಎಂದು ದೂರಿದರು.

'ವಕ್ಫ್ ಕಾಯ್ದೆಗೆ ತಿದ್ದುಪಡಿ ಕುರಿತು ಲೋಕಸಭೆ ಜಂಟಿ ಸದನ ಸಮಿತಿಯಲ್ಲಿ ಚರ್ಚೆ ನಡೆದಿದೆ. ಅಷ್ಟರೊಳಗೆ ಭೂಮಿ ಕಸಿಯುವ ಹುನ್ನಾರ ನಡೆದಿದೆ. ಸರ್ಕಾರ ಮತ್ತು ವಕ್ಫ್ ಮಂಡಳಿಗೆ 15 ದಿನ ಗಡುವು ನೀಡುತ್ತಿದ್ದೇವೆ. ಅಷ್ಟರೊಳಗೆ ಪಹಣಿ ತಿದ್ದುಪಡಿ ಮಾಡಿ ಯಾವ ರೈತರ ಹೆಸರಿನಲ್ಲಿತ್ತೋ ಅವರಿಗೆ ಜಮೀನು ಮಾಡಿಕೊಡಬೇಕು. ಇಲ್ಲವಾದರೆ ರಾಜ್ಯವ್ಯಾಪಿ ಬೃಹತ್ ಹೋರಾಟ ಸಂಘಟಿಸಲಾಗುವುದು' ಎಂದು ಕಾರಜೋಳ ಎಚ್ಚರಿಕೆ ನೀಡಿದರು.

29 ರಂದು ಬಿಜೆಪಿ ಸಮಿತಿ ಭೇಟಿ

ವಕ್ಫ್ ಮಂಡಳಿಯಿಂದ ವಿಜಯಪುರ ಜಿಲ್ಲೆಯಲ್ಲಿ ರೈತರಿಗೆ ಆಗಿರುವ ಸಮಸ್ಯೆಗಳ ಬಗ್ಗೆ ಅಹವಾಲು ಕೇಳಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಮಿತಿಯೊಂದನ್ನು ರಚಿಸಿದ್ದು, ಸಮಿತಿ ಇದೇ 29 ರಂದು ವಿಜಯಪುರಕ್ಕೆ ಭೇಟಿ ನೀಡಲಿದೆ. ಸಮಿತಿಯಲ್ಲಿ ಸಂಸದ ಗೋವಿಂದ ಕಾರಜೋಳ, ಶಾಸಕರಾದ ಹರೀಶ್ ಪೂಂಜಾ, ಮಹೇಶ್ ಟೆಂಗಿನಕಾಯಿ, ವಿಧಾನಪರಿಷ್‌ನ ಮಾಜಿ ಸದಸ್ಯ ಅರುಣ್ ಶಹಾಪುರ, ಬಿಜೆಪಿ ರೈತ ಮೋರ್ಚಾ ಪ್ರಧಾನಕಾರ್ಯದರ್ಶಿ ಕಲ್ಮರುಡಪ್ಪ ಇದ್ದಾರೆ.

'ವಕ್ಫ್ ಬೋರ್ಡ್ ರದ್ದು ಮಾಡಬೇಕು'

ಬಾಗಲಕೋಟೆ: 'ವಕ್ಫ್ ನಿಯಮ ಸಡಿಲಿಸುವುದಲ್ಲ, ವಕ್ಫ್ ಬೋರ್ಡ್ ರದ್ದು ಮಾಡಬೇಕು' ಎಂದು ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ ಆಗ್ರಹಿಸಿದರು.

ವಿಜಯಪುರದಲ್ಲಿ ರೈತರಿಗೆ ವಕ್ಫ್ ಜಮೀನು ಎಂದು ವಕ್ಫ್ ಬೋರ್ಡ್‌ನಿಂದ ನೀಡಿರುವ ನೋಟಿಸ್‌ಗೆ ಸಂಬಂಧಿಸಿದಂತೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ನವರು ಮುಸ್ಲಿಂರನ್ನು ಓಲೈಸಲು ವಕ್ಫ್ ಬೋರ್ಡ್ ಮಾಡಿದ್ದಾರೆ. ಮುಂದೊಂದು ದಿನ ಅವರಿಗೂ ಮುಳುವಾಗುತ್ತದೆ' ಎಂದರು.

'ದೇಶದ ತುಂಬೆಲ್ಲ ವಕ್ಫ್ ಬೋರ್ಡ್ ಆಸ್ತಿ ಎಂದು ನೋಟಿಸ್ ನೀಡುತ್ತಿದ್ದಾರೆ. ನೂರಾರು ವರ್ಷಗಳ ಹಿಂದಿನ ದೇವಸ್ಥಾನಗಳ ಆಸ್ತಿಯನ್ನೂ ತಮ್ಮದು ಎನ್ನುತ್ತಿದ್ದಾರೆ. ಚಳಿಗಾಲ ಅಧಿವೇಶನದಲ್ಲಿ ತಿದ್ದುಪಡಿ ತರಲಿದ್ದಾರೆ. ತಿದ್ದುಪಡಿ ಬೇಡ, ದೇಶಕ್ಕೆ ವಕ್ಫ್ ಅವಶ್ಯಕತೆ ಇಲ್ಲ.



ನಾರಾಯಣ ಭಾಂಡಗೆ

ರದ್ದುಗೊಳಿಸುವಂತೆ ಒತ್ತಾಯಿಸುತ್ತೇನೆ' ಎಂದರು.

'ಅಜ್ಜ, ಮುತ್ತಜ್ಜನ ಕಾಲದಿಂದ ಉಳುಮೆ ಮಾಡುವ ಜಮೀನುಗಳಿಗೆ ನೋಟಿಸ್ ನೀಡಿದ್ದಾರೆ. ಅವರು ಹೇಳಿದರೆ ಆಸ್ತಿ ವಕ್ಫ್‌ನದ್ದು ಆಗುತ್ತದೆಯಾ' ಎಂದು ಅವರು ಪ್ರಶ್ನಿಸಿದರು.

'ಸಚಿವ ಜಮೀರ್ ಅಹ್ಮದ್‌ನದ್ದೇ ಉಪದ್ವ್ಯಾಪಿತನ. ಅವ ಹಿಂದೂಗಳ ಮೇಲೆ ಕೆಂಡ ಕಾರುವ ಮಾತನಾಡುತ್ತಾನೆ. ಅತ್ಯಂತ ಕೋಮುವಾದಿ. ಇವನನ್ನು ಕಾಂಗ್ರೆಸ್ ನಿಯಂತ್ರಣ ಮಾಡಬೇಕು' ಎಂದರು.

'ಈಗಾಗಲೇ ಅವನ ಕಾರಿಗೆ ಕಲ್ಲು ಒಗೆದಿದ್ದಾರಂತೆ. ಜನರ ರೊಚ್ಚಿಗೇಳದಂತೆ ಎಚ್ಚರದಿಂದ ಇರಬೇಕು' ಎಂದು ಭಾಂಡಗೆ ಹೇಳಿದರು.

ವಕ್ಫ್ ಆಸ್ತಿಯನ್ನು ಅಕ್ರಮವಾಗಿ ಹೆಚ್ಚಿಸಲು ವ್ಯವಸ್ಥಿತ ಪಿತೂರಿ ನಡೆದಿದೆ. ಇದಕ್ಕೆ ಜಮೀರ್ ಅವರೇ ಕಾರಣರು. ಆದ್ದರಿಂದ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು

ಎನ್.ರವಿಕುಮಾರ್, ಬಿಜೆಪಿಯ ವಿಧಾನಪರಿಷತ್ ಸದಸ್ಯ





ಒಂದು ಇಂಚು ರೈತರ ಭೂಮಿಯನ್ನು ಬಿಟ್ಟುಕೊಡುವುದಿಲ್ಲ ವಕ್ಫ್ ಕಾನೂನು ಸಂಪೂರ್ಣ ತೊಲಗಬೇಕಿದೆ. ರೈತರಿಗೆ ಉಚಿತ ಕಾನೂನು ಸಲಹೆ ನೀಡಲಾಗುವುದು. ಇದರ ವಿರುದ್ಧ ಪಿಐಎಲ್ ಸಲ್ಲಿಸಲಾಗುವುದು

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಮುಕ್ತ ವಿ.ವಿ ಕುಲಪತಿಗೆ ನೋಟಿಸ್

ಒಂದನೇ ಪುಟದಿಂದ...

ಆಗ ವಿಶ್ವವಿದ್ಯಾಲಯದವರು, ಮಾಹಿತಿ ನೀಡಲು ಆಗುವುದಿಲ್ಲವೆಂದು ಹೇಳಿದ್ದರು. ಆದರೆ, ಯಾವ ನಿಯಮದಡಿ ಮಾಹಿತಿ ನೀಡಲು ಬರುವುದಿಲ್ಲವೆಂದು ಹೇಳಿರಲಿಲ್ಲ. ಇದನ್ನು ಪ್ರಶ್ನಿಸಿ ಸತ್ಯನಾರಾಯಣ ಆಯೋಗಕ್ಕೆ ದೂರು ನೀಡಿದ್ದರು.

'ಕೆಎಸ್‌ಒಯು ಅಧಿಕಾರಿಗಳು 30 ದಿನಗಳ ಕಾಲಮಿತಿಯಲ್ಲಿ ಮಾಹಿತಿ ನೀಡದೇ ನನ್ನನ್ನು ಕಚೇರಿಗೆ ಅಲೆದಾಡಿಸಿದ್ದಾರೆ. ಹೀಗಾಗಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದೆ. ಪ್ರತಿನಿಧಿ ಕಳುಹಿಸದೇ ನೇರವಾಗಿ ವಿಚಾರಣೆಗೆ ಕುಲಪತಿಯೇ ಹಾಜರಾಗುವಂತೆ ಆಯೋಗ ಹೇಳಿರುವುದು ಆರ್‌ಟಿಐ ಇತಿಹಾಸದಲ್ಲಿ ಇದೇ ಮೊದಲ ಬಾರಿಯಾಗಿದೆ' ಎಂದು ಸತ್ಯನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ವಾಮೀಜಿಯಲ್ಲಿ ಕ್ಷಮೆ ಕೇಳಲಿ'

ಬೆಂಗಳೂರು:'ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿಯವರನ್ನು ಟೀಕೆಗೆ ಬಳಸಿರುವುದು ಅವರ ಹಿರಿತನ ಕುಗ್ಗಿಸಿದೆ. ರಾಜಕಾರಣದ ಕೆಸರನ್ನು ಆಧ್ಯಾತ್ಮಿಕ ತಪಸ್ವಿಗಳ ಮೇಲೆ ಎರಚುವುದು ಸಜ್ಜನಿಕೆ ಇಲ್ಲದ ವ್ಯಕ್ತಿತ್ವ ತೋರಿಸುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿ 'ಹರಿಪ್ರಸಾದ್ ಅವರು ತಮ್ಮ ಟೀಕೆಯನ್ನು ವಾಪಸ್ ಪಡೆದು ಸ್ವಾಮೀಜಿಯವರಲ್ಲಿ ಕ್ಷಮೆ ಯಾಚಿಸ ಬೇಕು ಎಂದು ವಿಜಯೇಂದ್ರ ಒತ್ತಾಯಿಸಿದ್ದಾರೆ.

ಬುಡಕಟ್ಟು ಜನರ 1,800 ಕುಟುಂಬಕ್ಕೆ ವಿದ್ಯುತ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ವಾಸವಾಗಿರುವ ಬುಡಕಟ್ಟು ಸಮುದಾಯದ 1,854 ಕುಟುಂಬಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 42 ಕೋಟಿ ವೆಚ್ಚದಲ್ಲಿ ಭೂಗತ (ಯುಜಿ) ಕೇಬಲ್ ಅಳವಡಿಕೆ ಕಾಮಗಾರಿ ಶೀಘ್ರ ಆರಂಭವಾಗಲಿದೆ.

ಜಿಲ್ಲಾಡಳಿತ ಹಾಗೂ 'ಸೆಸ್ಕ್'ನಿಂದ 15 ದಿನಗಳಲ್ಲಿ ಕಾಮಗಾರಿ ಆರಂಭವಾಗಲಿದೆ. 4 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಉದ್ದೇಶಿತ ಕಾಮಗಾರಿ ಪೂರ್ಣಗೊಂಡರೆ ಮೊದಲ ಬಾರಿಗೆ ಆದಿವಾಸಿಗಳ ಹಾಡಿಗೆ ವಿದ್ಯುತ್ ಸಂಪರ್ಕ ದೊರೆತಂತಾಗಲಿದೆ.

ಹಿಂದೆ ವಿದ್ಯುತ್ ಕಂಬಗಳ ಮೂಲಕ ವಿದ್ಯುತ್ ಸಂಪರ್ಕ ನೀಡುವ ಪ್ರಸ್ತಾವಕ್ಕೆ ಅರಣ್ಯ ಇಲಾಖೆ ತಡೆಯೊಡ್ಡಿತ್ತು. ಕಾಡಿನೊಳಗೆ ವಿದ್ಯುತ್ ಮಾರ್ಗ ಬಂದರೆ ವಿದ್ಯುತ್ ಅವಘಡಗಳು ಸಂಭವಿಸಿ ವನ್ಯಜೀವಿಗಳಿಗೆ ಅಪಾಯವಾಗಬಹುದು ಹಾಗೂ ಅರಣ್ಯಕ್ಕೆ ಹಾನಿಯಾಗಬಹುದು ಎಂಬ ಕಾರಣಕ್ಕೆ ಪ್ರಸ್ತಾವ ತಿರಸ್ಕರಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದರು.

'ಹಾಡಿಗಳಿಗೆ ಸೋಲಾರ್ ಉಪಕರಣಗಳ ಮೂಲಕ ವಿದ್ಯುತ್ ಸಂಪರ್ಕ ನೀಡುವ ಪ್ರಯತ್ನ ನಡೆದಿದ್ದರೂ, ನಿರೀಕ್ಷಿತ ಯಶಸ್ಸು ದೊರೆತಿರಲಿಲ್ಲ. ಈಗ ಯುಜಿ ಕೇಬಲ್ ಅಳವಡಿಕೆಯಿಂದ ವಿದ್ಯುತ್ ಸಂಪರ್ಕ ದೊರೆತರೆ ಆದಿವಾಸಿಗಳ ಜೀವನಮಟ್ಟ ಸುಧಾರಿಸಲಿದೆ. 1,854 ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಸಿಗಲಿದೆ' ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು. 'ಜಿಲ್ಲಾಡಳಿತ ಅರಣ್ಯ ಇಲಾಖೆಯಿಂದ ಅನುಮತಿ ಕೋರಿ 6 ತಿಂಗಳ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಈಗ ಯೋಜನೆ ಅಂತಿಮ ಹಂತದಲ್ಲಿದೆ. ಸಿ.ಎಂ ಸೂಚನೆಯಂತೆ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ 15 ದಿನದಲ್ಲಿ ಆರಂಭವಾಗಲಿದೆ' ಎಂದು ತಿಳಿಸಿದರು.



'ಹಾಡಿಗಳಿಗೆ ಭೂಗತ ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಸ್ತಾವ ಸಂಬಂಧ ಎರಡು ಪ್ರದೇಶಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ಬಾಕಿ ಇದೆ. ಪ್ರಾಣಿಗಳ ಆವಾಸಸ್ಥಾನಕ್ಕೆ ಅಡಚಣೆಯಾಗದಂತೆ, ಕನಿಷ್ಠ ಹಸ್ತಕ್ಷೇಪದೊಂದಿಗೆ ಪ್ರಸ್ತಾವವನ್ನು ಪರಿಷ್ಕರಿಸಲಾಗಿದೆ' ಎಂದು ಮಲೆ ಮಹದೇಶ್ವರ ಬೆಟ್ಟ ವಿಭಾಗದ ಉಪ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್ ಹೇಳಿದರು.

'ಅರಣ್ಯದೊಳಗೆ ವಿದ್ಯುತ್ ಅವಘಡಗಳು ಸಂಭವಿಸಬಹುದು ಎಂಬ ಕಾರಣಕ್ಕೆ ವಿದ್ಯುತ್ ಕಂಬಗಳ ಮೂಲಕ ಆದಿವಾಸಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಸ್ತಾವವನ್ನು ಹಿಂದೆ ಅರಣ್ಯ ಇಲಾಖೆ ತಿರಸ್ಕರಿಸಿತ್ತು. ಮುಂದೆ ಮಡಿಕೇರಿ, ಹಾಸನ, ಸಕಲೇಶಪುರ ತಾಲ್ಲೂಕಿನ ಹಾಡಿಗಳಲ್ಲೂ ಇಂತಹ ಯೋಜನೆ ಜಾರಿಗೊಳಿಸುವ ಉದ್ದೇಶವಿದೆ' ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ತಿಳಿಸಿದರು.

'ಪ್ರವರ್ಗ1ಕ್ಕೆ ಹಳ್ಳಿಕಾರ ಸೇರ್ಪಡೆ, ಪರಿಶೀಲನೆ'

ಹಳ್ಳಿಕಾರರ ಸಮಾವೇಶದಲ್ಲಿ ಸಮುದಾಯದ ಬೇಡಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಬಹಳ ಹಿಂದುಳಿದಿರುವ ಹಳ್ಳಿಕಾರರ ಸಮುದಾಯವನ್ನು ಪ್ರವರ್ಗ–1ಕ್ಕೆ ಸೇರಿಸುವ ಸಂಬಂಧ ಕೂಡಲೇ ವರದಿಯನ್ನು ತರಿಸಿಕೊಂಡು, ಪರಿಶೀಲಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಹಳ್ಳಿಕಾರರ ಸಂಘವು ಇಲ್ಲಿ ಆಯೋಜಿಸಿದ್ದ 'ಹಳ್ಳಿಕಾರರ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಪ್ರವರ್ಗ–1ರ ಅಡಿಯಲ್ಲಿ ಮೀಸಲಾತಿ ಪಡೆಯುವ ಎಲ್ಲ ಅರ್ಹತೆಗಳನ್ನೂ ಈ ಸಮುದಾಯ ಹೊಂದಿದೆ. ಸಮುದಾಯವನ್ನು ಪ್ರವರ್ಗ–3ಎಗೆ ಸೇರಿಸಿದ್ದು ಸಮಂಜಸವಲ್ಲ' ಎಂದರು.

'ಯಾವುದೇ ಸಮುದಾಯವನ್ನು ಪ್ರವರ್ಗ–1ಕ್ಕೆ ಸೇರಿಸುವ ಅಧಿಕಾರ ಹಿಂದುಳಿದ ವರ್ಗಗಳ ಆಯೋಗದ ವ್ಯಾಪ್ತಿಗೆ ಬರುತ್ತದೆ. ಜಾತಿ ಗಣತಿ ದತ್ತಾಂಶಗಳು ಮತ್ತು ಹಳ್ಳಿಕಾರರು ಇಡಬ್ಲ್ಯುಎಸ್ (ಆರ್ಥಿಕವಾಗಿ ದುರ್ಬಲ ವರ್ಗಗಳು) ವ್ಯಾಪ್ತಿಗೆ ಬರುತ್ತೆಯೇ ಎಂಬುದನ್ನು ಪರಿಶೀಲಿಸಲಾಗುತ್ತದೆ. ಅದರ ಆಧಾರದಲ್ಲಿ ಶಿಫಾರಸು ಮಾಡುತ್ತೇವೆ' ಎಂದರು.

'1941ರಲ್ಲಿ ಜಾತಿಗಣತಿ ನಡೆದರೂ, ವಿಶ್ವಯುದ್ಧದ ಕಾರಣ ಬಹಿರಂಗವಾಗಲಿಲ್ಲ. ಯಾವ ಸಮುದಾಯಗಳ ಶಿಕ್ಷಣ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಹೇಗಿದೆ ಎಂಬುದರ ದತ್ತಾಂಶ, ಅದನ್ನು ಕಲೆಹಾಕುವ ಸಮೀಕ್ಷೆಯ ವ್ಯವಸ್ಥೆ ದೇಶದಲ್ಲಿ ಇಲ್ಲ. ಇದನ್ನು ಜಾತಿ ಗಣತಿಯಿಂದ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ. ಹೀಗಾಗಿ ಜಾತಿಗಣತಿ ನಡೆಸಲಾಗಿದೆ. ಅದರ ವರದಿ ಬಂದಿದೆ. ಸರ್ಕಾರ ಸ್ವೀಕರಿಸಿದೆ. ಅದನ್ನು ನಾನಿನ್ನೂ ನೋಡಬೇಕಿದೆ' ಎಂದರು.

'ಶಿಕ್ಷಣದಿಂದ ವಂಚಿತವಾಗಿರುವ ಸಮುದಾಯವು ಸಮಾಜದ ಎಲ್ಲ ಕಡೆ ತನ್ನ ನ್ಯಾಯಬದ್ಧ ಪಾಲು ಪಡೆದುಕೊಳ್ಳುವುದು ಸಾಧ್ಯವಿಲ್ಲ. ಪಶುಸಂಗೋಪನೆಯಲ್ಲಿ ತೊಡಗಿರುವ ಹಳ್ಳಿಕಾರರ ಸಮುದಾಯವು ಶಿಕ್ಷಣದಲ್ಲಿ ಹಿಂದೆ ಉಳಿದಿದೆ. ಈ ಸಮುದಾಯದ ಯಾರೂ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಇಲ್ಲ. ಶಿಕ್ಷಣ ಇಲ್ಲದಿದ್ದರೆ, ಅವರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವುದೇ ಇಲ್ಲ. ಹೀಗಾಗಿ ನೀವು ಶಿಕ್ಷಣ ಪಡೆದುಕೊಳ್ಳಬೇಕು' ಎಂದು ಕರೆ ನೀಡಿದರು.

ಸಮಾವೇಶದಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ವೀರಪ್ಪ ಮೊಯ್ಲಿ ಅವರು, ರಾಜ್ಯ ಸರ್ಕಾರವು ಜಾತಿ ಗಣತಿ ವರದಿಯನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಹಳ್ಳಿಕಾರರ ಸಂಘದ ಪದಾಧಿಕಾರಿಗಳು, ನಾಯಕರು, ಸಚಿವ ರಾಮಲಿಂಗಾರೆಡ್ಡಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಶಾಸಕರಾದ ಎಂ.ಕೃಷ್ಣಪ್ಪ ಮತ್ತು ಪ್ರಿಯಕೃಷ್ಣ ಅವರು ಭಾಗಿಯಾಗಿದ್ದರು.



ಹಳ್ಳಿಕಾರರ ಸಮಾವೇಶದಲ್ಲಿ ಶ್ರೀಕೃಷ್ಣ ಮೂರ್ತಿಗೆ ಸಲ್ಲಿಸಿದ ಪೂಜೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದರು

ಶೀಘ್ರವೇ ಕ್ರಮ: ಡಿಕೆಶಿ



'ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರೂ ಹಳ್ಳಿಕಾರ ಸಮಾಜದವರೇ. ಸರ್ಕಾರ ನಿಮ್ಮ ಜತೆಗಿದೆ. ನಿಮ್ಮ ಬೇಡಿಕೆಗಳ ಬಗ್ಗೆ ಚರ್ಚಿಸಿ, ಶೀಘ್ರವೇ ಕ್ರಮತೆಗೆದುಕೊಳ್ಳುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಈ ಸಮುದಾಯಕ್ಕೆ 1,200 ವರ್ಷಗಳ ಇತಿಹಾಸವಿದೆ. ಆದರೆ ಸಮುದಾಯ ಹಲವು ದಶಕಗಳಿಂದ ಹೀಗೆ ಒಟ್ಟಾಗಿರಲಿಲ್ಲ, ಸಮಾವೇಶ ನಡೆಸಿರಲಿಲ್ಲ. 80 ವರ್ಷಗಳ ನಂತರ ಸಮಾವೇಶ ನಡೆಸುತ್ತಿದ್ದೀರಿ. ಈ ಒಗ್ಗಟ್ಟನ್ನು ಹೀಗೇ ಮುಂದುವರೆಸಿಕೊಂಡು ಹೋಗಿ' ಎಂದು ಸಲಹೆ ಮಾಡಿದರು.

'ಹಿಂದುಳಿದಿದ್ದರೂ, ಮುಂದುವರೆದವರ ಜತೆ'

'ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದಿದ್ದರೂ ಹಳ್ಳಿಕಾರರನ್ನು ಮುಂದುವರೆದ ಸಮುದಾಯಗಳ ಜತೆಗೆ ಪ್ರವರ್ಗ–3ಎಗೆ ಸೇರಿಸಿದ್ದು, ಸಮುದಾಯ ಎಲ್ಲ ಸವಲತ್ತುಗಳಿಂದ ವಂಚಿತವಾಗಿದೆ' ಎಂದು ಕರ್ನಾಟಕ ರಾಜ್ಯ ಹಳ್ಳಿಕಾರರ ಸಂಘದ ಉಪಾಧ್ಯಕ್ಷ ಕೆ.ಎಂ.ನಾಗರಾಜ್ ಹೇಳಿದರು.

'ಈ ಅನ್ಯಾಯವನ್ನು ಸರಿಪಡಿಸಬೇಕು. ಹಳ್ಳಿಕಾರರನ್ನು ಪ್ರವರ್ಗ–3ರಿಂದ ತೆಗೆದು, ಪ್ರವರ್ಗ–1ಕ್ಕೆ ಸೇರಿಸಬೇಕು. ಸಮುದಾಯದವರ ಸಂಖ್ಯೆ ಹೆಚ್ಚು ಇರುವ 22 ತಾಲ್ಲೂಕು ಕೇಂದ್ರಗಳಲ್ಲಿ ವಸತಿಶಾಲೆ ಆರಂಭಿಸಬೇಕು' ಎಂದು ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಸೈಬರ್ ವಂಚನೆ ತಡೆಗೆ ಕ್ರಮ

ಒಂದನೇ ಪುಟದಿಂದ...

ನೀವು ತಕ್ಷಣಕ್ಕೇ ನಮ್ಮ ವಿಡಿಯೊ ಕಣ್ಗಾವಲಿಗೆ ಬರಬೇಕು ಎಂದು ವಾಟ್ಸ್‌ಆ್ಯಪ್ ಅಥವಾ ಸ್ಕೈಪ್ ವಿಡಿಯೊಕಾಲ್ ಮಾಡುತ್ತಾರೆ. ಸಂತ್ರಸ್ತರು ಅತ್ತಿತ್ತ ಓಡಾಡದಂತೆ ಮಾಡಿ, ಗಾಬರಿ ಹುಟ್ಟಿಸುತ್ತಾರೆ. ಇದರಿಂದ ನಿಮ್ಮನ್ನು ಬಿಡಬೇಕು ಎಂದರೆ ಹಣ ನೀಡಿ ಎಂದು ದೋಚುತ್ತಾರೆ. ಇದೇ ಡಿಜಿಟಲ್ ಅರೆಸ್ಟ್.

●**ಲಾಟರಿ ಮತ್ತು ಬಹುಮಾನ ವಂಚನೆ:** ದೊಡ್ಡ ಮೊತ್ತದ ಹಣ ಗೆದ್ದಿರುವ ಸಂದೇಶವನ್ನು ಕಳುಹಿಸಲಾಗುತ್ತದೆ. ಅದರ ಪ್ರಕ್ರಿಯೆ ಪೂರ್ಣಗೊಳಿಸಲು ಅಥವಾ ತೆರಿಗೆಯ ರೂಪದಲ್ಲಿ ಒಂದಷ್ಟು ಹಣ ಪಾವತಿಸಬೇಕು ಎಂಬ ಬೇಡಿಕೆ ಇಡುತ್ತಾರೆ.

●ಆನ್‌ಲೈನ್ ಡೇಟಿಂಗ್ ಆ್ಯಪ್‌ಗಳ ಮೂಲಕ ಪರಿಚಯಿಸಿಕೊಂಡು ಭಾವನಾತ್ಮಕವಾಗಿ ಕಟ್ಟಿಹಾಕಿ, ವೈದ್ಯಕೀಯ ಚಿಕಿತ್ಸೆ ಮತ್ತಿತರ ನೆಪಗಳನ್ನು ಮುಂದಿಟ್ಟುಕೊಂಡು ಹಣ ಪಡೆದು ವಂಚಿಸುತ್ತಾರೆ.

●**ಉದ್ಯೋಗ ವಂಚನೆ:** ಉದ್ಯೋಗ ಒದಗಿಸುವ ನೆಪದಲ್ಲಿ ಹಣಕ್ಕೆ ಬೇಡಿಕೆ ಇಡುತ್ತಾರೆ.

●**ಟೆಕ್ ಸಪೋರ್ಟ್ ವಂಚನೆ:** ತಂತ್ರಜ್ಞಾನ ಕುರಿತ ಬಳಕೆದಾರರ ಸೀಮಿತ ಜ್ಞಾನವನ್ನೇ ಬಂಡವಾಳವಾಗಿ ಮಾಡಿಕೊಂಡು, ಸಂತ್ರಸ್ತರ ಕಂಪ್ಯೂಟರ್‌ನ ಪಾಸ್‌ವರ್ಡ್ ಪಡೆದು ವೈಯಕ್ತಿಕ ಮತ್ತು ಗೋಪ್ಯ ಮಾಹಿತಿಯನ್ನು ಕದಿಯುತ್ತಾರೆ.

●**ನಕಲಿ ಮನವಿ ಮೂಲಕ ವಂಚನೆ:** ನಕಲಿ ವೆಬ್‌ಸೈಟ್ ಅಥವಾ ಸಾಮಾಜಿಕ ಜಾಲತಾಣ ಖಾತೆ ತೆರೆದು ವಿಪತ್ತು ಪರಿಹಾರ, ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ಕಾಗಿ ದೇಣಿಗೆ ನೀಡುವಂತೆ ಮನವಿ ಮಾಡುತ್ತಾರೆ.

●ವಂಚಕರು ಇ–ಮೇಲ್ ಅಥವಾ ಜಾಲತಾಣಗಳ ಮೂಲಕ ಸಂಪರ್ಕಿಸಿ, ತಪ್ಪಾಗಿ ನಿಮ್ಮ ಖಾತೆಗೆ ಹಣ ವರ್ಗಾವಣೆಯಾಗಿದೆ. ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಬೇಕೆಂದಿದ್ದರೆ ಕೂಡಲೇ ಹಣ ವರ್ಗಾಯಿಸಿ ಎಂದು ಕೇಳುತ್ತಾರೆ.

●**ಬಂಡವಾಳ ವಂಚನೆ:** ಅಲ್ಪ ಬಂಡವಾಳದಿಂದ ಶೀಘ್ರ ಹಣ ಮಾಡಬಹುದು ಎಂಬ ಆಸೆ ಹುಟ್ಟಿಸಿ, ಹಂತ ಹಂತವಾಗಿ ಹಣ ಕಸಿದುಕೊಂಡು ವಂಚನೆ ಮಾಡುತ್ತಾರೆ.

●**ಕ್ಯಾಶ್ ಆನ್ ಡೆಲಿವರಿ ವಂಚನೆ:** ನಕಲಿ ಆನ್‌ಲೈನ್ ಸ್ಟೋರ್ ಸೃಷ್ಟಿಸಿ 'ಕ್ಯಾಶ್ ಆನ್ ಡೆಲಿವರಿ' ಆಯ್ಕೆ ನೀಡುತ್ತಾರೆ. ಆದರೆ ವಿಳಾಸಕ್ಕೆ ತಲುಪಿದ ವಸ್ತುವು ನಕಲಿಯಾಗಿರುತ್ತದೆ ಅಥವಾ ಆರ್ಡರ್ ಮಾಡಿದ್ದಕ್ಕಿಂತ ಕಳಪೆಯಾಗಿರುತ್ತದೆ.

●**ಫೋನ್ ವಂಚನೆ:** ಟೆಲಿಕಾಂ ನಿಯಂತ್ರಣ ಸಂಸ್ಥೆ ಹೆಸರಿನಲ್ಲಿ ಸಂತ್ರಸ್ತರಿಗೆ ಕರೆ ಮಾಡಿ, 'ಸೇವೆಯಲ್ಲಿ ಸಮಸ್ಯೆ ತಲೆದೋರಿದೆ. ಅದಕ್ಕಾಗಿ ಗುರುತು ಪರಿಶೀಲನೆಗಾಗಿ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಮತ್ತು ಬ್ಯಾಂಕ್ ಮಾಹಿತಿ ಹಂಚಿಕೊಳ್ಳಿ' ಎಂದು ಕೇಳುತ್ತಾರೆ.

●**ಪಾರ್ಸೆಲ್ ವಂಚನೆ:** ವಂಚಕರು ದೂರವಾಣಿ ಅಥವಾ ಮೆಸೇಜ್ ಮೂಲಕ ಸಂಪರ್ಕಿಸಿ, 'ಡ್ರಗ್ಸ್ ತುಂಬಿದ್ದ ಬ್ಯಾಗನ್ನು ವಶಕ್ಕೆ ಪಡೆಯಲಾಗಿದೆ. ಇದಕ್ಕಾಗಿ ದಂಡ ಪಾವತಿಸದಿದ್ದಲ್ಲಿ ನಿಮ್ಮನ್ನು ಬಂಧಿಸುತ್ತೇವೆ ಅಥವಾ ಕಾನೂನು ಕ್ರಮ ಕೈಗೊಳ್ಳುತ್ತೇವೆ' ಎಂದು ಬೆದರಿಕೆ ಒಡ್ಡುತ್ತಾರೆ.

●**ಸಾಲ ಅಥವಾ ಕಾರ್ಡ್ ವಂಚನೆ:** ಕರೆ ಮಾಡಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವುದಾಗಿ ತಿಳಿಸುತ್ತಾರೆ. ನಂತರ ಪ್ರಕ್ರಿಯೆ ಪೂರ್ಣಗೊಳಿಸಲು ಶುಲ್ಕ ಪಾವತಿಸುವಂತೆ ಬೇಡಿಕೆ ಇಡುತ್ತಾರೆ.

ವಿಜಯಪುರದ ಸೈಬರ್ ಕ್ರೈಂ ಉಲ್ಲೇಖ

ವಿಜಯಪುರ: ವಿಜಯಪುರದಲ್ಲಿ ಇತ್ತೀಚೆಗೆ ನಡೆದ 'ಡಿಜಿಟಲ್ ಅರೆಸ್ಟ್' ಎಂಬ ಸೈಬರ್ ಅಪರಾಧ ಪ್ರಕರಣದ ಕುರಿತು ಭಾನುವಾರ ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರಧಾನಿ ನರೇಂದ್ರ ಮೋದಿ ಅವರ 115ನೇ ಮನ್ ಕೀ ಬಾತ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

ಸೈಬರ್ ಲೋಕದ ವಂಚಕನೊಬ್ಬ ಮುಂಬೈ ಪೊಲೀಸರ ಹೆಸರಿನಲ್ಲಿ ಇತ್ತೀಚೆಗೆ ವಿಜಯಪುರದ ಸಂತೋಷ ಚೌಧರಿ ಎಂಬುವವರಿಗೆ ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಲು ಯತ್ನಿಸಿದ್ದರು. ಆದರೆ, ಚೌಧರಿ ಅವರಿಗೆ ಈ ಬಗ್ಗೆ ಅರಿವಿದ್ದ ಕಾರಣ ಮೋಸ ಹೋಗಿಲ್ಲ. ಈ ಹಿನ್ನೆಲೆಯಲ್ಲಿ 'ಡಿಜಿಟಲ್ ಅರೆಸ್ಟ್' ಬಗ್ಗೆ ಜನ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಧಾನಿ ಮೋದಿ ಅವರು ವಿಜಯಪುರ ಪ್ರಕರಣವನ್ನು ಉದಾಹರಣೆ ನೀಡಿದರು.

'ಎಂಟು ದಿನಗಳ ಹಿಂದೆ ಸಂತೋಷ ಚೌಧರಿ ಎಂಬವವರಿಗೆ ಮುಂಬೈ ಪೊಲೀಸ್ ಹೆಸರಲ್ಲಿ ಆನ್‌ಲೈನ್ ಮೂಲಕ ವಿಚಾರಣೆ ಮಾಡುತ್ತೇವೆ ಎಂದು ಹೆದರಿಸಿದ್ದಾರೆ. ಈ ಬಗ್ಗೆ ಮೊದಲೇ ತಿಳಿವಳಿಕೆ ಇದ್ದ ಸಂತೋಷ್ ಅವರು ಮೋಸ ಹೋಗದೇ ತಕ್ಷಣ ಸ್ಕ್ರೀನ್ ರೆಕಾರ್ಡ್ ಮಾಡಿಕೊಂಡು, ಡಿಸ್‌ಕನೆಕ್ಟ್ ಆಗಿದ್ದಾರೆ. ಜನ ಈ ರೀತಿ ಎಚ್ಚರ ಇದ್ದರೆ ಹೇಗೆ ಪಾರಾಗಬಹುದು ಎಂಬುದನ್ನು ಪ್ರಧಾನಿ ಅವರು ದೇಶದ ಜನರಿಗೆ ತಿಳಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ ತಿಳಿಸಿದರು.

ಪ್ರಧಾನಿ ಹೇಳಿದ್ದು...

- ವಿಶ್ವ ಆ್ಯನಿಮೇಷನ್ ಕ್ಷೇತ್ರದಲ್ಲಿ ಭಾರತದ ಪ್ರತಿಭೆಗಳ ಅಗಾಧ ಬೆಳವಣಿಗೆ
- ಛೋಟಾ ಭೀಮ್, ಕೃಷ್ಣ, ಮೋಟೂ–ಪತ್ಲೂ ಪಾತ್ರಗಳು ಸಾಕಷ್ಟು ಪ್ರಸಿದ್ಧಿ
- ಆ್ಯನಿಮೇಷನ್ ಕ್ಷೇತ್ರದಲ್ಲಿ ಭಾರತದಿಂದ ಕ್ರಾಂತಿ
- ಭಾರತದ ಆನ್‌ಲೈನ್ ಗೇಮ್‌ಗಳಿಗೆ ಹೆಚ್ಚು ಪ್ರಖ್ಯಾತಿ

'ಒಳಮೀಸಲಾತಿ@30' ಮುಂದಿನ ಸವಾಲುಗಳು' ಕಾರ್ಯಕ್ರಮದಲ್ಲಿ ಎಲ್. ಹನುಮಂತಯ್ಯ

ಒಳಮೀಸಲಾತಿ ಜಾರಿವರೆಗೆ ನೇಮಕಾತಿ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳಮೀಸಲಾತಿ ಜಾರಿಗೆ ಸಚಿವ ಸಂಪುಟ ಸಭೆಯು ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ. ಇದು, ಜಾರಿ ಆಗುವವರೆಗೂ ಸರ್ಕಾರವು ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಸಬಾರದು' ಎಂದು ಕಾಂಗ್ರೆಸ್ ಮುಖಂಡ ಎಲ್. ಹನುಮಂತಯ್ಯ ಆಗ್ರಹಿಸಿದರು.

'ಮೂಲ ಮಾದಿಗ ಮೂವ್‌ಮೆಂಟ್–ಎಂ3 ಕರ್ನಾಟಕ' ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಒಳಮೀಸಲಾತಿ@30' ಮುಂದಿನ ಸವಾಲುಗಳು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್‌ನ ಒಪ್ಪಿಗೆ ಪಡೆದು ಒಳ ಮೀಸಲಾತಿ ಜಾರಿ ಮಾಡಲಿದ್ದಾರೆ. ಜಾರಿ ಮಾಡದೇ ಇದ್ದರೆ ಮುಂದಿನ ತೀರ್ಮಾನ ಕೈಗೊಳ್ಳೋಣ. 30 ವರ್ಷಗಳಿಂದ ನಡೆದು ಬಂದ ಈ ಹೋರಾಟ ಇಲ್ಲಿಗೆ ನಿಲ್ಲದೇ, ಒಳ ಮೀಸಲಾತಿ ಜಾರಿ ಆಗುವವರೆಗೂ ಮುಂದುವರಿಯಬೇಕು' ಎಂದು ತಿಳಿಸಿದರು.

'ಜಾತಿವಾರು ಜನಗಣತಿ ವರದಿಯನ್ನೂ ರಾಜ್ಯ ಸರ್ಕಾರ ಅಂಗೀಕರಿಸಿ, ಅದರ ಶಿಫಾರಸುಗಳನ್ನು ಜಾರಿ ಮಾಡಬೇಕು. ಒಳ ಮೀಸಲಾತಿಗೆ ಅದು ಪೂರಕವಾಗಲಿದೆ. ಅಂಕಿ ಅಂಶಗಳು ಸರಿಯಿಲ್ಲ. ಹೊಸತಾಗಿ ಜಾತಿವಾರು ಜನಗಣತಿ ಮಾಡಬೇಕೆಂದು ಕೆಲವರು ಹೇಳುತ್ತಿದ್ದಾರೆ. ಈ ನಡುವೆ ಆದಿಕರ್ನಾಟಕ, ಆದಿ ದ್ರಾವಿಡ ಎಂದು ಹಲವರು ಬರೆಸಿದ್ದಾರೆ. ಇದು ಸಮಸ್ಯೆಯಾಗಿದೆ' ಎಂದು ವಿವರ ನೀಡಿದರು.



ಕಾರ್ಯಕ್ರಮವನ್ನು ಶಿವಶರಣ ಶ್ರೀ ಗದ್ದಿಗೆಪ್ಪ ಅಜ್ಜ ತಮಟೆ ಬಾರಿಸಿ ಉದ್ಘಾಟಿಸಿದರು., ಮುಖಂಡ ಎನ್. ಮೂರ್ತಿ, ಹುಚ್ಚಯ್ಯ ಸ್ವಾಮೀಜಿ ಲಕ್ಕುಂಡಿ, ಮೂಲ ಮಾದಿಗ ಮೂವ್‌ಮೆಂಟ್ ಅಧ್ಯಕ್ಷ ಜೆ.ಸಿ. ಪ್ರಕಾಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ


ಮುಖಂಡ ಗೋನಾಳ್ ಭೀಮಪ್ಪ ಮಾತನಾಡಿ, 'ಸದಾಶಿವ ಆಯೋಗ ನೀಡಿರುವ ವರದಿ ಬಹಿರಂಗಗೊಳ್ಳದೇ ಇರುವುದರಿಂದ ಅಂಕಿ–ಅಂಶ ಯಾರಿಗೂ ಗೊತ್ತಿಲ್ಲ. ಪೆನ್ಸಿಲ್‌ನಲ್ಲಿ ಬರೆದಿದ್ದಾರೆ ಎಂಬುದೆಲ್ಲ ಊಹಾಪೋಹ. ದಕ್ಷಿಣ ಕರ್ನಾಟಕದಲ್ಲಿ ಎಕೆ-ಎಡಿ ಬಗ್ಗೆ ಗೊಂದಲ ಉಂಟಾಗಿರುವುದರಿಂದ ಸಮಸ್ಯೆಯಾಗಿದೆ' ಎಂದರು.

ಕುಕನೂರ ಇಟಗಿಯ ಮರುಳಸಿದ್ದೇಶ್ವರ ಪುಣ್ಯಾಶ್ರಮದ ಗದ್ದಿಗೆಪ್ಪ ಅಜ್ಜ ಮಾತನಾಡಿ, 'ಮೂವತ್ತು ವರ್ಷದಿಂದ ಹೋರಾಟ ನಡೆಸಿದ್ದು, ವಿಜಯಪುರದ ಪಾದಯಾತ್ರೆ ವೇಳೆ ಏಳು ಮಂದಿ ಮೃತಪಟ್ಟಿದ್ದರು. ಯುವಕರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಬೇಕು. ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದ ವರೆಗೆ ಸ್ವಚ್ಛತೆ ಮಾಡುವವರು ನಾವೇ ಆಗಿರುವುದರಿಂದ ಒಂದು ದಿನ ನಮ್ಮ ಕೆಲಸ ನಿಲ್ಲಿಸಿದರೆ ಹೋರಾಟಕ್ಕೆ ಜಯ ಸಿಗಲಿದೆ' ಎಂದು ಆಶಿಸಿದರು.

ಮೂಲ ಮಾದಿಗ ಮೂವ್‌ಮೆಂಟ್ ಅಧ್ಯಕ್ಷ ಜೆ.ಸಿ. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಲಕ್ಕುಂಡಿಯ ಹುಚ್ಚಯ್ಯ ಸ್ವಾಮೀಜಿ, ಶಾಸಕ ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯರಾದ ಸುಧಾಮ ದಾಸ್, ಡಿ. ತಿಮ್ಮಯ್ಯ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಆರ್. ಧರ್ಮಸೇನಾ, ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್, ಮುಖಂಡ ರಾದ ಮಾರಸಂದ್ರ ಮುನಿಯಪ್ಪ, ಎನ್.ಮೂರ್ತಿ, ಶಂಕರಪ್ಪ, ಎಚ್.ಆರ್. ಭೀಮಾಶಂಕರ್, ಅನಿಲ್ ಕುಮಾರ್, ವೆಂಕಟೇಶ್ ದೊಡ್ಡೇರಿ ಭಾಗವಹಿಸಿದ್ದರು.

ಭಜನಾ ಕಲಾವಿದ ನಿಧನ

ಚನ್ನಮ್ಮನ ಕಿತ್ತೂರು(ಬೆಳಗಾವಿ ಜಿಲ್ಲೆ): ಇಲ್ಲಿನ ಕೋಟೆ ಆವರಣದಲ್ಲಿನ ವೇದಿಕೆಯಲ್ಲಿ ಕಿತ್ತೂರು ಉತ್ಸವ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಭಜನೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಕಲಾವಿದರೊಬ್ಬರು ಹಾಡು ಮುಗಿಸಿ ಕೆಳಗೆ ಇಳಿಯುತ್ತಿದ್ದಾಗ ತೀವ್ರ ಹೃದಯಾಘಾತದಿಂದ ನಿಧನರಾದರು.



ತಾಲ್ಲೂಕಿನ ಬಸಾಪುರ-ಶೀಗಿಹಳ್ಳಿಯ ಭಜನಾ ತಂಡದ ಸದಸ್ಯ ಈರಪ್ಪ ಫಕ್ಕೀರಪ್ಪ ಬಬ್ಲಿ(48) ಮೃತರು. ಇವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಪ್ರಕಟಣೆ

PGM BSNL ತುಮಕೂರು BSNL CDA ನಿಯಮಗಳು 2006 ರ ನಿಯಮ 36 ರ ಅಡಿಯಲ್ಲಿ ಶ್ರೀ ನರಸಿಂಹಮೂರ್ತಿ T, HR NO 198317716 SDE (Retd), BSNL ತುಮಕೂರು ವಿರುದ್ಧ ಪ್ರಮುಖ ಶಿಸ್ತಿನ ಪ್ರಕ್ರಿಯೆಗಳನ್ನು ಪ್ರಾರಂಭಿಸಿದೆ. ಚಾರ್ಜ್ಡ್ ಆಫೀಸರ್ ಎಲ್ಲಾ ವಿಚಾರಣೆಗಳಿಗೆ ಗೈರುಹಾಜರಾಗಿದ್ದರು ಮತ್ತು ಈ ಕಚೇರಿಗೆ ಯಾವುದೇ ಪತ್ರವ್ಯವಹಾರಗಳಿಗೆ ಉತ್ತರಿಸಲಿಲ್ಲ. ಹೀಗಾಗಿ ಎಕ್ಸ್ ಪಾರ್ಟಿಯಾಗಿ ವಿಚಾರಣೆ ನಡೆಸಲಾಗಿದೆ ಮತ್ತು ಈ ಕಛೇರಿಯಲ್ಲಿ ವರದಿ ಸಲ್ಲಿಸಲಾಗಿದೆ. ಕುಂದುಕೊರತೆಗಳಿದ್ದಲ್ಲಿ ಸಲ್ಲಿಸಲು ಆರೋಪಿಯ ಎಲ್ಲಾ ತಿಳಿದಿರುವ ವಿಳಾಸಗಳಿಗೆ ವಿಚಾರಣೆ ವರದಿಯನ್ನು ಕಳುಹಿಸಲಾಗಿದೆ ಆದರೆ ವಿಳಾಸದಾರರು ಪತ್ತೆಯಾಗದ ಕಾರಣ ಹಿಂತಿರುಗಿಸಲಾಗಿದೆ. ಈ ಕಛೇರಿಯಿಂದ ಒಬ್ಬ ಸಿಬ್ಬಂದಿಯನ್ನು ಅವರ ಕೊನೆಯ ನಿವಾಸದ ವಿಳಾಸದಲ್ಲಿ ಖುದ್ದಾಗಿ ಹಸ್ತಾಂತರಿಸಲು ನಿಯೋಜಿಸಲಾಯಿತು ಮತ್ತು ಅಧಿಕಾರಿ ನಿವಾಸದಲ್ಲಿ ಲಭ್ಯವಿಲ್ಲದ ಕಾರಣ ಅದನ್ನು ಆರೋಪಿ ಅಧಿಕಾರಿಯ ಮಗಳಿಗೆ ಹಸ್ತಾಂತರಿಸಲಾಯಿತು. ಅಧಿಕಾರಿಯು 30-06-2022 ರಂದು ನಿವೃತ್ತಿಯ ವಯಸ್ಸನ್ನು ತಲುಪಿದ್ದಾರೆ ಮತ್ತು ಇಲ್ಲಿಯವರೆಗೆ ಕಡ್ಡಾಯ ಪಿಂಚಣಿ ಪತ್ರಗಳನ್ನು ಸಲ್ಲಿಸಿಲ್ಲ. ಶ್ರೀ ನರಸಿಂಹಮೂರ್ತಿ ಟಿ, ನಿವೃತ್ತ ಎಸ್‌ಡಿಇ ಬಿಎಸ್‌ಎನ್‌ಎಲ್ ಅವರಿಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 10 ದಿನಗಳ ಒಳಗಾಗಿ ವಿಚಾರಣೆಯ ವರದಿಯ ಕುರಿತು ತಮ್ಮ ಪ್ರಾತಿನಿಧ್ಯವನ್ನು ಸಲ್ಲಿಸಲು ಇದು ಕೊನೆಯ ಅವಕಾಶವಾಗಿದೆ, ಇಲ್ಲದಿದ್ದರೆ ಮುಂದಿನ ಕ್ರಮಕ್ಕಾಗಿ ಉಪಸ್ಥಿತಿ ಇಲ್ಲದಿರುವಿಕೆ ಎಂದು ಸಕ್ಷಮ ಪ್ರಾಧಿಕಾರದಿಂದ ಪರಿಗಣಿಸಲಾಗುತ್ತದೆ.

Sd/-

ಹಿರಿಯ ಪ್ರಧಾನ ವ್ಯವಸ್ಥಾಪಕರು, ಬಿ.ಎಸ್.ಎನ್.ಎಲ್, ತುಮಕೂರು



ಸುಭಾಷಿತ

ಜನ ಹೇಳುವುದನ್ನು ನಾನು ಕೇಳುವುದಿಲ್ಲ, ಅವರು ಏನು ಮಾಡುತ್ತಾರೆ ಎಂಬುದನ್ನು ಗಮನಿಸುತ್ತೇನೆ. ನಡವಳಿಕೆಯು ಸುಳ್ಳು ಹೇಳುವುದಿಲ್ಲ. -ವಿನ್‌ಸ್ಟನ್ ಚರ್ಚಿಲ್

ಸರ್ಕಾರದ ಬಲವಂತದ ಕ್ರಮವು ಜನಸಂಖ್ಯಾ ಸ್ವರೂಪದ ಅಸಮತೋಲನ ಪರಿಹರಿಸದು

ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ದೇಶದ ಜನಸಂಖ್ಯಾ ಸ್ವರೂಪದಲ್ಲಿ ಆಗಿರುವ ಬದಲಾವಣೆ ಕುರಿತು ವ್ಯಕ್ತಪಡಿಸಿರುವ ಕಳವಳ ಹೊಸತೇನೂ ಅಲ್ಲ. ನಾಯ್ಡು ಅವರು ಜನಸಂಖ್ಯಾ ಸ್ವರೂಪದ ಕುರಿತು ಮಾತನಾಡಿದ್ದರೆ, ಸ್ಟಾಲಿನ್ ಅದೇ ವಿಚಾರವನ್ನು ರಾಜಕೀಯ ಪರಿಭಾಷೆಯಲ್ಲಿ ಹೇಳಿದ್ದಾರೆ. ದಕ್ಷಿಣ ಭಾರತದಲ್ಲಿ ಜನಸಂಖ್ಯೆಯ ಹೆಚ್ಚಳದ ಪ್ರಮಾಣ ಕುಸಿಯುತ್ತಿದೆ ಎಂಬುದರ ಕುರಿತು ಈ ಹಿಂದೆಯೂ ಹಲವರು ಮಾತನಾಡಿದ್ದಾರೆ. ದೇಶದಲ್ಲಿ ಫಲವಂತಿಕೆಯ ಪ್ರಮಾಣ ಕುಸಿಯುತ್ತಲೇ ಇದೆ. ಈಗ ಇರುವ ಜನಸಂಖ್ಯೆಯನ್ನು ಇದೇ ಮಟ್ಟದಲ್ಲಿ ಉಳಿಸಿಕೊಳ್ಳಬೇಕಾದರೆ ಫಲವಂತಿಕೆಯ ಮಟ್ಟವು 2.1ರಷ್ಟು ಇರಬೇಕು. ಆದರೆ, ದೇಶದಲ್ಲಿ ಈಗ ಫಲವಂತಿಕೆಯು ಈ ಮಟ್ಟದ ಸಮೀಪದಲ್ಲಿದೆ ಅಥವಾ ಅದಕ್ಕಿಂತ ಕೆಳಗೆ ಇದೆ. ದಕ್ಷಿಣದ ರಾಜ್ಯಗಳಲ್ಲಿ ಈ ಮಟ್ಟವು 1.7ರಷ್ಟು ಅಥವಾ ಅದರ ಸಮೀಪದಲ್ಲಿದೆ. ಆದರೆ ಉತ್ತರದ ಎಲ್ಲ ರಾಜ್ಯಗಳಲ್ಲಿ ಈ ಮಟ್ಟವು 2ಕ್ಕಿಂತ ಮೇಲೆಯೇ ಇದೆ. ಈ ಅಸಮತೋಲನವು ದಕ್ಷಿಣದ ರಾಜ್ಯಗಳ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದೆ ಮತ್ತು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪರಿಣಾಮಗಳಿಗೆ ಕಾರಣವಾಗಿದೆ.

ಒಂದು ಪ್ರಮುಖ ಪರಿಣಾಮ ಏನೆಂದರೆ, 2026ರ ಬಳಿಕ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ನಡೆದರೆ ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗಲಿದೆ; ಉತ್ತರದ ರಾಜ್ಯಗಳ ಪ್ರಾತಿನಿಧ್ಯ ಹೆಚ್ಚಾಗಲಿದೆ. ಈಗಿನ ಜನಸಂಖ್ಯೆಯ ಆಧಾರದಲ್ಲಿ ಕ್ಷೇತ್ರಗಳ ಪುನರ್‌ವಿಂಗಡಣೆ ನಡೆದರೂ ದಕ್ಷಿಣದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ. ರಾಜಕೀಯವಾಗಿ ದಕ್ಷಿಣದ ರಾಜ್ಯಗಳಿಗೆ ಈಗ ಇರುವ ಮಹತ್ವವೇ ಕಡಿಮೆ. ಮುಂದೆ ಅದು ಇನ್ನಷ್ಟು ಕುಸಿಯಲಿದೆ. ಕೇಂದ್ರದ ತೆರಿಗೆ ಅನುದಾನದ ಹಂಚಿಕೆಯಲ್ಲಿಯೂ ದಕ್ಷಿಣದ ರಾಜ್ಯಗಳ ಪಾಲು ಕಡಿಮೆಯಾಗಲಿದೆ. ದಕ್ಷಿಣದ ರಾಜ್ಯಗಳು ತಮಗಾಗಿ ಮತ್ತು ರಾಷ್ಟ್ರಕ್ಕಾಗಿ ಉತ್ತಮ ಸಾಧನೆ ಮಾಡಿವೆ. ಅದೇ ಕಾರಣಕ್ಕೆ ಈ ರಾಜ್ಯಗಳು ಹಿನ್ನಡೆಗೆ ಒಳಗಾಗಲು ಅವಕಾಶ ಕೊಡಬಾರದು. ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವ ಕೆಲವು ರಾಜ್ಯಗಳ ಅಭಿವೃದ್ಧಿಗೆ ತಮ್ಮ ಸಂಪನ್ಮೂಲವನ್ನು ತಮ್ಮ ಇಚ್ಛೆಗೆ ವಿರುದ್ಧವಾಗಿ ಒಯ್ಯಬಾರದು ಎಂದು ಕೆಲವು ರಾಜ್ಯಗಳು ಈಗಾಗಲೇ ಹೇಳಿವೆ. ಇಂತಹ ವ್ಯವಸ್ಥೆಯು ಈಗಾಗಲೇ ಒತ್ತಡದಲ್ಲಿರುವ ಒಕ್ಕೂಟ ವ್ಯವಸ್ಥೆಯ ಮೇಲೆ ಇನ್ನಷ್ಟು ಒತ್ತಡ ಹೇರುತ್ತದೆ. ಜನಸಂಖ್ಯಾ ಸ್ವರೂಪ ಮತ್ತು ಆರ್ಥಿಕ ವಿಚಾರದಲ್ಲಿನ ಕಳವಳಗಳು ಉತ್ತರ ಮತ್ತು ದಕ್ಷಿಣದ ನಡುವಣ ರಾಜಕೀಯ ಬಿರುಕನ್ನು ಇನ್ನಷ್ಟು ಗಾಢಗೊಳಿಸುತ್ತವೆ.



ದೇಶದ ಜನಸಂಖ್ಯಾ ಸ್ವರೂಪದ ಕುರಿತು ಇಬ್ಬರು ಮುಖ್ಯಮಂತ್ರಿಗಳ ಹೇಳಿಕೆಗಳನ್ನು ಗಮನಿಸಿದರೆ, ಇದೊಂದು ಗಂಭೀರವಾದ ಸಮಸ್ಯೆ, ಇದಕ್ಕೆ ಪರಿಹಾರ ಕಂಡುಕೊಳ್ಳಲೇಬೇಕಿದೆ ಎಂಬುದು ಅರಿವಾಗುತ್ತದೆ

ಹೆಚ್ಚು ಮಕ್ಕಳನ್ನು ಹೆರಬೇಕು ಎಂದು ನಾಯ್ಡು ಮತ್ತು ಸ್ಟಾಲಿನ್ ಅವರು ತಮ್ಮ ರಾಜ್ಯಗಳ ಜನರಿಗೆ ಕರೆ ಕೊಟ್ಟಿದ್ದಾರೆ. ಇದು ಉತ್ತಮವಾದ ಮತ್ತು ಕಾರ್ಯಸಾಧುವಾದ ಪರಿಹಾರವೇ ಎಂಬುದು ಚರ್ಚಾರ್ಹ ವಿಚಾರ. ಜನಸಂಖ್ಯಾ ಸ್ವರೂಪದ ಅಸಮತೋಲನದಿಂದ ಆಗುವ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಿಕೊಳ್ಳಬೇಕು. ಹೆಚ್ಚು ಹೆಚ್ಚು ಜನರು ವೃದ್ಧಾಪ್ಯದತ್ತ ಸಾಗುವುದರಿಂದ ಆಗುವ ಸಮಸ್ಯೆಗಳನ್ನು ಕೂಡ ಮಧ್ಯಮಾವಧಿಯಲ್ಲಿ ಪರಿಹರಿಸಿಕೊಳ್ಳಬೇಕು. ಮಕ್ಕಳು ಎಷ್ಟಿರಬೇಕು ಎಂಬುದು ದಂಪತಿಯ ವೈಯಕ್ತಿಕ ಮತ್ತು ಕೌಟುಂಬಿಕ ಆಯ್ಕೆಗಳು, ಶಿಕ್ಷಣ ಮಟ್ಟ, ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಸನ್ನಿವೇಶಗಳ ಮೇಲೆ ಅವಲಂಬಿತ. ಸರ್ಕಾರದ ಹಸ್ತಕ್ಷೇಪವು ಇಲ್ಲಿ ಯಾವುದೇ ಪರಿಣಾಮ ಉಂಟು ಮಾಡದು. ಒಂದೇ ಮಗು ನೀತಿಯನ್ನು ಚೀನಾ ದೇಶವು ಜಾರಿಗೆ ತಂದಾಗ ಅದು ನಕಾರಾತ್ಮಕ ಪರಿಣಾಮ ಬೀರಿತು. ಈ ನಿಯಮವನ್ನು ಸಡಿಲಿಸಿದ ಬಳಿಕವೂ ಫಲವಂತಿಕೆ ಮಟ್ಟವು ಏರಿಕೆ ಆಗಲಿಲ್ಲ. ಇತರ ಕೆಲವು ದೇಶಗಳಲ್ಲಿ ಕೂಡ ಇದೇ ರೀತಿ ಆಗಿದೆ. ಬಲವಂತದ ನೀತಿಯು ಪ್ರಜಾಸತ್ತಾತ್ಮಕ ಅಲ್ಲ. ಇದು ವ್ಯಕ್ತಿ, ಕುಟುಂಬ ಅದರಲ್ಲೂ ವಿಶೇಷವಾಗಿ ಮಹಿಳೆಗೆ ಹಾನಿ ಉಂಟು ಮಾಡುತ್ತದೆ. ಇಬ್ಬರು ಮುಖ್ಯಮಂತ್ರಿಗಳು ದೇಶದ ಜನಸಂಖ್ಯಾ ಸ್ವರೂಪದ ಕುರಿತು ನೀಡಿರುವ ಹೇಳಿಕೆಗಳನ್ನು ಗಮನಿಸಿದರೆ, ಇದೊಂದು ಬೆಳೆಯುತ್ತಲೇ ಇರುವ ಮತ್ತು ಗಂಭೀರವಾದ ಸಮಸ್ಯೆ ಎಂಬುದು ಅರಿವಾಗುತ್ತದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲೇಬೇಕಿದೆ.

ದಿನದ ಟ್ವೀಟ್

ಹುಡುಗಾಟ ಮಿತಿಮೀರದಿರಲಿ

ಇಂತಹ ವಿಡಿಯೊಗಳನ್ನು ಮಾಡುವಾಗ ಜನ ತಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಪರಿವೆಯೇ ಇಲ್ಲದಂತೆ ಅದರಲ್ಲಿ ಮುಳುಗಿಹೋಗಿರುತ್ತಾರೆ ಎಂಬುದನ್ನು ನಂಬುವುದಕ್ಕೇ ಕಷ್ಟವಾಗುತ್ತದೆ.

(ಬಾಂಗ್ಲಾದೇಶದಲ್ಲಿ ಹದಿಹರೆಯದ ಹುಡುಗನೊಬ್ಬ ಸ್ನೇಹಿತರೊಂದಿಗೆ ಸೇರಿ ಟಿಕ್‌ಟಾಕ್ ವಿಡಿಯೊ ಮಾಡುತ್ತಿದ್ದಾಗ, ವೇಗವಾಗಿ ಬಂದ ರೈಲಿಗೆ ಸಿಲುಕಿ ಮೃತಪಟ್ಟ ಪ್ರಕರಣಕ್ಕೆ ಪ್ರತಿಕ್ರಿಯೆ)

ರಾಜ್ ಕಿಂಗ್, ಫಾರ್ಮಸಿಸ್ಟ್

ಕಿಡಿನುಡಿ



ಸರ್ಕಾರ ಮೊದಲು ಇವುಗಳನ್ನೆಲ್ಲ ನಿಷೇಧಿಸಲಿ: ಪಾದಚಾರಿ ಮಾರ್ಗಗಳ ಒತ್ತುವರಿ, ಪಾದಚಾರಿ ಮಾರ್ಗಗಳು ಹಾಗೂ ರಸ್ತೆಗಳಲ್ಲಿನ ಆಹಾರ ಮಳಿಗೆಗಳು, ಬೀದಿಬದಿ ವ್ಯಾಪಾರಿಗಳು ತಂದು ಸುರಿಯುವ ಪ್ಲಾಸ್ಟಿಕ್- ಥರ್ಮಾಕೋಲ್ ತ್ಯಾಜ್ಯ, ಗುಟ್ಕಾ- ಅದರ ಸ್ಯಾಷೆಗಳು ಚರಂಡಿ ಸೇರುತ್ತಿವೆ.

(ಬೆಂಗಳೂರಿನ ಮೂಲಸೌಕರ್ಯಕ್ಕೆ ನೆರವಾಗಲು ವಿಶ್ವಬ್ಯಾಂಕ್ ₹ 5,000 ಕೋಟಿ ಹಣ ನೀಡಲಿದೆ ಎಂಬ ವರದಿಗೆ ಪ್ರತಿಕ್ರಿಯೆ)

ಪೀಯೂಷ್, ಐ.ಟಿ. ಕನ್ಸಲ್ಟಂಟ್

25 ವರ್ಷಗಳ ಹಿಂದೆ

ಗುರುವಾರ, 28-10-1999

• ವಿಕೇಂದ್ರೀಕರಣ, ರಸ್ತೆ, ಕುಡಿಯುವ ನೀರಿಗೆ ಆದ್ಯತೆ

ಬೆಂಗಳೂರು, ಅ. 27- ಅಧಿಕಾರ ವಿಕೇಂದ್ರೀಕರಣದ ಜಾರಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ, ಪ್ರಾದೇಶಿಕ ತಾರತಮ್ಯ ನಿವಾರಣೆಗೆ ಕ್ರಮ, ರಸ್ತೆಗಳ ಅಭಿವೃದ್ಧಿಗೆ ತ್ವರಿತ ಕ್ರಿಯಾಯೋಜನೆ, ಮುಂದಿನ 5 ವರ್ಷಗಳಲ್ಲಿ ಎಲ್ಲ ಗ್ರಾಮಗಳಲ್ಲಿ ದಿನಕ್ಕೆ ಕನಿಷ್ಠ ತಲಾ 55 ಲೀಟರ್ ಶುದ್ಧ ಕುಡಿಯುವ ನೀರು, ನಿವೇಶನ ರಹಿತರಿಗೆ ನಿವೇಶನ, ಮನೆ ಇಲ್ಲದ ಬಡವರಿಗೆ ಮನೆ, ಸಾಕ್ಷರತೆ ಪ್ರಮಾಣವನ್ನು ಶೇಕಡ 80ಕ್ಕೆ ಏರಿಸುವ ಭರವಸೆಯನ್ನು ಎಸ್.ಎಂ. ಕೃಷ್ಣ ಅವರ ನಾಯಕತ್ವದ ನೂತನ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಮೂಲಕ ರಾಜ್ಯದ ಜನತೆಗೆ ನೀಡಿದೆ.

• ಪೋಪ್ ಭೇಟಿ: ಸಂಘ ಪರಿವಾರದ ವಿರೋಧಕ್ಕೆ ಕೇಂದ್ರ ಸರ್ಕಾರ ಖಂಡನೆ

ನವದೆಹಲಿ, ಅ. 27- ವಿಶ್ವದ ಕ್ರೈಸ್ತರ ಧರ್ಮಗುರು ಎರಡನೇ ಪೋಪ್ ಜಾನ್‌ಪಾಲ್ ಅವರ ಉದ್ದೇಶಿತ ಭಾರತ ಭೇಟಿಯನ್ನು ವಿರೋಧಿಸುತ್ತಿರುವ ಪ್ರಯತ್ನವನ್ನು ಸರ್ಕಾರ ಇಂದು ಖಂಡಿಸಿತಲ್ಲದೆ ಅವರ ಭೇಟಿಯು ಯಶಸ್ವಿಯಾಗುವಂತೆ ನೋಡಿಕೊಳ್ಳುವ ಭರವಸೆ ನೀಡಿತು.

ಕಾಂಗ್ರೆಸ್‌ನ ಮಣಿಶಂಕರ್ ಅಯ್ಯರ್ ಮತ್ತು ಪ್ರಿಯರಂಜನ್ ದಾಸ್ ಮುನ್ಷಿ ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಗೃಹ ಸಚಿವ ಲಾಲ್ ಕೃಷ್ಣ ಅಡ್ವಾಣಿ ಉತ್ತರಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 28-10-1974

• ಮಹಮದಾಲಿ ಹೊಸ ಸಚಿವರು ಇವಾ ವಾಜ್‌ಗೆ ಬಡ್ತಿ

ಬೆಂಗಳೂರು, ಅ. 27- ಮಾಜಿ ಸಚಿವ ಶ್ರೀ ಮಹಮದಾಲಿ ಅವರನ್ನು ಹೊಸ ಸಚಿವರನ್ನಾಗಿ ಹಾಗೂ 5 ಮಂದಿ ಹೊಸ ರಾಜ್ಯ ಸಚಿವರನ್ನು ನೇಮಿಸಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ತಮ್ಮ ಮಂತ್ರಿಮಂಡಲವನ್ನು ವಿಸ್ತರಿಸಿದ್ದಾರೆ.

ಈ ವಿಸ್ತರಣೆಯಲ್ಲಿ ರಾಜ್ಯ ಸಚಿವೆ ಶ್ರೀಮತಿ ಇವಾವಾಜ್ ಅವರು ಸಚಿವರಾಗಿ ಬಡ್ತಿ ಪಡೆದಿದ್ದಾರೆ.

ರಾತ್ರಿ ಹುಬ್ಬಳ್ಳಿಯಿಂದ ನಗರ ತಲುಪಿದ ಮುಖ್ಯಮಂತ್ರಿ ಶ್ರೀ ಅರಸು ಅವರು ರಾಜ ಭವನದಲ್ಲಿ ರಾಜ್ಯಪಾಲ ಶ್ರೀ ಸುಖಾಡಿಯಾ ಅವರನ್ನು ಭೇಟಿ ಮಾಡಿ, ಹೊಸ ಸಚಿವರು ಹಾಗೂ ರಾಜ್ಯ ಸಚಿವರ ಪಟ್ಟಿಯನ್ನು ಸಲ್ಲಿಸಿದರು.

ಆನಂತರ ಅವರ ಮನೆಯಲ್ಲಿ ಕಾದಿದ್ದ ವರದಿಗಾರರಿಗೆ ಪಟ್ಟಿಯನ್ನು ನೀಡಿದರು.

• ದೆಹಲಿಗೆ ಕಿಸಿಂಜರ್ ಆಗಮನ ಕಮ್ಯುನಿಸ್ಟರ ಪ್ರತಿಭಟನಾ ಪ್ರದರ್ಶನ

ನವದೆಹಲಿ, ಅ. 27- ಕಮ್ಯುನಿಸ್ಟರ ಪ್ರತಿಭಟನಾ ಪ್ರದರ್ಶನದ ನಡುವೆ ಅಮೆರಿಕದ ಸ್ಟೇಟ್ ಇಲಾಖೆಯ ಕಾರ್ಯದರ್ಶಿ ಹೆನ್ರಿ ಕಿಸಿಂಜರ್ ಅವರು ‘ವಿಶ್ವದ ಎರಡು ಬೃಹತ್ ಪ್ರಜಾಸತ್ತೆಗಳ ನಡುವೆ ವಿಚಾರ ವಿನಿಮಯ ಮುಂದುವರಿಸಲು’ ಇಂದು ಇಲ್ಲಿಗೆ ಆಗಮಿಸಿದರು.

ಪತ್ನಿ ನ್ಯಾನ್ಸಿ ಜೊತೆ ಆಗಮಿಸಿದ ಅವರನ್ನು ವಿಮಾನ ನಿಲ್ದಾಣದಲ್ಲಿ ವಿದೇಶಾಂಗ ಸಚಿವ ವೈ.ಬಿ. ಚವಾಣ್, ಕೃಷಿ ಮತ್ತು ನೀರಾವರಿ ಸಚಿವ ಜಗಜೀವನ ರಾಂ ಅವರು ಸ್ವಾಗತಿಸಿದರು.

ಮಾಸ್ಕೊದಿಂದ ಆಗಮಿಸಿದ ಕಿಸಿಂಜರ್ ಅವರು ರಾಷ್ಟ್ರಪತಿ ಭವನಕ್ಕೆ ಕಾರಿನಲ್ಲಿ ಹೊರಟಾಗ ಕಮ್ಯುನಿಸ್ಟ್ ಪಕ್ಷದ ಸುಮಾರು 200 ಮಂದಿ ಪ್ರದರ್ಶನಕಾರರು ಅಮೆರಿಕ ವಿರೋಧಿ ಘೋಷಣೆಗಳನ್ನು ಕೂಗಿದರು.

ಅಕ್ಟೋಬರ್‌ನಲ್ಲಿ ಸಂಚಲನ ಮೂಡಿಸುವ ಈ ಪ್ರಶಸ್ತಿಯ ಮಾನದಂಡ ಪ್ರಶ್ನಾತೀತವೇನಲ್ಲ!

‘ನೊಬೆಲ್’ ಎಂಬ ಮಾಯಾಜಿಂಕೆ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಅಕ್ಟೋಬರ್ ತಿಂಗಳ ಮೊದಲ ವಾರದಿಂದಲೂ ಸ್ವೀಡನ್ನಿನ ಸ್ವೀಡಿಷ್ ಅಕಾಡೆಮಿಯ ಮುಚ್ಚಿದ ಬಾಗಿಲು ತೆರೆದು ನೊಬೆಲ್ ವಕ್ತಾರರು ಆಗಾಗ್ಗೆ ನೊಬೆಲ್ ಪ್ರಶಸ್ತಿ ವಿಜೇತರನ್ನು ಘೋಷಿಸುತ್ತಿದ್ದರು. ಎಲ್ಲೂ ಭಾರತೀಯ ಹೆಸರುಗಳ ಸುಳಿವಿರಲಿಲ್ಲ. ಭಾರತೀಯ ಪ್ರತಿಭೆಗಳು ಈ ಸಲ ಶಾರ್ಟ್‌ಲಿಸ್ಟ್ ಆಗಿದ್ದ ಸುದ್ದಿಯೂ ಇರಲಿಲ್ಲ. ಸಮಾಧಾನಕರವೆಂಬಂತೆ ಮೊದಲ ಬಾರಿಗೆ ಏಷ್ಯಾದ ಲೇಖಕಿಯೊಬ್ಬರಿಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ ಘೋಷಣೆಯಾಯಿತು.


ದಕ್ಷಿಣ ಕೊರಿಯಾದ ಹಾನ್ ಕಾಂಗ್‌ರ ಸಮಗ್ರ ಸಾಹಿತ್ಯಕ್ಕೆ ನೊಬೆಲ್ ಪ್ರಶಸ್ತಿ ಘೋಷಿಸಿದ ಆಯ್ಕೆ ಸಮಿತಿ, ಆಕೆಯ ‘ಕಾವ್ಯಾತ್ಮಕ ಗದ್ಯ’ವನ್ನು ವಿಶೇಷವಾಗಿ ಗುರುತಿಸಿತ್ತು. ಆಕೆಯ ‘ದ ವೆಜಿಟೇರಿಯನ್’ ಕಾದಂಬರಿಗೆ 2007ರಲ್ಲಿ ‘ಮ್ಯಾನ್ ಬುಕರ್’ ಪ್ರಶಸ್ತಿಯೂ ಬಂದಿತ್ತು. ‘ದ ವೆಜಿಟೇರಿಯನ್’ ಕಾದಂಬರಿಯನ್ನು ಓದಲಾರಂಭಿಸಿದೆ. ಕಾದಂಬರಿಯ ನಾಯಕಿಗೆ ಒಂದು ರಾತ್ರಿ ಕನಸು ಬೀಳುತ್ತದೆ. ಆಕೆ ಮೇಲೆದ್ದವಳೇ ರೆಫ್ರಿಜಿರೇಟರ್‌ನಲ್ಲಿದ್ದ ಮಾಂಸವನ್ನೆಲ್ಲ ಹೊರಗೆಸೆಯುತ್ತಾಳೆ. ಸಸ್ಯಾಹಾರ ಶುರು ಮಾಡಿದ ಆಕೆಯ ದೇಹ ಸೊರಗತೊಡಗುತ್ತದೆ. ಗಂಡ, ತಂದೆ, ತಾಯಿ ಕಳವಳಗೊಳ್ಳುತ್ತಾರೆ. ತಂದೆ ಬಲವಂತದಿಂದ ಆಕೆಯ ಬಾಯಿಗೆ ಮಾಂಸ ತುರುಕುತ್ತಾನೆ. ಹಿಂಸೆಯ ವಾತಾವರಣ ಸೃಷ್ಟಿಯಾಗುತ್ತದೆ.

ಈ ದೃಶ್ಯಗಳನ್ನು ಓದುತ್ತಾ ನನ್ನ ಆರೋಗ್ಯವೇ ಕೆಡತೊಡಗಿತು! ಕಾದಂಬರಿಯೊಂದನ್ನು ಯಾವ ಮಾನದಂಡಗಳಿಂದಲಾದರೂ ಶ್ರೇಷ್ಠವೆನ್ನಲಿ, ಅದು ಓದುವವರ ಆರೋಗ್ಯವನ್ನು ಕಾಪಾಡದಿದ್ದರೆ ಅದನ್ನು ಓದುವುದು ಕಷ್ಟ! ಈಚೆಗೆ ಜಾಗತಿಕ ಪ್ರಶಸ್ತಿಗಳನ್ನು ಪಡೆದ ಕೆಲವು ಕಾದಂಬರಿಗಳನ್ನು ಓದಿದರೆ ಪಶ್ಚಿಮದ ವಿಮರ್ಶಾ ಮಾನದಂಡಗಳ ಬಗೆಗೇ ಅನುಮಾನಗಳೇಳುತ್ತವೆ. ಈ ಆಯ್ಕೆಗಳಲ್ಲಿ ಭಾಗಿಯಾಗುವವರು ತಾವು ಆವರೆಗೆ ಕಂಡರಿಯದ ಅನುಭವವನ್ನು, ವ್ಯಕ್ತಿ-ವ್ಯಕ್ತಿಗಳ ನಡುವಣ ಹಿಂಸೆಯನ್ನು ಬಿಂಬಿಸುವ ಕಾದಂಬರಿಗಳನ್ನೇ ಆಯ್ಕೆ ಮಾಡುತ್ತಿರುವಂತಿದೆ. ಇಂಥ ಆಯ್ಕೆಗಳ ನಡುವೆ, ಓದಿನ ಆನಂದ ಕೊಡುವ, ವಿಶಿಷ್ಟ ಪ್ರಾದೇಶಿಕ ಅನುಭವವನ್ನು ಹೇಳುವ ‘ಕಾನೂರು ಹೆಗ್ಗಡಿತಿ’, ‘ಥಿಂಗ್ಸ್ ಫಾಲ್ ಅಪಾರ್ಟ್’ ಥರದ ಕೃತಿಗಳು ಗೆಲ್ಲುವುದು ಕಷ್ಟವೇನೊ!

ಆದರೂ, ಹಿಂದಿನ 125 ವರ್ಷಗಳಲ್ಲಿ ಜಗತ್ತಿನ ದೊಡ್ಡ ಲೇಖಕ, ಲೇಖಕಿಯರ ಶ್ರೇಷ್ಠ ಕೃತಿಗಳಿಗೆ ನೊಬೆಲ್ ಪ್ರಶಸ್ತಿ ಬಂದಿದೆ. ನೊಬೆಲ್ ಕಮಿಟಿಯು ಆಯ್ಕೆಯಲ್ಲಿ ಎಡವಿದ ಉದಾಹರಣೆಗಳೂ ಇವೆ. 1901ರಲ್ಲಿ ನೊಬೆಲ್ ಪ್ರಶಸ್ತಿಗಳ ಘೋಷಣೆಯಾದ ವರ್ಷ ರಷ್ಯಾದ ಟಾಲ್‌ಸ್ಟಾಯ್ ಬರವಣಿಗೆ ಉತ್ತುಂಗದಲ್ಲಿತ್ತು. ಶೇಕ್‌ಸ್ಪಿಯರ್ ನಂತರದ ದೊಡ್ಡ ಲೇಖಕರೆಂದರೆ ಟಾಲ್‌ಸ್ಟಾಯ್ ಎಂಬ ಅಭಿಪ್ರಾಯ ಪ್ರಚಲಿತವಿತ್ತು. ಆದರೆ ಫ್ರೆಂಚ್ ಕವಿ ಸಲ್ಲಿ ಪ್ರಧೋಮ್‌ಗೆ ಮೊದಲ ನೊಬೆಲ್ ಪ್ರಶಸ್ತಿ ಬಂತು. ಅಂದರೆ, ಯುರೋಪಿಯನ್ ವಿಮರ್ಶೆ ಟಾಲ್‌ಸ್ಟಾಯ್ ಶ್ರೇಷ್ಠತೆಯನ್ನು ಗುರುತಿಸಲು ಇನ್ನೂ ಸಮರ್ಥವಾಗಿರಲಿಲ್ಲ! ಮುಂದಿನ ವರ್ಷ ಟಾಲ್‌ಸ್ಟಾಯ್ ‘ನನಗೆ ನೊಬೆಲ್ ಪ್ರಶಸ್ತಿ ಕೊಡಬೇಡಿ’ ಎನ್ನುತ್ತಾ, ‘ಆ ಹಣ ನೋವು ತರಬಲ್ಲದು’ ಎಂದಿದ್ದರು. ಮೊದಲ ನೊಬೆಲ್ ಪ್ರಶಸ್ತಿ ಪಡೆದ ಪ್ರಧೋಮ್ ಈಗ ಹೇಳಹೆಸರಿಲ್ಲದಂತೆ ಆಗಿದ್ದಾರೆ!

1958ರಲ್ಲಿ ನೈಜೀರಿಯಾದ ಯುಗಪ್ರವರ್ತಕ ಲೇಖಕ ಚಿನುವ ಅಚಿಬೆಯ ‘ಥಿಂಗ್ಸ್ ಫಾಲ್ ಅಪಾರ್ಟ್’ ಪ್ರಕಟವಾಗಿ ಆಫ್ರಿಕನ್ ಸಾಹಿತ್ಯದ ನವೋದಯಕ್ಕೆ ನಾಂದಿ ಹಾಡಿತು. ಈ ಕಾದಂಬರಿ ಪ್ರಕಟವಾಗಿ ಜಗತ್ತಿನಾದ್ಯಂತ ಚರ್ಚೆಯಾಗಿ ದಶಕಗಳಾದರೂ ಅಚಿಬೆಯ ಬರವಣಿಗೆಯ ಮಹತ್ವ ನೊಬೆಲ್ ಸಮಿತಿಗೆ ಅರಿವಾಗಲಿಲ್ಲ. ವಸಾಹತುಶಾಹಿ ತಂದ ಆಘಾತ, ದುರಂತ, ಚಲನೆಗಳ ಕತೆ ಹೇಳುವ ಇದು ಆಫ್ರಿಕಾದ ಕತೆಯನ್ನಷ್ಟೇ ಅಲ್ಲ, ವಸಾಹತೀಕರಣಕ್ಕೊಳಗಾದ ಎಲ್ಲ ದೇಶಗಳ ಅನುಭವವನ್ನೂ ಪ್ರತಿನಿಧಿಸುತ್ತದೆ. ಜಗತ್ತಿನಾದ್ಯಂತ ಪಠ್ಯಪುಸ್ತಕವಾಗಿರುವ ಈ ‘ಕ್ಲಾಸಿಕ್’ನ ಎರಡು ಕೋಟಿ ಪ್ರತಿಗಳು ಖರ್ಚಾಗಿವೆ! ಮುಂದೆಯೂ ಮಹತ್ವದ ಕಾದಂಬರಿಗಳನ್ನು ಬರೆದ ಅಚಿಬೆಗೆ ನೊಬೆಲ್ ಪ್ರಶಸ್ತಿ ಬರಲೇ ಇಲ್ಲ. ಬದಲಿಗೆ, ಪಶ್ಚಿಮದಲ್ಲಿ ಹೆಚ್ಚು ಹೆಸರಾಗಿದ್ದ ನೈಜೀರಿಯಾದ ವೋಲೆ ಶೋಯಿಂಕಾ ಅವರಿಗೆ ಬಂತು.

ಭಾರತೀಯ ಮೂಲದ ಮನೆತನದಲ್ಲಿ ಹುಟ್ಟಿದ ಕೆರಿಬಿಯನ್ ಲೇಖಕ ವಿ.ಎಸ್.ನೈಪಾಲ್‌ಗೆ ನೊಬೆಲ್ ಪ್ರಶಸ್ತಿ ಬಂತು. 1981ರಲ್ಲಿ ‘ಮಿಡ್ ನೈಟ್ಸ್ ಚಿಲ್ಡ್ರನ್’ ಬರೆದು ಪ್ರಖ್ಯಾತರಾದ ಭಾರತೀಯ ಸಂಜಾತ ಲೇಖಕ ಸಲ್ಮಾನ್ ರಶ್ದಿ ಕರ್ನಾಟಕದ ವಿಜಯನಗರ ಸಾಮ್ರಾಜ್ಯವನ್ನು ವಸ್ತುವಾಗಿಸಿಕೊಂಡು 2023ರಲ್ಲಿ ‘ವಿಕ್ಟರಿ ಸಿಟಿ’ ಎಂಬ ಅದ್ಭುತ ಕಾದಂಬರಿ ಬರೆದರು. ಅವರಿಗೆ ನೊಬೆಲ್ ಪ್ರಶಸ್ತಿ ಬರುವ ಸೂಚನೆಗಳೇ ಕಾಣುತ್ತಿಲ್ಲ. ಝೆಕೊಸ್ಲೋವಾಕಿಯಾದ ಅನನ್ಯ ಕಾದಂಬರಿಕಾರ ಮಿಲನ್ ಕುಂದೇರ ಅವರಿಗೆ ನೊಬೆಲ್ ಪ್ರಶಸ್ತಿ ಬರಲೇ ಇಲ್ಲ. ಆದರೆ ಭಾರತವನ್ನು ಕಾಯಂ ವಸಾಹತುವನ್ನಾಗಿ ಇರಿಸಿಕೊಳ್ಳಲು ಪ್ರಯತ್ನಿಸಿದ್ದ ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್‌ಗೆ 1953ರಲ್ಲಿ ಸಾಹಿತ್ಯಕ್ಕೆ ನೊಬೆಲ್ ಪ್ರಶಸ್ತಿ ಬಂತು. ಇವತ್ತು ಅವರೊಬ್ಬ ‘ಲೇಖಕ’ ಎಂದು ಆಣೆ ಮಾಡಿ ಹೇಳಿದರೂ ಒಪ್ಪುವವರಿಲ್ಲ! ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಅಹಿಂಸಾತ್ಮಕ ಚಳವಳಿಯನ್ನು ಮುನ್ನಡೆಸಿದ ಗಾಂಧೀಜಿಗೆ 1948ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಕೊಡುವ ಬಗ್ಗೆ ಚರ್ಚೆ ನಡೆದಿತ್ತು. ಗಾಂಧೀಜಿಯ ಹತ್ಯೆಯಾಗಿದ್ದರಿಂದ ನೊಬೆಲ್ ಪ್ರಶಸ್ತಿ ತಪ್ಪಿಹೋಯಿತು. ಕಾರಣ, ಮರಣೋತ್ತರವಾಗಿ ನೊಬೆಲ್ ಪ್ರಶಸ್ತಿ ಕೊಡುವ ಪರಿಪಾಟವಿಲ್ಲ. ಈ ನಡುವೆ ನೊಬೆಲ್ ಪ್ರಶಸ್ತಿಯನ್ನು ನಿರಾಕರಿಸಿದವರೂ ಇದ್ದಾರೆ. ಜರ್ಮನಿಯ ಅಸ್ತಿತ್ವವಾದಿ ಲೇಖಕ ಜಾನ್ ಪಾಲ್ ಸಾರ್ತರ್, ‘ಈ ಪ್ರಶಸ್ತಿ ನನ್ನ ಬರವಣಿಗೆಯ ಪ್ರಭಾವವನ್ನು ಕುಂದಿಸುತ್ತದೆ’ ಎಂಬ ಕಾರಣಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಸ್ವೀಕರಿಸಲಿಲ್ಲ. 1974ರಲ್ಲಿ ವಿಯೆಟ್ನಾಂನ ಕ್ರಾಂತಿಕಾರಿ ನಾಯಕ ಲಿ ದಕ್ ಥೊಗೆ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾದಾಗ ಅವರು ಹೀಗೆ ಹೇಳಿದರು: ‘ವಿಯೆಟ್ನಾಂನಲ್ಲಿ ಶಾಂತಿ ಸ್ಥಾಪನೆಯಾಗಿಲ್ಲ; ನಾನು ಪ್ರಶಸ್ತಿಯನ್ನು ಒಪ್ಪಿಕೊಳ್ಳುವುದಿಲ್ಲ’.



ನೊಬೆಲ್ ಸಮಿತಿ ಹಲವು ದೇಶಗಳ ಸಾಹಿತ್ಯ ಅಕಾಡೆಮಿಗಳನ್ನೂ ಸಂಪರ್ಕಿಸುತ್ತಿರುತ್ತದೆ. ಭಾರತದ ಕೇಂದ್ರ ಸಾಹಿತ್ಯ ಅಕಾಡೆಮಿಯು ಮೂರು ಸಲ ಕುವೆಂಪು ಹೆಸರನ್ನು ನೊಬೆಲ್ ಪ್ರಶಸ್ತಿಗೆ ಶಿಫಾರಸು ಮಾಡಿತ್ತು. ಮಲಯಾಳದ ತಕಳಿ ಶಿವಶಂಕರ್ ಪಿಳ್ಳೈ, ತಮಿಳಿನ ಜಯಕಾಂತನ್ ಹೆಸರುಗಳೂ ಶಿಫಾರಸಾಗಿದ್ದವು. ಕೇರಳದ ಎಂ.ಟಿ. ವಾಸುದೇವನ್ ನಾಯರ್ ಅವರ ‘ರಂಡಾಮೂಳಂ’ನ ಇಂಗ್ಲಿಷ್ ಅನುವಾದ ‘ದ ಸೆಕೆಂಡ್ ಟರ್ನ್’ ಬಂದಾಗ, ನಾಯರ್‌ಗೆ ನೊಬೆಲ್ ಪ್ರಶಸ್ತಿ ಬರಬಹುದೆಂಬ ಸುದ್ದಿಯಿತ್ತು. ಇವೆಲ್ಲ ಸ್ವೀಡನ್ ತನಕ ತಲುಪಿದ್ದವೋ ಇಲ್ಲವೋ!

ಈಚಿನ ವರ್ಷಗಳಲ್ಲಿ ಭಾರತದಲ್ಲಿ ಹಬ್ಬಿರುವ ಹಿಂಸೆ, ಸರ್ವಾಧಿಕಾರ, ವಿಭಜಕ ಪ್ರವೃತ್ತಿ, ಸೂಕ್ಷ್ಮಜ್ಞರ ಸುತ್ತ ಬೇಹುಗಾರಿಕೆಯ ವಾತಾವರಣ, ಲಿಟರರಿ ಫೆಸ್ಟಿವಲ್‌ಗಳ ಅತಿಥಿಗಳ ಆಯ್ಕೆಯಲ್ಲೂ ಸಾಂಸ್ಕೃತಿಕ ಹದ್ದುಗಳ ಮಧ್ಯಪ್ರವೇಶ... ಇವೆಲ್ಲ ಇರುವ ಅಸಾಹಿತ್ಯಕ ವಾತಾವರಣದಲ್ಲಿ ಗಂಭೀರ ಸಾಹಿತ್ಯ ಚರ್ಚೆಗಳು ಕೇಂದ್ರಕ್ಕೆ ಬರುವುದು ಕಷ್ಟ. ಇಂಥ ಗುಮಾನಿಯ ವಾತಾವರಣದಲ್ಲಿ ಪ್ರತಿಭೆಗಳು ಕಮರತೊಡಗುತ್ತವೆ. ಆದರೆ, ಒಮ್ಮೊಮ್ಮೆ ಇಂಥ ಸನ್ನಿವೇಶಗಳೇ ಸವಾಲಾಗಿ ಸಾಹಿತ್ಯಕ ಪ್ರತಿಭೆ ಸ್ಫೋಟಗೊಳ್ಳುವುದುಂಟು. ಕಮ್ಯುನಿಸ್ಟ್ ಸರ್ವಾಧಿಕಾರದ ಗೋಚರ-ಅಗೋಚರ ಹಿಂಸೆಗಳಿಗೆ ತುತ್ತಾದ ಮಿಲನ್ ಕುಂದೇರ ಅವರ ಕಾದಂಬರಿಗಳು ದಮನದ ಕಾಲದಲ್ಲಿನ ಪ್ರತಿಭಾಸ್ಫೋಟಕ್ಕೆ ಸಾಕ್ಷಿಯಂತಿವೆ. ಸರ್ಕಾರಗಳಿಂದ ಕಿರುಕುಳಕ್ಕೆ ತುತ್ತಾಗಿರುವ ಅರುಂಧತಿ ರಾಯ್ ಈ ದಮನದ ವಾತಾವರಣದಲ್ಲೇ ‘ದ ಮಿನಿಸ್ಟ್ರಿ ಆಫ್ ಅಟ್ಮೋಸ್ಟ್ ಹ್ಯಾಪಿನೆಸ್’ ಎಂಬ ಮಹತ್ವಾಕಾಂಕ್ಷೆಯ ಕಾದಂಬರಿ ಬರೆದರು. ಅರುಂಧತಿ ರಾಯ್, ಅಮಿತಾವ್ ಘೋಷ್ ಥರದವರ ಬರವಣಿಗೆಗಳಲ್ಲಿ ನೊಬೆಲ್ ಪ್ರಶಸ್ತಿಯ ಮಹತ್ವಾಕಾಂಕ್ಷೆಯಂತೂ ಇದೆ.

ಕೊನೆಯದಾಗಿ, ನೊಬೆಲ್ ಪ್ರಶಸ್ತಿಯ ಹಿನ್ನೆಲೆ: ಹತ್ತೊಂಬತ್ತನೆಯ ಶತಮಾನದ ಕೊನೆಗೆ, ಡೈನಮೈಟ್‌ನಂತಹ ಸ್ಫೋಟಕ ವಸ್ತುಗಳನ್ನು ಉತ್ಪಾದಿಸಿದ ಸ್ವೀಡನ್ನಿನ ಆಲ್ಫ್ರೆಡ್ ನೊಬೆಲ್ ಅಪಾರ ಹಣ ಮಾಡಿದ. ಅವನ ಬಗ್ಗೆ ಜನರಿಗೆ ಅಸಹ್ಯವಿತ್ತು. ಆಲ್‌ಫ್ರೆಡ್‌ನ ಸೋದರ ತೀರಿಕೊಂಡಾಗ ಆಲ್‌ಫ್ರೆಡ್ಡನೇ ತೀರಿಕೊಂಡನೆಂದು ಭಾವಿಸಿದ ಪತ್ರಿಕೆಗಳು ‘ಸಾವಿನ ವ್ಯಾಪಾರಿಯ ಸಾವು’ ಎಂದು ಬರೆದವು! ಆಗ ಎಚ್ಚೆತ್ತ ಆಲ್‌ಫ್ರೆಡ್ ‘ಮಾನವಕುಲಕ್ಕೆ ಅಸಾಧಾರಣ ಕೊಡುಗೆ’ಗಾಗಿ ಐದು ನೊಬೆಲ್ ಪ್ರಶಸ್ತಿಗಳನ್ನು ಘೋಷಿಸಿ ಅದಕ್ಕಾಗಿ ಹಣ ತೆಗೆದಿಟ್ಟ; ಡೈನಮೈಟ್‌ನಿಂದ ಬಂದ ಹಣದ ಸೂತಕ ಕಳೆದುಕೊಂಡ! ಕಾಲಾನಂತರ ನೊಬೆಲ್ ಪ್ರಶಸ್ತಿಗಳು ಜಗತ್ತಿನ ಅತ್ಯುನ್ನತ ಪ್ರಶಸ್ತಿಗಳಾದವು. ಪ್ರತಿ ಅಕ್ಟೋಬರ್‌ನಲ್ಲಿ ನೊಬೆಲ್ ಮಾಯಾಜಿಂಕೆಯು ಲೋಕದ ಸಾವಿರಾರು ಪ್ರತಿಭಾಶಾಲಿಗಳೆದುರು ಮಿಂಚಿ ಮಾಯವಾಗುತ್ತಲೇ ಇರುತ್ತದೆ.

ಚುರುಮುರಿ



ಪಾನಕಾಯಕ!

• ಸುಮಂಗಲಾ

‘ಪಾಪ... ಕುಡುಕರಿಗೆ ಎಲ್ಲಾರೂ ಬೈಯತಾರೆ. ಅವರು ಕುಡೀದಿದ್ದರೆ, ಅಬಕಾರಿ ವರಮಾನ ಇಲ್ಲದಿದ್ದರೆ ಯಾರಿಗಾನ ರಾಜ್ಯಭಾರ ಮಾಡಕ್ಕೆ ಆಗತಿತ್ತಾ?’ ಎಂದು ಬೆಕ್ಕಣ್ಣ ಪಾನಪ್ರಿಯರಿಗೆ ಬೆಂಬಲವನ್ನು ಸೂಚಿಸಿತು.

‘ಈ ಸಲದ ಬ್ಯಾಸಗೀಲಿ ಬಿಸಿಲು ಜೋರಿತ್ತು, ತಂಪಾಗಲೆಂದು ಮಂದಿ ಹೆಚ್ಚು ಬಿಯರ್ ಕುಡಿದು, ಅಬಕಾರಿ ಇಲಾಖೆಗೆ ಲಾಭ ತಂದಾರಂತೆ. ಈಗ ಮಳಿ ಆಗಿ, ತಣ್‌ತಣ್‌ಗಿನ ವಾತಾವರಣ ಇದ್ರೂ ಬಿಯರ್‌ಪ್ರಿಯರು ಅದನ್ನ ಬಿಡಾಕೆ ತಯಾರಿಲ್ಲಂತೆ’ ಎಂದು ಸುದ್ದಿ ತೋರಿಸಿತು.

‘ಪ್ರತಿವರ್ಷ ವರಮಾನದಲ್ಲಿ ಉತ್ತಮ ಸಾಧನೆ ಮಾಡೂ ಇಲಾಖೆ ಅಂದ್ರೆ ಅಬಕಾರಿ ಇಲಾಖೇನೇ. ಅಬಕಾರಿ ಸಚಿವರು, ಅಧಿಕಾರಿಗಳು ಮತ್ತು ಪಾನಪ್ರಿಯರು ಎಲ್ಲರೂ ಏಕನಿಷ್ಠೆಯಿಂದ ಕೆಲಸ ಮಾಡಿ, ವಾರ್ಷಿಕ ವರಮಾನದ ಗುರಿ ದಾಟುತಾರೆ’ ಎಂದು ನಾನೂ ಹೊಗಳಿದೆ.

‘ಖರೇ ಅಂದ್ರೆ ಅಬಕಾರಿ ಇಲಾಖೆಯ ವರಮಾನ ಹೆಚ್ಚಿಸಿದ ಬಿಯರ್ ಕುಡುಕರಿಗೆ ಸನ್ಮಾನ ಮಾಡಬಕು. ಅವರಿಗೆ ಒಂದು ತಗಂಡ್ರೆ ಒಂದು ಫ್ರೀ ಅಂತ ಅಥವಾ ತಿಂಗಳ ಟಾರ್ಗೆಟ್ ಮುಟ್ಟಿದವರಿಗೆ ಮುಂದಿನ ತಿಂಗಳಿಗೆ ಸಬ್ಸಿಡಿ ದರದಲ್ಲಿ ಬಿಯರ್ ಸಪ್ಲೈ, ಹಿಂಗೆ ಏನರೆ ಯೋಜನೆ ಮಾಡಬಕು’ ಬೆಕ್ಕಣ್ಣ ಭಲೇ ಹುರುಪಿನಿಂದ ವಾದಿಸಿತು.

‘ಆವಾಗ ಮಂದಿ ನೀರು ಬಿಟ್ಟು ಬಿಯರ್ ಕುಡಿಯಕ್ಕೆ ಶುರುಮಾಡತಾರೆ ಅಷ್ಟೆ. ಏನೇ ಫ್ರೀ ಕೊಟ್ಟರೂ ವಾರಾಂತ್ಯಕ್ಕೆ ಮಾತ್ರ ಕೊಡಬಕು’.

‘ಅದೂ ಖರೇನೆ. ವರಮಾನಕ್ಕೆ ಇಷ್ಟು ಗಣನೀಯ ಕೊಡುಗೆ ಸಲ್ಲಿಸಿ, ಸರ್ಕಾರಿ ಯಂತ್ರ ಛಲೋತ್ನಾಗೆ ನಡೆಯೋದಕ್ಕೆ ಮೂಲಕಾರಣರು ನಾವು ಅನ್ನೋ ಹಮ್ಮು ಬಿಮ್ಮು ಇಲ್ಲದೇ, ಮಳೆಗೆ ಚಳಿಗೆ ನಡುಗದೇ, ತಮ್ಮ ಪಾಡಿಗೆ ತಾವು ಪಾನಕಾಯಕ ಮಾಡೋ ಪಾನಪ್ರಿಯರನ್ನು ಅಬಕಾರಿ ಇಲಾಖೆ ಕಡೆಗಣಿಸಬಾರದು’.

‘ಹೌದು, ಅವರಿಗೆ ಉಚಿತ ಆರೋಗ್ಯ ಸೇವೆ, ವಿಮಾಸೌಲಭ್ಯ ಇತ್ಯಾದಿ ಕೊಡಬಕು’.

‘ಅಷ್ಟೇ ಅಲ್ಲ, ರಾತ್ರಿ ಪಾನಕಾಯಕ ಮುಗಿದ ಮೇಲೆ ಉಚಿತ ಸಾರಿಗೆ ಸೌಲಭ್ಯ ಕೊಟ್ಟು, ಅವರವರ ಮನೆಗೆ ಬಿಡಬಕು!’ ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಚರ್ಚೆ

ಸ್ವಾಮೀಜಿಗಳು ಮತ್ತು ರಾಜಕಾರಣ

ರಾಜಕಾರಣದ ಒಳಸುಳಿಗಳೆಲ್ಲ ಕರತಲಾಮಲಕ ಆಗಿರುವ ಈಗಿನ ಕಾವಿಧಾರಿಗಳಿಗೆ ಯಾವ ‘ಉಸಾಬರಿ’ ಬೇಕಿಲ್ಲ ಎಂದು ಕೇಳಬೇಕಾಗಿದೆ

• ಆರ್.ಲಕ್ಷ್ಮೀನಾರಾಯಣ


ಪೇಜಾವರ ಮಠಾಧೀಶರು ಹೇಳಿದರು ಎನ್ನಲಾದ ಒಂದು ಮಾತಿನ ನೆಪ ಮಾಡಿಕೊಂಡು ನಾರಾಯಣ ಎ. ಅವರು ‘ಜಾತ್ಯತೀತತೆ ಮತ್ತು ಜಾತಿಗಣತಿ’ ಎಂಬ ಲೇಖನದಲ್ಲಿ (ಪ್ರ.ವಾ., ಅ. 25) ಜಾತಿಗಣತಿಯ ಬಗ್ಗೆ ಹೇಳಿರುವ ಮಾತುಗಳು ಬಹುಶಃ ಪ್ರಸ್ತುತವಾಗಿಯೇ ಸಮಂಜಸವಾಗಿಯೇ ಇವೆ. ಆದರೆ ಅವರು ಹೇಳಿರುವ ಒಂದೆರಡು ಮಾತುಗಳು ತುಂಬ ಸೋಜಿಗ ಉಂಟುಮಾಡಿದವು. ಅವೆಂದರೆ, ‘ಸ್ವಾಮೀಜಿ ಅಂತ ಕರೆಸಿಕೊಳ್ಳುವ ಅವರಿಗೆ ಅಪ್ಪಟ ಲೌಕಿಕ ವ್ಯವಹಾರಗಳಿಗೆ ಸಂಬಂಧಿಸಿದ ಜಾತಿ ಜನಗಣತಿ, ಅದರೊಳಗಣ ರಾಜಕಾರಣದ ಒಳಸುಳಿಗಳಂತಹವನ್ನು ಪ್ರಶ್ನಿಸುವ ಉಸಾಬರಿ ಬೇಕೆ ಎನ್ನುವ ಮರುಪ್ರಶ್ನೆಯನ್ನು ಯಾರಾದರೂ ಕೇಳಬೇಕಲ್ಲವೆ?’ ಎಂಬ ಮತ್ತು ನಿಜಕ್ಕೂ ‘ಸ್ವಾಮೀಜಿಗಳು’ ಅಂತ... ಎಂದು ಪ್ರಾರಂಭವಾಗುವ ದೀರ್ಘ ಪ್ಯಾರಾದಲ್ಲಿ ಬರುವ... ‘ಲೋಕಾತೀತ ಪ್ರಜ್ಞೆ ಇರುವ ಸಂತರು ಈ ದೇಶಕ್ಕೆ ಬೇಕಾಗಿದೆ’ ಎಂಬ ಮಾತುಗಳು. ಅವರ ಎರಡನೇ ಮಾತೇ ಅಂಥ ಲೋಕಾತೀತ ಪ್ರಜ್ಞೆ ಇರುವ ‘ಸಂತರು’ ಸದ್ಯಕ್ಕೆ ಇಲ್ಲ ಅಥವಾ ಅಂಥವರು ಕಾಣುತ್ತಿಲ್ಲ ಎಂಬ ಅರ್ಥವನ್ನು ಹೊರಡಿಸುತ್ತಿದೆ. ಅದನ್ನು ಕುರಿತೇ ಈ ಬರಹ.

ನಮ್ಮ ದೇಶದಲ್ಲಿ ಸರ್ವಸಂಗ ಪರಿತ್ಯಾಗದ, ವೈರಾಗ್ಯದ, ತ್ಯಾಗದ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವಂಥ ಗುಣಗಳನ್ನು ಸಂಕೇತಿಸುವ ಕಾಷಾಯ ವಸ್ತ್ರವನ್ನು ಧರಿಸಿದವರನ್ನು ಎಲ್ಲಿಲ್ಲದ ಗೌರವ, ಮರ್ಯಾದೆ, ಶ್ರದ್ಧಾಭಕ್ತಿಯಿಂದ ಕಾಣುವುದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಈಗ ಅವರು ಕೇಳಿರುವ ‘... ಉಸಾಬರಿ ಬೇಕೆ?’ ಎಂಬಂಥ ಪ್ರಶ್ನೆಯೇ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುವ ರೀತಿಯಲ್ಲಿ ಬಹುಪಾಲು ಕಾಷಾಯ ಅಥವಾ ಕಾವಿಧಾರಿಗಳ ನಡೆ ಇರುವುದನ್ನು ನಮ್ಮ ದೇಶದ ಜನ ಕಾಣುತ್ತ ಬಂದಿದ್ದಾರೆ. ಅವರಿಗೆ ಯಾವ ‘ಉಸಾಬರಿ’ ಬೇಕಿಲ್ಲ? ಎಂದು ಕೇಳಬೇಕಾಗಿದೆ.

ತಮ್ಮ ಜೀವಮಾನದ ಕಡೆಯ ಉಸಿರಿರುವ ತನಕವೂ ರಾಜಕಾರಣವನ್ನು ಬಿಟ್ಟು ಇನ್ನೇನನ್ನೂ ಮಾಡದ, ಮಾಡಲರಿಯದ, ರಾಜಕಾರಣವನ್ನು ಬಿಟ್ಟರೆ ನೀರಿನಿಂದ ಹೊರತೆಗೆದ ಮೀನಿನಂತಾಗಿ ಬಿಡುವ ನುರಿತ ವಯೋವೃದ್ಧ ರಾಜಕಾರಣಪಟುಗಳಿಗೂ ಅರ್ಥವಾಗದಂಥ ರಾಜಕಾರಣದ ಒಳಸುಳಿಗಳೆಲ್ಲ ಕರತಲಾಮಲಕವಾಗಿರುವ; ಅಷ್ಟೇ ಏಕೆ ಆ ವಿಷಯಗಳಲ್ಲಿ ಬೇಕಾದರೆ ಅವರಿಗೂ ಪಾಠ ಹೇಳಿಕೊಡುವಷ್ಟು ಪ್ರಬುದ್ಧರಾದ ಕಾವಿಧಾರಿಗಳ ಸಂಖ್ಯೆ ಅಪಾರವಾಗಿಯೇ ಇದೆ ಎನ್ನುವುದನ್ನೂ ನಮ್ಮ ಜನ ಚೆನ್ನಾಗಿ ಬಲ್ಲರು.

ಪ್ರತಿ ಚುನಾವಣೆಯ ಸಂದರ್ಭದಲ್ಲಿ, ತಮ್ಮ ಸಮುದಾಯದ ವೋಟು ಬೇಕಿದ್ದರೆ ತಮ್ಮ ಮಾತುಗಳನ್ನು ನಡೆಸಿಕೊಡಬೇಕೆಂದು ಎಲ್ಲ ರಾಜಕೀಯ ಪಕ್ಷಗಳಿಗೆ ತೀವ್ರ ಒತ್ತಡ ಹಾಕುವುದರಿಂದ ಆರಂಭಿಸಿ, ಮುಖ್ಯಮಂತ್ರಿ ಸಂಪುಟ ರಚಿಸುವಾಗ ತಮ್ಮ ಸಮುದಾಯದ ಇಂಥಿಂಥ ವ್ಯಕ್ತಿಯನ್ನೇ ಮಂತ್ರಿ ಮಾಡಬೇಕು, ಇಂಥಿಂಥ ಸಮೃದ್ಧವಾದ ಖಾತೆಗಳನ್ನೇ ಕೊಡಬೇಕು ಎಂದು ಒತ್ತಾಯಿಸುವ, ಪ್ರಭಾವ ಬೀರುವ ಸಂದರ್ಭಗಳಲ್ಲಿ ಅದು ನಿಚ್ಚಳವಾಗಿ ವ್ಯಕ್ತವಾಗುತ್ತಿರುವುದು ಸೂರ್ಯ ಸತ್ಯ. ಹಾಗಾಗಿ, ಬಹಳಷ್ಟು ಕಾಷಾಯಧಾರಿಗಳಿಗೆ ‘ಲೌಕಿಕ ವ್ಯವಹಾರಗಳಿಗೆ ಸಂಬಂಧಿಸಿದ’ ಎನ್ನುವ ಮಾತನ್ನು ಬಳಸುವುದೇ ಸರಿಯಾಗಲಾರದು. ಅವರು ಮುಳುಗಿರುವುದೇ ಪರಮ ಲೌಕಿಕದಲ್ಲಿ.

ಆಧ್ಯಾತ್ಮಿಕ ಚಿಂತನೆ, ಧಾರ್ಮಿಕ ಚಿಂತನೆ ಎಂಬುದು ಬಹಳಷ್ಟು ಕಾಷಾಯಧಾರಿಗಳಿಗೆ ಮತ್ತು ಅವರು ಅಧ್ಯಕ್ಷರಾಗಿರುವ ಮಠಗಳಿಗೆ ‘ನರ್ಮದೆಯಿಂ ಗೆಂಟು’- ಅಂದರೆ ಬಹಳ ದೂರ. ಅವು ನೆಪಮಾತ್ರವಾಗಿ ಹೊರ ಆವರಣಗಳಾಗಿರುತ್ತವೆ. ಅವುಗಳಿಗೆ ಕೂಡ ಅವರು ಧರಿಸಿರುವ ಕಾವಿಯ ಹಾಗೆಯೇ ಜನರನ್ನು ಸೆಳೆಯುವ ಲಾಂಛನಗಳಿಗಿಂತ ಹೆಚ್ಚಿನ ಅರ್ಥವಿಲ್ಲ. ಕೆಲವರಂತೂ ಸಮಾಜದ ತಿರಸ್ಕಾರಕ್ಕೆ ಒಳಗಾಗುವಂಥ ಕಾರಣಗಳಿಗಾಗಿ ಕೋರ್ಟಿನ ಕಟಕಟೆಯನ್ನು ಏರಿರುವುದು, ಏರುತ್ತಿರುವುದು ದಿನನಿತ್ಯದ ಸುದ್ದಿಗಳಾಗುತ್ತಿವೆ. ಬಹುಪಾಲು ಮಠಗಳೆಲ್ಲ ಆಯಾ ಸಮುದಾಯದವರನ್ನು ಒಟ್ಟುಗೂಡಿಸುವ ಕೇಂದ್ರಗಳು ಮತ್ತು ಮಠಾಧೀಶರೆಂಬುವವರು ಅವುಗಳ ನೇತಾರರು.



ಅವು ತಮ್ಮ ಸಮುದಾಯಗಳ ಸಂಖ್ಯಾಬಲವನ್ನು ಸಂದರ್ಭ ಬಂದಾಗ ಇನ್ನಿಲ್ಲದಂತೆ ಮೆರೆಸುವ ಶಕ್ತಿಕೇಂದ್ರಗಳೆಂದರೂ ನಡೆಯುತ್ತದೆ. ಅವುಗಳಿಗಿಂತ ಹೆಚ್ಚಿನದನ್ನು ಸದ್ಯದಲ್ಲಿ ಅವುಗಳಿಂದ ನಿರೀಕ್ಷಿಸುವುದೂ ವ್ಯರ್ಥ ಎನ್ನುವ ರೀತಿಯಲ್ಲಿರುವುದು ದುರ್ದೈವವೇ ಸರಿ.

ಕಾಷಾಯಧಾರಿಗಳ ಈ ಪ್ರಾಬಲ್ಯವನ್ನು ಅರಿತೇ ಈ ಜಾತ್ಯತೀತ ದೇಶ ಮತ್ತು ರಾಜ್ಯದಲ್ಲೂ ಜನರ ಕಷ್ಟದ ಗಳಿಕೆಯ ತೆರಿಗೆಯ ಹಣವನ್ನು ನಿರ್ಯೋಚನೆಯಿಂದ ಅವರು ಪ್ರತಿನಿಧಿಸುವ ಸಮುದಾಯದ ಮಠಗಳಿಗೆ ಹಂಚುವುದರಲ್ಲಿ ಅಧಿಕಾರ ಕೇಂದ್ರದಲ್ಲಿ ಇರುವವರಿಗೆ ಎಲ್ಲಿಲ್ಲದ ಔದಾರ್ಯ. ಸಮುದಾಯಗಳನ್ನು ಪ್ರತಿನಿಧಿಸುವ ಮಠಮಾನ್ಯಗಳಿಂದ ಕಡೆಯಪಕ್ಷ ಆಯಾ ಸಮುದಾಯಗಳಿಗೆ ಸೇರಿದ ಜನರಿಗೆ ಶಿಕ್ಷಣದ ಅಗತ್ಯಗಳನ್ನು ಪೂರೈಸಿ ಅವರನ್ನು ಶಿಕ್ಷಿತರನ್ನಾಗಿಸುವ ಕೆಲಸದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವಂಥ ಒಳ್ಳೆಯ ಕೆಲಸಗಳು ನಡೆದಿರುವುದು ನಿಜವೇ ಆದರೂ ನಾರಾಯಣ ಅವರು ಹೇಳುವಂತೆ ಲೋಕಾತೀತ ಪ್ರಜ್ಞೆ ಇರುವಂಥ ಸಂತ ಮನೋಧರ್ಮದ ಕಾಷಾಯಧಾರಿಗಳ ಸಂಖ್ಯೆ ಈಗ ಇಲ್ಲವೇ ಇಲ್ಲ ಎಂದು ಹೇಳುವಂತಿಲ್ಲ. ಆದರೆ ಅಂಥ ವಿರಳಾತಿವಿರಳ ಸಂತರ ಸಮಾಜ ನೂರ್ಮಡಿಸಬೇಕಾದರೆ, ಈಗಿನ ಕಾಷಾಯಧಾರಿಗಳೆಲ್ಲರಿಗೂ ಅಂಥ ಮನೋಧರ್ಮ ಬರಲೆಂಬುದೇ ಪ್ರಜ್ಞಾವಂತ ಭಾರತೀಯರೆಲ್ಲರ ಹೃದಯದಾಳದ ಆಕಾಂಕ್ಷೆಯಾಗಿದೆ.

ವಾಚಕರ ವಾಣಿ

ಬಲಿಷ್ಠ ನ್ಯಾಯಾಂಗ ವ್ಯವಸ್ಥೆಯಿಂದ ಜನರಿಗೆ ನೆಮ್ಮದಿ

ಬೇಲೆಕೇರಿ ಅದಿರು ಕಳ್ಳಸಾಗಣೆ ಪ್ರಕರಣದಲ್ಲಿ ಶಾಸಕ ಸತೀಶ್ ಸೈಲ್ ಸೇರಿದಂತೆ ಅಪರಾಧಿಗಳಿಗೆ ಜೈಲು ಶಿಕ್ಷೆ ಆಗಿರುವುದಕ್ಕೆ ಪ್ರತಿಕ್ರಿಯಿಸಿರುವ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಇದು ನ್ಯಾಯಾಂಗಕ್ಕೆ ದೊರೆತ ಜಯ, ಈ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದಾರೆ, ಅವರಿಗೂ ಶಿಕ್ಷೆಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದು ಸರಿಯಾಗಿದೆ. ಈ ಬೆಳವಣಿಗೆ ಈಗ ರಾಜ್ಯದ ಅನೇಕ ರಾಜಕಾರಣಿಗಳ ನಿದ್ದೆಗೆಡಿಸಿರಬಹುದು.

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸುದ್ದಿಯಾದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ, ಚಿತ್ರನಟ ದರ್ಶನ್ ಆರೋಪಿಯಾಗಿರುವ ರೇಣುಕಸ್ವಾಮಿ ಕೊಲೆ ಪ್ರಕರಣ, ಶಾಸಕ ಮುನಿರತ್ನ ಅವರದು ಎನ್ನಲಾದ ಅತ್ಯಾಚಾರ ಪ್ರಕರಣದಂತಹ ಪ್ರಮುಖ ಸಂದರ್ಭಗಳಲ್ಲಿ ನ್ಯಾಯಾಂಗ ತೆಗೆದುಕೊಂಡ ನಿರ್ಧಾರಗಳು ಸಾಮಾನ್ಯ ಜನರಲ್ಲಿ ನ್ಯಾಯಾಂಗದ ಬಗ್ಗೆ ಹೆಚ್ಚು ವಿಶ್ವಾಸ ಮೂಡುವಂತೆ ಮಾಡಿವೆ. ನ್ಯಾಯಾಂಗ ಹೆಚ್ಚು ಬಲಿಷ್ಠವಾದರೆ ಜನಸಾಮಾನ್ಯರು ನೆಮ್ಮದಿಯಿಂದ ಬದುಕಲು ಸಾಧ್ಯ. ರಾಜಕಾರಣಿಗಳು ಸಹ ಬುದ್ಧಿ ಕಲಿಯಲು ಅವಕಾಶವಾಗುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಇಂತಹ ಭಾಷಾಭಿಮಾನ ನಮ್ಮಲ್ಲಿದೆಯೇ?

ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಅವರು ಹಿಂದಿಯಲ್ಲಿ ಬರೆದಿದ್ದ ಪತ್ರಕ್ಕೆ ಡಿಎಂಕೆ ರಾಜ್ಯಸಭಾ ಸಂಸದ ಎಂ.ಎಂ.ಅಬ್ದುಲ್ಲಾ ಅವರು ತಮಿಳಿನಲ್ಲಿ ಪ್ರತಿಕ್ರಿಯೆ ನೀಡಿ ಭಾಷಾಭಿಮಾನ ತೋರಿರುವುದು ಶ್ಲಾಘನೀಯ. ದಶಕಗಳ ಹಿಂದೆ ಅಚ್ಯುತ ಮೆನನ್ ಅವರು ಕೇರಳದ ಮುಖ್ಯಮಂತ್ರಿಯಾಗಿದ್ದಾಗ, ಉತ್ತರಪ್ರದೇಶದ ಮುಖ್ಯಮಂತ್ರಿ ಮುಲಾಯಂ ಸಿಂಗ್ ಅವರು ಹಿಂದಿಯಲ್ಲಿ ಬರೆದಿದ್ದ ಪತ್ರಕ್ಕೆ ಮಲಯಾಳ ಭಾಷೆಯಲ್ಲಿ ಉತ್ತರಿಸಿದ್ದರು. ಇಂತಹ ಭಾಷಾಭಿಮಾನದ ಒಂದಂಶವಾದರೂ ನಮ್ಮವರಿಗೆ ಇದ್ದಿದ್ದರೆ ಎಂದು ಕನ್ನಡಾಭಿಮಾನಿಗಳು ಅಲವತ್ತುಕೊಳ್ಳುತ್ತಿದ್ದಾರೆ. ಭಾಷಾ ಅಸ್ಮಿತೆಯ ದಿಸೆಯಲ್ಲಿ ನಮ್ಮ ಜನಪ್ರತಿನಿಧಿಗಳ ತುಟಿ ಎಂದೂ ಪಿಟಕ್ಕೆನ್ನುವುದಿಲ್ಲ. ತಾವು ರಾಷ್ಟ್ರೀಯವಾದಿಗಳು ಎಂದು ಬಿಂಬಿಸಿಕೊಳ್ಳಲು ಅವರು ಸದಾ ಪ್ರಯತ್ನಿಸುತ್ತಾರೆ. ನಮ್ಮಲ್ಲೂ ಪ್ರಬಲವಾದ ಪ್ರಾದೇಶಿಕ ಪಕ್ಷ ಇದ್ದಿದ್ದರೆ ಇಂತಹ ಸ್ಥಿತಿ ಇರುತ್ತಿರಲಿಲ್ಲವೇನೋ ಎನ್ನುವ ಪ್ರಜ್ಞಾವಂತರ ಅನಿಸಿಕೆಯಲ್ಲಿ ಅರ್ಥವಿದೆ.

ರಮಾನಂದ ಶರ್ಮಾ, ಬೆಂಗಳೂರು

ಸಮ್ಮೇಳನಾಧ್ಯಕ್ಷರ ಮೆರವಣಿಗೆ: ಮುನ್ನಾದಿನವೇ ಆಗಲಿ

ಮೂರು ದಿನ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ದಿನವು ಸಮ್ಮೇಳನದ ಅಧ್ಯಕ್ಷರ ಭವ್ಯ ಮೆರವಣಿಗೆ ಮತ್ತು ಉದ್ಘಾಟನೆಗಾಗಿಯೇ ಕಳೆದುಹೋಗುತ್ತದೆ. ಇದರಿಂದ, ನಿಗದಿಪಡಿಸಿದ ಗೋಷ್ಠಿಗಳು ಸಮಯಕ್ಕೆ ಸರಿಯಾಗಿ ಆರಂಭವಾಗುವುದಿಲ್ಲ. ಹೀಗಾಗಿ, ಇಡೀ ದಿನ ಸಮ್ಮೇಳನದ ಗೋಷ್ಠಿಗಳಿಗೆ ನಿಗದಿಪಡಿಸಿದ ಸಮಯ ಕಡಿಮೆಯಾಗುತ್ತಾ ಹೋಗುತ್ತದೆ. ಬಹಳಷ್ಟು ತಯಾರಿಯೊಂದಿಗೆ ಬರುವ ಭಾಷಣಕಾರರಿಗೆ ಸಮಯವೇ ಸಾಲುವುದಿಲ್ಲ. ಸಮ್ಮೇಳನದ ಮುನ್ನಾ ದಿನವೇ ಸಮ್ಮೇಳನದ ಸರ್ವಾಧ್ಯಕ್ಷರ ಭವ್ಯ ಮೆರವಣಿಗೆಯನ್ನು ಸಂಜೆ ಸಮಯದಲ್ಲಿ ಮುಗಿಸಿ ಅವರನ್ನು ವೇದಿಕೆಗೆ ಸ್ವಾಗತಿಸುವುದು ಒಳ್ಳೆಯದು.

ಸಮ್ಮೇಳನವೆಂದರೆ ಭೂರಿ ಭೋಜನ ಎಂಬ ಮಾತು ಕೇಳಿಬರುತ್ತದೆ. ಕನ್ನಡ ನಾಡು- ನುಡಿಯ ಔತಣ ಸವಿಯಲು ಜನ ಬರುತ್ತಾರೆ. ಆದರೆ ಸಮ್ಮೇಳನಕ್ಕಿಂತ ಊಟದ ವಿಷಯವೇ ಈಚಿನ ದಿನಗಳಲ್ಲಿ ಮಹತ್ವ ಪಡೆಯುತ್ತಿದೆ, ಸಮಸ್ಯೆಗಳಿಗೂ ಕಾರಣವಾಗುತ್ತಿದೆ. ಸಮ್ಮೇಳನದಲ್ಲಿ ಉಚಿತ ಊಟದ ವ್ಯವಸ್ಥೆಗಿಂತ ಹೆಚ್ಚು ಹೋಟೆಲ್‌ಗಳನ್ನು ತೆರೆಸಿ, ಕನಿಷ್ಠ ದರ ನಿಗದಿಪಡಿಸಿ ಊಟದ ವ್ಯವಸ್ಥೆ ಮಾಡುವುದು ಸೂಕ್ತ ಎಂದು ಗುರು ಜಗಳೂರು ಅವರು ನೀಡಿರುವ ಸಲಹೆ (ವಾ.ವಾ., ಅ. 25) ಮಿತವ್ಯಯದ ದೃಷ್ಟಿಯಿಂದ ಉತ್ತಮವಾದುದು. ಸಮ್ಮೇಳನದ ಕಾರ್ಯಕಾರಿ ಸಮಿತಿ ಈ ಬಗ್ಗೆ ಪರಿಶೀಲಿಸಲಿ. ಕಾಲಕ್ಕೆ ತಕ್ಕಂತೆ ಸಮ್ಮೇಳನದ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ನುಡಿಹಬ್ಬವು ಸಾರ್ಥಕ್ಯ ಪಡೆಯುವುದಿಲ್ಲ.

ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್.ಪೇಟೆ

ಅನಧಿಕೃತ ಕಟ್ಟಡ: ಜನಪ್ರತಿನಿಧಿಗಳೂ ಹೊಣೆ

ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದಲ್ಲಿದ್ದ ಬಹುಮಹಡಿ ಕಟ್ಟಡ ಕುಸಿದು ದುರಂತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇನ್ನು ಮುಂದೆ ಯಾವುದೇ ಕಾರಣಕ್ಕೂ ಅನಧಿಕೃತ ಕಟ್ಟಡಗಳ ನಿರ್ಮಾಣವಾಗಬಾರದು, ಒಂದು ವೇಳೆ ನಿರ್ಮಿಸಿದರೆ ಅದಕ್ಕೆ ಸಂಬಂಧಪಟ್ಟ ಎಂಜಿನಿಯರ್ ಅನ್ನು ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿರುವುದಾಗಿ ವರದಿಯಾಗಿದೆ. ನಗರದಲ್ಲಿ ಅನಧಿಕೃತ ಕಟ್ಟಡಗಳು ತಲೆಯೆತ್ತಲು ಪಾಲಿಕೆ ಅಧಿಕಾರಿವರ್ಗದ ನಿರ್ಲಕ್ಷ್ಯವೇ ಕಾರಣ ಎನ್ನುವುದನ್ನು ಹೇಳಬೇಕಾಗಿಲ್ಲ. ಇಂಥ ನಿರ್ಲಕ್ಷ್ಯಕ್ಕೆ ಕಾರಣ ಏನಿರಬಹುದು ಎನ್ನುವುದರ ವಿಶ್ಲೇಷಣೆಯೂ ಅನಗತ್ಯ!

ಹೊರಮಾವು ಸಮೀಪದಲ್ಲಿ ನಿರ್ಮಾಣ ಹಂತದಲ್ಲಿನ ನಾಲ್ಕಾರು ಮಹಡಿಯ ಕಟ್ಟಡವೊಂದು ಬಿರುಕುಬಿಟ್ಟಿದೆ, ಕಮಲಾನಗರದಲ್ಲಿ ಕಟ್ಟಡದ ಬುಡದಲ್ಲೇ ಬಿರುಕು ಕಾಣಿಸಿಕೊಂಡಿದೆ ಎಂಬಂಥ ವರದಿಗಳು ಕಳಪೆ ಕಾಮಗಾರಿಗೆ ನಿದರ್ಶನ. ಅನುಮೋದಿತ ನಕ್ಷೆಯನ್ನು ಕಡೆಗಣಿಸಿ ಹೆಚ್ಚೆಚ್ಚು ಮಹಡಿಗಳ ನಿರ್ಮಾಣ ಸಾಮಾನ್ಯವಾಗಿದೆಯೆಂಬ ದೂರುಗಳು ಇದ್ದೇ ಇವೆ. ‘...ಇನ್ನುಮುಂದೆ ಯಾವುದೇ ಕಾರಣಕ್ಕೂ...’ ಎಂದು ಮುಖ್ಯಮಂತ್ರಿ ಹೇಳಿರುವುದರ ಅರ್ಥವೇನು? ಈಗಾಗಲೇ ನಿಯಮಗಳನ್ನು ಉಲ್ಲಂಘಿಸಿ ಕಟ್ಟಿರುವ ಕಟ್ಟಡಗಳು ಸುರಕ್ಷಿತ ಎಂದೇ? ನಗರದ ಪ್ರತಿ ಪ್ರದೇಶದಲ್ಲೂ ಈಗಾಗಲೇ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳನ್ನು ಪಾಲಿಕೆಯು ಪರೀಕ್ಷಿಸಿ, ನಿರ್ಮಾಣದ ಕಾಯ್ದೆಬದ್ಧತೆಯ ಕುರಿತು ವರದಿ ನೀಡಬೇಕೆಂದು ಮುಖ್ಯಮಂತ್ರಿ ಆದೇಶ ನೀಡಬೇಕಿತ್ತು. ಈಗ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಕಾಯ್ದೆಬದ್ಧತೆ ಕುರಿತು ವರದಿ ನೀಡಬೇಕೆಂದು ಸ್ಪಷ್ಟಪಡಿಸಬೇಕಿತ್ತು. ನಗರದ ಶಾಸಕರು ಮತ್ತು ಸಂಸದರು ತಮ್ಮ ಕ್ಷೇತ್ರಗಳಲ್ಲಿ ನಿಯಮಗಳ ಉಲ್ಲಂಘನೆ ಆಗುತ್ತಿರುವುದನ್ನು ನೋಡಿಯೂ ಮೌನವಾಗಿ ಇರುವುದರ ಅರ್ಥವೇನು? ಕಾಯ್ದೆಯ ಪರಿಪಾಲನೆ ಆಗುತ್ತಿದೆಯೇ ಇಲ್ಲವೇ ಎನ್ನುವ ವಿಚಾರ ತಮಗೆ ಸೇರಿದ್ದಲ್ಲವೆಂಬ ಧೋರಣೆ ಅವರದಾದರೆ, ಜನಪ್ರತಿನಿಧಿ ಎಂಬ ಪರಿಕಲ್ಪನೆಗೆ ಅರ್ಥವೇ ಇಲ್ಲದಂತೆ ಆಗುತ್ತದೆ. ಆದ್ದರಿಂದ, ಅನಧಿಕೃತ ಕಟ್ಟಡಗಳ ನಿರ್ಮಾಣವು ಪ್ರಾಣಹಾನಿಗೆ ಕಾರಣವಾದಾಗ, ಜನಪ್ರತಿನಿಧಿಗಳೂ ಹೊಣೆಗಾರರು ಎಂದರೆ ತಪ್ಪಿಲ್ಲ.

ಸಾಮಗ ದತ್ತಾತ್ರಿ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾ 'ಹಣಾಹಣಿ'

ಮಹಾರಾಷ್ಟ್ರದಲ್ಲಿ ಇದು ಚುನಾವಣೆಯ ಸಮಯ. ರಾಜ್ಯದ 288 ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 20ರಂದು ಮತದಾನ ನಡೆಯಲಿದ್ದು, ಮತದಾರರನ್ನು ಆಕರ್ಷಿಸಲು ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟ ಮತ್ತು ಪ್ರತಿಸ್ಪರ್ಧಿ ಮೈತ್ರಿಕೂಟವಾದ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ವ ಪ್ರಯತ್ನಗಳನ್ನೂ ಮಾಡುತ್ತಿವೆ; ಜಾತಿ ಲೆಕ್ಕಾಚಾರ, ಕುಟುಂಬ ರಾಜಕಾರಣ, ಜನಪ್ರಿಯ ಘೋಷಣೆಗಳ ಮೊರೆ ಹೋಗಿವೆ. ಇದೇ ಹೊತ್ತಿಗೆ ಅತ್ತ ಜಾರ್ಖಂಡ್‌ನಲ್ಲೂ ಜೆಎಂಎಂ ಮೈತ್ರಿಕೂಟ ಮತ್ತು ಬಿಜೆಪಿ ನಡುವಿನ ಹಣಾಹಣಿಗೆ ಅಖಾಡ ಸಿದ್ಧಗೊಂಡಿದೆ



ಮಹಾರಾಷ್ಟ್ರ




9.65 ಕೋಟಿ ಮತದಾರರ ಸಂಖ್ಯೆ

4.66 ಕೋಟಿ ಮಹಿಳಾ ಮತದಾರರು


ನ.23 ಮತ ಎಣಿಕೆ ನಡೆಯುವ ದಿನ

2019ರ ವಿಧಾನಸಭಾ ಚುನಾವಣಾ ಫಲಿತಾಂಶ



* ಅವಿಭಜಿತ

ವಿಧಾನಸಭೆಯ ಈಗಿನ ಬಲಾಬಲ



* ಬಿಜೆಪಿ 102, ಎನ್‌ಸಿಪಿ 40, ಶಿವಸೇನಾ 38, ಪಕ್ಷೇತರರು 13, ಇತರ ಪಕ್ಷಗಳು 8

** ಕಾಂಗ್ರೆಸ್ 37, ಶಿವಸೇನಾ (ಉದ್ಧವ್ ಠಾಕ್ರೆ ಬಣ) 16, ಎನ್‌ಸಿಪಿ (ಶರದ್ ಪವಾರ್ ಬಣ) 12, ಇತರ ಪಕ್ಷಗಳು 7

ಮಹಾರಾಷ್ಟ್ರದ ಎಂವಿಎ, ಮಹಾಯುತಿ ಭಾರಿ ಪೈಪೋಟಿ; ಜಾರ್ಖಂಡ್‌ನಲ್ಲಿ ಜೆಎಂಎಂ ಕೂಟ, ಬಿಜೆಪಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದಲ್ಲಿ ಕಳೆದ ಬಾರಿ (2019ರಲ್ಲಿ) ನಡೆದಿದ್ದ ವಿಧಾನಸಭಾ ಚುನಾವಣೆಗೂ ಈಗ ನಡೆಯುತ್ತಿರುವ ಚುನಾವಣೆಗೂ ಭಾರಿ ವ್ಯತ್ಯಾಸವಿದೆ. ಕಳೆದ ಚುನಾವಣೆಯ ವೇಳೆ ರಾಜ್ಯದ ಮುಖ್ಯ ಪಕ್ಷಗಳಾದ ಶಿವಸೇನಾ ಮತ್ತು ಎನ್‌ಸಿಪಿ ವಿಭಜನೆಗೊಂಡಿರಲಿಲ್ಲ. ಶಿವಸೇನಾದಿಂದ ಏಕನಾಥ್ ಶಿಂದೆ, ಎನ್‌ಸಿಪಿಯಿಂದ ಅಜಿತ್ ಪವಾರ್ ಹೊರಹೋಗಿ ಪಕ್ಷಗಳನ್ನು ಒಡೆದು, ಬಿಜೆಪಿ ಜತೆ ಸೇರಿ 'ಮಹಾಯುತಿ' ಹುಟ್ಟುಹಾಕಿ ಅಧಿಕಾರದ ಗದ್ದುಗೆಯನ್ನೂ ಹಿಡಿದದ್ದು ರಾಷ್ಟ್ರ ಮಟ್ಟದಲ್ಲಿಯೂ ಭಾರಿ ಸದ್ದು ಮಾಡಿತ್ತು. ಮೂಲ ಪಕ್ಷ ಯಾವುದು ಎನ್ನುವುದು ನ್ಯಾಯಾಲಯದ ಅಂಗಳದಲ್ಲಿ ನಿರ್ಣಯವಾಗಬೇಕಾಯಿತು. ಅದರ ಸೈದ್ಧಾಂತಿಕ ಮತ್ತು ನೈತಿಕ ಆಯಾಮಗಳ ಬಗ್ಗೆ ವ್ಯಾಪಕ ಚರ್ಚೆ ನಡೆದಿತ್ತು.

ಅದರ ನಂತರ ಆರು ತಿಂಗಳ ಹಿಂದೆ ನಡೆದಿದ್ದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 48 ಸ್ಥಾನಗಳ ಪೈಕಿ ಮಹಾಯುತಿ 17 ಮತ್ತು ಎಂವಿಎ 31 ಸ್ಥಾನ ಗಳಿಸಿದ್ದವು. ಅದರಿಂದ ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಮತ್ತು ಶರದ್ ಪವಾರ ನೇತೃತ್ವದ ಎನ್‌ಸಿಪಿ ಒಂದಿಷ್ಟು ಹುರುಪಿನಿಂದ ಇದ್ದವು. ಆದರೆ, ಹರಿಯಾಣದಲ್ಲಿ ಬಿಜೆಪಿ ನಿರೀಕ್ಷೆ ಮೀರಿ ಮೂರನೇ ಬಾರಿ ಅಧಿಕಾರ ಹಿಡಿದಿರುವುದು ಕಾಂಗ್ರೆಸ್ ನೇತೃತ್ವದ ಮಹಾ ವಿಕಾಸ ಆಘಾಡಿಗೆ (ಎಂವಿಎ) ಎಚ್ಚರಿಕೆಯ ಸಂದೇಶ ರವಾನಿಸಿದೆ.

ಕುಟುಂಬ ರಾಜಕಾರಣ: ಎರಡೂ ಕೂಟಗಳಲ್ಲಿ ಗೆಲ್ಲುವ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಲಾಗುತ್ತಿದೆ. ಸಮಯ ಸಿಕ್ಕಿದಾಗಲೆಲ್ಲ ಕುಟುಂಬ ರಾಜಕಾರಣದ ವಿರುದ್ಧ ತೀವ್ರ ಟೀಕೆ ಮಾಡುತ್ತಿದ್ದ ಬಿಜೆಪಿಯಿಂದ ಹಿಡಿದು ಕಾಂಗ್ರೆಸ್, ಶಿವಸೇನಾ ಮತ್ತು ಎನ್‌ಸಿಪಿಯ ಎರಡೂ ಬಣಗಳಲ್ಲಿಯೂ ಹಾಲಿ/ಮಾಜಿ ಸಚಿವರು, ಶಾಸಕರು/ಸಂಸದರ ಕುಟುಂಬದವರು, ಹತ್ತಿರದ ಬಂಧುಗಳನ್ನು ಕಣಕ್ಕಿಳಿಸಲಾಗಿದೆ. ಮಹಾಯುತಿ ಮತ್ತು ಎಂವಿಎ ಎರಡೂ ಮೈತ್ರಿಕೂಟಗಳಲ್ಲಿ ರಾಜಕೀಯ ಕುಟುಂಬಗಳಿಗೆ ಸೇರಿದ ನೂರಕ್ಕೂ ಹೆಚ್ಚು ಮಂದಿಗೆ ಟಿಕೆಟ್ ನೀಡಲಾಗಿದೆ.

ಬಾರಾಮತಿ ಕ್ಷೇತ್ರದಲ್ಲಿ ಪವಾರ್ ಸಂಬಂಧಿಗಳಲ್ಲೇ ಜಿದ್ದಾಜಿದ್ದಿ ಏರ್ಪಟ್ಟಿದೆ. ಎನ್‌ಸಿಪಿ ಮುಖಂಡ ಅಜಿತ್ ಪವಾರ್ ವಿರುದ್ಧ ಅವರ ಸಹೋದರ ಶ್ರೀನಿವಾಸ ಪವಾರ್ ಮಗ ಯುಗೇಂದ್ರ ಪವಾರ್ ಅವರನ್ನು ಎನ್‌ಸಿಪಿ (ಶರದ್ ಪವಾರ್ ಬಣ) ಕಣಕ್ಕಿಳಿಸಿದೆ.



ಜಾತಿ ಲೆಕ್ಕಾಚಾರ: 2024ರ ಲೋಕಸಭಾ ಚುನಾವಣೆಯಲ್ಲಿ ಆದಂತೆ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲೂ ಜಾತಿ ವಿವಾದಗಳು ಪ್ರಭಾವ ಬೀರಲಿವೆ ಎನ್ನಲಾಗುತ್ತಿದೆ. ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಮರಾಠ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಮನೋಜ್ ಜಾರಂಗೆ ಮತ್ತು ಒಬಿಸಿ ಸಂಘಟನಾ ಸೇನಾ ಸಂಸ್ಥಾಪಕ ಲಕ್ಷ್ಮಣ್ ಹಾಕೆ ತಮ್ಮ ಬೇಡಿಕೆಗಳನ್ನು ಪಕ್ಷಗಳ ಮುಂದೆ ಮಂಡಿಸಿದ್ದಾರೆ. ದೇವೇಂದ್ರ ಫಡಣವೀಸ್ ಅವರು ಮರಾಠರಿಗೆ ಮೀಸಲಾತಿ ತಡೆದಿದ್ದಾರೆ ಎಂದು ಬಹಿರಂಗವಾಗಿ ದೂರುತ್ತಿದ್ದಾರೆ. ದಲಿತ, ಮುಸ್ಲಿಂ, ಹಿಂದುಳಿದವರೆಲ್ಲರೂ ಒಂದಾಗಬೇಕು ಎಂದು ಅವರು ಕರೆ ನೀಡಿದ್ದಾರೆ. ಮರಾಠವಾಡದಲ್ಲಿ ಮರಾಠರು ಮತ್ತು ಒಬಿಸಿಗಳ ನಡುವೆ ಸಂಘರ್ಷ ನಡೆಯುತ್ತಿದ್ದು, ಇದು ಎಂವಿಎಗಿಂತ ಮಹಾಯುತಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ.

ಇದರ ನಡುವೆಯೇ, ಮರಾಠರ ಪ್ರಾಬಲ್ಯದ ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಜಾರಂಗೆ ಅವರು ಘೋಷಿಸಿದ್ದಾರೆ. ಹಾಗೇನಾದರೂ ಆದರೆ ಮತ ವಿಭಜನೆಯಾಗಿ ತಮಗೆ ಅನುಕೂಲವಾಗಲಿದೆ ಎನ್ನುವುದು ಮಹಾಯುತಿ ಲೆಕ್ಕಾಚಾರ.

ಎಂವಿಎಗೆ ಮರಾಠರೇ ಬಲ. ಹಾಗಾಗಿ, ಮರಾಠರನ್ನು ಬಿಟ್ಟು ಇತರ ಸಮುದಾಯಗಳತ್ತ ಗಮನ ಕೇಂದ್ರೀಕರಿಸಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವುದು ಮಹಾಯುತಿ ಲೆಕ್ಕಾಚಾರ. ಹರಿಯಾಣದಲ್ಲಿ ಜಾಟರನ್ನು ನೆಚ್ಚಿಕೊಂಡಿದ್ದ ಕಾಂಗ್ರೆಸ್ ವಿರುದ್ಧ ಇತರ ಒಬಿಸಿ ಮತಗಳ ನೆರವಿನಿಂದ ಬಿಜೆಪಿ ಗೆದ್ದಿತ್ತು. ಅದೇ ಸೂತ್ರವನ್ನು ಮಹಾರಾಷ್ಟ್ರದಲ್ಲಿಯೂ ಅನ್ವಯಿಸಲು ಮಹಾಯುತಿ ಹೊರಟಿದೆ. ಎಂವಿಎ ದಲಿತ, ಮುಸ್ಲಿಂ, ಕುಣಬಿ (ಮರಾಠ ಉಪಪಂಗಡ) ಸಮುದಾಯಗಳನ್ನು ನೆಚ್ಚಿಕೊಂಡಿದ್ದರೆ, ಮಹಾಯುತಿ ಮಾಲಿ, ಧನಗಾರ, ವಂಜಾರಿ ಮುಂತಾದ ಒಬಿಸಿ ಮತಗಳನ್ನು ನೆಚ್ಚಿಕೊಂಡಿದೆ.

ಎಂವಿಎ ಸೀಟು ಹಂಚಿಕೆ ಮಾತುಕತೆ ಬಹುತೇಕ ಅಂತಿಮಗೊಂಡಿದ್ದು, ಕಾಂಗ್ರೆಸ್, ಶಿವಸೇನಾ (ಯುಬಿಟಿ) ಮತ್ತು ಎನ್‌ಸಿಪಿ (ಎಸ್‌ಪಿ) ನಡುವೆ ಸಮನಾದ ಹಂಚಿಕೆ ನಡೆದಿದೆ ಎನ್ನಲಾಗಿದೆ. ಯಾವ ಪ್ರಾಂತ್ಯದಲ್ಲಿ ಯಾವ ಪಕ್ಷದ ಹಿಡಿತ ಹೆಚ್ಚಾಗಿದೆಯೋ ಅಲ್ಲಿ ಆ ಪಕ್ಷದ ಅಭ್ಯರ್ಥಿಗಳಿಗೆ ಹೆಚ್ಚಿನ ಟಿಕೆಟ್‌ಗಳನ್ನು ನೀಡಲಾಗಿದೆ. ಇದರಿಂದ ಹೆಚ್ಚು ಮಂದಿ ಗೆಲ್ಲಲು ಅನುಕೂಲವಾಗಲಿದೆ ಎನ್ನುವುದು ಲೆಕ್ಕಾಚಾರ. ಇತ್ತೀಚೆಗೆ ಹತ್ಯೆಯಾದ ಬಾಬಾ ಸಿದ್ದೀಕಿ ಮಗ ಜೀಶನ್ ಸಿದ್ದೀಕಿ ಬಾಂದ್ರಾ ಪೂರ್ವದಿಂದ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.


'ಇಂಡಿಯಾ' ಕೂಟದ ಮಿತ್ರಪಕ್ಷಗಳ ಪೈಕಿ ಸಿಪಿಎಂಗೆ ಎರಡು ಸ್ಥಾನ ಬಿಟ್ಟುಕೊಡಲಾಗಿದೆ. ಆದರೆ, ಸಮಾಜವಾದಿ ಪಕ್ಷವು (ಎಸ್‌ಪಿ) ಕೂಡ ಒಂದಷ್ಟು ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಬೇಡಿಕೆ ಇಟ್ಟಿದ್ದು, ಒಪ್ಪಂದ ಕುದುರದಿದ್ದರೆ 25 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಘೋಷಿಸಿದೆ. ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ ಬಹುಜನ ಆಘಾಡಿ (ವಿಬಿಎ) ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ.


ಮತ್ತೊಮ್ಮೆ ಗದ್ದುಗೆ ಏರಲು ಹೋರಾಟ ನಡೆಸುತ್ತಿರುವ ಮಹಾಯುತಿ ಕೂಟವು, ಚುನಾವಣೆಯ ದೃಷ್ಟಿಯಿಂದ ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಮುಂಬೈನ ಐದು ಟೋಲ್ ಪ್ಲಾಜಾಗಳಲ್ಲಿ ಲಘು ವಾಹನಗಳಿಗೆ ಶುಲ್ಕ ರದ್ದುಪಡಿಸಿದ್ದು, ಇದು ಮುಂಬೈ ನಗರದಲ್ಲಿ ತನಗೆ ಲಾಭ ತರುತ್ತದೆ ಎನ್ನುವುದು ಅದರ ಲೆಕ್ಕಾಚಾರ. ಹಾಗೆಯೇ ದಲಿತರಲ್ಲಿ ಎಡಗೈ ಪಂಗಡದ ಮೇಲೆ ಮಹಾಯುತಿ ಕೂಟವು ಕಣ್ಣು ನೆಟ್ಟಿದೆ; ಒಳಮೀಸಲಾತಿಯ ಜಾರಿ ಸಂಬಂಧ ಸರ್ಕಾರವು ಸಮಿತಿಯೊಂದನ್ನು ರಚಿಸಿರುವುದೂ ಸೇರಿದಂತೆ ಮಾತಂಗ ಸಮುದಾಯಕ್ಕೆ ಹಲವು ಯೋಜನೆಗಳನ್ನು ಘೋಷಿಸಿದೆ.

ಆಧಾರ: ಪಿಟಿಐ, ಚುನಾವಣಾ ಆಯೋಗದ ವೆಬ್‌ಸೈಟ್

ಜೆಎಂಎಂ v/s ಬಿಜೆಪಿ

ಜಾರ್ಖಂಡ್





81 ವಿಧಾನಸಭಾ ಕ್ಷೇತ್ರಗಳ ಸಂಖ್ಯೆ

2.61 ಕೋಟಿ ಮತದಾರರ ಸಂಖ್ಯೆ

1.29 ಕೋಟಿ ಮಹಿಳಾ ಮತದಾರರು

ನ.23 ಮತ ಎಣಿಕೆ ನಡೆಯುವ ದಿನ

ಬುಡಕಟ್ಟು ಜನರೇ ಹೆಚ್ಚಾಗಿರುವ ಜಾರ್ಖಂಡ್‌ನ ವಿಧಾನಸಭಾ ಚುನಾವಣೆಯು ಈ ಬಾರಿ ಕುತೂಹಲ ಕೆರಳಿಸಿದೆ. 2019ರ ಚುನಾವಣೆಯಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನೇತೃತ್ವದ ಮೈತ್ರಿಕೂಟವು ಹಿಂದಿನ ಅವಧಿಯಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಗೆ ಸೋಲುಣಿಸಿ, ಅದು ವಿರೋಧ ಪಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವಂತೆ ಮಾಡಿತ್ತು. ಈ ಚುನಾವಣೆಯಲ್ಲೂ ಜೆಎಂಎಂ ಮತ್ತು ಬಿಜೆಪಿಯ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ.

ಜೆಎಂಎಂ ಗೆಲುವಿನ ಲೆಕ್ಕಾಚಾರ: ಬುಡಕಟ್ಟು ಪ್ರದೇಶದಲ್ಲಿ ಹೆಚ್ಚು ಪ್ರಾಬಲ್ಯ ಹೊಂದಿರುವ ಹೇಮಂತ್ ಸೊರೇನ್ ನೇತೃತ್ವದ ಜೆಎಂಎಂಗೆ ಕಾಂಗ್ರೆಸ್, ಆರ್‌ಜೆಡಿ, ಎಡಪಕ್ಷಗಳು ಸೇರಿದಂತೆ ಇಂಡಿಯಾ ಕೂಟದಲ್ಲಿ ಗುರುತಿಸಿಕೊಂಡಿರುವ ಪಕ್ಷಗಳ ಬೆಂಬಲ ಇದೆ. ಮೈತ್ರಿಕೂಟವು ಈ ಬಾರಿ ಮತ್ತೆ ಅಧಿಕಾರಕ್ಕೇರುವ ವಿಶ್ವಾಸದಲ್ಲಿದೆ.

ಮಹಿಳೆಯರಿಗೆ ತಿಂಗಳಿಗೆ ಧನ ಸಹಾಯ ನೀಡುವ (₹1,000) 'ಮುಯಿಯಾ ಸಮ್ಮಾನ್ ಯೋಜನೆ', ರಾಜ್ಯದ ಬಡ ಜನರಿಗೆ ಮನೆಗಳನ್ನು ನಿರ್ಮಿಸಿಕೊಡುವ 'ಅಬುವಾ ಅವಾಸ್ ಯೋಜನೆ' ಸೇರಿದಂತೆ ವಿವಿಧ ಜನ ಕಲ್ಯಾಣ ಯೋಜನೆಗಳು ಪಕ್ಷಕ್ಕೆ ಮತಗಳನ್ನು ತರಲಿವೆ ಎಂಬ ನಿರೀಕ್ಷೆಯಲ್ಲಿ ಜೆಎಂಎಂ ಇದೆ. ಮುಖ್ಯಮಂತ್ರಿಯಾಗಿದ್ದ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿರುವುದು ಅನುಕಂಪದ ಅಲೆ ಸೃಷ್ಟಿಸಿದ್ದು, ಚುನಾವಣೆಯಲ್ಲಿ ಅದು ಪಕ್ಷಕ್ಕೆ ವರವಾಗಲಿದೆ ಎಂಬ ಲೆಕ್ಕಾಚಾರದಲ್ಲಿ ಮುಖಂಡರಿದ್ದಾರೆ. ಹೇಮಂತ್ ಸೊರೇನ್ ಅವರ ಪತ್ನಿ ಕಲ್ಪನಾ ಸೊರೇನ್ ಕೂಡ ಅಖಾಡಕ್ಕೆ ಇಳಿದಿದ್ದಾರೆ.

ನಗರ ಪ್ರದೇಶಗಳಲ್ಲಿ ಪಕ್ಷಕ್ಕೆ ಹೆಚ್ಚು ಬೆಂಬಲ ಇಲ್ಲದಿರುವುದು, ಪಕ್ಷ ಅಧಿಕಾರದಲ್ಲಿದ್ದರೂ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗಳಿಸಲು ಸಾಧ್ಯವಾಗದಿರುವುದು, ಹೇಮಂತ್ ಸೊರೇನ್ ಬಂಧನದಲ್ಲಿದ್ದಾಗ ಮುಖ್ಯಮಂತ್ರಿಯಾಗಿದ್ದ ಚಂಪೈ ಸೊರೇನ್ ಬಿಜೆಪಿ ಸೇರಿರುವುದು ಚುನಾವಣೆಯಲ್ಲಿ ಜೆಎಂಎಂನ ಕಳವಳವನ್ನು ಹೆಚ್ಚಿಸಬಹುದು ಎನ್ನಲಾಗುತ್ತಿದೆ.

2014ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ (ಆರು ಸ್ಥಾನಗಳು) ಜೆಎಂಎಂನ ಮೈತ್ರಿ ಪಕ್ಷ ಕಾಂಗ್ರೆಸ್ 2019ರಲ್ಲಿ 16 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಉತ್ತಮ ಪ್ರದರ್ಶನ ನೀಡಿತ್ತು. ಈ ಬಾರಿಯೂ ಅದೇ ರೀತಿಯ ಫಲಿತಾಂಶ ಪುನರಾವರ್ತನೆಯಾಗುವ ವಿಶ್ವಾಸವನ್ನು ಕಾಂಗ್ರೆಸ್ ನಾಯಕತ್ವ ಹೊಂದಿದೆ.

ಗೆಲುವಿನ ವಿಶ್ವಾಸದಲ್ಲಿ ಬಿಜೆಪಿ: ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಏರಲು ಇನ್ನಿಲ್ಲದ ಕಸರತ್ತು ನಡೆಸುತ್ತಿರುವ ಬಿಜೆಪಿಯು ಜೆಎಂಎಂನ ಪ್ರಮುಖ ಮುಖಂಡ, ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಹೇಮಂತ್ ಸೊರೇನ್ ಅವರನ್ನು ಇ.ಡಿ ಬಂಧಿಸಿರುವುದನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತಿರುವ ಬಿಜೆಪಿ, ಜೆಎಂಎಂ ನೇತೃತ್ವದ ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಾ ಅಭಿವೃದ್ಧಿಗಾಗಿ ತನಗೆ ಮತ ನೀಡುವಂತೆ ಕೇಳುತ್ತಿದೆ. ಚುನಾವಣೆ ಘೋಷಣೆಗೂ ಮುನ್ನವೇ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದೆ.

ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಜನರ ಮತ ಸೆಳೆಯಲು ಪ್ರಧಾನಿ ನರೇಂದ್ರ ಮೋದಿ ಅವರನ್ನೇ ನೆಚ್ಚಿಕೊಂಡಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಕೂಡ ತಾರಾ ಪ್ರಚಾರಕರಲ್ಲಿ ಒಬ್ಬರಾಗಿದ್ದಾರೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 14 ಸ್ಥಾನಗಳ ಪೈಕಿ ಎಂಟು ಸ್ಥಾನಗಳನ್ನು ಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ ಶೇ44.60ರಷ್ಟು ಮತಗಳನ್ನು ಗಳಿಸಿತ್ತು. ಅದೇ ಮಾದರಿಯ ಫಲಿತಾಂಶವನ್ನು ಪಕ್ಷ ನಿರೀಕ್ಷಿಸುತ್ತಿದೆ. ಪ್ರಬಲ ಕಾರ್ಯಕರ್ತರ ಪಡೆ ಅದಕ್ಕಿರುವ ದೊಡ್ಡ ಶಕ್ತಿಯಾದರೆ, ನಗರ ಕೇಂದ್ರಿತ ಪಕ್ಷ, ಬುಡಕಟ್ಟು ಸಮುದಾಯ, ಮುಸ್ಲಿಂ ಮತ್ತು ದಲಿತ ವಿರೋಧಿ ಎಂಬ ಹಣೆಪಟ್ಟಿ ಅದರ ದೌರ್ಬಲ್ಯ ಎಂದು ವಿಶ್ಲೇಷಿಸಲಾಗುತ್ತಿದೆ.



ಶಿವರಾಜಕುಮಾರ್

ಹೊರಬಂತು 'ಭೈರತಿ ರಣಗಲ್' ಟೀಸರ್

ಶಿವರಾಜಕುಮಾರ್ ಅಭಿನಯದ ಬಹು ನಿರೀಕ್ಷಿತ ಚಿತ್ರ 'ಭೈರತಿ ರಣಗಲ್'ನ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ನಿರ್ಮಿಸಿ, ನರ್ತನ್ ನಿರ್ದೇಶಿಸಿರುವ ಚಿತ್ರ ನವೆಂಬರ್ 15ರಂದು ತೆರೆಗೆ ಬರಲಿದೆ.

ಶಿವರಾಜಕುಮಾರ್ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಗಣಿ ಧೂಳಿನ ವಿರುದ್ಧ ಹೋರಾಟ ನಡೆಸುತ್ತಾರೆ ಎಂಬ ಸುಳಿವನ್ನು ಟೀಸರ್ ನೀಡುತ್ತಿದೆ. ಅವರು ವಕೀಲನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂಬುದು ಟೀಸರ್‌ನಿಂದ ಗೊತ್ತಾಗುತ್ತಿದೆ.

ನರ್ತನ್ ಹಾಗೂ ಶಿವರಾಜಕುಮಾರ್ ಅವರ ಕಾಂಬಿನೇಶನ್‌ನಲ್ಲಿ ಬಂದಿದ್ದ 'ಮಫ್ತಿ' ಚಿತ್ರದ ಪ್ರೀಕ್ವೆಲ್ ಈ ಚಿತ್ರ. ಹೀಗಾಗಿ ಕಥೆಯ ಕುರಿತು ನಿರೀಕ್ಷೆ ಹೆಚ್ಚಿದೆ. ನಾಯಕಿಯಾಗಿ ರುಕ್ಮಿಣಿ ವಸಂತ್ ಅಭಿನಯಿಸಿದ್ದಾರೆ. ರವಿ ಬಸ್ರೂರ್ ಸಂಗೀತ ನಿರ್ದೇಶನ, ನವೀನ್ ಕುಮಾರ್ ಛಾಯಾಚಿತ್ರಗ್ರಹಣ, ಆಕಾಶ್ ಹಿರೇಮಠ ಸಂಕಲನ ಚಿತ್ರಕ್ಕಿದೆ.

ನ.29ಕ್ಕೆ 'ನಾ ನಿನ್ನ ಬಿಡಲಾರೆ' ತೆರೆಗೆ

ಅನಂತ ನಾಗ್, ಲಕ್ಷ್ಮಿ ಜೋಡಿಯ 'ನಾ ನಿನ್ನ ಬಿಡಲಾರೆ' ಚಿತ್ರ ಬಹಳ ಜನಪ್ರಿಯತೆ ಗಳಿಸಿತ್ತು. ಇದೀಗ ಅದೇ ಶೀರ್ಷಿಕೆಯ ಸಿನಿಮಾವೊಂದು ತೆರೆಗೆ ಬರಲು ಸಜ್ಜಾಗಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ ನವೆಂಬರ್ 29ಕ್ಕೆ ಬಿಡುಗಡೆಗೊಳ್ಳುತ್ತಿದೆ. ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರಕ್ಕೆ ನವೀನ್ ಜಿ.ಎಸ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಕಮಲ ಉಮಾ ಭಾರತಿ ಪ್ರೊಡಕ್ಷನ್ಸ್ ಅಡಿಯಲ್ಲಿ ಅಂಬಾಲಿ ಭಾರತಿ ಚಿತ್ರವನ್ನು ನಿರ್ಮಿಸಿರುವುದರ ಜೊತೆಗೆ ನಾಯಕಿಯಾಗಿಯೂ ಕಾಣಿಸಿಕೊಂಡಿದ್ದಾರೆ. 'ಈ ಚಿತ್ರವನ್ನು ಆರಂಭಿಸಲು ನಾನು ಬಹಳಷ್ಟು ಪೂರ್ವ ತಯಾರಿಯನ್ನ ಮಾಡಿಕೊಂಡಿದ್ದೆ. ಸೈಕಲಾಜಿಕಲ್, ಹಾರರ್, ಥ್ರಿಲಿಂಗ್, ಸಸ್ಪೆನ್ಸ್ ಚಿತ್ರ. ವೈದ್ಯಕೀಯ ಸಂಗತಿಗಳನ್ನು ಚಿತ್ರದಲ್ಲಿ ಹೇಳಲಾಗಿದೆ' ಎಂದಿದ್ದಾರೆ ನಿರ್ದೇಶಕರು.

ವೀರೇಶ್ ಎಸ್.ಛಾಯಾಚಿತ್ರಗ್ರಹಣ, ಎಮ್.ಎಸ್.ತ್ಯಾಗರಾಜು ಸಂಗೀತ, ದೀಪಕ್ ಜಿ.ಎಸ್ ಸಂಕಲನವಿದೆ. ಪಂಚಿ, ಸೀರುಂಡೆ ರಘು, ಕೆ.ಸ್.ಶ್ರೀಧರ್ ಮುಂತಾದವರು ಚಿತ್ರದಲ್ಲಿದ್ದಾರೆ.



ಅಂಬಾಲಿ ಭಾರತಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಪಾಪ, ಪುಣ್ಯ ನಿರ್ಣಯ ಮಾಡೋದು ಹೇಗೆ?

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

53

ಹೌದು, ಪಾಪ, ಪುಣ್ಯ ಅನ್ನುತ್ತೀರಿ. ಅದನ್ನು ನಿರ್ಣಯ ಮಾಡೋದು ಹೇಗೆ? ಯಾರಿಗಾದರೂ ಹೊಟ್ಟೆಗೆ ಚೂರಿ ಹಾಕಿದರೆ, ಅದನ್ನು ಪಾಪ ಅಂತೀರಿ. ಕಳ್ಳನೊಬ್ಬ ಹಾಗೆ ಮಾಡಬಹುದು. ಆದರೆ, ಡಾಕ್ಟರ್ ಕೂಡಾ ಹೊಟ್ಟೆಗೆ ಚೂರಿ ಹಾಕಿಯೇ ಆಪರೇಷನ್ ಮಾಡ್ತಾನ. ಡಾಕ್ಟರ್ ಮಾಡೋ ಕೆಲಸ ಪಾಪವೇನು? ಕೊಲೆ ಮಾಡೋದು ಪಾಪ ಅಂತೀವಿ. ಗಲ್ಲು ಶಿಕ್ಷೆಯಾದವರನ್ನು ಗಲ್ಲಿಗೆ ಏರಿಸ್ತಾರ. ಗಲ್ಲಿಗೆ ಏರಿಸುವ ಮನುಷ್ಯ ಕೂಡಾ ಪಾಪಿ ಏನು? ಸೈನಿಕರು, ಪೊಲೀಸರು ಉಗ್ರಗಾಮಿಗಳನ್ನು ಗುಂಡು ಹಾರಿಸಿ ಕೊಲ್ಲುತ್ತಾರೆ. ಅದನ್ನು ಪಾಪ ಎನ್ನಲಿಕ್ಕಾಗುತ್ತೇನು? ಕೈಯಲ್ಲಿ ಕತ್ತಿ ಹಿಡಿದು ಯುದ್ಧ ಮಾಡುವುದು ಪಾಪ ಎಂದರೆ, 12ನೇ ಶತಮಾನದಲ್ಲಿ ಶರಣರು ವಚನಗಳನ್ನು ರಕ್ಷಣೆ ಮಾಡಲು ಕೈಯಲ್ಲಿ ಕತ್ತಿ ಹಿಡಿದು ಯುದ್ಧ ಮಾಡಿದರಲ್ಲ, ಅದನ್ನು ಏನಂತ ಕರಿಯೋದು? ಅಂದರೆ ಕರ್ಮ ಅಥವಾ ಕಾರ್ಯ ಯಾವುದಿದೆಯಲ್ಲ, ಅದು ತನ್ನಷ್ಟಕ್ಕೆ ತಾನು ಕೆಟ್ಟದ್ದೂ ಅಲ್ಲ, ಒಳ್ಳೆಯದೂ ಅಲ್ಲ. ಯಾವ ಉದ್ದೇಶದಿಂದ ಹೊಟ್ಟೆಗೆ ಚೂರಿ ಹಾಕಿದ್ದಾನೆ ಎನ್ನುವುದರ ಮೇಲೆ ಪಾಪ, ಪುಣ್ಯ ನಿರ್ಣಯವಾಗುತ್ತದೆ. ಜೀವ ತೆಗೆಯಲು ಹೊಟ್ಟೆಗೆ ಚೂರಿ ಹಾಕಿದರೆ ಅದು ಪಾಪ. ಜೀವ ಉಳಿಸಲು ಚೂರಿ ಹಾಕಿದರೆ ಅದು ಪುಣ್ಯ. ನಾವು ಮಾಡುವ ಕಾರ್ಯಗಳು ಸ್ವಾರ್ಥದಿಂದ ಕೂಡಿದ್ದರೆ ಅದು ಪಾಪ. ನಾವು ಮಾಡುವ ಕಾರ್ಯಗಳು ಲೋಕ ಕಲ್ಯಾಣ, ಆತ್ಮ ಕಲ್ಯಾಣದ ಉದ್ದೇಶ ಹೊಂದಿದ್ದರೆ ಅದು ಪುಣ್ಯದ ಕಾರ್ಯ. ಪುಣ್ಯವನ್ನು ಗಳಿಸಬೇಕು, ಪಾಪವನ್ನು ಕಳೆದುಕೊಳ್ಳಬೇಕು.

ನಮಗೆ ಅರಿವಿಲ್ಲದೆ ಎಷ್ಟೋ ಪಾಪಕರ್ಮಗಳು ನಮ್ಮಿಂದ ಆಗಿವೆ. ಆತ್ಮವಂಚನೆ ಮಾಡಿಕೊಂಡು ಮಾಡಿದ ಕರ್ಮಗಳೂ ಇವೆ. ಕೈ ಹಿಡಿದ ಪತ್ನಿಗೆ ಸುಳ್ಳು ಹೇಳಿ ಮಾಡಿದ ಪಾಪಗಳಿವೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ನಮ್ಮಿಂದಾದ ಮೋಸ ಕಾರ್ಯಗಳೆಷ್ಟು? ನಂಬಿದ ಸ್ನೇಹಿತರಿಗೆ, ಬಂಧುಬಾಂಧವರಿಗೆ, ಸಮಾಜಕ್ಕೆ ಅಷ್ಟೇ ಏಕೆ ಆ ದೇವರಿಗೂ ಮೋಸ ಮಾಡಲಿಕ್ಕೆ ನಾವು ಹಿಂದೆ ಮುಂದೆ ನೋಡಿದವರಲ್ಲ. ಒಂದೇ, ಎರಡೇ, ನೂರೇ.. ಸಾವಿರ ಸಾವಿರ ಪಾಪ ಕರ್ಮಗಳು ಈ ದೇಹದಿಂದ ಘಟಿಸಿವೆ. ಹಾಗಾದರೆ, ಮನುಷ್ಯ ಈ ಪಾಪ ಫಲಗಳನ್ನು ಯಾವ ಬಲ ಇಟ್ಟುಕೊಂಡು ಮಾಡ್ತಾನೆ? ಅವನೇನು ತನಗೆ ಸಾವೇ ಇಲ್ಲ ಅಂತ ತಿಳಕೊಂಡಾನೇನು? ಊರಾಗೆ ಇರುವ ಸ್ಮಶಾನಗಳೆಲ್ಲಾ ಬಡಾವಣೆಗಳಾಗಿದಾವೆ, ಸತ್ತರೆ ಹೂಳಲು ಜಾಗವೇ ಇಲ್ಲ, ಅದಕ್ಕೆ ನಾವು ಅರಾಂ ಇರಬಹುದು ಅಂದುಕೊಂಡಾನೇನು? ಯಮಧರ್ಮ ಬುದ್ಧನ ಹತ್ತಿರ ಹೋಗಿ ಮತಾಂತರಗೊಂಡು ಸನ್ಯಾಸಿಯಾಗಿ ಕರುಣೆ ಬಂದೈತಿ ಅಂದಾನೇನು? ಲಂಚ ಕೊಟ್ಟರೆ ಯಮದೂತರು ಬಿಟ್ಟು ಬಿಡ್ತಾರೆ ಎಂದುಕೊಂಡಿದ್ದಾರೇನು? ಸೂರ್ಯ ಚಂದ್ರ ಇರುವವರೆಗೆ ನಿನ್ನ ಕರಕೊಂಡು ಹೋಗಲ್ಲ ಅಂತ ಕಾಲ ಪ್ರಾಮಿಸ್ ಮಾಡೈತೇನು? ಚಿತ್ರಗುಪ್ತರಿಗೆ ಮರೆವು ಬಂದೈತೇನು? ಚಿತ್ರ ಅಂದರೆ ಕಣ್ಣಿಗೆ ಕಂಡ ಪಾಪಗಳನ್ನು ದಾಖಲಿಸುವವ. ಗುಪ್ತ ಎಂದರೆ ಯಾರಿಗೂ ಗೊತ್ತಾಗದಂತೆ ಮಾಡಿದ ಪಾಪಗಳನ್ನು ದಾಖಲಿಸುವವ. ಸಾವು ಬಂದಾಗ ಯಾವ ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ, ಟೆಲಿಪತಿ ಕೊನೆಗೆ ತಿರುಪತಿ ಕೂಡಾ ನಡೆಯೋದಿಲ್ಲ. ಪಶುಪತಿ ಅಂತಾನ ನೀನು ಬಹಳ ಕಿತಾಪತಿ, ನಿನ್ನ ಬಿಡೋದಿಲ್ಲ ಅಂತಾನ. ಸಾವು ಯಾರನ್ನೂ ಬಿಡೋದಿಲ್ಲ. ಅದಕ್ಕೆ ನಾವು ಒಳ್ಳೆಯ ಕೆಲಸಗಳನ್ನು ಮಾಡಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಅಕ್ಟೋಬರ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣ ಏಕಾದಶಿ ಗಂ. 07-51 ನಕ್ಷತ್ರ: ಪೂರ್ವಫಲ್ಗುನಿ ಗಂ. 15-24 ಯೋಗ: ಬ್ರಹ್ಮ ಗಂ. 06-47 ಕರಣ: ಬಾಲವ ಗಂ. 07-51, ತುಲಾ ಮಾಸದ 11 ನೇ ದಿನ, ಮಳೆನಕ್ಷತ್ರ: ಸ್ವಾತಿ 2.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-27 ಸೂರ್ಯಾಸ್ತ : 06-01

ಮುಸ್ಲಿಂ ದಿನಾಂಕ : 24 ರಬಿಯುಸ್ಸಾನಿ

ಅದೃಷ್ಟ ಸಂಖ್ಯೆ : 11, 4

ಮೇಷ: ಕಲಾವಿದರಿಗೆ ಹಾಗೂ ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣಗಳು ಸಿಗಲಿವೆ. ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಸರಿಯಾದ ದಿನ. ದೇಹಾಲಸ್ಯ ಕಂಡುಬರಲಿದೆ.

ವೃಷಭ: ಸದ್ಗುಣಗಳ ವ್ಯಕ್ತಿತ್ವದ ಮತ್ತು ಪರೋಪಕಾರಿ ಬದುಕಿನಿಂದ ಜನಪ್ರಿಯತೆ ಹೆಚ್ಚಾಗುವ ಯೋಗವಿರುತ್ತದೆ. ಬಟ್ಟೆಯ ವ್ಯಾಪಾರದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಬಹುದು. ಕೆಲಸದಲ್ಲಿ ಪ್ರಶಂಸೆ ಸಿಗುವುದು.

ಮಿಥುನ: ತಂದೆ ತಾಯಿ ಮಾತಿನಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಸಲುವಾಗಿ ಯೋಜನೆಯನ್ನು ಕೈಗೊಳ್ಳುವಿರಿ. ಸ್ನೇಹಿತರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಅನುಕೂಲ.

ಕರ್ಕಾಟಕ: ಜೀವನದಲ್ಲಿ ಮುಂದುವರಿಯಬೇಕು, ಉನ್ನತ ಸ್ಥಾನ ಅಲಂಕರಿಸಬೇಕು ಎನ್ನುವ ಉತ್ಕಟವಾದ ಅಭಿಲಾಷೆ ಕೆಲಸದಲ್ಲಿ ಕಾಣುವುದು. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು.

ಸಿಂಹ: ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಯಾವುದೂ ಅಡ್ಡಿಯಾಗಲಾರದು. ಸಹೋದರರ ಕಾರ್ಯಗಳಿಗೋಸ್ಕರ ಅಧಿಕ ಸುತ್ತಾಟವಾದರೂ ನೆಮ್ಮದಿ ಸಿಗಲಿದೆ. ಹೊಂದಾಣಿಕೆ ಅಗತ್ಯ.

ಕನ್ಯಾ: ಆರನೇ ಇಂದ್ರಿಯದ ಮಾತಿಗೆ ಬೆಲೆ ಕೊಡುವುದು ಸರಿಯಾದ ತೀರ್ಮಾನ. ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಕಾಣುವಿರಿ. ಆತ್ಮಾಭಿಮಾನ ಕಾಪಾಡಿಕೊಳ್ಳಿರಿ.

ತುಲಾ: ಆಸೆ ಆಕಾಂಕ್ಷೆಗೂ ಪ್ರಚಲಿತ ವಿದ್ಯಮಾನಕ್ಕೂ ಇರುವ ವ್ಯತ್ಯಾಸಗಳ ಬಗ್ಗೆ ಮನೆಯವರೊಂದಿಗೆ ಚರ್ಚಿಸಿ. ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಲು ಸಿದ್ಧರಾಗಬೇಕಾಗುತ್ತದೆ. ಷೇರು ಕೊಳ್ಳುವ ಬಗ್ಗೆ ಆಲೋಚಿಸುವಿರಿ.

ವೃಶ್ಚಿಕ: ಸಹೋದರರ ಕೋಪವನ್ನು ಉಪಶಮನಗೊಳಿಸುವ ಕೆಲಸದಿಂದ ಕೌಟುಂಬಿಕ ಸೌಖ್ಯ ಹೆಚ್ಚುವುದು. ಸಂಸ್ಥೆಯ ಮುಖಾಂತರ ಹೆಚ್ಚಿನ ತರಬೇತಿಗಾಗಿ ದೂರ ಪ್ರಯಾಣ ಮಾಡಬೇಕಾಗಿ ಬರಬಹುದು.

ಧನು: ಹೆಚ್ಚಿನ ಜವಾಬ್ದಾರಿಯುತವಾದ ಹುದ್ದೆಯನ್ನು ಅಲಂಕರಿಸಲು ಅವಕಾಶ ಮತ್ತು ಆಸೆ ಇದ್ದರೂ ಸಾಮರ್ಥ್ಯದ ಕೊರತೆ ಕಾಣುವುದು. ಮನಸ್ಸಿನ ಅಸ್ಥಿರತೆಯು ಆಧ್ಯಾತ್ಮ ಚಿಂತನೆಗೆ ತೊಂದರೆ ಮಾಡುವುದು.

ಮಕರ: ಸ್ನೇಹಿತರೊಂದಿಗೆ ಪ್ರವಾಸ ಹೊರಡುವ ಸಾಧ್ಯತೆ ಇದೆ. ವಾಹನ, ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿಯಿಂದ ಖರ್ಚು ಸಂಭವಿಸಲಿದೆ. ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭ ಕಾರ್ಯಗಳತ್ತ ಗಮನ ಹರಿಸುವಿರಿ.

ಕುಂಭ: ಕೆಲಸದಲ್ಲಿನ ನಿಮಗಿರುವ ಹೆಚ್ಚಿನ ದಕ್ಷತೆಯಿಂದಾಗಿ ಮೇಲಧಿಕಾರಿಗಳ ಮೆಚ್ಚುಗೆ ಗಳಿಸುವಿರಿ. ಹಣದ ವಿಚಾರದಲ್ಲಿ ಸರಿಯಾಗಿ ಲೆಕ್ಕಪತ್ರವನ್ನು ಕಾಪಾಡುವುದು ಅಗತ್ಯ. ಸಾಹಿತ್ಯ –ಸಂಗೀತ ವಿಷಯಗಳತ್ತ ಮನಸ್ಸು ತಿರುಗುವುದು.

ಮೀನ: ನಿಶ್ಚಿತ ವರ-ವಧುಗಳ ಮಧ್ಯದಲ್ಲಿ ಸಣ್ಣ-ಪುಟ್ಟ ವಿಚಾರಗಳಿಗೆ, ಸೋಲೊಪ್ಪದ ಮನಸ್ಥಿತಿಯಿಂದ ಭಿನ್ನಾಭಿಪ್ರಾಯ ಬರುವ ಸಂಭವವಿದೆ. ವಾಹನಗಳಿಂದ ಅಧಿಕ ಲಾಭ. ಗಣ್ಯ ವ್ಯಕ್ತಿಗಳ ಪರಿಚಯವಾಗಲಿದೆ.

ಪದಬಂಧ 5845


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜೀವವನ್ನು ಕೊಡುವುದು (4)
3.ಕಷ್ಟಪಟ್ಟು ಬಾಳುವವನು (4)
5.ಉಪವನ ತಿರುವು ಮುರುವಾಗಿದೆ (3)
8.ಮಿಥ್ಯವಲ್ಲ! ಇದು ಜೋಡಿ! (3)
9.ಪ್ರಮಾಣ ಪತ್ರವನ್ನು ಹೀಗೂ ಹೇಳುವರು (5)
10.ಅಂತರಂಗದಲ್ಲಿ ಎದ್ದಿರುವ ಅಲೆ! (3)
12.ಹರನಿಗೆ ಸಲ್ಲಿಸಿದ ಮುಡಿಪು (3)
15.ಕನ್ನಡಿಗನಿಗೆ ನೀಡಿದ ರಿಬೇಟ್! (4)
16.ಕಾವ್ಯಗಳಲ್ಲಿ ಶೋಕದ ಅಭಿವ್ಯಕ್ತಿ (4)

ಮೇಲಿಂದ ಕೆಳಕ್ಕೆ

1.ಚೀನದಲ್ಲಿ ಕಂಡದ್ದೆಲ್ಲಾ ಹಳೆಯದು ಬಿಡಿ! (3)
2.ಮೈಮೇಲೆ ಹೊದಿಕೆ ಬಟ್ಟೆ ಇಲ್ಲದವನು (2)
3.ಕೇಳುವಿಕೆಗೊಂದು ಪರ್ಯಾಯ ಪದ (3)
4.ಮಾನವುಳ್ಳ ವಸ್ತುಸ್ಥಿತಿ (4)
6.ಯೋಗವಿದ್ದಾಗಲೇ ಇದು ಪ್ರಯೋಜನ! (4)
7.ತಾಪದ ಹೊತ್ತಿನಲ್ಲಿ ವ್ಯಕ್ತವಾದ ಅತೀ ದುಃಖ (3)
8.ಗೆಳೆಯನಿಂದ ಆಗಿರುವ ವಂಚನೆ (4)
10.ತರತರದ ಕಾಯಿಪಲ್ಲೆ (4)
11.ಸತಿಯಿರುವ ಅತಿಥಿಗೃಹ (3)
13.ಕೆಲವರು ಮಾಡುವ ಕಾರ್ಯ (3)
14.ಹುಡುಕುವಿಕೆ ಉಲ್ಟಾ ಆಗಿಬಿಟ್ಟಿದೆ (2)



5844ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಮುನಿ 3.ದಿಬ್ಬಂಸಿ
5.ಮಕರಂದ 7.ಮೌನ
9.ಜನವಾಣಿ 10.ಅಲೆ
11.ತಡ 12.ಜತುಗೃಹ
13.ಗಾದಿ 14.ರಾಮಾಯಣ
16.ವಕ್ತಾರ 17.ಮಾಸು

ಮೇಲಿಂದ ಕೆಳಕ್ಕೆ:

1.ಪ್ರೇಮ 2.ಮುದ
3.ದಿನಮಣಿ 5.ಸಿರಿಗನ್ನಡ
6.ಕರೆಯೋಲೆ 8.ಜನಜಾಗೃತಿ
10.ಅವಿನಾಭಾವ 11.ತಳಪಾಯ
12.ಜತೆಗಾರ 14.ರಾಸು
15.ಣಬಾ

ಸುಡೊಕು 6230

2		4	1				8	
						5		9
8		3			9		1	
3		9	5		1			
	6						4	
5		1	6		8			2
	7			3	5	2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6229 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಪ್ರಜಾ ಮತ

ಜನತಂತ್ರದ ಹಬ್ಬ 2024

ಸಿಎಂ, ಡಿಸಿಎಂ ವಿಡಿಯೊ ಸಂವಾದ • ಜಿಲ್ಲೆ, ತಾಲ್ಲೂಕು ಮಟ್ಟಕ್ಕೆ ಸಚಿವರು, ಶಾಸಕರ ತಂಡ • ಭಿನ್ನಮತ ಶಮನಕ್ಕೆ ಸೂಚನೆ

ಉಪ ಚುನಾವಣೆ ಗೆಲುವಿಗೆ 'ಕೈ' ರಣತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಲ್ಲಿ ಶತಾಯಗತಾಯ ಗೆಲ್ಲಲು ರಣತಂತ್ರ ರೂಪಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈ ಕ್ಷೇತ್ರಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರ ಮಟ್ಟಕ್ಕೆ ಸಚಿವರು, ತಾಲ್ಲೂಕು ಪಂಚಾಯಿತಿ ಮಟ್ಟಕ್ಕೆ ಶಾಸಕರ ತಂಡಗಳನ್ನು ನಿಯೋಜಿಸಲು ನಿರ್ಧರಿಸಿದ್ದಾರೆ.

ಸಂಡೂರು, ಚನ್ನಪಟ್ಟಣ, ಶಿಗ್ಗಾವಿ ಕ್ಷೇತ್ರಗಳ ಉಪಚುನಾವಣೆ ಕುರಿತು ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಮುಖಂಡರ ಜೊತೆ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ ಭಾನುವಾರ ವಿಡಿಯೊ ಸಂವಾದ ನಡೆಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಇದ್ದರು. ಪಕ್ಷದ ರಾಜ್ಯ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ದೆಹಲಿಯಿಂದ ಭಾಗವಹಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಾಸಕರು, ಕಾಂಗ್ರೆಸ್ ಪಕ್ಷದ ಮುಖಂಡರ ಜೊತೆ ವಿಡಿಯೊ ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರ

'ಉಪ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ, ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು. ಜಿಲ್ಲಾ ಪಂಚಾಯಿತಿ ಕ್ಷೇತ್ರ ಮಟ್ಟದ ಹೊಣೆಯನ್ನು ಸಚಿವರಿಗೆ ನೀಡಲಾಗುವುದು. ತಾಲ್ಲೂಕು ಮಟ್ಟದಲ್ಲಿ ಶಾಸಕರು ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕೆಲವೇ ದಿನಗಳಲ್ಲಿ ಹೊಣೆಗಾರಿಕೆ ಹಂಚಿಕೆ ಆಗಲಿದೆ. ತಕ್ಷಣದಿಂದ ಕಾರ್ಯಪ್ರವೃತ್ತರಾಗಬೇಕು' ಎಂದು ಇಬ್ಬರು ನಾಯಕರೂ ಸಲಹೆ ನೀಡಿದ್ದಾರೆ.

ಆಯಾ ಭಾಗದ ಸಚಿವರು, ಶಾಸಕರಿಗೆ ಹೊಣೆ

ಶಿಗ್ಗಾವಿ ಕ್ಷೇತ್ರಕ್ಕೆ ಕಿತ್ತೂರು ಕರ್ನಾಟಕ, ಸಂಡೂರು ಕ್ಷೇತ್ರಕ್ಕೆ ಕಲ್ಯಾಣ ಕರ್ನಾಟಕ, ಚನ್ನಪಟ್ಟಣ ಕ್ಷೇತ್ರಕ್ಕೆ ಹಳೆ ಮೈಸೂರು ಭಾಗದ ಸಚಿವರು, ಶಾಸಕರಿಗೆ ಚುನಾವಣೆಯ ಜವಾಬ್ದಾರಿ ಹಂಚಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ.

ಹೊಣೆ ವಹಿಸಿಕೊಂಡವರು 'ನಾವೇ ಅಭ್ಯರ್ಥಿ, ನಮ್ಮದೇ ಚುನಾವಣೆ' ಎಂದು ಭಾವಿಸಿಕೊಂಡು ಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕು. ಲೋಕಸಭೆ ಚುನಾವಣೆ ಫಲಿತಾಂಶದ ಬಗ್ಗೆ ಯೋಚಿಸುವ ಅಗತ್ಯ ಇಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸಾಧಿಸಿದ ಆಧಿಪತ್ಯವನ್ನು ಉಪಚುನಾವಣೆ ಗೆಲ್ಲುವ ಮೂಲಕ ಮುಂದುವರಿಸಬೇಕು' ಎಂದು ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

'ಸ್ಥಳೀಯ ಮಟ್ಟದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನೂ ಒಗ್ಗೂಡಿಸಿ ಚುನಾವಣಾ ಪ್ರಚಾರ ನಡೆಸಬೇಕು. ರಾಜ್ಯದಲ್ಲಿ ನಮ್ಮದೇ ಸರ್ಕಾರವಿದೆ. ಹೀಗಾಗಿ, ಮೂರೂ ಕ್ಷೇತ್ರಗಳನ್ನು ಗೆಲ್ಲಲೇಬೇಕಾಗಿದೆ. ಇಲ್ಲವಾದರೆ ತಪ್ಪು ಸಂದೇಶ ರವಾನೆ ಆಗಲಿದೆ. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದ ಪಂಚ ಗ್ಯಾರಂಟಿಗಳು ಉಪ ಚುನಾವಣೆಯ ವೇಳೆಗೆ ಅನುಷ್ಠಾನಗೊಂಡು, ಜನರಿಗೆ ತಲುಪಿವೆ. ಈ ಜನಪರ ಯೋಜನೆಗಳ ಬಗ್ಗೆ ಕ್ಷೇತ್ರದಲ್ಲಿ ಪ್ರಚಾರ ನಡೆಸಬೇಕು. ಭಿನ್ನಮತ, ಅಸಮಾಧಾನ ಇದ್ದರೆ ಶಮನಗೊಳಿಸಿ ಕಾರ್ಯಕರ್ತರನ್ನು ಹುರಿದುಂಬಿಸಬೇಕು' ಎಂದೂ ನಿರ್ದೇಶನ ನೀಡಿದ್ದಾರೆ.

'ರಾಜ್ಯ ಸರ್ಕಾರದ ಮೇಲೆ ಬಿಜೆಪಿ– ಜೆಡಿಎಸ್ ನಾಯಕರು ಭ್ರಷ್ಟಾಚಾರ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ, ಮುಡಾ ಪ್ರಕರಣ ಮುಂದಿಟ್ಟು ಸುಳ್ಳುಪ್ರಚಾರ ಮಾಡಬಹುದು. ಅದರ ವಿರುದ್ಧ ಗಟ್ಟಿಯಾಗಿ ನಿಂತು ಸತ್ಯವನ್ನು ಜನರಿಗೆ ತಿಳಿಸಿಕೊಡುವ ಕೆಲಸ ಮಾಡಬೇಕು. ಉಸ್ತುವಾರಿ ಸಚಿವರು, ಶಾಸಕರು, ಮಾಜಿ ಶಾಸಕರು ಕ್ಷೇತ್ರದಲ್ಲಿ ಸಕ್ರಿಯವಾಗಿ ಪಕ್ಷದ ಅಭ್ಯರ್ಥಿ ಪರ ಮತಯಾಚನೆ ಮಾಡಬೇಕು' ಎಂದು ಸೂಚನೆ ನೀಡಿದರು.

ಮಂತ್ರಿಗಳ ಗೈರಿಗೆ ಸುರ್ಜೇವಾಲಾ ಗರಂ: ಸಂವಾದಕ್ಕೆ ಕೆಲವು ಸಚಿವರು ಗೈರಾಗಿರುವುದಕ್ಕೆ ರಣದೀಪ್ ಸಿಂಗ್ ಸುರ್ಜೇವಾಲಾ ಅಸಮಾಧಾನ ವ್ಯಕ್ತಪಡಿಸಿದರು.

'ಎಲ್ಲರೂ ಮೂರು ಕ್ಷೇತ್ರಗಳ ಉಪಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಬಾರದು. ಎಲ್ಲ ಚಟುವಟಿಕೆಯ ಮೇಲೆ ಹೈಕಮಾಂಡ್ ನಿಗಾವಹಿಸಲಿದೆ' ಎಂದು ಸಚಿವರು ಮತ್ತು ಶಾಸಕರಿಗೆ ಅವರು ನಿರ್ದೇಶನ ನೀಡಿದರು.

ಸುದ್ದಿ 2 ನಿಮಿಷ

ವಿಜಯೇಂದ್ರಗೆ ಅಧ್ಯಕ್ಷ ಸ್ಥಾನ ತಪ್ಪುವುದು ನಿಶ್ಚಿತ: ಬೇಳೂರು

ಶಿರಸಿ: 'ರಾಜ್ಯದಲ್ಲಿ ನಡೆಯುವ ಉಪಚುನಾವಣೆ ನಂತರ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಕೆಳಗಿಳಿಯುವುದು ನಿಶ್ಚಿತ' ಎಂದು ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

ನಗರದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು,' ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಶೀಘ್ರ ಪತನವಾಗಲಿದೆ ಎನ್ನಲು ವಿಜಯೇಂದ್ರ ಭವಿಷ್ಯಗಾರರೇ? ಆ ಬಗ್ಗೆ ಅವರು ಮಾತನಾಡುವುದು ಹಾಸ್ಯಾಸ್ಪದ. ಅವರ ರಾಜ್ಯಾಧ್ಯಕ್ಷ ಸ್ಥಾನವೇ ಅಲ್ಲಾಡುತ್ತಿದೆ. ಮೊದಲು ಅವರು ತಮ್ಮ ಸ್ಥಾನ ಉಳಿಸಿಕೊಳ್ಳಲು ಗಮನ ನೀಡಲಿ' ಎಂದರು.

'ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ತನಿಖೆ ಮಾಡಿದರೆ ಅವರು ಆರೋಪಿ ಆಗುತ್ತಾರಾ? ಅವರು ಏಕೆ ರಾಜೀನಾಮೆ ನೀಡಬೇಕು? ಸಿಎಂ ಸ್ಥಾನದಲ್ಲಿರುವ ಸಿದ್ದರಾಮಯ್ಯ ವಿರುದ್ಧ ಅಸಾಂವಿಧಾನಿಕ ಪದ ಬಳಸುತ್ತಿರುವ ಬಿಜೆಪಿಗರು ಎಚ್ಚರಿಕೆಯಿಂದ ಇರಬೇಕು. ಯಡಿಯೂರಪ್ಪ ಅವರದ್ದೇ ಪೋಕ್ಸೊ ಪ್ರಕರಣ ಇದೆ. ಆ ಬಗ್ಗೆ ಮಾತನಾಡದ ವಿಜಯೇಂದ್ರ ಸಿದ್ದರಾಮಯ್ಯ ಬಗ್ಗೆ ಯಾವ ನೈತಿಕತೆ ಇಟ್ಟುಕೊಂಡು ಮಾತನಾಡುತ್ತಾರೆ? ಮೊದಲು ಅವರು ಸರಿಯಾಗಲಿ, ಪಕ್ಷ ಸ್ವಚ್ಛ ಮಾಡಿಕೊಳ್ಳಲಿ. ಅದು ಬಿಟ್ಟು ಕಾಂಗ್ರೆಸ್ ಬಗ್ಗೆ ಮಾತನಾಡುವುದು ಸರಿಯಲ್ಲ' ಎಂದು ಹೇಳಿದರು.

'ಶಾಸಕ ಸತೀಶ ಸೈಲ್ ಅವರಿಗೆ ಜನಪ್ರತಿನಿಧಿ ಕೋರ್ಟ್‌ನಿಂದ ಶಿಕ್ಷೆ ಪ್ರಕಟವಾಗಿದೆ. ಯಾವುದೇ ವ್ಯಕ್ತಿ ತಪ್ಪು ಮಾಡಿದರೂ ಕಾನೂನಿನಡಿ ಶಿಕ್ಷೆ ಅನುಭವಿಸಲೇ ಬೇಕು' ಎಂದರು.



9 ಅಧಿಕಾರಿಗಳ ಕರ್ತವ್ಯ ಸ್ಥಳ ಬದಲಾಯಿಸಲು ಬಿಜೆಪಿ ಪತ್ರ

ಬಳ್ಳಾರಿ: ಚುನಾವಣಾ ಪಾರದರ್ಶಕತೆಯ ದೃಷ್ಟಿಯಿಂದ ಸಂಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಇಲಾಖೆಗಳ ಒಂಬತ್ತು ಅಧಿಕಾರಿ–ನೌಕರರ ಕರ್ತವ್ಯ ಸ್ಥಳ ಬದಲಾವಣೆ ಮಾಡಬೇಕು ಎಂದು ಬಿಜೆಪಿ ರಾಜ್ಯ ಘಟಕವು ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ಒಟ್ಟು ಒಂಬತ್ತು ಮಂದಿ ಅಧಿಕಾರಿ–ನೌಕರರ ಕರ್ತವ್ಯದ ಸ್ಥಳ ಬದಲಾವಣೆ ಮಾಡುವಂತೆ ಚುನಾವಣಾಧಿಕಾರಿಯೂ ಆದ ಬಳ್ಳಾರಿ ಜಿಲ್ಲಾಧಿಕಾರಿಗೆ ಅ.18ರಂದು ಬಿಜೆಪಿ ಜಿಲ್ಲಾಘಟಕ ಮನವಿ ಮಾಡಿತ್ತು. ಆದರೆ ಈ ಮನವಿಯನ್ನು ತಳ್ಳಿಹಾಕಿದ್ದ ಚುನಾವಣಾಧಿಕಾರಿ, ಕರ್ತವ್ಯ ಸ್ಥಳ ಬದಲಾವಣೆಗೆ ನಿರಾಕರಿಸಿದ್ದರು ಎನ್ನಲಾಗಿದೆ.

ಸದ್ಯ, ವಿಷಯವನ್ನು ಮುಖ್ಯ ಚುನಾವಣಾಧಿಕಾರಿ ಹಂತಕ್ಕೆ ಬಿಜೆಪಿ ಕೊಂಡೊಯ್ದಿದೆ. 'ಜಿಲ್ಲಾ ಚುನಾವಣಾಧಿಕಾರಿಯ ಕ್ರಮವನ್ನು ಕಾನೂನು ಬಾಹಿರ' ಎಂದು ಆರೋಪಿಸಿರುವ ರಾಜ್ಯ ಬಿಜೆಪಿ, ಶನಿವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ. ನಿರ್ದಿಷ್ಟ ಅಧಿಕಾರಿ–ನೌಕರರ ಕರ್ತವ್ಯದ ಸ್ಥಳ ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿದೆ.

ಸಿದ್ದರಾಮಯ್ಯ ಬೆಂಬಲಿಸಿ ಶೀಘ್ರ ಸಮಾವೇಶ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಮುಂದಿನ ತಿಂಗಳು ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ 'ಸಿದ್ದರಾಮಯ್ಯ ಸ್ವಾಭಿಮಾನಿ ಜನಾಂದೋಲನ ಸಮಾವೇಶ' ನಡೆಸಲು ವಿವಿಧ ಸಂಘಟನೆಗಳ ಮುಖಂಡರು ನಿರ್ಧರಿಸಿದರು.

ನಗರದ ಯಾದವ ಸಮುದಾಯ ಭವನದಲ್ಲಿ ಭಾನುವಾರ ಮೈಸೂರು, ಮಂಡ್ಯ, ಕೊಡಗು, ಹಾಸನ, ಚಾಮರಾಜನಗರ ಜಿಲ್ಲೆಗಳ ಶೋಷಿತ ಸಮಾಜಗಳು ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ನಡೆಸಿದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

'ದಶಕಗಳಿಂದ ಪ್ರಾಮಾಣಿಕ ರಾಜಕಾರಣ ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಅವರ ತೇಜೋವಧೆಗೆ ಇಳಿದಿರುವ ಬಿಜೆಪಿ- ಜೆಡಿಎಸ್ ಪಕ್ಷಗಳ ನಡೆಯನ್ನು ಖಂಡಿಸಿ ಸಮಾವೇಶ ನಡೆಸಲಾಗುವುದು. ಆ ಪಕ್ಷಗಳ ಹುನ್ನಾರಗಳನ್ನು ಜನತೆಗೆ ತಿಳಿಸಲಾಗುವುದು. ಈ ಮೂಲಕ ಸಿದ್ದರಾಮಯ್ಯ ಅವರಿಗೆ ನೈತಿಕ ಶಕ್ತಿ ತುಂಬಲಾಗುವುದು' ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದರು.

ಇದೇ ವೇಳೆ, ಕರ್ನಾಟಕ ವಕೀಲರ ಜಾಗೃತ ವೇದಿಕೆ ಪ್ರಕಟಿಸಿರುವ 'ಮುಡಾ ಪ್ರಕರಣ: ಸತ್ಯಾಸತ್ಯತೆ' ಪುಸ್ತಕ ಬಿಡುಗಡೆ ಮಾಡಲಾಯಿತು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಪಾಲ್ಗೊಂಡಿದ್ದರು.

'ಎಚ್‌ಡಿಕೆ ನಾಯಕತ್ವದ ಅಗ್ನಿಪರೀಕ್ಷೆ'

ಜನರ ಕಷ್ಟಕ್ಕೆ ಮಿಡಿವ ಗೌಡರ ಕುಟುಂಬಕ್ಕೆ ಸಹಜವಾಗಿ ಕಣ್ಣೀರು ಬರುತ್ತೆ: ನಿಖಿಲ್ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಚನ್ನಪಟ್ಟಣ ಉಪ ಚುನಾವಣೆ ಎಚ್.ಡಿ. ಕುಮಾರಸ್ವಾಮಿ ಅವರ ನಾಯಕತ್ವದ ಅಗ್ನಿಪರೀಕ್ಷೆ. ಇಲ್ಲಿ ನಿಖಿಲ್ ನೆಪ ಮಾತ್ರ' ಎಂದು ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ತಾಲ್ಲೂಕಿನ ವಿವಿಧೆಡೆ ಭಾನುವಾರ ಪ್ರಚಾರ ನಡೆಸಿದ ಅವರು, 'ನನಗೆ ಕುತಂತ್ರದ ರಾಜಕಾರಣ ಗೊತ್ತಿಲ್ಲ. ಕಳೆದ ಎರಡು ಚುನಾವಣೆಯಲ್ಲಿ ಸೋತು ಚುನಾವಣೆ ಸಹವಾಸವೇ ಬೇಡ ಎನ್ನುತ್ತಿದ್ದೆ. ಅನಿವಾರ್ಯವಾಗಿ ನಿಮ್ಮಗಳ ಒತ್ತಡಕ್ಕಾಗಿ ಸ್ಪರ್ಧಿಸಿದ್ದೇನೆ. ನೀವೇ ಕೈ ಹಿಡಿದು ಮುನ್ನಡೆಸಬೇಕು' ಎಂದು ಮನವಿ ಮಾಡಿದರು.

'ನಿಮಗೆ ಕೈ ಜೋಡಿಸಿ ಪಾದ ಮುಟ್ಟಿ ಬೇಡಿಕೊಳ್ಳುವೆ. ನನಗೊಂದು ಅವಕಾಶ ಕೊಡಿ. ಕೊನೆಯ ಉಸಿರಿರುವವರೆಗೆ ನಿಮ್ಮ ಜೊತೆಗಿರುತ್ತೇನೆ' ಎಂದು ಬೇಡಿಕೊಂಡರು.

'ದೇವೇಗೌಡರ ಕುಟುಂಬದವರು ಕಣ್ಣೀರು ಹಾಕುತ್ತಾರೆ ಎಂದು ಹೇಳುತ್ತಾರೆ. ನಾವು ಕಣ್ಣೀರು ಹಾಕೋದು ಬಡವರು ಮತ್ತು ರೈತರಿಗಾಗಿ. ನಾವು ಈ ನಾಡಿಗಾಗಿಯೇ ಕಣ್ಣೀರು ಹಾಕುತ್ತೇವೆಯೇ ಹೊರತು ಸ್ವಂತಕ್ಕಲ್ಲ. ಜನರ ಕಷ್ಟಕ್ಕೆ ಮಿಡಿಯುವವರಿಗೆ ಸಹಜವಾಗಿಯೇ ಕಣ್ಣೀರು ಬರುತ್ತದೆ' ಎಂದರು.

ಪ್ರಚಾರದ ನಡುವೆ ದಶಾವರ ಗ್ರಾಮಕ್ಕೆ ಬಂದ ನಿಖಿಲ್ ಅವರನ್ನು ಆಶೀರ್ವದಿಸಿದ ಅಜ್ಜಿಯೊಬ್ಬರು, 'ಹೋಗು ಮಗನೇ.. ನಿನಗೆ ಒಳ್ಳೆಯದಾಗುತ್ತದೆ. ನೀನು ಗೆಲ್ಲುವೆ' ಎಂದು ಆಶೀರ್ವದಿಸಿದರು. ಅದಕ್ಕೆ ಭಾವುಕರಾದ ನಿಖಿಲ್, 'ನಿಮ್ಮ ಆಶೀರ್ವಾದ ಇದ್ದರೆ ಗೆದ್ದೇ ಗೆಲ್ಲುತ್ತೇನೆ' ಎಂದರು.





ಚನ್ನಪಟ್ಟಣ ತಾಲ್ಲೂಕಿನ ಮಾಕಳಿ ಗ್ರಾಮದಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ ಯಾಚಿಸಿದರು (ಎಡಚಿತ್ರ) ಸೋಗಾಲ ಗ್ರಾಮದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸಮನ್ವಯ ಸಭೆಗೆ ಬಂದ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಕಾರ್ಯಕರ್ತರಿಗೆ ನಮಸ್ಕರಿಸಿದರು

ಬಿಜೆಪಿಗೆ ಸಾಮೂಹಿಕ ರಾಜೀನಾಮೆ

ಚನ್ನಪಟ್ಟಣದಲ್ಲಿ ಪಕ್ಷಾಂತರ ಪರ್ವ ಶುರುವಾಗಿದ್ದು ಭಾನುವಾರ ಬಿಜೆಪಿಯ 40 ಕಾರ್ಯಕರ್ತರು ಸಾಮೂಹಿಕ ರಾಜೀನಾಮೆ ಸಲ್ಲಿಸಿದ್ದಾರೆ.

ತಾಲ್ಲೂಕು ಬಿಜೆಪಿ ಎಸ್.ಸಿ ಮೋರ್ಚಾದ ನಗರ, ಗ್ರಾಮಾಂತರ ಹಾಗೂ ಮಹಿಳಾ ಘಟಕಗಳ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಿದ್ದು, ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರಿಗೆ ಬೆಂಬಲ ಘೋಷಿಸಿದ್ದಾರೆ.

ನೀರಾವರಿಗಾಗಿ ಪಕ್ಷಾಂತರ: ಸಿಪಿವೈ

ಚನ್ನಪಟ್ಟಣ (ರಾಮನಗರ): ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ರಾಜಕೀಯ ಮಹತ್ವಾಕಾಂಕ್ಷೆಯೇ ಈ ಉಪ ಚುನಾವಣೆಗೆ ಕಾರಣ ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಟೀಕಿಸಿದರು.

ತಾಲ್ಲೂಕಿನ ವಿವಿಧೆಡೆ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿ ಮತ್ತು ನೀರಾವರಿ ಯೋಜನೆಗಾಗಿ ಪಕ್ಷಾಂತರ ಮಾಡಿದ್ದೆ. ಅದರ ಫಲವಾಗಿ ತಾಲ್ಲೂಕಿನ ಕೆರೆಗಳು ತುಂಬಿದ್ದು ರೈತರಿಗೆ ಶಾಶ್ವತ ನೀರಾವರಿ ಭಾಗ್ಯ ಸಿಕ್ಕಿದೆ ಎಂದರು.

'ನಾನು ಎರಡು ಬಾರಿ ಸೋತು ಸುಣ್ಣವಾಗಿದ್ದೇನೆ. ನನಗೆ ಕಣ್ಣೀರು ಹಾಕಿ, ನಾಟಕವಾಡಲು ಬರುವುದಿಲ್ಲ. ಬೆಂಬಲಿಗರು ಹಾಗೂ ಕಾರ್ಯಕರ್ತರು ಒಟ್ಟಾಗಿ ನನಗೆ ಆಶೀರ್ವಾದ ಮಾಡಬೇಕು' ಎಂದು ಬೇಡಿಕೊಂಡರು.

'ನಿಖಿಲ್‌ನನ್ನು ಅಭಿಮನ್ಯು ಮಾಡಲ್ಲ'

ಹಾಸನ: 'ಚನ್ನಪಟ್ಟಣದ ಜನರು ನಿಖಿಲ್ ಕುಮಾರಸ್ವಾಮಿಯನ್ನು ಅಭಿಮನ್ಯು ಮಾಡುವುದಿಲ್ಲ. ಅರ್ಜುನನ ಪಾತ್ರ ಕೊಡುತ್ತಾರೆ. ಕಾಂಗ್ರೆಸ್ ನಾಯಕರ ಕುತಂತ್ರ ಇಲ್ಲಿ ನಡೆಯದು' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

> **'ಹಿಂದೆ ಮಂಡ್ಯ, ರಾಮನಗರದ ಚುನಾವಣೆಯಲ್ಲಿ ನಿಖಿಲ್ ಸೋತಿದ್ದಾಗ, ಅಭಿಮನ್ಯು ಆಗಿರಲಿಲ್ಲವೇ'**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಹಾಸನಾಂಬೆ ದರ್ಶನ ಮಾಡಿ ಹೇಳುತ್ತಿದ್ದೇನೆ, ಬರೆದಿಟ್ಟುಕೊಳ್ಳಿ. ಚನ್ನಪಟ್ಟಣದಿಂದ ಅವರ (ಡಿ.ಕೆ.ಶಿವಕುಮಾರ್ ಸಹೋದರರು) ಅವನತಿ ಆರಂಭವಾಗುತ್ತದೆ' ಎಂದರು.

'ಮೈತ್ರಿ ಮಾಡಿಸಿದ್ದು ನಾನೇ, ಕುಮಾರಸ್ವಾಮಿ ಗೆಲ್ಲಿಸಿದ್ದು ನಾನೇ, ಡಾ.ಸಿ.ಎನ್. ಮಂಜುನಾಥ್ ಗೆಲ್ಲಿಸಿದ್ದು ನಾನೇ ಎಂದು ಸಿ.ಪಿ. ಯೋಗೇಶ್ವರ್ ಹೇಳುತ್ತಾರೆ. ಹಾಗಿದ್ದರೆ ಅವರು ಹೈಕಮಾಂಡ್‌ನಿಂದ (ಬಿಜೆಪಿ) 'ಬಿ' ಫಾರಂ ಪಡೆದು ಏಕೆ ಚುನಾವಣೆಗೆ ಸ್ಪರ್ಧಿಸಲಿಲ್ಲ' ಎಂದು ಪ್ರಶ್ನಿಸಿದರು.

'ಚನ್ನಪಟ್ಟಣದಲ್ಲಿ ನಾನು ಸ್ಪರ್ಧಿಸುತ್ತೇನೆಂದು ನಿಖಿಲ್ ಬಂದಿರಲಿಲ್ಲ. ಅನಿವಾರ್ಯವಾಗಿ ಅವರಿಗೆ ಅಭ್ಯರ್ಥಿ ಪಟ್ಟ ಕಟ್ಟಲಾಗಿದೆ. ಚನ್ನಪಟ್ಟಣ ಮೊದಲಿನಿಂದಲೂ ಜೆಡಿಎಸ್ ಭದ್ರಕೋಟೆ. ನಮ್ಮಲ್ಲಿನ ಕೆಲ ತಪ್ಪುಗಳನ್ನು ಸರಿ ಮಾಡಲು ನನ್ನನ್ನು ರಾಮನಗರದಿಂದ ಚನ್ನಪಟ್ಟಣಕ್ಕೆ ಕರೆದೊಯ್ದರು. ಈಗ ಎಲ್ಲವೂ ಸರಿಯಾಗಿದೆ. ಉಪ ಚುನಾವಣೆಯಲ್ಲಿ ನಾವು ಗೆಲ್ಲುವುದು ಶತಸ್ಸಿದ್ಧ' ಎಂದರು.

ತಾಕತ್ತಿದ್ದರೆ ದಾಖಲೆ ಬಿಡುಗಡೆಗೊಳಿಸಿ: ಶೋಭಾ

ಪ್ರಜಾವಾಣಿ ವಾರ್ತೆ



ಶೋಭಾ ಕರಂದ್ಲಾಜೆ

ಬೆಳಗಾವಿ: 'ತಾಕತ್ತಿದ್ದರೆ ನನ್ನ ಅಕ್ರಮದ ದಾಖಲೆ ಬಿಡುಗಡೆಗೊಳಿಸಿ' ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು, ಸಚಿವ ಬೈರತಿ ಸುರೇಶ್ ಅವರಿಗೆ ಸವಾಲು ಹಾಕಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಸಾವಿರಾರು ಕಡತಗಳನ್ನು ಬೈರತಿ ಸುರೇಶ್ ತಂದು, ಸುಟ್ಟು ಹಾಕಿದ್ದಾರೆ. ನಾನು ಆ ಕುರಿತಾಗಿ ಧ್ವನಿ ಎತ್ತಿದ್ದರಿಂದ ನನ್ನ ವಿರುದ್ಧ ಬೇರೆ ಬೇರೆ ಆರೋಪ ಮಾಡುತ್ತಿದ್ದಾರೆ' ಎಂದು ದೂರಿದರು.

'ಈ ಹಿಂದೆ ಹಲವು ಸರ್ಕಾರದವರು ನನ್ನ ಬಗ್ಗೆ ಆರೋಪ ಮಾಡಿ, ತನಿಖೆ ಮಾಡಿದರು. ಆದರೆ, ಶೋಭಾ ಕರಂದ್ಲಾಜೆ ಯಾವುದೇ ಭ್ರಷ್ಟಾಚಾರ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ' ಎಂದು ತಿರುಗೇಟು ಕೊಟ್ಟರು.

'ನನ್ನ ವಿರುದ್ಧದ ದಾಖಲೆ ಬಹಿರಂಗಪಡಿಸಲು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರನ್ನು ನೇಮಿಸಲಾಗಿದೆ. ಆದರೆ, ಪೊನ್ನಣ್ಣ ಅವರಿಗೂ ಹಾಗೂ ವಿದ್ಯುತ್ ಇಲಾಖೆಗೂ ಏನು ಸಂಬಂಧ? ನಕಲಿ ಕಡತ ಸೃಷ್ಟಿಗೆ ಪೊನ್ನಣ್ಣ ಅವರಿಗೆ ಈ ಹೊಣೆ ವಹಿಸಿದ್ದೀರಿ. ಈ ಮೂಲಕ ಇದರಲ್ಲೂ ಭ್ರಷ್ಟಾಚಾರ ಮಾಡಲು ಹೊರಟಿದ್ದೀರಿ ಎಂಬ ಅನುಮಾನ ಮೂಡುತ್ತಿದೆ. ನಿಮ್ಮ ಬಳಿ ಇರುವ ದಾಖಲೆ ತಕ್ಷಣವೇ ಬಹಿರಂಗಪಡಿಸಿ' ಎಂದರು.

'ಬೈರತಿ ಸುರೇಶ್ ಅವರು ಮೈಸೂರಿನಿಂದ ಕಡತ ತಂದಿದ್ದು ಸತ್ಯ. ಸುಟ್ಟು ಹಾಕಿದ್ದು ಸತ್ಯ. ಮುಡಾ ಹಗರಣದ ಬಗ್ಗೆ ಈಗ ತನಿಖೆ ಆರಂಭವಾಗಿದೆ. ಈ ಭಯದಿಂದ ಅವರು ನನ್ನ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದು ಆಪಾದಿಸಿದರು.

ಗೆಲುವು ಖಚಿತ: 'ರಾಜ್ಯದಲ್ಲಿ ಉಪ ಚುನಾವಣೆ ನಡೆಯುತ್ತಿರುವ ಮೂರು ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಲಿದ್ದಾರೆ' ಎಂದು ಶೋಭಾ ಕರಂದ್ಲಾಜೆ ವಿಶ್ವಾಸ ವ್ಯಕ್ತಪಡಿಸಿದರು.

'ನಮ್ಮ ಶಕ್ತಿ ಇರುವುದೇ ಬೂತ್ ಮಟ್ಟದಲ್ಲಿ. ಅಲ್ಲಿ ನಮಗೆ ಉತ್ತಮ ವಾತಾವರಣ ಇದೆ. ಹಾಗಾಗಿ ಮೂರು ಕ್ಷೇತ್ರಗಳಲ್ಲೂ ಗೆದ್ದೇ ಗೆಲ್ಲುತ್ತೇವೆ' ಎಂದರು.

'ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲೂ ಎನ್‌ಡಿಎ ಅಭ್ಯರ್ಥಿಗಳಿಗೇ ಗೆಲುವು ಸಿಗಲಿದೆ' ಎಂದು ಹೇಳಿದರು.



ತಮಿಳುನಾಡಿನ ವಿಲ್ಲುಪುರಂನ ವಿಕ್ರವಾಂಡಿಯಲ್ಲಿ ಭಾನುವಾರ ನಡೆದ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ಮೊದಲ ರಾಜ್ಯಮಟ್ಟದ ಸಮ್ಮೇಳನದಲ್ಲಿ ಅಭಿಮಾನಿಗಳತ್ತ ಪಕ್ಷದ ಸಂಸ್ಥಾಪಕ ಹಾಗೂ ನಟ ದಳಪತಿ ವಿಜಯ್ ಕೈ ಬೀಸಿದರು –ಪಿಟಿಐ ಚಿತ್ರ

ಬಿಜೆಪಿ, ಡಿಎಂಕೆ ವಿರುದ್ಧ ವಿಜಯ್ ಕಿಡಿ

ಪ್ರಜಾವಾಣಿ ವಾರ್ತೆ

ವಿಕ್ರವಾಂಡಿ: ತಮಿಳುನಾಡಿನ 2026ರ ವಿಧಾನಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ನಟ, ರಾಜಕಾರಣಿ ದಳಪತಿ ವಿಜಯ್ ಅವರು ತಮ್ಮ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷವನ್ನು ಭಾನುವಾರ ಔಪಚಾರಿಕವಾಗಿ ಅನಾವರಣಗೊಳಿಸಿದರು.

ವಿಕ್ರವಾಂಡಿಯಲ್ಲಿ ಭಾನುವಾರ ಆಯೋಜಿಸಿದ್ದ ಪಕ್ಷದ ಮೊದಲ ರಾಜ್ಯಮಟ್ಟದ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ವಿಭಜಕ' ಬಿಜೆಪಿ ಮತ್ತು 'ಭ್ರಷ್ಟ' ಡಿಎಂಕೆಯು ಕ್ರಮವಾಗಿ ತಮ್ಮ 'ಸೈದ್ಧಾಂತಿಕ' ಹಾಗೂ 'ರಾಜಕೀಯ' ವಿರೋಧಿಗಳು ಎಂದು ಘೋಷಿಸಿದರು.



50 ವರ್ಷದ ವಿಜಯ್ ಅವರು 'ಜಾತ್ಯತೀತತೆ' ಮತ್ತು 'ಸಾಮಾಜಿಕ ನ್ಯಾಯ'ವು ಟಿವಿಕೆಯ ಎರಡು ಸಿದ್ಧಾಂತಗಳು ಎಂದು ಪ್ರಕಟಿಸಿದರಲ್ಲದೆ, 'ದ್ರಾವಿಡವಾದ' ಮತ್ತು 'ತಮಿಳು ರಾಷ್ಟ್ರೀಯತೆ'ಯನ್ನು ತಮಿಳುನಾಡಿನ 'ಎರಡು ಕಣ್ಣುಗಳು' ಎಂದು ಬಣ್ಣಿಸಿದರು.

'ಟಿವಿಕೆಯ ಸಿದ್ಧಾಂತ ಮತ್ತು ನನ್ನ ನಾಯಕತ್ವವನ್ನು ಒಪ್ಪಿಕೊಳ್ಳುವ ರಾಜಕೀಯ ಪಕ್ಷಗಳೊಂದಿಗೆ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧನಿದ್ದೇನೆ' ಎಂದು ಅವರು ಘೋಷಿಸಿದರು.

3 ಲಕ್ಷಕ್ಕೂ ಅಧಿಕ ಮಂದಿ ಭಾಗಿ: ಟಿವಿಕೆ ಪಕ್ಷದ ಸಮಾವೇಶದಲ್ಲಿ ಮೂರು ಲಕ್ಷಕ್ಕೂ ಅಧಿಕ ಮಂದಿ ಭಾಗಿಯಾಗಿದ್ದರು. ಸಮಾವೇಶದ ತಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿದ್ದರಿಂದ ಅಭಿಮಾನಿಗಳು ಹಲವು ಕಿ.ಮೀ. ದೂರ ಕಾಲ್ನಡಿಗೆಯಲ್ಲೇ ಕ್ರಮಿಸಬೇಕಾಯಿತು.

ಈ ವರ್ಷದ ಫೆಬ್ರುವರಿ 2ರಂದು ತಮ್ಮ ಪಕ್ಷದ ಹೆಸರನ್ನು ಪ್ರಕಟಿಸಿದ್ದ ವಿಜಯ್, ಈ ಮೂಲಕ ರಾಜಕೀಯ ಪ್ರವೇಶವನ್ನು ಘೋಷಿಸಿದ್ದರು.

ಸಂಕ್ಷಿಪ್ತ ಸುದ್ದಿ

ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೆ ಹಿಮಂತ ವಿಶ್ವಾಸ



ಹಿಮಂತ ಬಿಸ್ವಾ ಶರ್ಮಾ

ಗುವಾಹಟಿ (ಪಿಟಿಐ): 'ಬಿಜೆಪಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಾರ್ಖಂಡ್ 'ತೀವ್ರ ಸ್ಪರ್ಧೆ' ಇರುವ ರಾಜ್ಯ. ಆದರೆ, ಪಕ್ಷವು ಅಲ್ಲಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ಪಕ್ಷದ ಉಸ್ತುವಾರಿ ಆಗಿರುವ ಅವರು, 'ನಾನು ಜಾರ್ಖಂಡ್‌ನಲ್ಲಿ ಪ್ರಚಾರ ಕಾರ್ಯದಲ್ಲಿ ನಿರತನಾಗಿರುವ ಕಾರಣ, ಅಸ್ಸಾಂನಲ್ಲಿ ನ. 13ರಂದು ನಡೆಯಲಿರುವ ಉಪ ಚುನಾವಣೆಯತ್ತ ಗಮನ ಕೇಂದ್ರೀಕರಿಸಿಲ್ಲ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾರ್ಖಂಡ್‌ನಲ್ಲಿ ಉತ್ತಮ ಫಲಿತಾಂಶ ಬರುವ ನಿರೀಕ್ಷೆಯಲ್ಲಿ ಪಕ್ಷವಿದೆ ಎಂದು ಹೇಳಿದರು. ರಾಜ್ಯದಲ್ಲಿ ನ.13 ಮತ್ತು 20ರಂದು ಎರಡು ಹಂತದಲ್ಲಿ ಚುನಾವಣೆ ನಡೆಯಲಿದ್ದು, ನವೆಂಬರ್ 23ರಂದು ಮತಗಳ ಎಣಿಕೆ ನಡೆಯಲಿದೆ

'ಬಿಯರ್ ಮೇಲಿನ ಸುಂಕ ಹೆಚ್ಚಿಸಬೇಡಿ'

ನವದೆಹಲಿ (ಪಿಟಿಐ): 'ಬಿಯರ್ ಮೇಲಿನ ಸುಂಕ ಹೆಚ್ಚಿಸಿ ಕರ್ನಾಟಕ ಸರ್ಕಾರ ಹೊರಡಿಸಿರುವ ಕರಡು ಅಧಿಸೂಚನೆಯನ್ನು ಹಿಂಪಡೆಯಬೇಕು' ಎಂದು ಬ್ರೀವರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಆಗ್ರಹಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಬಿಎಐ, 'ಸುಂಕ ಹೆಚ್ಚಳದಿಂದ ಬಿಯರ್ ಮಾರಾಟ ಕುಸಿಯುವ ಅಪಾಯವಿದ್ದು, ಸರ್ಕಾರದ ಆದಾಯವೂ ಕಡಿಮೆಯಾಗುತ್ತದೆ. ಹೀಗಾಗಿ ಈ ನಿರ್ಧಾರದಿಂದ ಹಿಂದೆ ಸರಿಯಬೇಕು' ಎಂದು ಕೋರಿದೆ.

'ಬಿಯರ್‌ನಲ್ಲಿ ಇರುವ ವಿವಿಧ ಪದಾರ್ಥಗಳ ಪ್ರಮಾಣ ಎಷ್ಟು ಎಂಬುದನ್ನು ಲೇಬಲ್ ಮೇಲೆ ನಮೂದಿಸಬೇಕು ಎಂಬ ನಿಯಮದಿಂದ, ಉದ್ಯಮಕ್ಕೆ ಹೊಡೆತ ಬೀಳಲಿದೆ. ಹೀಗಾಗಿ ಆ ನಿಯಮವನ್ನೂ ಹಿಂಪಡೆಯಬೇಕು' ಎಂದು ಬಿಎಐ ಪ್ರಧಾನ ನಿರ್ದೇಶಕ ವಿನೋದ್ ಗಿರಿ ಅವರು ಪತ್ರ ಬರೆದಿದ್ದಾರೆ.

ಇಶಾನ್ ತಂದೆ ಜೆಡಿಯು ಸೇರ್ಪಡೆ

ಪಟ್ನಾ (ಪಿಟಿಐ): ಭಾರತದ ಕ್ರಿಕೆಟಿಗ ಇಶಾನ್ ಕಿಶನ್ ಅವರ ತಂದೆ ಪ್ರಣವ್ ಕುಮಾರ್ ಪಾಂಡೆ ಅವರು ಪಕ್ಷದ ಪ್ರಮುಖರ ಸಮ್ಮುಖದಲ್ಲಿ ಭಾನುವಾರ ಜೆಡಿಯು ಸೇರ್ಪಡೆಗೊಂಡರು.

ಪಕ್ಷ ಸೇರ್ಪಡೆ ಬಳಿಕ ಮಾತನಾಡಿದ ಪಾಂಡೆ, 'ಮತ್ತೊಮ್ಮೆ ಪಕ್ಷಕ್ಕೆ ಹಿಂತಿರುಗಿದ್ದು ನನಗೆ ಅತೀವ ಸಂತಸ ನೀಡಿದೆ. ನಿತೀಶ್‌ಕುಮಾರ್ ಅವರು ನನಗೆ ಯಾವಾಗಲೂ ಸ್ಫೂರ್ತಿದಾಯಕ ವ್ಯಕ್ತಿ' ಎಂದರು.

'ಪಾಂಡೆ ಅವರು ಎಂದಿಗೂ ಪಕ್ಷ ಬಿಟ್ಟಿರಲಿಲ್ಲ. ತಮ್ಮ ಮಗನನ್ನು ಅಂತರ ರಾಷ್ಟ್ರೀಯ ಮಟ್ಟದ ಕ್ರಿಕೆಟಿಗನನ್ನಾಗಿ ಮಾಡಲು ಪಕ್ಷದ ಚಟುವಟಿಕೆಗಳಿಂದ ವಿರಾಮ ತೆಗೆದುಕೊಂಡಿದ್ದರಷ್ಟೆ' ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸಂಜಯ್ ಕುಮಾರ್ ಝಾ ತಿಳಿಸಿದರು..

ಎನ್‌ಸಿಪಿ ಸೇರಿದ ಫಹಾದ್

ಮುಂಬೈ: ನಟಿ ಮತ್ತು ಸಾಮಾಜಿಕ ಕಾರ್ಯಕರ್ತೆ ಸ್ವರಾ ಭಾಸ್ಕರ್ ಅವರ ಪತಿ ಫಹಾದ್ ಅಹಮದ್ ಅವರು ಸಮಾಜವಾದಿ ಪಕ್ಷವನ್ನು (ಎಸ್‌ಪಿ) ತೊರೆದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಸೇರಿದ್ದಾರೆ. ಫಹಾದ್ ಅವರು ಅನುಶಕ್ತಿ ನಗರ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ. ಇಲ್ಲಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯು ಸನಾ ಮಲಿಕ್ ಅವರನ್ನು ಕಣಕ್ಕೆ ಇಳಿಸಿದೆ.

ವಯನಾಡ್ ಉಪ ಚುನಾವಣೆ: ಎಲ್ಲ ಪಕ್ಷಗಳಿಗೂ ಸಂತ್ರಸ್ತರೇ ಈಗ ನಿರ್ಣಾಯಕರು

ಉಪ ಚುನಾವಣೆಯಲ್ಲಿ ಸಂತ್ರಸ್ತರ ಪ್ರತಿಧ್ವನಿ

ವಯನಾಡ್ (ಕೇರಳ): ಮುಂದಿನ ತಿಂಗಳು ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಉಪ ಚುನಾವಣೆ ನಡೆಯಲಿದ್ದು, ಜುಲೈ 30ರಂದು ಇಲ್ಲಿ ಸಂಭವಿಸಿದ ಭೂಕುಸಿತದಿಂದಾಗಿ ನೆಲೆ ಕಳೆದುಕೊಂಡ ಸಂತ್ರಸ್ತರ ವಿಚಾರ ಕಣದಲ್ಲಿ ಪ್ರತಿಧ್ವನಿಸಲಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಭೂಕುಸಿತ ಸಂತ್ರಸ್ತರಿಗೆ ಇನ್ನೂ ಪುನರ್ವಸತಿ ಲಭಿಸದೇ ಇರುವ ವಿಷಯವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ತಂತ್ರಗಾರಿಕೆ ರೂಪಿಸಿವೆ.

ಸರ್ಕಾರದ ಅಂಕಿಅಂಶದ ಪ್ರಕಾರ ಅವಘಡದಲ್ಲಿ 231 ಮಂದಿ ಮೃತಪಟ್ಟಿದ್ದಾರೆ. 47 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ರಾಯ್‌ಬರೇಲಿ ಕ್ಷೇತ್ರವನ್ನು ಉಳಿಸಿಕೊಂಡು, ವಯನಾಡ್ ಸ್ಥಾನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ರಾಜೀನಾಮೆ ನೀಡಿದ್ದರಿಂದ ನವೆಂಬರ್ 13ರಂದು ವಯನಾಡ್‌ನಲ್ಲಿ ಉಪ ಚುನಾವಣೆ ನಡೆಯಲಿದೆ.

ಕೇರಳ ಹೈಕೋರ್ಟ್‌ನಲ್ಲಿ ಎಸ್ಟೇಟ್ ಮಾಲೀಕರು ತಕರಾರು ಅರ್ಜಿ ಸಲ್ಲಿಸಿರುವುದರಿಂದ ಪುನರ್ವಸತಿಗಾಗಿ ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾಗಿದೆ ಎಂದಿರುವ ಸ್ಥಳೀಯರು, ಆದಷ್ಟು ಬೇಗ ನೆಲೆ ಕಳೆದುಕೊಂಡವರಿಗೆ ಸೂರು ಒದಗಿಸಿಕೊಡುವ ಕೆಲಸ ಆಗಬೇಕು ಎಂದು ಆಗ್ರಹಿಸುತ್ತಿದ್ದಾರೆ.

> **ಸಂತ್ರಸ್ತರ ಸಮಸ್ಯೆಗಳನ್ನು ಮುಂದಿಟ್ಟು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ. ಪ್ರಿಯಾಂಕಾ ಗಾಂಧಿ ಅವರು ಸಮಾವೇಶ ಕೈಗೊಳ್ಳುವ ಸಂದರ್ಭ ಅದಕ್ಕೆ ಸೂಕ್ತ ಎಂದುಕೊಂಡಿರುವೆ**
> **ನಸೀರ್ ಆಲಕ್ಕಳ್**
> ಅಧ್ಯಕ್ಷ, ಜನಶಬ್ದಂ ಕ್ರಿಯಾ ಸಮಿತಿ

ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆಯ ಅನ್ವಯ ನೆಡುಂಬಳದ ಹ್ಯಾರಿಸನ್ ಮಲಯಾಳಂ ಎಸ್ಟೇಟ್, ಮೇಪ್ಪಾಡಿ ಗ್ರಾಮ ಪಂಚಾಯಿತಿ ಹಾಗೂ ಕಲ್ಪೆಟ್ಟದ ಎಲ್‌ಸ್ಟನ್ ಎಸ್ಟೇಟ್‌ನ ಸ್ಥಳಗಳನ್ನು ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ನಿಗದಿಪಡಿಸಲಾಗಿದೆ.

ಸಾಲ ಮನ್ನಾ ಮಾಡಬೇಕು, ಸದ್ಯಕ್ಕೆ ನೀಡುತ್ತಿರುವ ಬಾಡಿಗೆ ದರವನ್ನು ಏರಿಸಬೇಕು ಎನ್ನುವುದೂ ಸೇರಿ ಕೆಲವು ಬೇಡಿಕೆಗಳನ್ನು ಸಂತ್ರಸ್ತರು ಸರ್ಕಾರದ ಮುಂದಿಟ್ಟಿದ್ದಾರೆ. ಅವುಗಳಿಗೆ ಇನ್ನೂ ಸರ್ಕಾರ ಸ್ಪಂದಿಸಿಲ್ಲ.



ವಯನಾಡ್ ಭೂಕುಸಿತ ದುರಂತದ ಪರಿಣಾಮ ಬಿಂಬಿಸುವ ಪಕ್ಷಿನೋಟ ಸಂಗ್ರಹ ಚಿತ್ರ– ಎಎಫ್‌ಪಿ

ಎಲ್‌ಡಿಎಫ್ ಅಭ್ಯರ್ಥಿ ಸತ್ಯನ್ ಮೊಕೇರಿ ಅವರು ಸಂತ್ರಸ್ತರು ನೆಲಸಿರುವ ಬಾಡಿಗೆ ಮನೆಗಳಿಗೆ ಶನಿವಾರ ಭೇಟಿ ನೀಡಿದರು. ಪುನರ್ವಸತಿ ಕಾಮಗಾರಿಯಲ್ಲಿ ಸದ್ಯದ ಕೇರಳ ಸರ್ಕಾರದ ಕಾರ್ಯವೈಖರಿಯು ವಿಶ್ವದಲ್ಲೇ ಮಾದರಿಯಾದುದು ಎಂದು ಅವರು ಮನವರಿಕೆ ಮಾಡಿಕೊಡಲು ಯತ್ನಿಸಿದರು. ಪುನರ್ವಸತಿ ಕಾಮಗಾರಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ಯಾವುದೇ ನೆರವು ದೊರೆಯುತ್ತಿಲ್ಲ ಎಂದೂ ಅವರು ಟೀಕಿಸಿದರು.

ಚೂರಲ್‌ಮಲಾ ಹಾಗೂ ಮುಂಡಕ್ಕೈಗೆ ತಮ್ಮ ಸಹೋದರ ರಾಹುಲ್ ಗಾಂಧಿ ಜತೆ ಭೇಟಿ ನೀಡಿದಾಗ ಕಂಡಿದ್ದ ಚಿತ್ರಣಗಳು ಮನಕಲಕುವಂತಿದ್ದವು ಎಂದು ಯುಡಿಎಫ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಮತದಾರರಿಗೆ ಬರೆದ ಬಹಿರಂಗ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬಿಜೆಪಿ ಅಭ್ಯರ್ಥಿಯಾಗಿರುವ ನವ್ಯಾ ಹರಿದಾಸ್ ಪ್ರಕಾರ ಕೇಂದ್ರ ಸರ್ಕಾರ ನೀಡಿರುವ ಪರಿಹಾರದ ನೆರವಿನಲ್ಲಿ ಒಂದು ರೂಪಾಯಿಯನ್ನೂ ಕೇರಳ ಸರ್ಕಾರ ಸಂತ್ರಸ್ತರಿಗೆ ತಲುಪಿಸಿಲ್ಲ. ಆದರೆ, ಕೇರಳದ ಕಂದಾಯ ಸಚಿವ ಕೆ. ರಂಜನ್ ಅವರು ಹೇಳುವುದು ಬೇರೆಯದೇ ಮಾತು. ಪರಿಹಾರ ಬಿಡುಗಡೆ ವಿಷಯದಲ್ಲಿ ಕೇಂದ್ರ ಸರ್ಕಾರವು ನಕಾರಾತ್ಮಕ ಧೋರಣೆ ತಳೆದಿದೆ ಎನ್ನುವುದು ಅವರ ಅಭಿಪ್ರಾಯ.

'ಸಂತ್ರಸ್ತರಿಗೆ ಸರ್ಕಾರವು ತಿಂಗಳಿಗೆ ₹6000 ಬಾಡಿಗೆ ನೀಡುತ್ತಿದೆ. ವಾಸ್ತವದಲ್ಲಿ ಬಹುತೇಕ ಸಂತ್ರಸ್ತರು ತಿಂಗಳಿಗೆ ₹10,000 ಬಾಡಿಗೆ ಕೊಡುವಂತಹ ಮನೆಗಳಲ್ಲಿ ವಾಸವಿದ್ದಾರೆ' ಎಂದು ಜನಕ್ರಿಯಾ ಸಮಿತಿಯ ಸಂಚಾಲಕರೂ ಆಗಿರುವ ಮನೋಜ್ ಹೇಳುತ್ತಾರೆ. ಅವರೂ ವಯನಾಡ್ ಭೂಕುಸಿತದ ದುರಂತದ ಸಂತ್ರಸ್ತರಲ್ಲಿ ಒಬ್ಬರು.

ಆಗಸ್ಟ್‌ನಿಂದಲೇ ಅಫ್ರಾವತ್ ಪರ್ವತದಲ್ಲಿ ಅಡಗಿದ್ದ ಗುಲ್ಮಾರ್ಗ್ ದಾಳಿಕೋರರು

ಕಾಶ್ಮೀರ: ಒಳನುಸುಳುವಿಕೆ ಅವ್ಯಾಹತ?

ಶ್ರೀನಗರ/ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಗಗನಗೀರ್‌ನಲ್ಲಿ ಅಕ್ಟೋಬರ್ 20ರಂದು ನಡೆದ ಭಯೋತ್ಪಾದಕ ದಾಳಿ ಕುರಿತ ತನಿಖೆಯು, ಗುಪ್ತಚರ ಮಾಹಿತಿಯು ನಿಖರವಾಗಿ ಇಲ್ಲದಿರುವುದನ್ನು ಹಾಗೂ ಕಳೆದ ಒಂದು ವರ್ಷದಲ್ಲಿ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಅನಿಯಂತ್ರಿತ ಒಳನುಸುಳುವಿಕೆ ನಡೆದಿರುವುದನ್ನು ಸೂಚಿಸುತ್ತಿದೆ.

ಈ ದಾಳಿಯಲ್ಲಿ ಒಟ್ಟು ಏಳು ಮಂದಿ ನಾಗರಿಕರು ಮೃತಪಟ್ಟಿದ್ದಾರೆ. ಈ ದಾಳಿಯು, ಸ್ಥಳೀಯ ಯುವಕರು ಉಗ್ರಗಾಮಿ ಸಂಘಟನೆಗಳಿಗೆ ಸೇರುತ್ತಿರುವ ಬಗ್ಗೆ ಕಳವಳ ಹುಟ್ಟಿಸಿದೆ. ದಾಳಿ ನಡೆಸಿದ ಇಬ್ಬರು ಭಯೋತ್ಪಾದಕರಲ್ಲಿ ಒಬ್ಬಾತ ದಕ್ಷಿಣ ಕಾಶ್ಮೀರದ ಕುಲ್ಗಾಂ ಮೂಲದವ. ಈತ 2023ರಲ್ಲಿ ಭಯೋತ್ಪಾದಕ ಸಂಘಟನೆಯನ್ನು ಸೇರಿದ್ದ. ಇನ್ನೊಬ್ಬ ಭಯೋತ್ಪಾದಕ ಪಾಕಿಸ್ತಾನದಿಂದ ಒಳನುಸುಳಿ ಬಂದಿದ್ದ ಎಂದು ನಂಬಲಾಗಿದೆ.



ಗುಲ್ಮಾರ್ಗ್–ಬೋಠಾಪಾಥರಿ ಮಾರ್ಗದಲ್ಲಿ ಯೋಧ ಕಾವಲು ಕಾಯುತ್ತಿದ್ದರು –ಪಿಟಿಐ ಸಂಗ್ರಹ ಚಿತ್ರ

ಸ್ಥಳೀಯ ಯುವಕರು ಬಹಳ ಬೇಗನೆ ಉಗ್ರಗಾಮಿಗಳಾಗಿ ಪರಿವರ್ತಿತರಾಗುತ್ತಿದ್ದಾರೆ ಎಂದು ಭದ್ರತಾ ಸಂಸ್ಥೆಗಳ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಇಂಥವರನ್ನು ಗುರುತಿಸಲು ಗುಪ್ತಚರ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯ ಇದೆ ಎಂದು ಅವರು ಒತ್ತಿ ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ನಾಯಕತ್ವದಲ್ಲಿ ಹಾಗೂ ಭಾರತೀಯ ಸೇನೆಯ 15ನೆಯ ಕೋರ್‌ನ ನಾಯಕತ್ವದಲ್ಲಿ ಈಚೆಗೆ ಕೆಲವು ಬದಲಾವಣೆ ತಂದಿದ್ದು, ಸ್ಥಳೀಯ ಯುವಕರು ಭಯೋತ್ಪಾದಕರ ತೆಕ್ಕೆಗೆ ಸಿಲುಕುವುದನ್ನು ತಡೆಯುವ ಉದ್ದೇಶದಿಂದ ಗುಪ್ತಚರ ವ್ಯವಸ್ಥೆಯನ್ನು ಬಲಪಡಿಸಲು ಆದ್ಯತೆ ನೀಡಲಾಗಿದೆ.

ಮುಖ್ಯಾಂಶಗಳು

- ಗುಪ್ತಚರ ವ್ಯವಸ್ಥೆಯನ್ನು ಬಲಪಡಿಸುತ್ತಿರುವ ಸೇನೆ
- ಸ್ಥಳೀಯ ಯುವಕರು ಉಗ್ರರಾಗುತ್ತಿರುವುದು ಕಳವಳಕಾರಿ

ಕಳೆದ ವರ್ಷದ ಡಿಸೆಂಬರ್‌ನಿಂದ ಈಚೆಗೆ ಬೇರೆ ಬೇರೆ ಕಡೆಗಳಿಂದ ಒಳನುಸುಳುವಿಕೆ ಯತ್ನಗಳು ನಡೆದಿರುವ ಬಗ್ಗೆ ಗುಪ್ತಚರ ವರದಿಗಳು ಇವೆ. ಆದರೆ, ಪೂರಕ ಮಾಹಿತಿ ಇಲ್ಲದ ಕಾರಣ ಈ ವರದಿಗಳನ್ನು ಸೇನೆಯು ಒಪ್ಪಿಲ್ಲ.

ಗುಲ್ಮಾರ್ಗ್ ಪ್ರದೇಶದಲ್ಲಿ ಗುರುವಾರ ನಡೆದ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾದ ಉಗ್ರರು ಅಫ್ರಾವತ್ ಪರ್ವತ ಪ್ರದೇಶದಲ್ಲಿ ಆಗಸ್ಟ್ ತಿಂಗಳಿನಿಂದಲೂ ಅಡಗಿದ್ದರು ಎಂದು ಭಾವಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಭಯೋತ್ಪಾದಕರು, ನುಸುಳುಕೋರರು ಸ್ಥಳೀಯರ ಜೊತೆ ಸೇರಿ, ಪಾಕಿಸ್ತಾನದಲ್ಲಿನ ತಮ್ಮ ನಾಯಕರಿಂದ ಸೂಚನೆ ಬಂದ ನಂತರ ದಾಳಿ ನಡೆಸುವ ತಂತ್ರವನ್ನು ಹಣಿಯಲು ಭದ್ರತಾ ಸಂಸ್ಥೆಗಳು ಬಹಳ ಪರಿಶ್ರಮ ಹಾಕಿದ್ದವು.

ಸ್ಥಳೀಯ ಯುವಕರನ್ನು ಭಯೋತ್ಪಾದಕ ಸಂಘಟನೆಗಳಿಗೆ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯು ಆನ್‌ಲೈನ್ ವೇದಿಕೆಗಳ ಮೂಲಕ ಹೆಚ್ಚಾಗಿರುವುದನ್ನು ಭದ್ರತಾ ಸಂಸ್ಥೆಗಳು ಗಮನಿಸಿವೆ. ಭಯೋತ್ಪಾದಕರು ಟೆಲಿಗ್ರಾಂ, ಮಾಸ್ಟೊಡನ್‌ನಂತಹ ವೇದಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ.

‘ನುಸುಳುವಿಕೆ ನಿಂತಾಗ ಮಾತ್ರವೇ ಪಶ್ಚಿಮ ಬಂಗಾಳದಲ್ಲಿ ಶಾಂತಿ’

ಪ್ಯಾಸೆಂಜರ್ ಬಂದರು ಟರ್ಮಿನಲ್ ಉದ್ಘಾಟಿಸಿದ ಸಚಿವ ಶಾ

ಕೋಲ್ಕತ್ತ (ಪಿಟಿಐ): ಗಡಿಯಾಚೆಯಿಂದ ಒಳನುಸುಳುವಿಕೆಯು ನಿಂತಾಗ ಮಾತ್ರವೇ ಪಶ್ಚಿಮ ಬಂಗಾಳದಲ್ಲಿ ಶಾಂತಿ ನೆಲೆಸುತ್ತದೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಹೇಳಿದರು.

ಬಾಂಗ್ಲಾದೇಶದ ಗಡಿಯಲ್ಲಿ ನೂತನ ಪ್ಯಾಸೆಂಜರ್ ಬಂದರು ಟರ್ಮಿನಲ್ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಪಶ್ಚಿಮ ಬಂಗಾಳದ ಅಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಬದ್ಧರಾಗಿದ್ದಾರೆ. ಈ ಪ್ರದೇಶದಲ್ಲಿ ಶಾಂತಿ ನೆಲಸಬೇಕಾದರೆ ಬಂದರುಗಳು ಪ್ರಮುಖ ಪಾತ್ರ ವಹಿಸುತ್ತವೆ. ಗಡಿಯಾಚೆಗಿನ ಜನರ ಕಾನೂನಾತ್ಮಕ ಸಂಚಾರಕ್ಕೆ ಅವಕಾಶವಿಲ್ಲದಿದ್ದಾಗ ಅಕ್ರಮ ಸಂಚಾರದ ವಿಧಾನಗಳು ಹುಟ್ಟಿಕೊಳ್ಳುತ್ತವೆ. ಅದು ದೇಶದ ಶಾಂತಿಯ ಮೇಲೆ ಪರಿಣಾಮ ಬಿರುತ್ತದೆ. ಒಳನುಸುಳುವಿಕೆ ನಿಂತಾಗ ಮಾತ್ರ ಬಂಗಾಳದಲ್ಲಿ ಶಾಂತಿ ನೆಲೆಸಲು ಸಾಧ್ಯ’ ಎಂದರು.



ರವೀಂದ್ರ ಸಂಗೀತದ ಬದಲು ಬಂಗಾಳದಲ್ಲಿ ಬಾಂಬ್ ಮೊರೆತ ಕೇಳುತ್ತಿದೆ. 2026ಕ್ಕೆ ಇಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ

ಅಮಿತ್ ಶಾ, ಗೃಹ ಸಚಿವ

‘ಬಂಗಾಳದ ಜನರು ಆರೋಗ್ಯ ಕ್ಷೇತ್ರದಲ್ಲಿನ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸಂದೇಶ್‌ಖಾಲಿ, ಆರ್.ಜಿ. ಕರ್ ಆಸ್ಪತ್ರೆಯಲ್ಲಿ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಗಳು ಇಲ್ಲಿನ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಕನ್ನಡಿ ಹಿಡಿಯುತ್ತವೆ. ಕೇಂದ್ರದಿಂದ ನೀಡಲಾದ ಹಣದ ಬಹುಪಾಲು ಭಾಗವು ರಾಜ್ಯದ ಟಿಎಂಸಿ ಸರ್ಕಾರದ ಭ್ರಷ್ಟಾಚಾರಕ್ಕೆ ತುತ್ತಾಗಿದೆ. ಬಂಗಾಳದಲ್ಲಿ ಅಚ್ಛೆ ದಿನ್ 2026ರಿಂದ ಆರಂಭವಾಗಲಿದೆ ಎಂದರು. ಈ ಮೂಲಕ 2026ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸುವ ಮೂಲಕ ಬದಲಾವಣೆ ತನ್ನಿ’ ಎಂದು ಜನರನ್ನು ಕೇಳಿಕೊಂಡರು.

ಯುಪಿಎ ಸರ್ಕಾರದ ಅಡಿಯಲ್ಲಿ 10 ವರ್ಷಗಳ ಅವಧಿಯಲ್ಲಿ ಬಂಗಾಳಕ್ಕೆ ನೀಡಿದ ಅನುದಾನ ಕೇವಲ ₹2,09,000 ಕೋಟಿ. ಆದರೆ ಮೋದಿ ಸರ್ಕಾರ 10 ವರ್ಷದ ಅವಧಿಯಲ್ಲಿ ₹7,74,000 ಕೋಟಿಯನ್ನು ನೀಡಿದೆ ಎಂದು ತಿಳಿಸಿದರು.



ಸ್ತ್ರೀ ಶಕ್ತಿ....

ಶ್ರೀನಗರದಲ್ಲಿನ ಡಲ್ ಸರೋವರದಲ್ಲಿ ಭಾನುವಾರ ನಡೆದ ದೋಣಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು –ಪಿಟಿಐ ಚಿತ್ರ

ಸೇನಾ ವಾಪಸಾತಿ ಮೊದಲ ಹೆಜ್ಜೆ: ಮುಂಬೈನಲ್ಲಿ ವಿದೇಶಾಂಗ ಸಚಿವ ಜೈ ಶಂಕರ್ ಹೇಳಿಕೆ

‘ಲಡಾಖ್: ಸಹಜ ಸ್ಥಿತಿ ಮುಂದಿನ ಗುರಿ’

ಮುಂಬೈ (ಪಿಟಿಐ): ‘ಪೂರ್ವ ಲಡಾಖ್‌ನ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ನಿಯೋಜಿಸಿರುವ ತಮ್ಮ ಸೇನೆಗಳನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆ ಮೊದಲ ಹೆಜ್ಜೆಯಾಗಿದ್ದು, ಗಸ್ತು ನಡೆಸುವ ಪ್ರಕ್ರಿಯೆಯು ಅಂತಿಮವಾಗಿ, 2020ರ ಏಪ್ರಿಲ್‌ಗಿಂತ ಮುನ್ನ ಇದ್ದ ಸ್ಥಿತಿಗೆ ಮರಳಲಿದೆ’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದರು.

‘ನೆರೆ ರಾಷ್ಟ್ರದಿಂದಲೂ ಯಾವುದೇ ಸಮಸ್ಯೆಯಾಗದಿದ್ದರೆ, ಸಹಜ ಸ್ಥಿತಿ ನಿರ್ಮಾಣ ಮಾಡುವುದು ಭಾರತದ ಮುಂದಿನ ಹೆಜ್ಜೆಯಾಗಿದೆ’ ಎಂದು ಅವರು ಮುಂಬೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪೂರ್ವ ಲಡಾಖ್‌ನ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ನಿಯೋಜಿಸಿರುವ ತಮ್ಮ ಸೇನೆಗಳನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ಭಾರತ ಹಾಗೂ ಚೀನಾ ಆರಂಭಿಸಿವೆ. ಪೂರ್ವ ಲಡಾಖ್ ಬಳಿ ನಾಲ್ಕು ವರ್ಷಗಳಿಂದ ಮೂಡಿರುವ ಅನಿಶ್ಚಿತ ಪರಿಸ್ಥಿತಿ ಅಂತ್ಯಗೊಳಿಸುವಲ್ಲಿ ಇದೊಂದು ಪ್ರಮುಖ ಹೆಜ್ಜೆ ಎಂದು ವಿಶ್ಲೇಷಿಸಲಾಗಿದೆ.

‘ಡೆಪ್ಸಾಂಗ್ ಮತ್ತು ಡೆಮ್‌ಚೋಕ್‌ನಲ್ಲಿ ಸೇನೆ ವಾಪಸಾತಿ ಇದು ಸ್ವಲ್ಪ ಸಮಯ ತೆಗೆದುಕೊಳ್ಳಲಿದೆ. ತುಂಬಾ ಸಮೀಪಕ್ಕೆ ಸಾಗಿದ್ದ ಎರಡೂ ಸೇನೆಗಳು ಮತ್ತೆ ತಮ್ಮ ನೆಲೆಗಳಿಗೆ ವಾಪಸ್ ಆಗಿವೆ. 2020ರ ವೇಳೆ ಇದ್ದ ಸ್ಥಿತಿ ಮತ್ತೆ ನಿರ್ಮಾಣವಾಗಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸೇನೆಯು ಸಂಪೂರ್ಣವಾಗಿ ವಾಪಸ್ ಆದ ಮೇಲೆ ಗಡಿ ಭದ್ರತೆ ನಿರ್ವಹಣೆ ಕುರಿತು ಚರ್ಚಿಸಲಾಗುವುದು’ ಎಂದರು.

‘ಮುಂಬೈ ದಾಳಿ–ಭಾರತ ಪ್ರತಿಕ್ರಿಯಿಸಿರಲಿಲ್ಲ’



ಜೈಶಂಕರ್

‘2008ರ ನವೆಂಬರ್ 28ರಂದು ಮುಂಬೈನ ಮೇಲೆ ನಡೆದ ಭಯೋತ್ಪಾದಕ ದಾಳಿ ಬಳಿಕ ಭಾರತದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಲಾಗುವುದು’ ಎಂದು ಜೈಶಂಕರ್ ತಿಳಿಸಿದ್ದಾರೆ.

‘ಮುಂಬೈನಲ್ಲಿ ಅಂತಹ ಘಟನೆಗಳು ಮರುಕಳಿಸಬಾರದು. ಭಯೋತ್ಪಾದನೆ ನಿಗ್ರಹಿಸುವ ನಿಟ್ಟಿನಲ್ಲಿ ಭಾರತ ಹಾಗೂ ವಿಶ್ವಕ್ಕೆ ಮುಂಬೈ ಸಂಕೇತವಾಗಿದೆ’ ಎಂದರು.

‘ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಭಾರತ ಸೇರ್ಪಡೆಗೊಂಡ ಬಳಿಕ, ಭಯೋತ್ಪಾದನಾ ನಿಗ್ರಹ ಸಮಿತಿಯ ಸಭೆಯನ್ನು ಮುಂಬೈನಲ್ಲಿ ಭಯೋತ್ಪಾದನಾ ದಾಳಿಗೆ ಒಳಗಾದ ಹೋಟೆಲ್‌ನಲ್ಲಿಯೇ ನಡೆಸಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಭಯೋತ್ಪಾದನೆಯನ್ನು ಭಾರತ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ನಮಗೆ ಯಾರಾದರೂ ಏನಾದರೂ ಮಾಡಿದರೆ, ತಕ್ಕ ಪ್ರತ್ಯುತ್ತರ ನೀಡಲಾಗುವುದು. ಬೆಳಿಗ್ಗೆ ವ್ಯವಹಾರದ ಮಾತನಾಡಿ, ರಾತ್ರಿ ವೇಳೆ ಭಯೋತ್ಪಾದನೆ ಬೆಂಬಲಿಸಿದರೆ, ಅಂತಹ ನಡವಳಿಕೆಯನ್ನು ಸಹಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಮುಖ್ಯಾಂಶಗಳು

- ಅ.28–29ರ ಒಳಗೆ ಸೇನಾ ವಾಪಸಾತಿ ಪ್ರಕ್ರಿಯೆ ಪೂರ್ಣ
- 2020ರ ವೇಳೆಗೆ ಇದ್ದ ಸ್ಥಿತಿ ನಿರ್ಮಾಣ: ಸಚಿವರ ಭರವಸೆ

70 ವರ್ಷ ಮೇಲ್ಪಟ್ಟವರಿಗೆ ಉಚಿತ ಚಿಕಿತ್ಸೆಗೆ ನಾಳೆ ಚಾಲನೆ?

ನವದೆಹಲಿ (ಪಿಟಿಐ): 70 ವರ್ಷ ಮೇಲ್ಪಟ್ಟ ಎಲ್ಲ ನಾಗರಿಕರಿಗೆ ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (ಎಬಿ-ಪಿಎಂಜೆಎವೈ) ಅಡಿಯಲ್ಲಿ ಉಚಿತ ಚಿಕಿತ್ಸೆ ನೀಡುವ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್ 29ರಂದು ಚಾಲನೆ ನೀಡುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.



ಪುನರಾವರ್ತಿತ ಲಸಿಕೆಗಳ ಎಲೆಕ್ಟ್ರಾನಿಕ್ ನೋಂದಣಿ ಉದ್ದೇಶದಿಂದ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಯು-ವಿನ್ ಪೋರ್ಟಲ್ ಯೋಜನೆ ಸೇರಿದಂತೆ ಹಲವು ಯೋಜನೆಗಳಿಗೂ ಪ್ರಧಾನಿ ಚಾಲನೆ ನೀಡಲಿದ್ದಾರೆ. ಗರ್ಭಿಣಿ ಮತ್ತು ಮಕ್ಕಳಿಗೆ ನೀಡಲಾಗುವ ಲಸಿಕೆಗಳ ಶಾಶ್ವತ ನೋಂದಣಿಗಾಗಿ ಯು-ವಿನ್ ವೇದಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ.

70 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಆಯುಷ್ಮಾನ್ ಭಾರತ ಯೋಜನೆಯಡಿ ವಿಮೆ ಸೌಲಭ್ಯ ಒದಗಿಸುವುದರಿಂದ ಅಂದಾಜು 6 ಕೋಟಿ ಜನರಿಗೆ, ಸರಿಸುಮಾರು 4.5 ಕೋಟಿ ಕುಟುಂಬಗಳಿಗೆ ನೆರವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಬಡವರು, ಶ್ರೀಮಂತರು ಎನ್ನದೆ 70 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಯೋಜನೆಯ ಫಲಾನುಭವಿಯಾಗಲು ಅರ್ಹರಾಗಿರುತ್ತಾರೆ. ಇವರು ವಾರ್ಷಿಕ ₹5 ಲಕ್ಷದವರೆಗೆ ಉಚಿತ ಚಿಕಿತ್ಸೆಯನ್ನು ಪಡೆಯಬಹುದಾಗಿದೆ ಎಂದರು.

ಪ್ರಸಕ್ತ ವರ್ಷ ಸೆಪ್ಟೆಂಬರ್ 1ರವರೆಗೆ 12,696 ಖಾಸಗಿ ಆಸ್ಪತ್ರೆಗಳು ಸೇರಿದಂತೆ 29,648 ಆಸ್ಪತ್ರೆಗಳು ಎಬಿ-ಪಿಎಂಜೆಎವೈ ಯೋಜನೆಗೆ ಒಳಪಟ್ಟಿವೆ.

‘ಡಾನಾ’: ಒಡಿಶಾದ ವಿಪತ್ತು ನಿರ್ವಹಣೆ ಸಚಿವ ಸುರೇಶ್ ಪೂಜಾರಿ ಮಾಹಿತಿ

35.95 ಲಕ್ಷ ಜನರ ಮೇಲೆ ಪರಿಣಾಮ

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ‘ಡಾನಾ’ ಚಂಡಮಾರುತದ ಪರಿಣಾಮದಿಂದಾಗಿ ಸುಮಾರು 14 ಜಿಲ್ಲೆಗಳ ಒಟ್ಟು 35.95 ಲಕ್ಷ ಜನರು ತೊಂದರೆಗೀಡಾಗಿದ್ದಾರೆ ಎಂದು ರಾಜ್ಯದ ಕಂದಾಯ ಮತ್ತು ವಿಪತ್ತು ನಿರ್ವಹಣೆ ಸಚಿವ ಸುರೇಶ್ ಪೂಜಾರಿ ಭಾನುವಾರ ತಿಳಿಸಿದ್ದಾರೆ.

8,10,896 ಜನರನ್ನು 6,210 ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದ್ದು, ಕೇಂದ್ರಪಾರ, ಬಾಲೇಶ್ವರ ಮತ್ತು ಭದ್ರಕ್ ಜಿಲ್ಲೆಗಳು ಪ್ರವಾಹದಿಂದ ಹೆಚ್ಚು ಹಾನಿಗೊಳಗಾಗಿವೆ. ಆದರೆ, ಯಾವುದೇ ಸಾವು–ನೋವುಗಳು ಆಗಿಲ್ಲ ಎಂದು ಪೂಜಾರಿ ತಿಳಿಸಿದರು.

ಪ್ರಾಥಮಿಕ ವರದಿಗಳ ಪ್ರಕಾರ, ಚಂಡಮಾರುತ ಮತ್ತು ನಂತರದ ಪ್ರವಾಹದಿಂದಾಗಿ ಸುಮಾರು 5,840 ಮನೆಗಳು ಹಾನಿಯಾಗಿದ್ದು, ದುರಂತದಲ್ಲಿ ಮನೆ ಕಳೆದುಕೊಂಡವರಿಗೆ ಪಾಲಿಥಿನ್ ಶೀಟ್ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಕೇಂದ್ರ ತಂಡವು ಒಡಿಶಾಕ್ಕೆ ಭೇಟಿ ನೀಡಿ ಹಾನಿಯನ್ನು ಅಂದಾಜಿಸುವ ಸಾಧ್ಯತೆ ಇದೆ. ವಿಶೇಷ ಪರಿಹಾರ ಆಯುಕ್ತರು ಹಾನಿಯ ಮೌಲ್ಯಮಾಪನ ವರದಿಗಳನ್ನು ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದು, ಇದರಿಂದ ರಾಜ್ಯ ಸರ್ಕಾರವು ಕೇಂದ್ರದಿಂದ ನೆರವು ಪಡೆಯಬಹುದು ಎಂದು ಅವರು ಹೇಳಿದರು.

ಚಂಡಮಾರುತದಿಂದಾಗಿ ನಾಲ್ವರು ಮೃತಪಟ್ಟಿದ್ದಾರೆ ಎಂಬ ಪ್ರತಿಪಕ್ಷ ಬಿಜೆಡಿ ಹೇಳಿಕೆಯನ್ನು ಉಲ್ಲೇಖಿಸಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಸಾವುಗಳಿಗೂ ವಿಪತ್ತಿಗೂ ಯಾವುದೇ ಸಂಬಂಧವಿಲ್ಲ’ ಎಂದು ಹೇಳಿದ್ದಾರೆ.

ಪ್ರವಾಹಪೀಡಿತ ಸ್ಥಳದಿಂದ 24 ಜನರ ರಕ್ಷಣೆ



‘ಡಾನಾ’ ಚಂಡಮಾರುತದ ಪರಿಣಾಮ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ ಭದ್ರಕ್ ಜಿಲ್ಲೆಯ ಹಳ್ಳಿಯೊಂದರಿಂದ ಕನಿಷ್ಠ 24 ಜನರನ್ನು ಒಡಿಶಾ ವಿಪತ್ತು ನಿರ್ವಹಣಾ ಪಡೆಯು ರಕ್ಷಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶನಿವಾರ ರಾತ್ರಿ ಒಡಿಶಾ ವಿಪತ್ತು ಕ್ಷಿಪ್ರ ಕಾರ್ಯಾಚರಣೆ ಪಡೆ (ಒಡಿಆರ್‌ಎಎಫ್) ಸಿಬ್ಬಂದಿ, ತಿಹಿಡಿ ಪೊಲೀಸ್ ಠಾಣಾ ವ್ಯಾಪ್ತಿಯ ತಾಲಾ ಗೋಪಬಿಂಧ ಗ್ರಾಮದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿದರು ಎಂದು ಅವರು ತಿಳಿಸಿದ್ದಾರೆ.

ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರಿಕರು ಸೇರಿದಂತೆ ಪ್ರವಾಹದಲ್ಲಿ ಸಿಲುಕಿದವರನ್ನು ಮೋಟರ್ ದೋಣಿಗಳ ಸಹಾಯದಿಂದ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ. ಪ್ರವಾಹದಿಂದ ಸಾಲಂಡಿ ನದಿಯ ನೀರಿನ ಮಟ್ಟ ಹೆಚ್ಚಿದ ಪರಿಣಾಮ ಗ್ರಾಮವು ಜಲಾವೃತಗೊಂಡಿತ್ತು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ವಿಶ್ವಸಂಸ್ಥೆಯ ಮಹಿಳಾ ಅಧಿಕಾರಿಗಳ ಅಭಿಮತ

‘ಮಹಿಳಾ ಸಬಲೀಕರಣ, ಲಿಂಗತ್ವ–ಪ್ರತಿಕ್ರಿಯಾತ್ಮಕ ನೀತಿಗಳಲ್ಲಿ ಭಾರತದ ಹೂಡಿಕೆ ಹೆಚ್ಚುತ್ತಿದೆ. ಆದರೆ, ಆಳವಾಗಿ ಬೇರೂರಿರುವ ಸಾಮಾಜಿಕ ಕಟ್ಟುಪಾಡುಗಳು, ಹಣದ ಲಭ್ಯತೆ ಕೊರತೆಯು ಪೂರ್ಣ ಪ್ರಮಾಣದ ಪ್ರಗತಿಗೆ ಅಡ್ಡಿಯಾಗಿವೆ’

‘ಲಿಂಗಸಮಾನತೆಗೆ ಸಾಮಾಜಿಕ ಕಟ್ಟುಪಾಡುಗಳೇ ಅಡ್ಡಿ’

ನವದೆಹಲಿ (ಪಿಟಿಐ): ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಲಿಂಗ ಸಮಾನತೆ ವಿಚಾರದಲ್ಲಿ ಗಮನಾರ್ಹ ಪ್ರಗತಿಯಾಗಿದೆ. ತಳಮಟ್ಟದಲ್ಲಿ ಬಂಡವಾಳ ಹೂಡಿಕೆ ಮತ್ತು ಮಹಿಳಾ ನಾಯಕತ್ವದ ಪ್ರಮಾಣ ಹೆಚ್ಚುತ್ತಿದೆ. ಆದರೆ, ಸಾಮಾಜಿಕ ಕಟ್ಟುಪಾಡುಗಳು, ಕೆಲಸದಲ್ಲಿ ಭಾಗವಹಿಸುವಿಕೆಯ ಮಿತಿ, ಸುರಕ್ಷತೆಯ ಕೊರತೆಯಂತಹ ವಿಚಾರಗಳು ಪೂರ್ಣ ಪ್ರಮಾಣದ ಲಿಂಗಸಮಾನತೆ ಸಾಧಿಸಲು ಅಡ್ಡಿಯಾಗಿವೆ ಎಂದು ವಿಶ್ವಸಂಸ್ಥೆಯ ಮಹಿಳಾ ಅಧಿಕಾರಿಗಳು ಹೇಳಿದ್ದಾರೆ.



ವಿಶ್ವಸಂಸ್ಥೆಯ ಕಾರ್ಯತಂತ್ರ ಪಾಲುದಾರಿಕೆ ನಿರ್ದೇಶಕಿ ಡೇನಿಯಲ್ ಸೀಮರ್ ಮತ್ತು ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿ ಸೂಸನ್ ಜೇನ್ ಫರ್ಗ್ಯೂಸನ್ ಅವರು ಸಂದರ್ಶನವೊಂದರಲ್ಲಿ ಮಾತನಾಡಿ, ಲಿಂಗಸಮಾನತೆ ವಿಚಾರದಲ್ಲಿ ಭಾರತದ ದಾಪುಗಾಲು ಮತ್ತು ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿದರು. ‘ಈ ದಿಸೆಯಲ್ಲಿ ಪೂರ್ಣ ಪ್ರಗತಿ ಸಾಧಿಸಲು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳ ಗುರಿ ನಿರ್ದೇಶಿತ ಪ್ರಯತ್ನದ ಅಗತ್ಯವಿದೆ’ ಎಂದು ಫರ್ಗ್ಯೂಸನ್ ಹೇಳಿದರು.

ಭಾರತದಲ್ಲಿ ಲಿಂಗತ್ವ–ಪ್ರತಿಕ್ರಿಯಾತ್ಮಕ ಬಜೆಟ್‌ಗಾಗಿ ಮೀಸಲಿಡುವ ಅನುದಾನದ ಪ್ರಮಾಣವು ಶೇ 6.8ರಷ್ಟಕ್ಕೆ ಹೆಚ್ಚಳವಾಗಿದೆ. ಆರೋಗ್ಯ, ಶಿಕ್ಷಣ, ಆರ್ಥಿಕ ಅವಕಾಶಗಳಲ್ಲಿನ ಅಂತರವನ್ನು ತಗ್ಗಿಸಲು ಬಜೆಟ್ ಅನುದಾನವನ್ನು ವಿಸ್ತರಿಸಬೇಕಾದ ಅಗತ್ಯವಿದೆ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರತಾಪಗಢ: ದಲಿತ ಯುವತಿ ಮೇಲೆ ಅತ್ಯಾಚಾರ

ಪ್ರತಾಪಗಢ (ಉತ್ತರ ಪ್ರದೇಶ, ಪಿಟಿಐ): ಸಮೀಪದ ಗ್ರಾಮವೊಂದರ ವೃದ್ಧನು 25 ವರ್ಷದ ದಲಿತ ಯುವತಿಯ ಮೇಲೆ ಅತ್ಯಾಚಾರ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ರಿಖಿರಾಮ್ ಮೌರ್ಯ (65) ಆರೋಪಿ. ಕಳೆದ ವಾರ ಆರೋಪಿಯು ತನ್ನ ಮೇಲೆ ಅತ್ಯಾಚಾರ ಎಸಗಿ, ಯಾರಿಗಾದರೂ ವಿಷಯ ತಿಳಿಸಿದರೆ ಕೊಲ್ಲುವುದಾಗಿ ಬೆದರಿಕೆ ಒಡ್ಡಿದ್ದ ಎಂದು ಸಂತ್ರಸ್ತೆಯು ದೂರಿನಲ್ಲಿ ತಿಳಿಸಿರುವುದಾಗಿ ಹೆಚ್ಚುವರಿ ಎಸ್‌ಪಿ ಸಂಜಯ್ ರೈ ಮಾಹಿತಿ ನೀಡಿದರು. ಪ್ರಕರಣದ ಕುರಿತು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಆತನನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ತಿಳಿಸಿದರು.

ಪಂಜಾಬ್: 105 ಕೆ.ಜಿ ಹೆರಾಯಿನ್ ವಶ, ಇಬ್ಬರ ಬಂಧನ

ಚಂಡೀಗಢ (ಪಿಟಿಐ): ಗಡಿಯಲ್ಲಿ ಮಾದಕವಸ್ತುಗಳ ಕಳ್ಳಸಾಗಣೆ ಮಾಡುತ್ತಿದ್ದ ಜಾಲವನ್ನು ಬೇಧಿಸಿ, ವಿದೇಶಿ ಮೂಲದ ಇಬ್ಬರನ್ನು ಬಂಧಿಸಲಾಗಿದೆ. 105 ಕೆ.ಜಿ. ಹೆರಾಯಿನ್, 31.93 ಕೆ.ಜಿ. ಕೆಫೀನ್ ಮತ್ತು 17 ಕೆ.ಜಿ. ಡಿಎಂಆರ್ ವಶಪಡಿಸಿಕೊಳ್ಳಲಾಗಿದೆ ಎಂದು ಪಂಜಾಬ್ ಪೊಲೀಸರು ಭಾನುವಾರ ತಿಳಿಸಿದರು.

ಬಂಧಿತರನ್ನು ನವಜೋತ್ ಸಿಂಗ್ ಮತ್ತು ಲವ್‌ಪ್ರೀತ್ ಕುಮಾರ್ ಎಂದು ಗುರುತಿಸಲಾಗಿದೆ. ಪಂಜಾಬ್ ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಅವರು, ‘ಪಾಕಿಸ್ತಾನದಿಂದ ಜಲ ಮಾರ್ಗವಾಗಿ ಡ್ರಗ್ಸ್ ಕಳ್ಳಸಾಗಣೆ ಮಾಡಲಾಗುತ್ತಿತ್ತು. ದೊಡ್ಡ ರಬ್ಬರ್ ಟ್ಯೂಬ್ ಹಾಗೂ ವಿದೇಶಿ ನಿರ್ಮಿತ ಐದು ಪಿಸ್ತೂಲ್ ಮತ್ತು ದೇಶೀಯವಾಗಿ ತಯಾರಾದ ಒಂದು ಪಿಸ್ತೂಲನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮಾಹಿತಿ ನೀಡಿದರು.

‘ಬಿಷ್ಣೋಯಿ ಸಮುದಾಯದ ಕ್ಷಮೆಯಾಚಿಸಿ’

ಪ್ರಯಾಗ್‌ರಾಜ್ (ಪಿಟಿಐ): ‘ಕ್ಷಮೆಯಾಚಿಸುವ ಮೂಲಕ ವಿವಾದವನ್ನು ಪರಿಹರಿಸಿಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ. ಆದ್ದರಿಂದ ಬಾಲಿವುಡ್ ನಟ ಸಲ್ಮಾನ್ ಖಾನ್, ಬಿಷ್ಣೋಯಿ ಸಮುದಾಯದ ಕ್ಷಮೆಯಾಚಿಸಲಿ’ ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಭಾನುವಾರ ಹೇಳಿದ್ದಾರೆ.

ರೈತರ ‘ಮಹಾಪಂಚಾಯತ್’ನಲ್ಲಿ ಪಾಲ್ಗೊಳ್ಳಲು ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ನಾಯಕ ಟಿಕಾಯತ್ ಇಲ್ಲಿಗೆ ಬಂದಿದ್ದರು.



ರಾಕೇಶ್ ಟಿಕಾಯತ್

ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ‘ಸಮುದಾಯದ ಕ್ಷಮೆಯಾಚಿಸಿ ವಿವಾದವು ಕೊನೆಗೊಳ್ಳುವುದಾದರೆ, ಅದರಲ್ಲಿ ಯಾವ ತಪ್ಪಿದೆ? ಗೊತ್ತಿದ್ದೋ, ತಿಳಿಯದೆಯೋ ತಪ್ಪು ಮಾಡಿದ್ದರೆ, ಕ್ಷಮೆ ಕೇಳುವುದರಿಂದ ಸಲ್ಮಾನ್ ಖಾನ್ ಏನನ್ನು ಕಳೆದುಕೊಳ್ಳುತ್ತಾರೆ’ ಎಂದರು.

ಸಂಸ್ಕೃತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ವಾರಾಣಸಿ (ಪಿಟಿಐ): ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ರಾಜ್ಯದಲ್ಲಿ ಸಂಸ್ಕೃತ ಕಲಿಯುವ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಗೆ ಭಾನುವಾರ ಚಾಲನೆ ನೀಡಿದರು.

ಇಲ್ಲಿನ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಈ ಹಿಂದೆ 300 ವಿದ್ಯಾರ್ಥಿಗಳು ಮಾತ್ರ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿದ್ದು, ಅದರಲ್ಲೂ ವಯಸ್ಸಿನ ನಿರ್ಬಂಧಗಳಿದ್ದವು. ಆದರೆ, ಹೊಸ ಯೋಜನೆಯಲ್ಲಿ ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆಯಲಿದೆ’ ಎಂದರು.

ಡ್ರೈವಿಂಗ್ ಸ್ಕೂಲ್: ರಾಜ್ಯಕ್ಕಿಲ್ಲ ಅಧಿಕಾರ

ಪ್ರಯಾಗ್‌ರಾಜ್ (ಪಿಟಿಐ): ಡ್ರೈವಿಂಗ್ ಸ್ಕೂಲ್‌ಗಳಿಗೆ ಪರವಾನಗಿ ನೀಡುವ ಮತ್ತು ನಿಯಂತ್ರಿಸುವ ನಿಯಮಗಳನ್ನು ರೂಪಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ. ರಾಜ್ಯ ಸರ್ಕಾರಗಳಿಗೆ ಅಧಿಕಾರ ಇಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ.



ಉತ್ತರ ಪ್ರದೇಶ ಸರ್ಕಾರವು 2023ರಲ್ಲಿ ಖಾಸಗಿ ಮೋಟರು ವಾಹನಗಳ ತರಬೇತಿ ಶಾಲೆಗಳಿಗೆ ಎಸ್‌ಒಪಿ ಜಾರಿಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಉತ್ತರ ಪ್ರದೇಶ ಡ್ರೈವಿಂಗ್ ಸ್ಕೂಲ್ ಮಾಲೀಕರ ಸಂಘ ಹಾಗೂ ಇತರ ಏಳು ಜನರು ಸಲ್ಲಿಸಿದ್ದ ರಿಟ್ ಅರ್ಜಿಗೆ ಅನುಮತಿ ನೀಡಿದ ನ್ಯಾಯಮೂರ್ತಿಗಳಾದ ಅಂಜನಿ ಕುಮಾರ್ ಮಿಶ್ರಾ, ಜಯಂತ್ ಬ್ಯಾನರ್ಜಿ ಅವರನ್ನೊಳಗೊಂಡ ಪೀಠವು ಸರ್ಕಾರದ ಆದೇಶವನ್ನು ಅ. 25ರಂದು ವಜಾಗೊಳಿಸಿತು.

ಮೋಟರು ವಾಹನಗಳ ಚಾಲನೆ ಮತ್ತು ಸಂಬಂಧಿತ ವಿಷಯಗಳಲ್ಲಿ ಪ್ರಮುಖ ಸೂಚನೆಗಳನ್ನು ನೀಡುವುದು ಹಾಗೂ ಶಾಲೆಗಳು ಅಥವಾ ಸಂಸ್ಥೆಗಳಿಗೆ ಪರವಾನಗಿ ನೀಡುವ ಮತ್ತು ನಿಯಂತ್ರಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ಮಾತ್ರ ಹೊಂದಿದೆ ಎಂದು ಅರ್ಜಿದಾರರ ಪರ ವಕೀಲರು, ಹೈಕೋರ್ಟ್‌ಗೆ ವಿವರಣೆ ಸಲ್ಲಿಸಿದ್ದರು.

ಶ್ರೀಕೃಷ್ಣ ದೇಗುಲದಲ್ಲಿ ‘ತುಳಸಿ’ ನಿಷೇಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಭಗವಾನ್ ಶ್ರೀಕೃಷ್ಣನಿಗೆ ‘ತುಳಸಿ’ ಪ್ರಿಯವಾಗಿದ್ದರೂ, ಬೆಳೆಯುವಾಗ ಕೀಟನಾಶಕವನ್ನು ಹೆಚ್ಚಾಗಿ ಬಳಸುತ್ತಿರುವುದರಿಂದ, ಕೇರಳದ ತ್ರಿಶ್ಶೂರ್‌ನಲ್ಲಿರುವ ಪ್ರಸಿದ್ಧ ಗುರುವಾಯೂರು ಶ್ರೀಕೃಷ್ಣ ದೇಗುಲದಲ್ಲಿ ನಿಷೇಧಿಸಲಾಗಿದೆ.



‘ತುಳಸಿ’ಯನ್ನು ಬಳಸುತ್ತಿದ್ದ ದೇಗುಲದ ಸಿಬ್ಬಂದಿಯು ಅಲರ್ಜಿ, ತುರಿಕೆ ಇನ್ನಿತರೆ ಸಮಸ್ಯೆಗಳ ಬಗ್ಗೆ ಆಗಾಗ್ಗೆ ದೂರುತ್ತಿದ್ದರು. ಇದರಿಂದ ದೇಗುಲದ ಆಡಳಿತ ಮಂಡಳಿಯು ‘ತುಳಸಿ’ಯನ್ನು ಬಳಸದಂತೆ ಭಕ್ತರಿಗೆ ಸಲಹೆ ನೀಡಿದೆ.

ಕೀಟನಾಶಕರಹಿತವಾಗಿ ಬೆಳೆದ ‘ತುಳಸಿ’ಯನ್ನು ಪೂಜೆಗಾಗಿ ಪಡೆಯಬಹುದಾದ ವ್ಯವಸ್ಥೆಯನ್ನು ಪರಿಚಯಿಸಿದೆ. ‘ವಾಣಿಜ್ಯ ಉದ್ದೇಶಕ್ಕಾಗಿಯೂ ‘ತುಳಸಿ’ಯನ್ನು ಬೆಳೆಯಲಾಗುತ್ತಿದ್ದು, ಅತಿಯಾಗಿ ಕೀಟನಾಶಕ ಬಳಸಲಾಗುತ್ತಿದೆ. ಹೆಚ್ಚು ದಿನ ಸಂರಕ್ಷಿಸಿ ಇಡಲೂ ಕ್ರಿಮಿನಾಶಕ ಬಳಕೆ ಆಗುತ್ತಿದೆ. ಅಂಗಡಿಗಳಲ್ಲಿ ಸಿಗುವ ಇಂತಹ ‘ತುಳಸಿ’ಯನ್ನೇ ಬಹುತೇಕ ಭಕ್ತರು ಖರೀದಿಸಿ, ಪೂಜೆಗಾಗಿ ಅರ್ಪಿಸುತ್ತಿದ್ದಾರೆ. ಇದನ್ನು ನಿರಂತರವಾಗಿ ಬಳಸುವ ಸಿಬ್ಬಂದಿಯು ಅನಾರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವುದರಿಂದ, ದೇಗುಲದಲ್ಲಿ ಬಳಕೆಗೆ ನಿರ್ಬಂಧ ವಿಧಿಸಲಾಗಿದೆ’ ಎಂದು ದೇವಾಲಯದ ಸಿಬ್ಬಂದಿ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ನಿರ್ಧಾರವನ್ನು ಕೆಲವು ಹಿಂದೂ ಸಂಘಟನೆಗಳು ಖಂಡಿಸಿದ್ದು, ಆಡಳಿತಾರೂಢ ಸಿಪಿಎಂ ಸರ್ಕಾರದ ವಿರುದ್ಧ ಕಿಡಿಕಾರಿವೆ.

‘ಹಲವು ತಿಂಗಳ ಹಿಂದೆಯೇ ‘ತುಳಸಿ’ಯ ನಿರ್ಬಂಧವನ್ನು ಜಾರಿಗೊಳಿಸಲಾಗಿದೆ. ಕೆಲವರು ಇದೀಗ ಹಾದಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರಷ್ಟೇ’ ಎಂದು ಗುರುವಾಯೂರು ದೇವಸ್ಥಾನದ ಅಧ್ಯಕ್ಷ ವಿ.ಕೆ. ವಿಜಯನ್ ತಿಳಿಸಿದರು.

24 ವರ್ಷದ ಮಹಿಳೆಯೊಬ್ಬರು ಮೃತಪಟ್ಟ ನಂತರ, ತಿರುವಾಂಕೂರು ದೇವಸ್ಥಾನ ಆಡಳಿತ ಮಂಡಳಿಯು (ಟಿಡಿಬಿ) ತನ್ನ ಸುಪರ್ದಿಯಲ್ಲಿರುವ ದೇವಾಲಯಗಳಲ್ಲಿ ಪೂಜೆಗೆ ಅರಳಿ ಹೂವು (ಒಲಿಯಾಂಡರ್–ಕಣಗಿಲು ಜಾತಿಗೆ ಸೇರಿದ ಹೂವು) ಬಳಸುವುದನ್ನು ನಿಲ್ಲಿಸಲು ಈ ಹಿಂದೆಯೇ ತೀರ್ಮಾನಿಸಿದೆ.

ಕರಡು ಮಧ್ಯಸ್ಥಿಕೆ ಮಸೂದೆ ಪ್ರತಿಕ್ರಿಯೆ ಆಹ್ವಾನ

ನವದೆಹಲಿ (ಪಿಟಿಐ): ಸಾಂಸ್ಥಿಕ ಮಧ್ಯಸ್ಥಿಕೆ ಪ್ರಕ್ರಿಯೆಗೆ ಉತ್ತೇಜನ ನೀಡುವ ಹಾಗೂ ಇಂತಹ ಪ್ರಕರಣಗಳಲ್ಲಿ ಕೋರ್ಟ್‌ನ ಮಧ್ಯಸ್ಥಿಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕರಡು ಮಸೂದೆ ರೂಪಿಸಿದ್ದು, ಈ ಬಗ್ಗೆ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

‘ಮಧ್ಯಸ್ಥಿಕೆ ಮತ್ತು ಸಂಧಾನ (ತಿದ್ದುಪಡಿ) ಮಸೂದೆ–2024’ರ ಕರಡಿನ ಬಗ್ಗೆ ಕೇಂದ್ರ ಕಾನೂನು ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುವ ಕಾನೂನು ವ್ಯವಹಾರಗಳ ಇಲಾಖೆಯು ಪ್ರತಿಕ್ರಿಯೆ ಆಹ್ವಾನಿಸಿದೆ.

ಮಾಜಿ ಕಾನೂನು ಕಾರ್ಯದರ್ಶಿ ಟಿ.ಕೆ. ವಿಶ್ವನಾಥನ್ ನೇತೃತ್ವದ ತಜ್ಞರ ಸಮಿತಿಯು ಮಧ್ಯಸ್ಥಿಕೆ ಕ್ಷೇತ್ರದಲ್ಲಿ ಆಗಬೇಕಿರುವ ಸುಧಾರಣೆಗಳ ಬಗ್ಗೆ ಕಾನೂನು ಸಚಿವಾಲಯಕ್ಕೆ ಶಿಫಾರಸು ಸಲ್ಲಿಸಿದ ನಂತರದಲ್ಲಿ ಈ ಮಸೂದೆ ಸಿದ್ಧವಾಗಿದೆ. ‘ತುರ್ತು ಮಧ್ಯಸ್ಥಿಕೆ’ ಎಂಬ ಪರಿಕಲ್ಪನೆಯನ್ನು ಕರಡು ಮಸೂದೆಯು ಒಳಗೊಂಡಿದೆ.

‘ದೃಶ್ಯಂ’ ಪ್ರೇರಣೆ; ಶವ ಹೂಳಲು ಜಿಲ್ಲಾಧಿಕಾರಿ ನಿವಾಸದ ಬಳಿಯ ಜಾಗ ಆಯ್ಕೆ

4 ತಿಂಗಳ ಬಳಿಕ ಮಹಿಳೆ ಶವ ಪತ್ತೆ

ಕಾನ್ಪುರ (ಪಿಟಿಐ): ಜಿಮ್ ತರಬೇತುದಾರನೊಬ್ಬ ತನ್ನ ಜತೆ ಸಂಬಂಧ ಹೊಂದಿದ್ದ ವಿವಾಹಿತ ಮಹಿಳೆಯನ್ನು ಕೊಲೆಗೈದು ಶವವನ್ನು ಇಲ್ಲಿನ ಸಿವಿಲ್ ಲೈನ್ಸ್‌ನಲ್ಲಿರುವ ಜಿಲ್ಲಾಧಿಕಾರಿ ಅವರ ನಿವಾಸದ ಬಳಿ ಹೂತಿದ್ದಾನೆ. ನಾಲ್ಕು ತಿಂಗಳ ಬಳಿಕ ಪೊಲೀಸರು ಶವ ಪತ್ತೆ ಹಚ್ಚಿದ್ದಾರೆ. ಕ್ರೈಮ್ ಥ್ರಿಲ್ಲರ್ ‘ದೃಶ್ಯಂ’ ಸಿನಿಮಾದಿಂದ ಸ್ಫೂರ್ತಿ ಪಡೆದ ಆರೋಪಿ, ಶವವನ್ನು ಹೂಳಲು ಜಿಲ್ಲಾಧಿಕಾರಿ ನಿವಾಸದ ಬಳಿಯ ಜಾಗ ಆಯ್ಕೆ ಮಾಡಿಕೊಂಡಿದ್ದಾನೆ.


ಆದರೆ, ವಿಮಲ್ ಸೋನಿ ಎಂಬಾತ ಎಸಗಿದ ಈ ಕೃತ್ಯ ನಾಲ್ಕು ತಿಂಗಳುಗಳ ಬಳಿಕ ಬಯಲಾಗಿದ್ದು, ಪೊಲೀಸರು ಆತನನ್ನು ಶನಿವಾರ ರಾತ್ರಿ ಬಂಧಿಸಿದ್ದಾರೆ. 32 ವರ್ಷದ ಏಕ್ತಾ ಗುಪ್ತಾ ಅವರನ್ನು ಕೊಲೆ ಮಾಡಿರುವುದಾಗಿ ವಿಚಾರಣೆ ವೇಳೆ ವಿಮಲ್ ಒಪ್ಪಿಕೊಂಡಿದ್ದಾನೆ.

ಮುಖ್ಯಾಂಶಗಳು

- ಆರೋಪಿ ವಿಮಲ್ ಸೋನಿಯನ್ನು ಬಂಧಿಸಿದ ಪೊಲೀಸರು
- ಜೂನ್ 24ರಂದು ನಡೆದಿದ್ದ ಕೊಲೆ ಕೃತ್ಯ
- ಜಿಮ್‌ನಿಂದ ಕರೆದೊಯ್ದು ಕೊಲೆಗೈದ ಆರೋಪ

‘ತಾನು ಬೇರೊಬ್ಬಳನ್ನು ಮದುವೆಯಾಗುವುದನ್ನು ಏಕ್ತಾ ವಿರೋಧಿಸಿದ್ದಳು. ಅದಕ್ಕೆ ಆಕೆಯನ್ನು ಕೊಲೆಗೈದೆ’ ಎಂದು ಆರೋಪಿ ಹೇಳಿದ್ದಾಗಿ ಡಿಸಿಪಿ ಶ್ರವಣ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

‘ಜೂನ್ 24ರಂದು ವಿಮಲ್, ಜಿಮ್‌ಗೆ ಬಂದಿದ್ದ ಏಕ್ತಾಳನ್ನು ತಮ್ಮ ಸಂಬಂಧದ ಬಗ್ಗೆ ಚರ್ಚಿಸುವ ಉದ್ದೇಶದಿಂದ ಏಕಾಂತ ಸ್ಥಳಕ್ಕೆ ಕರೆದೊಯ್ದಿದ್ದಾನೆ. ಅಲ್ಲಿ ಇಬ್ಬರ ನಡುವೆ ತೀವ್ರ ವಾಗ್ವಾದ ನಡೆದಿದೆ. ಈ ವೇಳೆ ವಿಮಲ್, ಏಕ್ತಾಳ ಕುತ್ತಿಗೆಗೆ ಬಲವಾಗಿ ಗುದ್ದಿದ ಕಾರಣ ಆಕೆ ಮೃತಪಟ್ಟಿದ್ದಾಳೆ’ ಎಂದು ಮಾಹಿತಿ ನೀಡಿದ್ದಾರೆ.



‘ದೃಶ್ಯಂ ಚಲನಚಿತ್ರದಿಂದ ಪ್ರೇರಿತನಾದ ವಿಮಲ್, ಶವವನ್ನು ಹೂಳಲು ಜಿಲ್ಲಾಧಿಕಾರಿ ಕ್ಯಾಂಪ್ ಆಫೀಸ್ ಮತ್ತು ನಿವಾಸದ ಬಳಿಯ ಸ್ಥಳ ಆಯ್ಕೆ ಮಾಡಿಕೊಂಡಿದ್ದಾನೆ. ಅಲ್ಲಿ ಹೂತು ಹಾಕಿದರೆ ಶವ ಪತ್ತೆಯಾಗುವ ಸಾಧ್ಯತೆ ಕಡಿಮೆ ಎಂದು ಆತ ನಂಬಿದ್ದ’ ಎಂದು ತಿಳಿಸಿದ್ದಾರೆ.

‘ಪೊಲೀಸರು ಪತ್ತೆಹಚ್ಚುವುದನ್ನು ತಪ್ಪಿಸಲು ಆತ ಈ ಪ್ರದೇಶದ ಸಮೀಪದಲ್ಲಿ ಮೊಬೈಲ್ ಫೋನ್ ಬಳಕೆಯನ್ನೂ ನಿಲ್ಲಿಸಿದ್ದ. ಆದರೂ ಪೊಲೀಸರು ಶವ ಪತ್ತೆಹಚ್ಚಿ, ಆರೋಪಿಯನ್ನು ಬಂಧಿಸಿದ್ದಾರೆ’ ಎಂದರು.

ಆರೋಪಿಯು ಏಕ್ತಾಳನ್ನು ಕೊಲೆಗೈದಿದ್ದಾನೆ ಎನ್ನಲಾದ ಸ್ಥಳವು ಜಿಲ್ಲಾಧಿಕಾರಿ ಅವರ ಕ್ಯಾಂಪ್ ಆಫೀಸ್‌ನಿಂದ ಕೆಲವು ಮೀ.ಗಳಷ್ಟು ದೂರದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಕಾರಿ ಹೊಗೆ ಸೇವನೆ: ಇಬ್ಬರ ಸಾವು

ಅಹಮದಾಬಾದ್ (ಪಿಟಿಐ): ಇಲ್ಲಿನ ಜವಳಿ ಕಾರ್ಖಾನೆಯೊಂದರಲ್ಲಿ ಮೂಡಿದ ವಿಷಕಾರಿ ಹೊಗೆ ಸೇವನೆಯಿಂದ ಉಸಿರಾಟದ ಸಮಸ್ಯೆ ಕಂಡುಬಂದಿದ್ದು, ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಇತರೆ ಏಳು ಮಂದಿ ಅಸ್ವಸ್ಥಗೊಂಡಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ನರೋಲ್ ಕೈಗಾರಿಕಾ ಪ್ರದೇಶದಲ್ಲಿನ ದೇವಿ ಸಿಂಥೆಟಿಕ್ಸ್ ಕಾರ್ಖಾನೆಯಲ್ಲಿ ಭಾನುವಾರ ಈ ಅವಘಡ ಸಂಭವಿಸಿದೆ. ‘ಸ್ಪೆಂಟ್ ಆ್ಯಸಿಡ್ ಸಾಗಣೆ ಮಾಡುವಾಗ ಸೋರಿಕೆಯಾಗಿ ವಾತಾವರಣಕ್ಕೆ ವಿಷಕಾರಿ ಹೊಗೆ ಸೇರಿದೆ’ ಎಂದು ಡಿಸಿಪಿ ರವಿಮೋಹನ್ ತಿಳಿಸಿದರು.

ಏಳು ಜನರಲ್ಲಿ ನಾಲ್ವರ ಸ್ಥಿತಿ ಗಂಭೀರವಾಗಿದೆ. ಅವರಿಗೆ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕೈಗಾರಿಕಾ ಸುರಕ್ಷತೆ ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ಪರಿಶೀಲನೆ ನಡೆಸಿದ್ದಾರೆ.

ಶಕ್ತಿಕಾಂತ ದಾಸ್‌ಗೆ ಅತ್ಯುತ್ತಮ ಕೇಂದ್ರ ಬ್ಯಾಂಕರ್ ಪ್ರಶಸ್ತಿ



ಮುಂಬೈ (ಪಿಟಿಐ): ಅಮೆರಿಕದ 'ಗ್ಲೋಬಲ್ ಫೈನಾನ್ಸ್' ನಿಯತಕಾಲಿಕ ಪ್ರಕಟಿಸಿರುವ 2024ನೇ ಸಾಲಿನ ಜಾಗತಿಕ ಮಟ್ಟದ ಅತ್ಯುತ್ತಮ ಕೇಂದ್ರ ಬ್ಯಾಂಕರ್‌ಗಳ ಪಟ್ಟಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು, ಅಗ್ರ ಸ್ಥಾನ ಪಡೆದಿದ್ದಾರೆ.

ಸತತ ಎರಡನೇ ವರ್ಷವೂ ಅವರು ಈ ಸ್ಥಾನ ಕಾಯ್ದುಕೊಂಡಿದ್ದಾರೆ.

ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆದ ನಿಯತಕಾಲಿಕದ ಕಾರ್ಯಕ್ರಮದಲ್ಲಿ ದಾಸ್ ಅವರು 'ಎ' ಪ್ಲಸ್ ವಿಭಾಗದಲ್ಲಿ ಪ್ರಶಸ್ತಿ ಸ್ವೀಕರಿಸಿದ್ದಾರೆ ಎಂದು ಆರ್‌ಬಿಐ 'ಎಕ್ಸ್'ನಲ್ಲಿ ತಿಳಿಸಿದೆ.

ಚಿಲ್ಲರೆ ಹಣದುಬ್ಬರ ನಿಯಂತ್ರಣ, ಆರ್ಥಿಕ ಬೆಳವಣಿಗೆ ಗುರಿ, ಕರೆನ್ಸಿ ಸ್ಥಿರತೆ ಮತ್ತು ಬಡ್ಡಿದರ ನಿರ್ವಹಣೆಯ ಯಶಸ್ಸನ್ನು ಆಧರಿಸಿ ನಿಯತಕಾಲಿಕವು 'ಎ' ನಿಂದ 'ಎಫ್' ವರೆಗೆ ಗ್ರೇಡ್ ನೀಡುತ್ತದೆ. 'ಎ' ಅತ್ಯುತ್ತಮ ಕಾರ್ಯ ನಿರ್ವಹಣೆಯ ಸೂಚಕವಾದರೆ, 'ಎಫ್' ವೈಫಲ್ಯವನ್ನು ಸೂಚಿಸುತ್ತದೆ.

ಜಗತ್ತಿನ ಪ್ರಮುಖ ಮೂರು ಕೇಂದ್ರೀಯ ಬ್ಯಾಂಕ್‌ನ ಗವರ್ನರ್‌ಗಳ ಪಟ್ಟಿಯಲ್ಲಿ ದಾಸ್ ಪ್ರಥಮ ಸ್ಥಾನ ಪಡೆದಿದ್ದಾರೆ. ಡೆನ್ಮಾರ್ಕ್‌ನ ಕ್ರಿಶ್ಚಿಯನ್ ಕೆಟೆಲ್ ಥಾಮ್ಸೆನ್ ಮತ್ತು ಸ್ವಿಟ್ಜರ್ಲೆಂಡ್‌ನ ಥಾಮಸ್ ಜೋರ್ಡಾನ್ ಕೂಡ 'ಎ' ಪ್ಲಸ್ ವಿಭಾಗದಲ್ಲಿ ಸ್ಥಾನ ಪಡೆದಿದ್ದಾರೆ.

ಎಸ್‌ಬಿಐಗೆ ಭಾರತದ ಅತ್ಯುತ್ತಮ ಬ್ಯಾಂಕ್ ಮುಕುಟ

ನವದೆಹಲಿ (ಪಿಟಿಐ): ಅಮೆರಿಕದ 'ಗ್ಲೋಬಲ್ ಫೈನಾನ್ಸ್' ನಿಯತಕಾಲಿಕ ನೀಡುವ 2024ನೇ ಸಾಲಿನ 'ಭಾರತದ ಅತ್ಯುತ್ತಮ ಬ್ಯಾಂಕ್' ಪ್ರಶಸ್ತಿಗೆ, ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಭಾಜನವಾಗಿದೆ.

ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆದ ನಿಯತಕಾಲಿಕದ 31ನೇ ವಾರ್ಷಿಕ ಸಭೆಯಲ್ಲಿ ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರು, ಈ ಪ್ರಶಸ್ತಿ ಸ್ವೀಕರಿಸಿದರು.

'ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದೆ. ಗ್ರಾಹಕರ ವಿಶ್ವಾಸಾರ್ಹತೆ ಗಳಿಸುವ ಮೂಲಕ ಅವರನ್ನು ಆರ್ಥಿಕತೆಯಲ್ಲಿ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುತ್ತಿದೆ. ಬ್ಯಾಂಕ್‌ನ ಬದ್ಧತೆ ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ' ಎಂದು ಎಸ್‌ಬಿಐ ತಿಳಿಸಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)
₹270-470

ದ್ವಿತಳಿ (ಬಿ.ವಿ)
₹355-606

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹575

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ದಿ. ಶ್ರೀ ಮುನಿವೆಂಕಟಪ್ಪ 28.10.1989 (ನಮ್ಮನ್ನಗಲಿ 35 ವರ್ಷ) | ದಿ. ಶ್ರೀಮತಿ ಗಂಗಮ್ಮ 13.12.1993 (ನಮ್ಮನ್ನಗಲಿ 31 ವರ್ಷ)

ದಿ. ಶ್ರೀ ಮುನಿವೆಂಕಟಪ್ಪ ಸಂಸ್ಥಾಪಕರು ಶ್ರೀ ಪಿಳೇಕಮ್ಮ ದೇವಸ್ಥಾನ, ಲಾಲ್‌ಬಾಗ್ ಸಿದ್ದಾಪುರ, ಅನಂತ ಎಲೆಕ್ಟ್ರಿಕಲ್ಸ್, ವಿ.ವಿ.ಪುರಂ, ಬೆಂಗಳೂರು

ಇಂತಿ: ನಿಮ್ಮ ಮಗ, ವಾಸುದೇವ ಹಾಗೂ ಕುಟುಂಬ ಸದಸ್ಯರುಗಳು

ಜಿಂದಾಲ್‌ಗೆ 35 ಟನ್ 'ನಂದಿನಿ' ಮೈಸೂರ್ ಪಾಕ್ ಪೂರೈಕೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಮೂಲಕ ಜಿಲ್ಲೆಯ ತೋರಣಗಲ್‌ನ ಜಿಂದಾಲ್ ಸಂಸ್ಥೆಗೆ 35 ಟನ್ 'ನಂದಿನಿ' ಮೈಸೂರ್ ಪಾಕ್ ಅನ್ನು ಪೂರೈಕೆ ಮಾಡಲಾಗಿದೆ.

'ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ ಹಾಲು ಒಕ್ಕೂಟದ (ರಾಬಕೊವಿ) ಮಧ್ಯಸ್ಥಿಕೆಯಲ್ಲಿ ಈ ವ್ಯಾಪಾರ ನಡೆದಿದೆ ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಪೀರ್ಯ ನಾಯಕ್ ಅವರು, 'ಪ್ರಜಾವಾಣಿ'ಗೆ ತಿಳಿಸಿದರು.

'ಅರ್ಧ ಕೆ.ಜಿ ತೂಕದ ಒಟ್ಟು 70 ಸಾವಿರ ಪ್ಯಾಕೆಟ್‌ಗಳಲ್ಲಿ ಸಿಹಿ ಉತ್ಪನ್ನವನ್ನು ಪೂರೈಕೆ ಮಾಡಲಾಗಿದೆ. ಈ ವಹಿವಾಟಿನ ಒಟ್ಟು ಮೌಲ್ಯ ₹1.50 ಕೋಟಿಗೂ ಹೆಚ್ಚಿದೆ. ಇತ್ತೀಚಿನ ದಿನಗಳಲ್ಲಿ ಕೆಎಂಎಫ್‌ಗೆ ಸಿಕ್ಕ ಅತಿದೊಡ್ಡ ಆರ್ಡರ್‌ನಲ್ಲಿ ಇದು ಒಂದಾಗಿದೆ' ಎಂದು ಮಾಹಿತಿ ನೀಡಿದರು.

'ಅಲ್ಲದೆ, ಸುಖೋ ಬ್ಯಾಂಕ್‌ಗೂ 7 ಸಾವಿರ ಪೊಟ್ಟಣಗಳ ಸಿಹಿಯನ್ನು ಮಾರಾಟ ಮಾಡಲಾಗಿದೆ' ಎಂದು ಹೇಳಿದರು.

ತಿರುಪತಿಯ ಲಡ್ಡು ಪ್ರಸಾದಕ್ಕೆ ಕಲಬೆರಕೆ ತುಪ್ಪ ಬಳಕೆಯಾದ ವಿವಾದ ಬಹಿರಂಗವಾದ ಬೆನ್ನಲ್ಲೇ 'ನಂದಿನಿ' ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ. ದೀಪಾವಳಿ ಹಬ್ಬಕ್ಕೆ ತನ್ನ ನೌಕರರಿಗೆ ಹಂಚಲು ಜಿಂದಾಲ್ ಇಷ್ಟು ದೊಡ್ಡ ಪ್ರಮಾಣದಲ್ಲಿ ಮೈಸೂರ್ ಪಾಕ್ ಅನ್ನು ಖರೀದಿಸಿದೆ.

ರೈಲು ನಿಲ್ದಾಣದಲ್ಲಿ ಕಾಲ್ತುಳಿತ, 9 ಜನರಿಗೆ ಗಾಯ

ಒಂದನೇ ಪುಟದಿಂದ...

'ಮುಂಬೈ ನಗರವು ಕೇಂದ್ರ ಸರ್ಕಾರಕ್ಕೆ ಅತ್ಯಂತ ಹೆಚ್ಚಿನ ವರಮಾನ ತಂದುಕೊಡುತ್ತದೆ. ಇದಕ್ಕೆ ಹೋಲಿಸಿದರೆ, ಇಲ್ಲಿನ ಪ್ರಯಾಣಿಕರಿಗೆ ಸಿಗುವ ಸೌಲಭ್ಯಗಳು ಏನೂ ಅಲ್ಲ' ಎಂದು ರಾವುತ್ ಅವರು ದೂರಿದ್ದಾರೆ.

'ರೈಲ್ವೆ ಮೂಲಸೌಕರ್ಯ ಕಳಪೆಯಾಗಿರುವ ಕಾರಣ ಜನರು ಹಾಗೇ ಸಾಯಲು ಬಿಡಲಾಗಿದೆ. ಜನರ ಸಮಸ್ಯೆಗಳ ಬಗ್ಗೆ ರೈಲ್ವೆ ಸಚಿವರಿಗೆ ಅರಿವಿಲ್ಲ' ಎಂದಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸತತವಾಗಿ ಮೂರನೆಯ ಅವಧಿಗೆ ಅಧಿಕಾರಕ್ಕೆ ಬಂದ ನಂತರದಲ್ಲಿ ಕನಿಷ್ಠ 25 ರೈಲು ದುರ್ಘಟನೆಗಳು ಸಂಭವಿಸಿವೆ ಎಂದು ಅವರು ಹೇಳಿದ್ದಾರೆ. ಕಾಲ್ತುಳಿತ ಪ್ರಕರಣದ ನಂತರ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್, ದಾದರ್, ಠಾಣೆ, ಕುರ್ಲಾ, ನಾಗ್ಪುರ ಸೇರಿದಂತೆ ಪ್ರಮುಖ ರೈಲು ನಿಲ್ದಾಣಗಳಲ್ಲಿ ತಾತ್ಕಾಲಿಕವಾಗಿ ಪ್ಲಾಟ್‌ಫಾರ್ಮ್ ಟಿಕೆಟ್ ವಿತರಿಸದೇ ಇರುವಂತೆ ಪಶ್ಚಿಮ ರೈಲ್ವೆ ಇಲಾಖೆಯು ಆದೇಶ ಹೊರಡಿಸಿದೆ.

ವಿಮೆ ಕ್ಲೇಮ್ ಪಡೆಯೋದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಎಷ್ಟೋ ಮಂದಿ ಜೀವ ವಿಮೆ (ಲೈಫ್ ಇನ್ಶೂರೆನ್ಸ್) ತೆಗೆದುಕೊಂಡಿರುತ್ತಾರೆ. ಆದರೆ, ವಿಮೆ ಪಡೆದಿರುವ ಬಗ್ಗೆ ಕುಟುಂಬದೊಂದಿಗೆ ಚರ್ಚೆ ಮಾಡುವುದಿಲ್ಲ. ಕ್ಲೇಮ್ ಪಡೆದುಕೊಳ್ಳುವಂತಹ ಅನಿಶ್ಚಿತ ಸಂದರ್ಭ ಒದಗಿ ಬಂದರೆ ಅದನ್ನು ಪಡೆಯುವುದು ಹೇಗೆ ಎನ್ನುವ ಬಗ್ಗೆಯೂ ಮನೆಯವರಿಗೆ ತಿಳಿಸಿರುವುದಿಲ್ಲ.

ಹೀಗಾಗಿ, ಅನೇಕರು ಇನ್ಶೂರೆನ್ಸ್ ಇದ್ದೂ ಸಹಿತ ಕ್ಲೇಮ್ ಪಡೆದುಕೊಳ್ಳಲು ಪರದಾಡುತ್ತಾರೆ. ಜೀವ ವಿಮೆ ಕ್ಲೇಮ್ ಪಡೆದುಕೊಳ್ಳುವುದು ಹೇಗೆ? ಯಾವ್ಯಾವ ದಾಖಲೆ ಸಲ್ಲಿಸಬೇಕು? ಎನ್ನುವ ಬಗ್ಗೆ ವಿವರವಾಗಿ ಈ ಲೇಖನದಲ್ಲಿ ತಿಳಿಯೋಣ.

ವಿವಿಧ ಮಾದರಿಯ ಪಾಲಿಸಿಗಳು: ಟರ್ಮ್ ಲೈಫ್ ಇನ್ಶೂರೆನ್ಸ್, ಹೋಲ್ ಲೈಫ್ ಇನ್ಶೂರೆನ್ಸ್, ಎಂಡೋಮೆಂಟ್ ಪ್ಲಾನ್, ಯುಲಿಪ್ ಪ್ಲಾನ್, ಮನಿ ಬ್ಯಾಕ್, ಚೈಲ್ಡ್ ಇನ್ಶೂರೆನ್ಸ್ ಸ್ಕೀಂ ಹೀಗೆ ಜೀವ ವಿಮೆಗಳಲ್ಲಿ ಹಲವು ಮಾದರಿಗಳಿವೆ. ಆದರೆ, ಕಡಿಮೆ ಬೆಲೆಗೆ ಹೆಚ್ಚು ಕವರೇಜ್ ಕೊಡುವ ಇನ್ಶೂರೆನ್ಸ್ ಮಾದರಿ ಅಂದರೆ ಟರ್ಮ್ ಇನ್ಶೂರೆನ್ಸ್.

ಎಂಡೋಮೆಂಟ್, ಮನಿ ಬ್ಯಾಕ್ ಪಾಲಿಸಿಗಳಲ್ಲಿ ಇನ್ಶೂರೆನ್ಸ್ ಜೊತೆಗೆ ಹೂಡಿಕೆಯೂ ಸೇರಿಕೊಂಡಿರುತ್ತದೆ. ಆದರೆ, ಈ ಮಾದರಿಯ ಇನ್ಶೂರೆನ್ಸ್ ಪಾಲಿಸಿಗಳಿಂದ ಹೆಚ್ಚಿನ ಕವರೇಜ್‌ನ ಅನುಕೂಲ ಸಿಗುವುದಿಲ್ಲ. ಹಾಗಾಗಿ, ಜೀವ ವಿಮೆ ಎನ್ನುವ ಪ್ರಶ್ನೆ ಬಂದಾಗ ಟರ್ಮ್ ಲೈಫ್ ಇನ್ಶೂರೆನ್ಸ್ ನಿಮ್ಮ ಆದ್ಯತೆಯಾಗಬೇಕು. ಟರ್ಮ್ ಇನ್ಶೂರೆನ್ಸ್ ಪಡೆದಿರುವ ಕುಟುಂಬದ ಯಜಮಾನ ಅಥವಾ ಯಜಮಾನಿ ಆಕಸ್ಮಿಕವಾಗಿ ಸಾವನ್ನಪ್ಪಿದರೆ ಕುಟುಂಬಕ್ಕೆ ಹಣಕಾಸಿನ ನೆರವನ್ನು ಇನ್ಶೂರೆನ್ಸ್ ಕಂಪನಿ ಒದಗಿಸುತ್ತದೆ. ಒಂದು ರೀತಿಯಲ್ಲಿ ಟರ್ಮ್ ಇನ್ಶೂರೆನ್ಸ್ ಅನ್ನು ಆಪತ್ಕಾಲದ ಆಪ್ತಮಿತ್ರ ಎಂದು ಕರೆಯಬಹುದು.

ಕ್ಲೇಮ್ ಪ್ರಕ್ರಿಯೆ ಸರಾಗಗೊಳಿಸುವ ಅಂಶಗಳೇನು?:

- **ಸಮಯಕ್ಕೆ ಸರಿಯಾಗಿ ಪ್ರೀಮಿಯಂ ಕಟ್ಟಿ:** ನೀವು ಸಮಯಕ್ಕೆ ಸರಿಯಾಗಿ ಇನ್ಶೂರೆನ್ಸ್ ಪ್ರೀಮಿಯಂ ಪಾವತಿಸಿ. ಪ್ರೀಮಿಯಂ ಪಾವತಿ ವಿಳಂಬ ಮಾಡಿದರೆ ಅಥವಾ ಕಟ್ಟದಿದ್ದರೆ ಕ್ಲೇಮ್ ಸಿಗುವುದಿಲ್ಲ.
- **ಅನಾರೋಗ್ಯದ ಬಗ್ಗೆ ಮಾಹಿತಿ ಒದಗಿಸಿ:** ಲೈಫ್ ಇನ್ಶೂರೆನ್ಸ್ ಅದರಲ್ಲೂ ಟರ್ಮ್ ಇನ್ಶೂರೆನ್ಸ್ ಪಡೆಯುವಾಗ ಅರ್ಜಿಯಲ್ಲಿ ನಿಮಗೆ ಈಗಾಗಲೇ ಏನಾದರೂ ಅನಾರೋಗ್ಯದ ಸಮಸ್ಯೆಗಳಿದ್ದರೆ ಅದರಲ್ಲಿ ಸೂಚಿಸುವಂತೆ ತಿಳಿಸಲಾಗಿರುತ್ತದೆ. ಅದನ್ನು ಹೇಳದೆ ಗೋಪ್ಯವಾಗಿಟ್ಟರೆ ಇನ್ಶೂರೆನ್ಸ್ ಕ್ಲೇಮ್ ಸಿಗದಂತಾಗುವ ಸಾಧ್ಯತೆ ಇರುತ್ತದೆ.
- **ಕುಟುಂಬಕ್ಕೆ ಪಾಲಿಸಿ ವಿವರ ತಿಳಿಸಿ:** ಇನ್ಶೂರೆನ್ಸ್ ಪಡೆದಿರುವ ಬಗ್ಗೆ ಕುಟುಂಬದವರಿಗೆ ಮಾಹಿತಿ ನೀಡಿ. ಪಾಲಿಸಿ ಸಂಖ್ಯೆ, ನಾಮಿನಿ ಇನ್ನಿತರೆ ವಿವರಗಳನ್ನು ಕೊಟ್ಟಿರಿ. ಕುಟುಂಬದವರಿಗೆ ಈ ಮಾಹಿತಿ ಗೊತ್ತಿದ್ದರೆ ಸಮಯಕ್ಕೆ ಸರಿಯಾಗಿ ಕ್ಲೇಮ್ ಅರ್ಜಿ ಸಲ್ಲಿಸಲು ಅನುಕೂಲವಾಗುತ್ತದೆ. ನೆನಪಿಡಿ, ಇನ್ಶೂರೆನ್ಸ್ ಮಾಡಿಸಿದ್ದರೂ ಅದನ್ನು ಕ್ಲೇಮ್ ಮಾಡದಿದ್ದರೆ ನಿಮ್ಮ ಪ್ರೀತಿ ಪಾತ್ರರಿಗೆ ಹಣ ಸಿಗುವುದಿಲ್ಲ.
- **ನಾಮಿನಿ ಮಾಹಿತಿ ನೀಡಿ:** ಇನ್ಶೂರೆನ್ಸ್ ಮಾಡಿಸುವಾಗ ನಾಮಿನಿಯ ಹೆಸರು, ವಯಸ್ಸು ಮುಂತಾದ ವಿವರಗಳನ್ನು ಸರಿಯಾಗಿ ನಮೂದಿಸಿ. ಇದರಿಂದ ಸಂಕಷ್ಟದ ಸಂದರ್ಭಗಳಲ್ಲಿ ಕ್ಲೇಮ್ ಪ್ರಕ್ರಿಯೆ ಸರಳವಾಗುತ್ತದೆ.
- **ಕ್ಲೇಮ್ ಸಲ್ಲಿಸುವ ಪ್ರಕ್ರಿಯೆ:** ಇನ್ಶೂರೆನ್ಸ್ ಪಡೆದಿರುವ ವ್ಯಕ್ತಿ ಮೃತಪಟ್ಟ ನಂತರದಲ್ಲಿ ಎಷ್ಟು ಸಾಧ್ಯವೋ ಅಷ್ಟು ಬೇಗ ಇನ್ಶೂರೆನ್ಸ್ ಕಂಪನಿಗೆ ಮಾಹಿತಿ ನೀಡಿ. ಸಾಮಾನ್ಯವಾಗಿ ಇನ್ಶೂರೆನ್ಸ್ ಕಂಪನಿಗಳು ವ್ಯಕ್ತಿ ಮೃತಪಟ್ಟ 30 ದಿನದ ಒಳಗಾಗಿ ಕ್ಲೇಮ್ ಪ್ರಕ್ರಿಯೆ ಜಾರಿಗೊಳಿಸುವಂತೆ ಸೂಚಿಸುತ್ತವೆ. ಆದರೆ, ಒಂದು ಕಂಪನಿಯಿಂದ ಮತ್ತೊಂದಕ್ಕೆ ಈ ದಿನಗಳ ಮಿತಿ ಬದಲಾಗುತ್ತದೆ.

ಇನ್ಶೂರೆನ್ಸ್ ಕಂಪನಿಗೆ ವಿಮೆ ಹೊಂದಿರುವ ವ್ಯಕ್ತಿ ಮೃತಪಟ್ಟಿರುವ ಬಗ್ಗೆ ಗ್ರಾಹಕ ಸೇವಾ ಕೇಂದ್ರದ ಮೂಲಕ, ವಿಮಾ ಕಚೇರಿಗೆ ಭೇಟಿ ನೀಡುವ ಮೂಲಕ ಅಥವಾ ಇ- ಮೇಲ್ ಮುಖಾಂತರ ಮಾಹಿತಿ ನೀಡಬಹುದು. ಏಜೆಂಟರ ಮೂಲಕ ಇನ್ಶೂರೆನ್ಸ್ ಪಡೆದಿದ್ದರೆ ಅವರ ಮೂಲಕವೂ ಈ ಮಾಹಿತಿ ಕೊಡಬಹುದು.

ಇನ್ಶೂರೆನ್ಸ್ ಕ್ಲೇಮ್ ಸಲ್ಲಿಸಲು ಯಾವೆಲ್ಲಾ ದಾಖಲೆಗಳು ಬೇಕು ಎನ್ನುವ ಮಾಹಿತಿ ನಿರ್ದಿಷ್ಟ ಇನ್ಶೂರೆನ್ಸ್ ಕಂಪನಿಗಳ ವೆಬ್‌ಸೈಟ್‌ನಲ್ಲಿ ಇರುತ್ತದೆ. ಸಾಮಾನ್ಯವಾಗಿ ವಿಮಾ ಪಾಲಿಸಿಯ ನೈಜ ದಾಖಲೆ, ಮರಣ ಪ್ರಮಾಣ ಪತ್ರ, ಡೆತ್ ಕ್ಲೇಮ್ ಅರ್ಜಿ, ಕ್ಯಾನ್ಸಲ್ಡ್ ಚೆಕ್, ನಾಮಿನಿಯ ಕೆವೈಸಿ ದಾಖಲೆಗಳ ಜೊತೆಗೆ ನಾಮಿನಿಯ ಆಧಾರ್, ಪಾನ್ ಕಾರ್ಡ್, ಪಾಸ್‌ಪೋರ್ಟ್, ವೋಟರ್ ಐಡಿ ಅಥವಾ ಇನ್ಯಾವುದೇ ಸರ್ಕಾರಿ ಗುರುತಿನ ಚೀಟಿ ನೀಡಬಹುದು.

ವೈದ್ಯಕೀಯ ಕಾರಣಗಳಿಂದ ಅಥವಾ ಸಹಜವಾಗಿ ವ್ಯಕ್ತಿ ಸಾವನ್ನಪ್ಪಿದರೆ, ವೈದ್ಯರ ಹೇಳಿಕೆ, ಆಸ್ಪತ್ರೆಗೆ ದಾಖಲಾದ ವಿವರ, ಡೆತ್ ಸಮ್ಮರಿ, ವೈದ್ಯಕೀಯ ವರದಿ ಮುಂತಾದ ವಿವರ ಸಲ್ಲಿಸಬೇಕಾಗುತ್ತದೆ. ಅಪಘಾತ ಅಥವಾ ಆತ್ಮಹತ್ಯೆ ಪ್ರಕರಣಗಳಲ್ಲಿ ಕ್ಲೇಮ್ ಸಲ್ಲಿಸುವಾಗ ಪೊಲೀಸ್ ಎಫ್‌ಐಆರ್, ಪೋಸ್ಟ್ ಮಾರ್ಟಮ್ ವರದಿ, ಪೊಲೀಸರ ಅಂತಿಮ ತನಿಖಾ ವರದಿ/ಚಾರ್ಜ್ ಶೀಟ್ ಬೇಕಾಗುತ್ತದೆ.

ಇವೆಲ್ಲಾ ದಾಖಲೆಗಳೊಂದಿಗೆ ಇನ್ಶೂರೆನ್ಸ್ ಕ್ಲೇಮ್‌ಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ಭರ್ತಿ ಮಾಡಿ ಇನ್ಶೂರೆನ್ಸ್ ಕಂಪನಿಯ ವಲಯ ಕಚೇರಿ ಅಥವಾ ಕಂಪನಿಯ ವೆಬ್‌ಸೈಟ್ ಮೂಲಕ ಕ್ಲೇಮ್ ಸಲ್ಲಿಸಬಹುದು.

ಒಂದೊಮ್ಮೆ ಕ್ಲೇಮ್‌ಗೆ ನಾಮಿನಿ ಸೂಚಿತವಾಗಿಲ್ಲದಿದ್ದರೆ ನೋಂದಾಯಿತ ವಿಲ್ (ಉಯಿಲು) ಅಥವಾ ಕಾನೂನುಬದ್ಧ ಉತ್ತರಾಧಿಕಾರಿಯ ಪ್ರಮಾಣ ಪತ್ರವನ್ನು (Succession Certificate) ಕೋರ್ಟ್‌ನಿಂದ ಪಡೆದುಕೊಳ್ಳಬೇಕಾಗುತ್ತದೆ. ಉತ್ತರಾಧಿಕಾರಿ ಪ್ರಮಾಣ ಪತ್ರವು ಕ್ಲೇಮ್ ಪಡೆಯಲು ಯಾರು ಅರ್ಹರು ಎನ್ನುವುದನ್ನು ಸೂಚಿಸುತ್ತದೆ.

ಕ್ಲೇಮ್ ನೀಡುವ ಪ್ರಕ್ರಿಯೆ: ಇನ್ಶೂರೆನ್ಸ್ ಕಂಪನಿಯು ಮೃತಪಟ್ಟಿರುವ ವ್ಯಕ್ತಿಯ ಹೆಸರಿನಲ್ಲಿ ಕ್ಲೇಮ್‌ಗೆ ಸಲ್ಲಿಕೆಯಾಗಿರುವ ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡುತ್ತದೆ. ವೈದ್ಯಕೀಯ ವರದಿಗಳು, ಪೊಲೀಸರು ಒದಗಿಸಿರುವ ದಾಖಲೆಗಳು ಮತ್ತು ಇನ್ನಿತರ ಅಗತ್ಯ ವಿವರಗಳನ್ನು ಪಡೆದು ಪರಾಮರ್ಶೆ ಮಾಡುತ್ತದೆ.

ಇನ್ಶೂರೆನ್ಸ್ ಪಾಲಿಸಿ ಪಡೆದಿರುವ ವ್ಯಕ್ತಿ, ಪಾಲಿಸಿ ಪಡೆದ ಮೂರು ವರ್ಷದ ಒಳಗೆ ಸಾವನ್ನಪ್ಪಿದ್ದರೆ ಕ್ಲೇಮ್‌ಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿ ಕ್ಲೇಮ್ ನೀಡಲು ಹೆಚ್ಚು ಸಮಯ ತೆಗೆದುಕೊಳ್ಳಬಹುದು. ಕ್ಲೇಮ್ ಅನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕಾರ ಮಾಡುವ ಹಕ್ಕು ಇನ್ಶೂರೆನ್ಸ್ ಕಂಪನಿಗೆ ಇದೆ.

ಆದರೆ, ಸರಿಯಾಗಿ ಸಲ್ಲಿಕೆಯಾಗಿರುವ ಕ್ಲೇಮ್ ಅರ್ಜಿಗಳನ್ನು 30 ದಿನದ ಒಳಗಾಗಿ ವಿಲೇವಾರಿ ಮಾಡಬೇಕು ಎಂದು ನಿಯಮ ಹೇಳುತ್ತದೆ. ಕೆಲ ಪ್ರಕರಣಗಳನ್ನು ಕ್ಲೇಮ್ ಪರಿಶೀಲಿಸಲು ಹೆಚ್ಚಿನ ಸಮಯ ಅಗತ್ಯವಿದೆ ಎನಿಸಿದರೆ ಇನ್ಶೂರೆನ್ಸ್ ಕಂಪನಿ 120 ದಿನಗಳ ಹೆಚ್ಚುವರಿ ಸಮಯ ಪಡೆದುಕೊಳ್ಳಬಹುದು. ಅಂತಿಮವಾಗಿ ಕ್ಲೇಮ್ ಅನ್ನು ಇನ್ಶೂರೆನ್ಸ್ ಕಂಪನಿ ಒಪ್ಪಿಕೊಂಡ ಮೇಲೆ ಕ್ಲೇಮ್‌ನ ಮೊತ್ತ ನಾಮಿನಿಯ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಮಾರಾಟದ ಒತ್ತಡಕ್ಕೆ ಮುಗ್ಗರಿಸಿದ ಷೇರುಪೇಟೆ



ಕರಡಿ ಕುಣಿತಕ್ಕೆ ಷೇರು ಸೂಚ್ಯಂಕಗಳು ಮುಗ್ಗರಿಸಿವೆ. ಅಕ್ಟೋಬರ್ 25ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿತ ಕಂಡಿವೆ. 79,402 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.24ರಷ್ಟು ಇಳಿಕೆಯಾಗಿದೆ. 24,180 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.71ರಷ್ಟು ತಗ್ಗಿದೆ.

ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 5.75ರಷ್ಟು ಕುಸಿದಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 6.45ರಷ್ಟು ಇಳಿಕೆಯಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ಪ್ರಮುಖ ಕಂಪನಿಗಳ ಎರಡನೇ ತ್ರೈಮಾಸಿಕ ಫಲಿತಾಂಶದಲ್ಲಿ ಹಿನ್ನಡೆ, ಮಧ್ಯಪ್ರಾಚ್ಯ ಬಿಕ್ಕಟ್ಟು, ಚೀನಾ ಮಾರುಕಟ್ಟೆಯತ್ತ ವಾಲುತ್ತಿರುವ ಸಾಂಸ್ಥಿಕ ಹೂಡಿಕೆದಾರರು ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ಶೇ 7.23, ರಿಯಲ್ ಎಸ್ಟೇಟ್ ಶೇ 6.97, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 5.81, ನಿಫ್ಟಿ ಆಟೊ ಶೇ 5.36, ಎನರ್ಜಿ ಶೇ 5.2, ಎಫ್‌ಎಂಸಿಜಿ ಶೇ 3.5, ಫಾರ್ಮಾ ಶೇ 3.35, ನಿಫ್ಟಿ ಬ್ಯಾಂಕ್ ಶೇ 2.51, ಸೇವಾ ವಲಯ ಶೇ 1.56, ಫೈನಾನ್ಸ್ ಶೇ 0.86 ಮತ್ತು ಐಟಿ ವಲಯ ಶೇ 0.16ರಷ್ಟು ಕುಸಿದಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಶೇ 22.65, ಟಾಟಾ ಕನ್ಸ್ಯೂಮರ್ ಶೇ 10.99, ಬಿಪಿಸಿಎಲ್ ಶೇ 10.65, ಅದಾನಿ ಎಂಟರ್ ಪ್ರೈಸಸ್ ಶೇ 10.26, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 9.86, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 8.33, ಎಲ್ ಆ್ಯಂಡ್ ಟಿ ಶೇ 6.95, ಒಎನ್‌ಜಿಸಿ ಶೇ 6.94, ಹಿಂದುಸ್ತಾನ್ ಯೂನಿಲಿವರ್ ಶೇ 6.93, ಶ್ರೀರಾಮ್ ಫೈನಾನ್ಸ್ ಶೇ 6.78, ಅದಾನಿ ಪೋರ್ಟ್ಸ್ ಶೇ 6.31ರಷ್ಟು ಕುಸಿತ ಕಂಡಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 3.66, ಟೆಕ್ ಮಹೀಂದ್ರ ಶೇ 1.69, ಬಜಾಜ್ ಆಟೊ ಶೇ 1.42 ಮತ್ತು ಬಜಾಜ್ ಫೈನಾನ್ಸ್ ಶೇ 0.15ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಏರ್‌ಟೆಲ್, ಅದಾನಿ ಪವರ್, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಸನ್ ಫಾರ್ಮಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಅಂಬುಜಾ ಸಿಮೆಂಟ್ಸ್, ಎಲ್‌ಐಸಿ ಹೌಸಿಂಗ್ ಫೈನಾನ್ಸ್, ಕ್ಯಾಮ್ಸ್, ಟಿವಿ ಟುಡೆ ನೆಟ್ ವರ್ಕ್, ರೇಲ್ ಟೆಲ್, ಟಾಟಾ ಟೆಕ್ನಾಲಜೀಸ್, ಮಾರುತಿ ಸುಜುಕಿ, ಸಿಪ್ಲಾ, ಕೆನರಾ ಬ್ಯಾಂಕ್, ವೋಲ್ಟಾಸ್, ಎಸ್‌ಬಿಐ ಕಾರ್ಡ್ ಆ್ಯಂಡ್ ಪೇಮೆಂಟ್ಸ್, ವಿಗಾರ್ಡ್, ಹನಿವೆಲ್ ಆಟೊಮೇಷನ್, ಎಲ್ ಆ್ಯಂಡ್ ಟಿ, ಡಾಬರ್ ಇಂಡಿಯಾ, ಬಯೋಕಾನ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸುತ್ತಿವೆ.

ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಗುರಿ ಮೀರಿ 9 ಕೆ.ಜಿ ಅಧಿಕ ಚಿನ್ನ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ರಾಜ್ಯ ಸರ್ಕಾರಿ ಸ್ವಾಮ್ಯದ ಹಟ್ಟಿ ಚಿನ್ನದ ಗಣಿ ಕಂಪನಿಯು ಪ್ರಸಕ್ತ ಸಾಲಿನ ಅರ್ಧ ವರ್ಷದಲ್ಲಿ ನಿಗದಿತ ಗುರಿ ಮೀರಿ 9 ಕೆ.ಜಿ ಚಿನ್ನ ಉತ್ಪಾದಿಸಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 752 ಕೆ.ಜಿ ಚಿನ್ನ ಉತ್ಪಾದನೆ ಗುರಿ ಹೊಂದಲಾಗಿತ್ತು. ಒಟ್ಟು 761 ಕೆ.ಜಿ ಚಿನ್ನ ಉತ್ಪಾದನೆ ಮಾಡಿದೆ.

ಏಪ್ರಿಲ್ ತಿಂಗಳಲ್ಲಿ 9.43 ಕೆ.ಜಿ, ಜೂನ್ ತಿಂಗಳಲ್ಲಿ 8.64 ಕೆ.ಜಿ, ಜುಲೈ ತಿಂಗಳಲ್ಲಿ 16.51 ಕೆ.ಜಿ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ 24.2 ಕೆ.ಜಿ ಚಿನ್ನವನ್ನು ಗುರಿಗಿಂತ ಹೆಚ್ಚುವರಿಯಾಗಿ ಉತ್ಪಾದಿಸಲಾಗಿದೆ. ಆದರೆ, ಮೇ ತಿಂಗಳ ಗುರಿಯಲ್ಲಿ 27.71 ಕೆ.ಜಿ ಹಾಗೂ ಆಗಸ್ಟ್ ತಿಂಗಳಲ್ಲಿ 15.16 ಕೆ.ಜಿ ಕಡಿಮೆ ಉತ್ಪಾದನೆ ಮಾಡಲಾಗಿದೆ.

ಅದಿರು ಉತ್ಪಾದನೆಗೆ ಹಿನ್ನಡೆ: ಕಳೆದ ಆರು ತಿಂಗಳಲ್ಲಿ ಚಿನ್ನದ ಉತ್ಪಾದನೆಯಲ್ಲಿ ಸಾಧನೆ ಮಾಡಿರುವ ಕಂಪನಿಯು ಅದಿರು ಉತ್ಪಾದನೆಯಲ್ಲಿ ಮಾತ್ರ ಹಿನ್ನಡೆ ಕಂಡಿದೆ. ಈ ಅವಧಿಯಲ್ಲಿ 3.80 ಲಕ್ಷ ಟನ್ ಅದಿರು ಉತ್ಪಾದನೆ ಗುರಿ ಹೊಂದಲಾಗಿದ್ದು,3.13 ಲಕ್ಷ ಟನ್ ಉತ್ಪಾದನೆಯಾಗಿದೆ.

ಬಿಐಎಸ್ ಮಾನ್ಯತೆ ಕಡ್ಡಾಯ: 162 ತಯಾರಕರ ಪರವಾನಗಿ ರದ್ದು

ಕಳಪೆ ಹೆಲ್ಮೆಟ್ ವಿರುದ್ಧ ಕಾರ್ಯಾಚರಣೆ

ನವದೆಹಲಿ (ಪಿಟಿಐ): ದ್ವಿಚಕ್ರ ವಾಹನ ಸವಾರರ ಜೀವಕ್ಕೆ ಸಂಚಕಾರ ತರುವ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ತಯಾರಿಸುವವರು ಮತ್ತು ಮಾರಾಟಗಾರರ ವಿರುದ್ಧ ಕೇಂದ್ರ ಸರ್ಕಾರವು, ದೇಶದಾದ್ಯಂತ ಕಾರ್ಯಾಚರಣೆ ಹಮ್ಮಿಕೊಂಡಿದೆ.

ಹೆಲ್ಮೆಟ್‌ಗೆ ಬಿಐಎಸ್ (ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್) ಮಾನ್ಯತೆಯನ್ನು ಕಡ್ಡಾಯಗೊಳಿಸಲಾಗಿದೆ. ಈ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮಕ್ಕೆ ಮುಂದಾಗಿದೆ. ರಸ್ತೆ ಸುರಕ್ಷತೆಗೆ ಒತ್ತು ನೀಡುವುದು ಈ ಕಾರ್ಯಾಚರಣೆಯ ಉದ್ದೇಶವಾಗಿದೆ.

ಬಿಐಎಸ್ ಮಾನ್ಯತೆ ಉಲ್ಲಂಘನೆ ಸಂಬಂಧ 27 ಸ್ಥಳಗಳಲ್ಲಿ ದಾಳಿ ನಡೆಸಲಾಗಿದೆ. 162 ಹೆಲ್ಮೆಟ್ ತಯಾರಕರ ಪರವಾನಗಿ ರದ್ದು ಅಥವಾ ಪರವಾನಗಿ ನವೀಕರಣ ಮಾಡದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

'ಗುಣಮಟ್ಟದ ಹೆಲ್ಮೆಟ್‌ನಿಂದ ಸವಾರರ ಜೀವ ಉಳಿಯುತ್ತದೆ. ಹಾಗಾಗಿ, ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕುವುದೇ ಈ ಕಾರ್ಯಾಚರಣೆಯ ಉದ್ದೇಶವಾಗಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು 2021ರ ಜೂನ್‌ನಲ್ಲಿ ಹೆಲ್ಮೆಟ್‌ಗಳಿಗೆ ಸಂಬಂಧಿಸಿದಂತೆ ಗುಣಮಟ್ಟ ನಿಯಂತ್ರಣ ಆದೇಶವನ್ನು ಹೊರಡಿಸಿದೆ. ಹೆಲ್ಮೆಟ್ ತಯಾರಿಸುವವರು ಬಿಐಎಸ್ ಮಾನದಂಡ (ಐಎಸ್ 4151:2015) ಪಾಲಿಸುವುದು ಕಡ್ಡಾಯವಾಗಿದೆ.

1988ರ ಮೋಟರ್ ವಾಹನಗಳ ಕಾಯ್ದೆ ಪ್ರಕಾರ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕಿದೆ.

ರಸ್ತೆಬದಿ ಮಾರಾಟ ಅವ್ಯಾಹತ



ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳಿಂದ ರಸ್ತೆ ಅಪಘಾತದ ವೇಳೆ ಹಲವು ಸವಾರರು ಮೃತಪಡುತ್ತಾರೆ. ರಸ್ತೆ ಬದಿಯಲ್ಲಿ ಪ್ರಮಾಣೀಕರಿಸದ ಹೆಲ್ಮೆಟ್ ಮಾರಾಟ ಮಾಡುವವರನ್ನು ಗುರಿಯಾಗಿಟ್ಟುಕೊಂಡು ಅಧಿಕಾರಿಗಳು ದಾಳಿ ನಡೆಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಗ್ರಾಹಕರು ಖರೀದಿಗೂ ಮೊದಲು ಬಿಐಎಸ್ ಕೇರ್ ಆ್ಯಪ್ ಅಥವಾ ವೆಬ್‌ಸೈಟ್‌ಗೆ ತೆರಳಿ ಪರೀಕ್ಷಿಸಬೇಕಿದೆ ಎಂದು ಸಲಹೆ ನೀಡಿದೆ.

ಜಿಲ್ಲಾಮಟ್ಟದ ಅಧಿಕಾರಿಗಳು, ಪೊಲೀಸರು ಮತ್ತು ಬಿಐಎಸ್ ಅಧಿಕಾರಿಗಳ ಜೊತೆಗೂಡಿ ಕಾರ್ಯಾಚರಣೆ ನಡೆಸಬೇಕಿದೆ. ಸ್ಥಳೀಯ ಆಡಳಿತದ ನೆರವು ಕೂಡ ಪಡೆಯಬೇಕಿದೆ ಎಂದು ತಿಳಿಸಿದೆ.

ಮತ್ತೆ 50 ವಿಮಾನಕ್ಕೆ ಬೆದರಿಕೆ ಹುಸಿ ಸಂದೇಶ

ಒಂದನೇ ಪುಟದಿಂದ...

ಹುಸಿ ಸಂದೇಶಗಳನ್ನು ಕಳುಹಿಸುತ್ತಿರುವವರನ್ನು ಗುರುತಿಸಿ ನಿಗದಿತ ಅವಧಿಯೊಳಗೆ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿ ಖಾತೆಗಳನ್ನು ಸ್ಥಗಿತಗೊಳಿಸಬೇಕು ಎಂದು ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಮಾಹಿತಿ ತಂತ್ರಜ್ಞಾನ ಸಚಿವಾಲಯ ಸೂಚಿಸಿದೆ.

ಈ ಮಧ್ಯೆ, ಹುಸಿ ಬಾಂಬ್ ಬೆದರಿಕೆ ಸಂದೇಶಗಳ ಪಿಡುಗಿಗೆ ಕಡಿವಾಣ ಹಾಕಲು ಶಾಸನಾತ್ಮಕ ಕ್ರಮ ಜರುಗಿಸುವ ಕುರಿತು ಕೇಂದ್ರ ವಿಮಾನಯಾನ ಸಚಿವಾಲಯ ಚಿಂತನೆ ನಡೆಸುತ್ತಿದೆ.

ಹುಸಿ ಕರೆ: ತಪ್ಪಿತಸ್ಥರಿಗೆ ವಿಮಾನಯಾನ ನಿಷೇಧಿಸಲು ಕೇಂದ್ರ ಸರ್ಕಾರ ಚಿಂತನೆ

ವಿಶಾಖಪಟ್ಟಣ (ಪಿಟಿಐ): ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸುವವರ ಮೇಲೆ ವಿಮಾನಯಾನ ನಿಷೇಧ ಹೇರುವುದೂ ಸೇರಿ ವಿವಿಧ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಚಿಂತನೆ ನಡೆದಿದೆ ಎಂದು ಕೇಂದ್ರ ವಿಮಾನಯಾನ ಸಚಿವ ಕೆ.ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.

ಭಾನುವಾರ ಇಲ್ಲಿ ವಿಶಾಖಪಟ್ಟಣ–ವಿಜಯವಾಡ ನಡುವೆ ವಿಮಾನಯಾನ ಸೇವೆಗೆ ಚಾಲನೆ ನೀಡಿದ ಅವರು, 'ಹುಸಿ ಬೆದರಿಕೆ ಸಂದೇಶ ತಡೆಯಲು ತನಿಖಾ ಸಂಸ್ಥೆಗಳು ಕ್ರಮವಹಿಸುತ್ತಿವೆ. ಪೂರಕವಾಗಿ ಕಾಯ್ದೆಗೆ ಅಗತ್ಯ ತಿದ್ದುಪಡಿ ತರುವ ಚಿಂತನೆಯೂ ನಡೆದಿದೆ' ಎಂದರು. 'ಬೆದರಿಕೆ ತಡೆಗೆ ನಾವು ಅಂತರರಾಷ್ಟ್ರೀಯ ಸಂಸ್ಥೆಗಳು, ಗುಪ್ತದಳದ ನೆರವು ಪಡೆಯುತ್ತಿದ್ದೇವೆ. ತಪ್ಪಿತಸ್ಥರನ್ನು ಕಠಿಣ ಸಜೆಗೆ ಒಳಪಡಿಸುವ ಕುರಿತು ಕೈಗೊಳ್ಳಬೇಕಾದ ಗಂಭೀರ ಕ್ರಮಗಳನ್ನು ಶೀಘ್ರವೇ ಬಹಿರಂಗಪಡಿಸಲಾಗುವುದು' ಎಂದು ತಿಳಿಸಿದರು.



ವಾತಾವರಣದಲ್ಲಿನ ಮಾಲಿನ್ಯಕಾರಕ ಹೊಂಜನ್ನು ಕಡಿಮೆ ಮಾಡಲು ನವದೆಹಲಿಯಲ್ಲಿ ಭಾನುವಾರ ನಗರ ಸ್ಥಳೀಯ ಆಡಳಿತದಿಂದ 'ಹೊಂಜು ನಿಗ್ರಹ ಫಿರಂಗಿ'ಯನ್ನು ಬಳಕೆ ಮಾಡಲಾಯಿತು – ಪಿಟಿಐ ಚಿತ್ರ

ದೆಹಲಿ: ವಾಯುಮಾಲಿನ್ಯ ಮತ್ತೆ ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಭಾನುವಾರ ಹವಾಮಾನ ಸ್ಥಿತಿಯು ಮತ್ತೆ 'ಅತ್ಯಂತ ಕಳಪೆ' ಮಟ್ಟ ತಲುಪಿದೆ. ಗಾಳಿ ಗುಣಮಟ್ಟ ಸೂಚ್ಯಂಕವು 359 ಆಗಿತ್ತು.

ಕಳೆದ ಎರಡು ದಿನಗಳಿಂದ ಸುಧಾರಿಸಿದ್ದ ಗಾಳಿಯ ಗುಣಮಟ್ಟವು ಶನಿವಾರ 255 ಎಕ್ಯೂಐ ಇತ್ತು. ಆದರೆ ಭಾನುವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಹೆಚ್ಚಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

40 ಮೇಲ್ವಿಚಾರಣಾ ಕೇಂದ್ರಗಳ ಪೈಕಿ 36 ಕೇಂದ್ರಗಳ ಮಾಹಿತಿ ಹಂಚಿಕೊಂಡಿರುವ ಇಲಾಖೆ, 8 ಕೇಂದ್ರಗಳನ್ನು ಹೊರತುಪಡಿಸಿ ಉಳಿದ 28 ಕೇಂದ್ರಗಳಲ್ಲಿ ಗಾಳಿಯ ಗುಣಮಟ್ಟ ಬಹಳ ಕಳಪೆಯಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಎಫ್‌ಪಿಐ: ₹85,790 ಕೋಟಿ ವಾಪಸ್

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಅಕ್ಟೋಬರ್ 25ರ ವರೆಗೆ ₹85,790 ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

ಆರ್ಥಿಕತೆಗೆ ಚೇತರಿಕೆ ನೀಡುವ ನಿಟ್ಟಿನಲ್ಲಿ ಚೀನಾವು ಬಡ್ಡಿದರ ಕಡಿತ ಸೇರಿ ಹಲವು ಕ್ರಮಗಳನ್ನು ಕೈಗೊಂಡಿದೆ. ಇದು ವಿದೇಶಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಿದೆ. ಹಾಗಾಗಿ, ಅಲ್ಲಿನ ಮಾರುಕಟ್ಟೆಯಲ್ಲಿ ಹೂಡಿಕೆಗೆ ಮುಂದಾಗಿದ್ದಾರೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಬಂಡವಾಳದ ಹೊರಹರಿವು ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮಾರುಕಟ್ಟೆ ಬಂಡವಾಳ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿದ್ದರಿಂದ ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಮಾರುಕಟ್ಟೆ ಬಂಡವಾಳವು (ಎಂ–ಕ್ಯಾಪ್) ₹2.09 ಲಕ್ಷ ಕೋಟಿ ಕರಗಿದೆ.

ಹಿಂದುಸ್ತಾನ್ ಯೂನಿಲಿವರ್ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹44,195 ಕೋಟಿ. ರಿಲಯನ್ಸ್ ಇಂಡಸ್ಟ್ರೀಸ್ ₹41,994 ಕೋಟಿ, ಎಸ್‌ಬಿಐ ₹35,117 ಕೋಟಿ, ಭಾರ್ತಿ ಏರ್‌ಟೆಲ್ ₹24,108 ಕೋಟಿ, ಟಿಸಿಎಸ್ ₹23,137 ಕೋಟಿ ಮಾರುಕಟ್ಟೆ ಬಂಡವಾಳ ಇಳಿದಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ

Four Wheelers Selling

TATA



ಭವಿಷ್ಯ

Astrology

ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಪೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

ಒಂದೇಗಂಟೆಯಲ್ಲಿ 100%ಗ್ಯಾರಂಟಿ ಶಾಶ್ವತಪರಿಹಾರ,ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಪಂಡಿತ್. ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 04.12.2024 13.12.2024 ರಿಂದ 8/11/17 ದಿನಗಳ ಗುಜರಾತ್ ರಾಜಸ್ಥಾನ್. 12.12.2024 28.02.2025 ರಿಂದ 8 ದಿನಗಳ ಕಾಶಿ,ಗಯಾ,ಅಯೋಧ್ಯಾ. 22.12.2024 ರಿಂದ 7 ದಿನಗಳ ತಮಿಳುನಾಡು ಕೇರಳ. 23.12.2024 ರಿಂದ 7 ದಿನಗಳ ಹೈದ್ರಾಬಾದ್ ಮಂತ್ರಾಲಯ ಶ್ರೀಶೈಲ. 12.12.2024 17.02.2025 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 17.01.2025 25.01.2025 ರಿಂದ 6 ದಿನಗಳ ದುಬೈ,ಅಬುದಾಬಿ,ಶಾರ್ಜಾ. 17.01.2025 ರಿಂದ 10 ದಿನಗಳ ಕಾಂಬೋಡಿಯ, ವಿಯೆಟ್ನಂ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಹಿಳಾ ಕ್ರಿಕೆಟ್: ಹರ್ಮನ್‌ಪ್ರೀತ್ ಬಳಗಕ್ಕೆ ನಿರಾಶೆ • ರಾಧಾ ಯಾದವ್ ಮಿಂಚು

ಡಿವೈನ್ ಆಲ್‌ರೌಂಡ್ ಆಟಕ್ಕೆ ಜಯ



ನ್ಯೂಜಿಲೆಂಡ್ ತಂಡದ ನಾಯಕಿ ಸೋಫಿ ಡಿವೈನ್ –ಐಸಿಸಿ ಎಕ್ಸ್ ಚಿತ್ರ

ಅಹಮದಾಬಾದ್ (ಪಿಟಿಐ): ನ್ಯೂಜಿಲೆಂಡ್ ತಂಡದ ನಾಯಕಿ ಸೋಫಿ ಡಿವೈನ್ ಅವರ ಆಲ್‌ರೌಂಡ್ ಆಟದ ಮುಂದೆ ಭಾರತ ಮಹಿಳಾ ತಂಡವು ಇಲ್ಲಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶರಣಾಯಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ 76 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು. ಇದರಿಂದಾಗಿ ಮಂಗಳವಾರ ನಡೆಯಲಿರುವ ಸರಣಿಯ ಕೊನೆಯ ಪಂದ್ಯವು ಕುತೂಹಲ ಮೂಡಿಸಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 86 ಎಸೆತಗಳಲ್ಲಿ 79 ರನ್ ಗಳಿಸಿದ ಸೋಫಿ ಡಿವೈನ್ ಅವರ ಬ್ಯಾಟಿಂಗ್‌ನಿಂದ ಕಿವೀಸ್ ಪಡೆಯು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 259 ರನ್ ಗಳಿಸಿತು. ಬೌಲಿಂಗ್‌ನಲ್ಲಿಯೂ ಮಿಂಚಿದ ಸೋಫಿ (27ಕ್ಕೆ3) ದಾಳಿಯಿಂದಾಗಿ ಭಾರತ ತಂಡವು 47.1 ಓವರ್‌ಗಳಲ್ಲಿ 183 ರನ್ ಗಳಿಸಿ ಆಲೌಟ್ ಆಯಿತು.

ಬ್ಯಾಟಿಂಗ್‌ನಲ್ಲಿ ಸೋಫಿ ಅವರು ಮ್ಯಾಡಿ ಗ್ರೀನ್ (42; 41ಎಸೆತ) ಅವರೊಂದಿಗೆ 5ನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು. ತಂಡದ ಆರಂಭಿಕ ಜೋಡಿ ಸೂಝಿ ಬೇಟ್ಸ್ (58; 70ಎ) ಮತ್ತು ಜಾರ್ಜಿಯಾ ಪ್ರಿಮರ್ (41; 50ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 87 ರನ್ ಸೇರಿಸಿದರು. 16ನೇ ಓವರ್‌ನಲ್ಲಿ ಜಾರ್ಜಿಯಾ ವಿಕೆಟ್ ಗಳಿಸಿದ ದೀಪ್ತಿ ಶರ್ಮಾ ಈ ಜೊತೆಯಾಟವನ್ನು ಮುರಿದರು. ಐದು ಓವರ್‌ಗಳ ನಂತರ ರಾಧಾ ಯಾದವ್ ಅವರು ತಮ್ಮದೇ ಓವರ್‌ನಲ್ಲಿ ಸೂಝಿ ಅವರ ಕ್ಯಾಚ್ ಪಡೆದರು.

ಲಾರೆನ್ ಡೌನ್ ಅವರನ್ನು ರನ್‌ಔಟ್ ಮಾಡುವಲ್ಲಿ ಭಾರತದ ಫೀಲ್ಡರ್ ಪ್ರಿಯಾ ಮಿಶ್ರಾ ಪ್ರಮುಖ ಪಾತ್ರವಹಿಸಿದರು. ನಂತರ ಪ್ರಿಯಾ ಅವರು ತಮ್ಮ ಬೌಲಿಂಗ್‌ನಲ್ಲಿ ಬ್ರೂಕ್ ಹ್ಯಾಲಿಡೇ ವಿಕೆಟ್ ಕೂಡ ಕಬಳಿಸಿದರು. ಇದರಿಂದಾಗಿ ತಂಡವು ಕುಸಿತದೆಡೆಗೆ ಸಾಗಿತ್ತು.

ಆದರೆ ಇನ್ನೊಂದೆಡೆ ದಿಟ್ಟವಾಗಿ ಆಡುತ್ತಿದ್ದ ಸೋಫಿ ಅವರನ್ನು ಸೇರಿಕೊಂಡ ಮ್ಯಾಡಿ ಇನಿಂಗ್ಸ್‌ಗೆ ಬಲ ತುಂಬಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಸೋಫಿ ಮತ್ತು ಲಿಯಾ ತಹುಹು ಅವರ ಬೌಲಿಂಗ್ ಮುಂದೆ ತಂಡವು 102 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ನಾಯಕಿ ಹರ್ಮನ್ 35 ಎಸೆತಗಳಲ್ಲಿ 24 ರನ್ ಗಳಿಸಿದರು.

ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆದು ಮಿಂಚಿದ್ದ ರಾಧಾ ಯಾದವ್ (48; 64ಎ, 4X5) ಸೈಮಾ (29; 54ಎ, 4X3) ಅವರೊಂದಿಗೆ 9ನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಆದರೆ ಇದರಿಂದ ಆತಿಥೇಯ ತಂಡವು ಸೋಲಿನ ಅಂತರ ಕಡಿಮೆ ಮಾಡಿಕೊಳ್ಳಲು ಮಾತ್ರ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 9ಕ್ಕೆ259 (ಸೂಝಿ ಬೇಟ್ಸ್ 58, ಜಾರ್ಜಿಯಾ ಪ್ರಿಮರ್ 41, ಸೋಫಿ ಡಿವೈನ್ 79, ಮ್ಯಾಡಿ ಗ್ರೀನ್ 42, ದೀಪ್ತಿ ಶರ್ಮಾ 30ಕ್ಕೆ2, ರಾಧಾ ಯಾದವ್ 69ಕ್ಕೆ4) ಭಾರತ: 47.1 ಓವರ್‌ಗಳಲ್ಲಿ 183 (ಹರ್ಮನ್‌ಪ್ರೀತ್ ಕೌರ್ 24, ರಾಧಾ ಯಾದವ್ 48, ಸೈಮಾ ಠಾಕೋರ್ 29, ಲಿಯಾ ತಹುಹು 42ಕ್ಕೆ3, ಸೋಫಿ ಡಿವೈನ್ 27ಕ್ಕೆ3, ಎಡೆನ್ ಕಾರ್ಸನ್ 32ಕ್ಕೆ2) **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 76 ರನ್‌ಗಳ ಜಯ. ಸರಣಿ 1–1. ಪಂದ್ಯದ ಆಟಗಾರ್ತಿ: ಸೋಫಿ ಡಿವೈನ್ **ಮುಂದಿನ ಪಂದ್ಯ:** ಅ.29.

ಕನ್ನಡಿಗ ಸಮರ್ಥ್ ಶತಕ

ರಣಜಿ: ವಿದರ್ಭ ಎದುರು ಉತ್ತರಾಖಂಡ ದಿಟ್ಟ ಹೋರಾಟ



ಆರ್. ಸಮರ್ಥ್

ಡೆಹ್ರಾಡೂನ್ (ಪಿಟಿಐ): ಕನ್ನಡಿಗ ಆರ್. ಸಮರ್ಥ್ ಅವರ ಶತಕದ ಬಲದಿಂದ ಉತ್ತರಾಖಂಡ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ವಿದರ್ಭ ಎದುರು ದಿಟ್ಟ ಹೋರಾಟ ನಡೆಸಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿದರ್ಭ ತಂಡವು 88 ಓವರ್‌ಗಳಲ್ಲಿ 326 ರನ್ ಗಳಿಸಿತು. ಇದಕ್ಕುತ್ತರವಾಗಿ ಉತ್ತರಾಖಂಡ ತಂಡವು ಎರಡನೇ ದಿನವಾದ ಭಾನುವಾರ 87 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 242 ರನ್ ಗಳಿಸಿತು.

ಉತ್ತರಾಖಂಡ ತಂಡದ ನಾಯಕ ಸಮರ್ಥ್ ಅವರು 241 ಎಸೆತಗಳಲ್ಲಿ 119 ರನ್ ಗಳಿಸಿದರು. 31 ವರ್ಷದ ಬ್ಯಾಟರ್ ಸಮರ್ಥ್ ಅವರು ಈ ಋತುವಿನಲ್ಲಿ ಕರ್ನಾಟಕದಿಂದ ಉತ್ತರಾಖಂಡಕ್ಕೆ ವಲಸೆ ಹೋಗಿದ್ದಾರೆ. ಸಮರ್ಥ ಬಳಗವು ಮೊದಲ ಇನಿಂಗ್ಸ್ ಮುನ್ನಡೆ ಪಡೆಯಲು ಇನ್ನೂ 84 ರನ್ ಗಳಿಸಬೇಕಿದೆ.

ದೆಹಲಿಗೆ ಪರದಾಟ: ಅಸ್ಸಾಂ ತಂಡದ ಎದುರು ದೆಹಲಿಯ ಬ್ಯಾಟರ್‌ಗಳು ಪರದಾಡಿದರು. ಇದರಿಂದಾಗಿ ತಂಡವು ಇಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಹಿನ್ನಡೆ ಅನುಭವಿಸುವ ಆತಂಕದಲ್ಲಿದೆ. ಅಸ್ಸಾಂ ತಂಡವು ಗಳಿಸಿರುವ 330 ರನ್‌ಗಳಿಗೆ ಉತ್ತರವಾಗಿ ಬ್ಯಾಟಿಂಗ್ ಮಾಡುತ್ತಿರುವ ದೆಹಲಿ ತಂಡವು ಎರಡನೇ ದಿನದಾಟದ ಅಂತ್ಯಕ್ಕೆ 214 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದೆ. ಅಸ್ಸಾಂ ತಂಡದ ಸ್ವರೂಪಂ ಪುರಕಾಯಸ್ಥ (46ಕ್ಕೆ3) ಪೆಟ್ಟು ನೀಡಿದರು. ತಂಡವು ಹಿನ್ನಡೆ ತಪ್ಪಿಸಿಕೊಳ್ಳಲು ಇನ್ನೂ 116 ರನ್ ಗಳಿಸಬೇಕಿದೆ.

ಸಂಕ್ಷಿಪ್ತ ಸ್ಕೋರು: (ಡೆಹ್ರಾಡೂನ್): ವಿದರ್ಭ: 88 ಓವರ್‌ಗಳಲ್ಲಿ 326 (ಧ್ರುವ ಶೋರೆ 35, ದಾನೀಶ್ ಮಳೆವರ್ 56, ಯಶ್ ರಾಥೋಡ್ 135, ಮಯಂಕ್ ಮಿಶ್ರಾ 72ಕ್ಕೆ3, ಅವನೀಶ್ ಸುಧಾ 35ಕ್ಕೆ2, ಸ್ವಪ್ನಿಲ್ ಸಿಂಗ್ 70ಕ್ಕೆ2) ಉತ್ತರಾಖಂಡ: 87 ಓವರ್‌ಗಳಲ್ಲಿ 7ಕ್ಕೆ242 (ಆರ್. ಸಮರ್ಥ್ 119, ಅಕ್ಷಯ್ ವಖಾರೆ 47ಕ್ಕೆ3)

(ನವದೆಹಲಿ): ಅಸ್ಸಾಂ: 330 (ಶಿವಶಂಕರ್ ರಾಯ್ 59, ಸುಮಿತ್ ಗಡಿಗಾಂವ್ಕರ್ 162, ಹರ್ಷಿತ್ ರಾಣಾ 80ಕ್ಕೆ5) ದೆಹಲಿ: 6ಕ್ಕೆ214(ಹಿಮ್ಮತ್ ಸಿಂಗ್ 55, ಸ್ವರೂಪಂ ಪುರಕಾಯಸ್ಥ 46ಕ್ಕೆ3)

ಕರ್ನಾಟಕ ತಂಡದ ಬೆಂಬಿಡದ ಮಳೆರಾಯ

ಪಟ್ನಾ: ಕರ್ನಾಟಕ ರಾಜ್ಯ ಕ್ರಿಕೆಟ್ ತಂಡಕ್ಕೆ ಈ ಋತುವಿನಲ್ಲಿ ಮಳೆಯು ಬೆನ್ನತ್ತಿ ಕಾಡುತ್ತಿದೆ.

ಕರ್ನಾಟಕ ತಂಡವು ಆಡಿದ ಎಲೀಟ್ ಸಿ ಗುಂಪಿನ ಮೊದಲೆರಡೂ ಪಂದ್ಯಗಳಲ್ಲಿ ಮಳೆಯಿಂದಾಗಿ ಫಲಿತಾಂಶ ಹೊರಹೊಮ್ಮಲಿಲ್ಲ. ಅದರಿಂದಾಗಿ ಕೇವಲ ಎರಡು ಅಂಕಗಳು ಮಾತ್ರ ದೊರೆತಿವೆ. ಇದೀಗ ಬಿಹಾರ ವಿರುದ್ಧ ಪಟ್ನಾದಲ್ಲಿ ನಡೆಯುತ್ತಿರುವ ಪಂದ್ಯಕ್ಕೂ ಮಳೆ ಕಾಡಿದೆ. ಎರಡನೇ ದಿನದಾಟವು ಒಂದೂ ಎಸೆತ ಕಾಣಲಿಲ್ಲ.

ಭಾನುವಾರ ಬೆಳಗಿನ ಜಾವ ಸುರಿದ ಮಳೆಯಿಂದಾಗಿ ಮೈದಾನ ತೇವವಾಗಿತ್ತು. ಬೆಳಿಗ್ಗೆ 9.30ಕ್ಕೆ ಸೂರ್ಯ ಬೆಳಗತೊಡಗಿದಾಗ, ಕ್ರೀಡಾಂಗಣ ಸಿಬ್ಬಂದಿಯು ಆಟದಂಕಣ ಸಿದ್ಧಗೊಳಿಸಲು ಬಹಳಷ್ಟು ಶ್ರಮಪಟ್ಟರು. ಆದರೂ ಇಡೀ ದಿನ ಆಟ ಆರಂಭ ಮಾಡಲಾಗಲಿಲ್ಲ.

ಅಂಪೈರ್‌ಗಳಾದ ನಿತಿನ್ ಪಂಡಿತ್ ಮತ್ತು ಟೋನಿ ಎಮಾಟಿ ಅವರು ಹಲವು ಬಾರಿ ಪಿಚ್ ಮತ್ತು ಮೈದಾನದ ಪರಿಶೀಲನೆ ನಡೆಸಿದರು.

ಮೊದಲ ದಿನ ಸಾಂಗವಾಗಿ ಆಟ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬಿಹಾರ ತಂಡವನ್ನು ಕರ್ನಾಟಕವು 143 ರನ್‌ಗಳಿಗೆ ಆಲೌಟ್ ಮಾಡಿತ್ತು. ಮಯಂಕ್ ಅಗರವಾಲ್ ಪಡೆಯು ದಿನದಾಟದ ಕೊನೆಗೆ 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 16 ರನ್ ಗಳಿಸಿತ್ತು.

‘ಬೆಳಗಿನ ಜಾವ 3 ರಿಂದ 6ರವರೆಗೆ ಮಳೆಯಾಗಿದೆ. ನಾವು ಕ್ರೀಡಾಂಗಣಕ್ಕೆ ಬಂದ ನಂತರ ಮಳೆಯಾಗಿರಲಿಲ್ಲ. ಬಿಸಿಲು ಕೂಡ ಇತ್ತು. ಆದರೆ ಪಿಚ್‌ಗಳಿಗೆ ಹೊದಿಕೆಗಳನ್ನು ಹಾಕಿ ನಿರ್ವಹಿಸುವಲ್ಲಿ ವಿಫಲವಾಗಿರಬಹುದು’ ಎಂದು ಕರ್ನಾಟಕ ಮುಖ್ಯ ಕೋಚ್ ಯರೇಗೌಡ ಹೇಳಿದರು.

ಉಳಿದಿರುವ ಇನ್ನೆರಡು ದಿನಗಳಲ್ಲಿ ಮಳೆಯಿಲ್ಲ ದಿದ್ದರೆ ಆಡಲು ಅವಕಾಶ ಸಿಕ್ಕರೆ ತಂಡವು ಉತ್ತಮ ಮುನ್ನಡೆ ಗಳಿಸಿ, ಗೆಲುವಿಗಾಗಿ ಪ್ರಯತ್ನಿಸುವ ಛಲದಲ್ಲಿದೆ.

ಗಂಭೀರ್ ಪರ ದಿನೇಶ್ ಮಾಂಜ್ರೇಕರ್ ಬ್ಯಾಟಿಂಗ್

ಸೀನಿಯರ್ ಆಟಗಾರರ ವೈಫಲ್ಯ ಕಾರಣ



ದಿನೇಶ್



ಸಂಜಯ್

ನವದೆಹಲಿ (ಪಿಟಿಐ): ನ್ಯೂಜಿಲೆಂಡ್ ತಂಡದ ಎದುರು ಭಾರತ ತಂಡವು ಸರಣಿ ಸೋತಿರುವ ಹೊಣೆಯನ್ನು ಅನುಭವಿ ಆಟಗಾರರೇ ತೆಗೆದುಕೊಳ್ಳಬೇಕು ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ ಎಂದು ಮಾಜಿ ಕ್ರಿಕೆಟಿಗರಾದ ದಿನೇಶ್ ಕಾರ್ತಿಕ್ ಮತ್ತು ಸಂಜಯ್ ಮಾಂಜ್ರೇಕರ್ ಅಭಿಪ್ರಾಯಪಟ್ಟಿದ್ದಾರೆ.

ಪುಣೆಯಲ್ಲಿ ಶನಿವಾರ ಮುಕ್ತಾಯವಾದ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು 113 ರನ್‌ಗಳಿಂದ ಸೋತಿತು. ಮೂರು ಪಂದ್ಯಗಳ ಸರಣಿಯಲ್ಲಿ ನ್ಯೂಜಿಲೆಂಡ್ ತಂಡವು 2–0ಯಿಂದ ಮುನ್ನಡೆ ಪಡೆಯಿತು. ಇದರೊಂದಿಗೆ ತವರಿನಂಗಳದಲ್ಲಿ ಸತತ 18 ಟೆಸ್ಟ್ ಸರಣಿಗಳನ್ನು ಗೆದ್ದಿದ್ದ ಭಾರತದ ಅಜೇಯ ಓಟಕ್ಕೂ ತಡೆ ಬಿದ್ದಿತು.

ಎರಡೂ ಪಂದ್ಯಗಳಲ್ಲಿ ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಈ ಸರಣಿಯ ಎರಡೂ ಪಂದ್ಯಗಳಲ್ಲಿ ರನ್ ಗಳಿಸಲು ಪರದಾಡಿದ್ದರು. ಅವರು ಉತ್ತಮ ಲಯದಲ್ಲಿ ಇಲ್ಲ. ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರೂ ನಿರೀಕ್ಷಿತ ಪರಿಣಾಮ ಬೀರಿಲ್ಲ.

‘ಸೀನಿಯರ್ ಆಟಗಾರರು ತಾವು ಮಾಡಿರುವ ಸಾಧನೆ ಏನು ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಈ ಹೊಣೆಯಿಂದ ಅವರು ನುಣುಚಿಕೊಳ್ಳಲು ಸಾಧ್ಯವಿಲ್ಲ. ತಂಡ ಗೆದ್ದಾಗ ಅಭಿಮಾನಿಗಳು ಅಪಾರವಾಗಿ ಸಂಭ್ರಮಿಸುತ್ತಾರೆ. ಆಗ ನೀವು ಕೂಡ ಸಡಗರಪಡುತ್ತೀರಿ. ಸೋತಾಗ ಅಭಿಮಾನಿಗಳು ಟೀಕಿಸುತ್ತಾರೆ. ಅವುಗಳನ್ನು ಎದುರಿಸುವ ಧೈರ್ಯವನ್ನು ಸೀನಿಯರ್ಸ್ ತೋರಿಸಬೇಕು. ಆದ್ದರಿಂದ ಸೀನಿಯರ್ ಆಟಗಾರರೇ ಸೋಲಿನ ಹೊಣೆ ತೆಗೆದುಕೊಳ್ಳಬೇಕು’ ಎಂದು ‘ಕ್ರಿಕ್‌ಬಜ್’ ಕಾರ್ಯಕ್ರಮದಲ್ಲಿ ಅವರು ಹೇಳಿದ್ದಾರೆ. ಮುಖ್ಯ ಕೋಚ್ ಗಂಭೀರ್ ಅವರ ಬಗ್ಗೆ ಟೀಕೆಗಳು ಬಹಳಷ್ಟು ಕೇಳಿಬರುತ್ತಿವೆ.

‘ಈ ಸೋಲಿನಲ್ಲಿ ಗೌತಮ್ ಗಂಭೀರ್ ಅವರ ಪಾತ್ರ ತೀರಾ ಚಿಕ್ಕದು. ಆದರೆ ವಾಷಿಂಗ್ಟನ್ ಸುಂದರ್ ಅವರನ್ನು ಅಂತಿಮ 11ರಲ್ಲಿ ಆಯ್ಕೆ ಮಾಡಿ ಕಣಕ್ಕಿಳಿಸಿದ ಅವರ ಕ್ರಮವನ್ನು ಶ್ಲಾಘಿಸಬೇಕು. ವಾಷಿಂಗ್ಟನ್ ಉತ್ತಮವಾಗಿ ಬೌಲಿಂಗ್ ಮಾಡಿದರು’ ಎಂದು ಮಾಂಜ್ರೇಕರ್ ಅವರು ‘ಇಎಸ್‌ಪಿಎನ್‌ಕ್ರಿಕ್‌ಇನ್ಫೋ’ಗೆ ಹೇಳಿಕೆ ನೀಡಿದ್ದಾರೆ.

‘ನಾಲ್ವರು ಸ್ಪಿನ್ನರ್‌ಗಳನ್ನು ಆಡಿಸಿದ್ದರೆ ಸೂಕ್ತವಾಗುತ್ತಿತ್ತು. ಆದರೂ ಗೌತಮ್ ಅವರ ಮೇಲೆ ಸೋಲಿನ ಹೊಣೆ ಹೊರಿಸುವುದು ತಪ್ಪು. ತಂಡದ ಆಟಗಾರರ ಪ್ರದರ್ಶನದ ಮುಂದೆ ಕೋಚ್ ಪ್ರಭಾವ ಕಡಿಮೆ ಇರುತ್ತದೆ’ ಎಂದರು.

‘ಸರ್ಫರಾಜ್ ಖಾನ್ ಅವರಿಗಿಂತ ಮೊದಲು ವಾಷಿಂಗ್ಟನ್ ಸುಂದರ್ ಅವರನ್ನು ಬ್ಯಾಟಿಂಗ್ ಕಳಿಸಿದ್ದು ಯಾಕೆ? ಅವರು ಎಡಗೈ ಬ್ಯಾಟರ್ ಎಂಬ ಕಾರಣಕ್ಕಾಗಿಯೇ? ಇಂತಹ ಯೋಚನೆಯೇ ವಿಚಿತ್ರ. ಈ ತರಹ ಆಗಬಾರದು. ನಾಯಕ ರೋಹಿತ್ ಶರ್ಮಾ ಈ ವಿಷಯದಲ್ಲಿ ಜಾಗರೂಕರಾಗಬೇಕು. ಟಿ20 ಮಾದರಿಯ ಯೋಚನಾ ಲಹರಿಯನ್ನು ಟೆಸ್ಟ್‌ನಲ್ಲಿ ತರುವುದು ಸರಿಯಲ್ಲ. ಬ್ಯಾಟರ್‌ಗಳ ಸಾಮರ್ಥ್ಯದ ಆಧಾರದಲ್ಲಿ ಕ್ರಮಾಂಕ ನಿರ್ಧರಿಸಬೇಕು. ಕೇವಲ ಬಲಗೈ ಮತ್ತು ಎಡಗೈ ಸಂಯೋಜನೆಯನ್ನು ನೋಡಬಾರದು’ ಎಂದು ಮಾಂಜ್ರೇಕರ್ ಹೇಳಿದರು.

ಅಫ್ಗನ್‌ಗೆ ಎಮರ್ಜಿಂಗ್ ಏಷ್ಯಾ ಕಪ್

ಮಸ್ಕತ್ (ಪಿಟಿಐ): ಅಫ್ಗಾನಿಸ್ತಾನ ಎ ತಂಡವು ಭಾನುವಾರ ಎಸಿಸಿ ಎಮರ್ಜಿಂಗ್ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಶ್ರೀಲಂಕಾ ಎ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಶ್ರೀಲಂಕಾ 15 ರನ್‌ಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಸಹನ್ ಅರಚ್ಚಿಗೆ (ಔಟಾಗದೇ 64; 47ಎ) ಅವರ ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 133 ರನ್ ಗಳಿಸಿತು. ಸಾಧಾರಣ ಗುರಿ ಬೆನ್ನತ್ತಿದ ಅಫ್ಗನ್ ತಂಡವು ಸೇದಿಕುಲ್ಲಾ ಅಟಲ್ (ಔಟಾಗದೇ 55;55ಎ) ಬ್ಯಾಟಿಂಗ್ ನೆರವಿನಿಂದ 11 ಎಸೆತ ಬಾಕಿ ಇರುವಂತೆ ಗೆಲುವು ಸಾಧಿಸಿತು. ಭಾರತ ಎ ತಂಡವು ಸೆಮಿಫೈನಲ್‌ನಲ್ಲಿ ಅಫ್ಗಾನಿಸ್ತಾನ ತಂಡಕ್ಕೆ ಮಣಿದಿತ್ತು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ ಎ: 20 ಓವರ್‌ಗಳಲ್ಲಿ 7ಕ್ಕೆ 133 (ಸಹನ್ ಅರಚ್ಚಿಗೆ ಔಟಾಗದೇ 64, ನಿಮೇಶ್ ವಿಮುಕ್ತಿ 23; ಬಿಲಾಲ್ ಸಾಮಿ 22ಕ್ಕೆ 3, ಎ.ಎಂ. ಗಜನ್ಫರ್ 14ಕ್ಕೆ 2). ಅಫ್ಗಾನಿಸ್ತಾನ: 18.1 ಓವರ್‌ಗಳಲ್ಲಿ 3ಕ್ಕೆ 134 (ಸೇದಿಕುಲ್ಲಾ ಅಟಲ್ ಔಟಾಗದೇ 55, ಕರೀಂ ಜನತ್ 33, ದರ್ವಿಶ್ ರಸೂಲಿ 24). **ಫಲಿತಾಂಶ:** ಅಫ್ಗಾನಿಸ್ತಾನ ತಂಡಕ್ಕೆ 7 ವಿಕೆಟ್ ಜಯ. ಪಂದ್ಯದ ಆಟಗಾರ: ಎ.ಎಂ. ಗಜನ್ಫರ್



ಜೈಪುರ ಪಿಂಕ್ ಪ್ಯಾಂಥರ್ಸ್ ಹಾಗೂ ತಮಿಳ್ ತಲೈವಾಸ್ ತಂಡಗಳ ಹಣಾಹಣಿ

ಟೈ ಪಂದ್ಯದಲ್ಲಿ ತಲೈವಾಸ್–ಜೈಪುರ


ಹೈದರಾಬಾದ್: ತೀವ್ರ ಕುತೂಹಲ ಕೆರಳಿಸಿದ್ದ ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ತಮಿಳ್ ತಲೈವಾಸ್ ತಂಡಗಳ ನಡುವಣ ಪಂದ್ಯವು ಟೈ ಆಯಿತು.

ಇಲ್ಲಿನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯವು 30–30ರಿಂದ ಸಮಬಲಗೊಂಡಿತು.

ರೈಡರ್‌ಗಳಾದ ಅರ್ಜುನ್ ದೇಶ್ವಾಲ್ (7ಅಂಕ) ಮತ್ತು ವಿಕಾಶ್ ಕಂಡೋಲಾ (6 ಅಂಕ) ಅವರ ಆಟದ ಬಲದಿಂದ ಜೈಪುರ ಪಂದ್ಯ ಮುಕ್ತಾಯಕ್ಕೆ ಎರಡೂವರೆ ನಿಮಿಷಗಳು ಬಾಕಿ ಇರುವಾಗ 29-26ರಲ್ಲಿ ಮುನ್ನಡೆಯಲ್ಲಿತ್ತು. ಆದರೆ ಎದುರಾಳಿ ತಂಡದ ಸಚಿನ್ (11 ಅಂಕ) ಅವರ ಚುರುಕಾದ ಆಟದಿಂದಾಗಿ ತಲೈವಾಸ್ ಸೋಲಿನಿಂದ ಪಾರಾಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಯುಪಿ ಯೋಧಾಸ್ ತಂಡವು 35–29ರಿಂದ ಗುಜರಾಜ್ ಜೈಂಟ್ಸ್ ತಂಡವನ್ನು ಮಣಿಸಿತು.

ಅಭಿಮಾನಿಗಳ ಕ್ಷಮೆ ಕೋರಿದ ಮೊಹಮ್ಮದ್ ಶಮಿ



ಮೊಹಮ್ಮದ್ ಶಮಿ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಗಾಯದ ಸಮಸ್ಯೆಯಿಂದಾಗಿ ಸ್ಥಾನ ಪಡೆಯುವಲ್ಲಿ ವಿಫಲರಾದ ಬೌಲರ್ ಮೊಹಮ್ಮದ್ ಶಮಿ ಅವರು ಕ್ರಿಕೆಟ್ ಅಭಿಮಾನಿಗಳ ಕ್ಷಮೆ ಕೋರಿದ್ದಾರೆ.

ಶಮಿ ಅವರು ಕಾಲಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅದರ ನಂತರ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಪುನಶ್ಚೇತನ ಆರೈಕೆ ಕೂಡ ಪಡೆದಿದ್ದರು. ಸಂಪೂರ್ಣ ಅವಧಿ ಮುಗಿಸಿದ್ದರು. ಆದರೆ ಅವರ ಮೊಣಕಾಲಿನಲ್ಲಿ ಊತ ಕಂಡುಬಂದಿತ್ತು. ಆದರೂ ಶಮಿ ಅವರು ಈಚೆಗೆ ತಾವು ನೋವು ಮುಕ್ತರಾಗಿರುವುದಾಗಿ ಹೇಳಿದ್ದರು.

34 ವರ್ಷದ ಶಮಿ ತಾವು ಜಿಮ್ನಾಷಿಯಂನಲ್ಲಿ ತಾಲೀಮು ಮಾಡುತ್ತಿರುವ ವಿಡಿಯೊವನ್ನು ಇನ್ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾರೆ.

‘ಸಂಪೂರ್ಣ ಶ್ರದ್ಧೆಯಿಂದ ತಾಲೀಮು ನಡೆಸುತ್ತಿದ್ದೇನೆ. ಬೌಲಿಂಗ್ ಫಿಟ್‌ನೆಸ್ ಮರಳಿ ಪಡೆಯಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿರುವೆ. ದೇಶಿ ಕ್ರಿಕೆಟ್‌ನಲ್ಲಿ (ರೆಡ್ ಬಾಲ್) ಆಡಲು ಪೂರ್ಣ ಸಿದ್ಧತೆ ನಡೆಸಿದ್ದೇನೆ. ಎಲ್ಲ ಕ್ರಿಕೆಟ್ ಪ್ರೇಮಿಗಳಲ್ಲಿ ಮತ್ತು ಬಿಸಿಸಿಐಗೆ ಕ್ಷಮೆಯಾಚಿಸುತ್ತೇನೆ. ಆದಷ್ಟು ಬೇಗ ಕಣಕ್ಕಿಳಿಯುತ್ತೇನೆ’ ಎಂದು ಶಮಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಏಷ್ಯನ್ ನೆಟ್‌ಬಾಲ್: ಸಿಂಗಪುರಕ್ಕೆ ಪ್ರಶಸ್ತಿ

ಬೆಂಗಳೂರು: ಸಿಂಗಪುರ ತಂಡವು ಭಾನುವಾರ ಮುಕ್ತಾಯಗೊಂಡ 13ನೇ ಏಷ್ಯನ್ ನೆಟ್‌ಬಾಲ್ ಮಹಿಳೆಯರ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಸಿಂಗಪು 67–64ರಿಂದ ಶ್ರೀಲಂಕಾ ತಂಡವನ್ನು ಮಣಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳ ಸ್ಕೋರ್ 52–52ರಿಂದ ಸಮಬಲಗೊಂಡಿತ್ತು. ನಂತರ ಹೆಚ್ಚುವರಿ ಸಮಯದಲ್ಲಿ ಸಿಂಗಪುರ ಪ್ರಾಬಲ್ಯ ಮೆರೆಯಿತು.

ಮಲೇಷ್ಯಾ ತಂಡವು 67–48ರಿಂದ ಹಾಂಗ್‌ಕಾಂಗ್ ತಂಡವನ್ನು ಮಣಿಸಿ ಮೂರನೇ ಸ್ಥಾನ ಪಡೆಯಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದರಾಜ್, ಏಷ್ಯಾ ನೆಟ್‌ಬಾಲ್ ಅಧ್ಯಕ್ಷೆ ವಿಜಯಲಕ್ಷ್ಮಿ, ಸಿಇಒ ಸೈರಸ್, ಭಾರತ ನೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಸುಮನ್ ಕೌಶಿಕ್ ಇದ್ದರು.

ಮಣಿಕಾಗೆ ಸೋಲು

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರು ಫ್ರಾನ್ಸ್‌ನ ಮಾಂಟ್ ಪೆಲೀರ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಚಾಂಪಿಯನ್ಸ್ ಮಹಿಳೆಯರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು.

ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತದ 29 ವರ್ಷ ವಯಸ್ಸಿನ ಮಣಿಕಾ 3–0 (8-11, 8-11, 10-12) ನೇರ ಗೇಮ್‌ಗಳಿಂದ ಚೀನಾದ ಕಿಯಾನ್ ತಿಯಾನಿ ಅವರಿಗೆ ಶರಣಾದರು.

ವಿಶ್ವದ 30ನೇ ಕ್ರಮಾಂಕದ ಮಣಿಕಾ, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ 14ನೇ ಕ್ರಮಾಂಕದ ರೊಮೇನಿಯಾದ ಬರ್ನಾಡೆಟ್ ಸ್ಜೋಕ್ಸ್‌ಗೆ ಆಘಾತ ನೀಡಿ ಡಬ್ಲ್ಯುಟಿಟಿ ಚಾಂಪಿಯನ್‌ಷಿಪ್‌ನಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರವಾಗಿದ್ದರು.

ಥಾಯ್ಲೆಂಡ್‌ಗೆ ಮಣಿದ ಭಾರತ

ಚೊನ್ಬುರಿ (ಥಾಯ್ಲೆಂಡ್), (ಪಿಟಿಐ): ಭಾರತ ತಂಡ, ಎಎಫ್‌ಸಿ 17 ವರ್ಷದೊಳಗಿನವರ ಏಷ್ಯನ್ ಕಪ್ 2025ರ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ಸ್ಫೂರ್ತಿಯುತ ಹೋರಾಟ ಪ್ರದರ್ಶಿಸಿದರೂ 2–3 ಗೋಲುಗಳಿಂದ ಆತಿಥೇಯ ಥಾಯ್ಲೆಂಡ್‌ಗೆ ಮಣಿಯಬೇಕಾಯಿತು.

ಭಾರತ, ಮುಂದಿನ ಸುತ್ತಿಗೆ ತಲುಪುವ ಸಾಧ್ಯತೆಯು, ಗುಂಪಿನ ಇತರ ಪಂದ್ಯಗಳ ಫಲಿತಾಂಶವನ್ನು ಅವಲಂಬಿಸಿದೆ.

ಮೊದಲ ಐದರಲ್ಲಿ ಸ್ಥಾನ ಪಡೆದು, ಮುಂದಿನ ಸುತ್ತಿಗೆ ತಲುಪಲು ಭಾರತ ಡ್ರಾ ಮಾಡಿದರೆ ಸಾಕಿತ್ತು.

ಹಾಫ್ ಮ್ಯಾರಥಾನ್: ಕೆಜೆಲ್ಚಾ ವಿಶ್ವದಾಖಲೆ

ವೆಲೆನ್ಸಿಯಾ (ಸ್ಪೇನ್), (ಎಪಿ): ಇಥಿಯೋಪಿಯಾದ ಓಟಗಾರ ಯೋಮಿಫ್ ಕೆಜೆಲ್ಚಾ ಅವರು ಭಾನುವಾರ ಇಲ್ಲಿನ ನಡೆದ ಪುರುಷರ ಹಾಫ್ ಮ್ಯಾರಥಾನ್ ವಿಶ್ವದಾಖಲೆ ನಿರ್ಮಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನ (10 ಸಾವಿರ ಮೀ) ಬೆಳ್ಳಿ ಪದಕ ವಿಜೇತರಾಗಿರುವ 27 ವರ್ಷ ವಯಸ್ಸಿನ ಕೆಜೆಲ್ಚಾ ಅವರು 57 ನಿಮಿಷ 30 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಈ ಮೂಲಕ 2021ರಲ್ಲಿ ಪೋರ್ಚುಗಲ್‌ನ ಲಿಸ್ಬನ್‌ನಲ್ಲಿ ಉಗಾಂಡಾದ ಜಾಕೋಬ್ ಕಿಪ್ಲಿಮೊ (57ನಿ.31ಸೆ) ಅವರ ದಾಖಲೆಯನ್ನು ಒಂದು ಸೆಕೆಂಡ್‌ನಿಂದ ಮುರಿದರು.

ಅಗ್ನಿಪುತ್ರಗೆ ಜಯ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವನ್ನು 2–1 ಗೋಲುಗಳಿಂದ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದದಿನದ ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 1–0ಯಿಂದ ಎಎಸ್‌ಸಿ ಅಂಡ್ ಸೆಂಟರ್ ತಂಡವನ್ನು ಸೋಲಿಸಿತು.

ಟೆಲ್ ಅವೀವ್: ಬಸ್ ತಂಗುದಾಣಕ್ಕೆ ನುಗ್ಗಿದ ಟ್ರಕ್; 35 ಮಂದಿಗೆ ಗಾಯ

ಇಸ್ರೇಲ್ ದಾಳಿಗೆ ಗಾಜಾದಲ್ಲಿ 22 ಸಾವು



ಬೈತ್ ಲಾಹಿಯಾ ಪಟ್ಟಣದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕುಸಿದ ಕಟ್ಟಡದ ಅವಶೇಷಗಳಡಿ ಸಿಲುಕಿದ್ದ ಬಾಲಕನನ್ನು ರಕ್ಷಿಸಲಾಯಿತು ಎಎಫ್‌ಪಿ ಚಿತ್ರ

ಟೆಲ್ ಅವೀವ್ (ಎಪಿ/ಎಎಫ್‌ಪಿ): ಉತ್ತರ ಗಾಜಾದ ಮೇಲೆ ಇಸ್ರೇಲ್ ಸೇನೆ ನಡೆಸಿದ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ 22 ಮಂದಿ ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಉತ್ತರ ಗಾಜಾದ ಬೈತ್ ಲಾಹಿಯಾ ಪಟ್ಟಣದ ಹಲವು ಮನೆಗಳು ಮತ್ತು ಕಟ್ಟಡಗಳನ್ನು ಗುರಿಯಾಗಿಸಿ ಶನಿವಾರ ರಾತ್ರಿ ದಾಳಿ ನಡೆಸಲಾಗಿದೆ. ಮೃತರಲ್ಲಿ 11 ಮಹಿಳೆಯರು ಹಾಗೂ ಇಬ್ಬರು ಮಕ್ಕಳು ಸೇರಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ದಾಳಿಯಲ್ಲಿ 15 ಮಂದಿ ಗಾಯಗೊಂಡಿದ್ದು, ಮೃತರ ಸಂಖ್ಯೆ ಹೆಚ್ಚುವ ಆತಂಕವಿದೆ ಎಂದು ಹೇಳಿದೆ.

‘ಬೈತ್ ಲಾಹಿಯಾದಲ್ಲಿರುವ ಬಂಡುಕೋರರ ಅಡಗುತಾಣ ಗುರಿಯಾಗಿಸಿ ನಿರ್ದಿಷ್ಟ ದಾಳಿ ನಡೆಸಲಾಗಿದೆ’ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಬಸ್ ತಂಗುದಾಣಕ್ಕೆ ನುಗ್ಗಿದ ಟ್ರಕ್: ಟೆಲ್ ಅವೀವ್ ನಗರದ ಬಳಿಯ ಬಸ್ ತಂಗುದಾಣವೊಂದಕ್ಕೆ ವ್ಯಕ್ತಿಯೊಬ್ಬ ಟ್ರಕ್‌ಅನ್ನು ನುಗ್ಗಿಸಿದ ಪರಿಣಾಮ 35 ಮಂದಿ ಗಾಯಗೊಂಡಿದ್ದಾರೆ.

ಇದು ಅಪಘಾತವೇ ಅಥವಾ ಟ್ರಕ್ ಅನ್ನು ಉದ್ದೇಶಪೂರ್ವಕವಾಗಿ ಜನರ ಮೇಲೆ ನುಗ್ಗಿಸಲಾಗಿದೆಯೇ ಎಂಬುದು ಖಚಿತವಾಗಿಲ್ಲ. ಇಸ್ರೇಲ್‌ನ ಇಂಟೆಲಿಜೆನ್ಸ್ ಏಜೆನ್ಸಿ ಮೊಸಾದ್‌ನ ಕೇಂದ್ರ ಕಚೇರಿಯ ಬಳಿ ಈ ಘಟನೆ ನಡೆದಿದೆ.

‘ಅಧಿಕಾರಿಗಳು ಈ ಘಟನೆಯನ್ನು ಭಯೋತ್ಪಾದಕ ದಾಳಿ ಎಂಬುದಾಗಿ ಪರಿಗಣಿಸಿದ್ದಾರೆ’ ಎಂದು ಇಸ್ರೇಲ್ ಪೊಲೀಸ್ ವಕ್ತಾರ ಅಸಿ ಅಹರೊನಿ ಹೇಳಿದ್ದಾರೆ. ದಾಳಿಕೋರನನ್ನು ಗುಂಡಿಟ್ಟು ಕೊಲ್ಲಲಾಗಿದೆ ಎಂದು ತಿಳಿಸಿದ್ದಾರೆ.

ಜನರ ಮೇಲೆ ವಾಹನಗಳನ್ನು ನುಗ್ಗಿಸಿದ ಹಲವು ಘಟನೆಗಳು ಇಸ್ರೇಲ್‌ನಲ್ಲಿ ಈ ಹಿಂದೆ ನಡೆದಿವೆ.

ಇರಾನ್: ಎರಡು ಸೇನಾ ನೆಲೆಗಳಿಗೆ ಹಾನಿ

ದುಬೈ: ಇಸ್ರೇಲ್ ಸೇನೆ ಶನಿವಾರ ನಡೆಸಿದ ದಾಳಿಯಲ್ಲಿ ಇರಾನ್‌ನ ಎರಡು ಸೇನಾ ನೆಲೆಗಳಿಗೆ ಹಾನಿಯಾಗಿರುವುದನ್ನು ಉಪಗ್ರಹ ಚಿತ್ರಗಳು ತೋರಿಸಿವೆ.

ಟೆಹರಾನ್‌ನ ಹೊರವಲಯದಲ್ಲಿರುವ ಪಾರ್ಚಿನ್ ಸೇನಾ ನೆಲೆಯಲ್ಲಿ ಕೆಲವು ಕಟ್ಟಡಗಳು ಧ್ವಂಸಗೊಂಡಿರುವುದನ್ನು ಚಿತ್ರಗಳು ದೃಢಪಡಿಸಿವೆ. ಇರಾನ್ ತನ್ನ ಅಣ್ವಸ್ತ್ರ ಯೋಜನೆಗೆ ಈ ಹಿಂದೆ ಇದೇ ನೆಲೆಯನ್ನು ಬಳಸಿಕೊಂಡಿತ್ತು.

ಖೊಜಿರ್ ಸೇನಾ ನೆಲೆಯೂ ಇಸ್ರೇಲ್ ದಾಳಿಯಿಂದ ಹಾನಿಗೊಳಗಾಗಿದೆ. ಈ ಸೇನಾ ನೆಲೆಯು ಕ್ಷಿಪಣಿ ತಯಾರಿಕಾ ಘಟಕವನ್ನು ಒಳಗೊಂಡಿದೆ ಎನ್ನಲಾಗಿದೆ. ಆದರೆ ಇಸ್ರೇಲ್ ನಡೆಸಿದ ದಾಳಿಯಿಂದ ಆಗಿರುವ ಹಾನಿ ಬಗ್ಗೆ ಇರಾನ್ ಸೇನೆ ಯಾವುದೇ ಹೇಳಿಕೆ ನೀಡಿಲ್ಲ. ‘ವಾಯುದಾಳಿ ತಡೆ ವ್ಯವಸ್ಥೆ’ಯಲ್ಲಿ ಕರ್ತವ್ಯದಲ್ಲಿದ್ದ ನಾಲ್ವರು ಯೋಧರು ಬಲಿಯಾಗಿದ್ದಾರೆ ಎಂದು ಹೇಳಿದೆ.

> **ನಾವು ನಡೆಸಿರುವ ದಾಳಿಯು ಇರಾನ್‌ಗೆ ತೀವ್ರ ಹಾನಿಯನ್ನುಂಟುಮಾಡಿದೆ ಮತ್ತು ಇಸ್ರೇಲ್ ತನ್ನ ಎಲ್ಲಾ ಗುರಿಗಳನ್ನು ಸಾಧಿಸಿದೆ**
> **ಬೆಂಜಮಿನ್ ನೆತನ್ಯಾಹು**
> ಇಸ್ರೇಲ್ ಪ್ರಧಾನಿ

ಶ್ರೀಲಂಕಾ: ಭಾರತದ 12 ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಶ್ರೀಲಂಕಾ ಸಮುದ್ರ ವ್ಯಾಪ್ತಿಯಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಆರೋಪದಲ್ಲಿ ಭಾರತದ 12 ಮೀನುಗಾರರನ್ನು ಇಲ್ಲಿನ ನೌಕಾಪಡೆಯು ಭಾನುವಾರ ಬಂಧಿಸಿದ್ದು, ಮೀನುಗಾರರ ಬೋಟ್‌ಗಳನ್ನು ವಶಕ್ಕೆ ಪಡೆದುಕೊಂಡಿದೆ.

ಇದರೊಂದಿಗೆ ಇದೇ ವರ್ಷದಲ್ಲಿ ಶ್ರೀಲಂಕಾ ನೌಕಾಪಡೆಯು ವಶಕ್ಕೆ ಪಡೆದ ಭಾರತದ ಮೀನುಗಾರರ ಸಂಖ್ಯೆಯು 462ಕ್ಕೆ ತಲುಪಿದೆ.

‘ಶ್ರೀಲಂಕಾದ ಉತ್ತರ ಭಾಗದಲ್ಲಿರುವ ಪಾಯಿಂಟ್ ಪೆದ್ರೊ ಹಾಗೂ ಜಾಫ್ನಾ ನಗರದ ಕರಾವಳಿ ಪ್ರದೇಶಗಳಲ್ಲಿ ಮೀನುಗಾರರನ್ನು ಬಂಧಿಸಿ, ಅವರ ಬೋಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. 12 ಮೀನುಗಾರರನ್ನು ಕಾಂಕೆಸಂತುರೈ ಬಂದರಿಗೆ ಕರೆತರಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲು ಮೆಲಾಡಿ ಫಿಶರಿ ಇನ್‌ಸ್ಪೆಕ್ಟರ್ ವಶಕ್ಕೆ ನೀಡಲಾಗುವುದು’ ಎಂದು ನೌಕಾಪಡೆಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಛತ್ತೀಸಗಢ: ಎನ್‌ಕೌಂಟರ್‌ನಲ್ಲಿ ನಕ್ಸಲ್‌ಗೆ ಗಾಯ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲ್ ರಾಕೇಶ್ ಕುಮಾರ್ ಒಯಂ ಗಾಯಗೊಂಡಿದ್ದಾನೆ.

ರಾಜ್ಯ ಪೊಲೀಸರು, ಜಿಲ್ಲಾ ಮೀಸಲು ಪೊಲೀಸ್ ಪಡೆಯು ಭೈರಮಗಡದ ಪೊಲೀಸ್ ಠಾಣಾ ವ್ಯಾಪ್ತಿಯ ಕುಮ್ಮಾಮೆಟಾ ಗ್ರಾಮದ ಅರಣ್ಯದಲ್ಲಿ ನಕ್ಸಲ್ ತಡೆ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಕಮಾಂಡರ್ ಅನಿಲ್ ಪೂನೆಂ ಸೇರಿದಂತೆ 10ರಿಂದ 12 ಮಂದಿ ನಕ್ಸಲರು ಸ್ಥಳದಲ್ಲಿದ್ದರು.

ಚೀನಾ ಬಳಿ ಮತ್ತೆ ಸಾಲ ಕೇಳಿದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕವಾಗಿ ದಿವಾಳಿಯಾಗಿರುವ ಪಾಕಿಸ್ತಾನ, ಚೀನಾ ಬಳಿ ಹೆಚ್ಚುವರಿ 10,000 ಕೋಟಿ ಯುವಾನ್ (₹11,700 ಕೋಟಿ) ಸಾಲವನ್ನು ಕೋರಿದೆ ಎಂದು ಭಾನುವಾರ ಮಾಧ್ಯಮ ವರದಿಗಳು ತಿಳಿಸಿವೆ.

ಅಮೆರಿಕದಲ್ಲಿ ನಡೆದ ಐಎಂಎಫ್ ಹಾಗೂ ವಿಶ್ವಬ್ಯಾಂಕ್‌ನ ವಾರ್ಷಿಕ ಸಭೆ ವೇಳೆ ಚೀನಾದ ಹಣಕಾಸು ಸಚಿವ ಲಿಯಾವೊ ಮಿನ್ ಅವರನ್ನು ಭೇಟಿಯಾದ ಪಾಕಿಸ್ತಾನದ ಹಣಕಾಸು ಸಚಿವ ಮುಹಮ್ಮದ್ ಔರಂಗಜೇಬ್ ಅವರು ಕರೆನ್ಸಿ ಸ್ವ್ಯಾಪ್ ಒಪ್ಪಂದದ ಅಡಿಯಲ್ಲಿ ಚೀನಾದಿಂದ ತಮ್ಮ ದೇಶಕ್ಕೆ ಸಿಗಬಹುದಾದ ಒಟ್ಟು ಸಾಲ ಸೌಲಭ್ಯವನ್ನು 40 ಶತಕೋಟಿ ಯುವಾನ್‌ಗೆ ಹೆಚ್ಚಿಸುವಂತೆ ವಿನಂತಿಸಿದರು.

ಈಗಾಗಲೇ ಚೀನಾ ₹36,000 ಕೋಟಿ ಸಾಲವನ್ನು ಪಾಕಿಸ್ತಾನಕ್ಕೆ ನೀಡಿದೆ. ಹೀಗಾಗಿ ಈ ಪ್ರಸ್ತಾವಕ್ಕೆ ಚೀನಾ ಒಪ್ಪಿಗೆ ಸೂಚಿಸಿದರೆ ಒಟ್ಟು ಸಾಲದ ನೆರವು ₹47,700 ಕೋಟಿಗೆ ತಲುಪಲಿದೆ ಎಂದು ‘ಎಕ್ಸ್‌ಪ್ರೆಸ್ ಟ್ರಿಬ್ಯೂನ್’ ಪತ್ರಿಕೆ ವರದಿ ಮಾಡಿದೆ.

ಚೀನಾವು ಪಾಕಿಸ್ತಾನಕ್ಕೆ ಈಗಿರುವ ಸಾಲ ಮರುಪಾವತಿಯ ಅವಧಿಯನ್ನು ಇನ್ನೂ ಮೂರು ವರ್ಷಗಳಿಗೆ ವಿಸ್ತರಿಸಿದೆ.

ಮಳೆಗಾಲದ ರುಚಿಕರ ಬಾಡೂಟಗಳು

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 3 Powered by Sri Krishna

ಫ್ರೀಡಂ ಹೆಲ್ದಿ ಅಡುಗೆ ಎಣ್ಣೆ ಪ್ರಸ್ತುತಪಡಿಸುವ ‘ಕರುನಾಡ ಸವಿಯೂಟ ಸೀಸನ್–3’ ಪಾಕ ಪದ್ಧತಿಯಲ್ಲಿ ಈ ವಾರದ ವಿಶೇಷ ‘ದಾಂಡೇಲಿ ಸ್ಟೈಲ್ ಚಿಕನ್ ಕಡಾಯ್ ರೋಸ್ಟ್ ಮತ್ತು ಹುಬ್ಬಳ್ಳಿ ಶೈಲಿ ಗ್ರೀನ್ ಮಟನ್ ಕರಿ’. ಪ್ರಸಿದ್ಧ ಬಾಣಸಿಗ ಆದರ್ಶ್ ತತ್ಪತಿ ಅವರಿಂದ ಮೂಡಿಬರಲಿರುವ ಎರಡು ರುಚಿಕರ ಬಾಡೂಟಗಳ ಪ್ರದರ್ಶನಕ್ಕೆ ಶ್ರೀ ಕೃಷ್ಣ ಹಸುವಿನ ತುಪ್ಪ (ಶ್ರೀ ಕೃಷ್ಣ ಶುದ್ಧ ಹಳ್ಳಿ ತುಪ್ಪ) ಸಹಯೋಗ ನೀಡಲಿದೆ.



ದಾಂಡೇಲಿ ಚಿಕನ್ ಕಡಾಯ್ ರೋಸ್ಟ್

ಬೇಕಾದ ಪದಾರ್ಥಗಳು: ಕೋಳಿ ಮಾಂಸ 1 ಕೆ.ಜಿ., 2 ಮೀಡಿಯಂ ಈರುಳ್ಳಿ (ಕತ್ತರಿಸಿದ), ಎರಡು ಲವಂಗ, ಜಜ್ಜಿದ ಬೆಳ್ಳುಳ್ಳಿ, 1 ಮಧ್ಯಮ ಗಾತ್ರದ ಟೊಮೆಟೊ, 2–3 ಹಸಿಮೆಣಸಿನಕಾಯಿ, ಒಂದು ಚಮಚ ಶುಂಠಿ-ಬೆಳ್ಳುಳ್ಳಿ ಪೇಸ್ಟ್, 1 ಚಮಚ ಜೀರಿಗೆ, 1 ಚಮಚ ದನಿಯಾ, ಅರ್ಧ ಚಮಚ ಅರಿಶಿನ, ಅರ್ಧ ಚಮಚ ಕೆಂಪು ಮೆಣಸಿನ ಪುಡಿ, ಅರ್ಧ ಚಮಚ ಗರಂ ಮಸಾಲ, ರುಚಿಗೆ ತಕ್ಕಷ್ಟು ಉಪ್ಪು, 2 ಚಮಚ ತುಪ್ಪ ಅಥವಾ ಬೆಣ್ಣೆ ಮತ್ತು ಕೊತ್ತಂಬರಿ ಸೊಪ್ಪು.



ಮಾಡುವ ವಿಧಾನ: ಕಡಾಯಿಯಲ್ಲಿ ಬೆಣ್ಣೆ ಅಥವಾ ತುಪ್ಪ ಹಾಕಿ ಬಿಸಿಯಾದ ಮೇಲೆ ಜೀರಿಗೆ ಮತ್ತು ಕೊತ್ತಂಬರಿ ಕಾಳು ಸೇರಿಸಿ ಸ್ವಲ್ಪ ಬಾಡಿಸಿ. ಅದಕ್ಕೆ ಕತ್ತರಿಸಿಟ್ಟ ಈರುಳ್ಳಿ, ಜಜ್ಜಿದ ಬೆಳ್ಳುಳ್ಳಿ ಸೇರಿಸಿ. ಈರುಳ್ಳಿ ಪಾರದರ್ಶಕಕ್ಕೆ ತಿರುಗುವವರೆಗೆ ಹುರಿಯಿರಿ. ನಂತರ ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಮತ್ತೊಂದು ನಿಮಿಷ ಬಾಡಿಸಿ. ಕೋಳಿ ಮಾಂಸದ ತುಂಡುಗಳನ್ನು (ಲೆಗ್, ತೊಡೆ ಮತ್ತು ವಿಂಗ್ಸ್) ಸೇರಿಸಿ ಕಂದು ಬಣ್ಣಕ್ಕೆ ತಿರುಗುವವರೆಗೆ ಬಾಡಿಸಿ. ಸಣ್ಣಗೆ ಹೆಚ್ಚಿಟ್ಟ ಟೊಮೆಟೊ, ಸೀಳು ಮಾಡಿದ ಹಸಿಮೆಣಸಿನಕಾಯಿ, ಅರಿಶಿನ ಹುಡಿ, ಖಾರ ಪುಡಿ, ಗರಂ ಮಸಾಲ, ಬೇಕಾದಷ್ಟು ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಚಿಕನ್ ಪೀಸ್‌ಗಳನ್ನು ಆಗಿಂದಾಗ್ಗೆ ತಿರುವುತ್ತ ಚೆನ್ನಾಗಿ ಬೆಂದು, ಗರಿಗರಿ ಆಗುವವರೆಗೆ ನೋಡಿಕೊಳ್ಳಿ. ಕತ್ತರಿಸಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿ ಅಲಂಕರಿಸಿದರೆ ದಾಂಡೇಲಿ ಸ್ಟೈಲ್ ಚಿಕನ್ ಕಡಾಯ್ ರೋಸ್ಟ್ ರೆಡಿ. ಅನ್ನ, ಜೋಳದ ರೊಟ್ಟಿ ಅಥವಾ ಅಕ್ಕಿ ರೊಟ್ಟಿ ಜೊತೆಗೆ ಸವಿಯಲು ಒಳ್ಳೆ ಕಾಂಬಿನೇಷನ್.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹುಬ್ಬಳ್ಳಿ ಶೈಲಿ ಗ್ರೀನ್ ಮಟನ್ ಕರಿ

ಬೇಕಾದ ಪದಾರ್ಥಗಳು: 1 ಕೆ.ಜಿ. ಮಾಂಸ, ಒಂದು ಕಪ್ ಕೊತ್ತಂಬರಿ ಸೊಪ್ಪು, ಒಂದು ಕಪ್ ಪುದೀನ, ಅರ್ಧ ಕಪ್ ಹಸಿ ಮೆಣಸಿನಕಾಯಿ, ಅರ್ಧ ಕಪ್ ತೆಂಗಿನಕಾಯಿ ಪೇಸ್ಟ್, 2 ಚಮಚ ಶುಂಠಿ– ಬೆಳ್ಳುಳ್ಳಿ ಪೇಸ್ಟ್, 1 ಚಮಚ ಜೀರಿಗೆ, ಒಂದು ಚಮಚ ದನಿಯ, ಅರ್ಧ ಚಮಚ ಅರಿಶಿನ ಪುಡಿ, ಅರ್ಧ ಚಮಚ ಕೆಂಪು ಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, 2 ಚಮಚ ತುಪ್ಪ ಅಥವಾ ಎಣ್ಣೆ ಮತ್ತು ಎರಡು ಚಮಚ ನಿಂಬೆರಸ.



ಮಾಡುವ ವಿಧಾನ: ಕೊತ್ತಂಬರಿ ಸೊಪ್ಪು, ಪುದೀನ, ಹಸಿಮೆಣಸಿನಕಾಯಿ ಮತ್ತು ತೆಂಗಿನಕಾಯಿ ಪೇಸ್ಟ್ ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಪ್ಯಾನ್ ತೆಗೆದುಕೊಂಡು ತುಪ್ಪ ಅಥವಾ ಎಣ್ಣೆ ಹಾಕಿ ಬಿಸಿಯಾದ ಮೇಲೆ ಜೀರಿಗೆ, ದನಿಯಾ ಸೇರಿಸಿ ಸ್ವಲ್ಪ ಹುರಿಯಿರಿ. ನಂತರ ಶುಂಠಿ- ಬೆಳ್ಳುಳ್ಳಿ ಪೇಸ್ಟ್ ಹಾಕಿ ಪರಿಮಳ ಬರುವವರೆಗೆ ಬಾಡಿಸಿ. ಅದರ ಮೇಲೆ ಮಟನ್ ಪೀಸ್‌ಗಳನ್ನು ಹಾಕಿ, ಅರಿಶಿನ ಮತ್ತು ಕೆಂಪು ಮೆಣಸಿನ ಪುಡಿ ಹಾಗೂ ಉಪ್ಪನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ರುಬ್ಬಿಟ್ಟ ಮಸಾಲೆ ಪದಾರ್ಥಗಳ ಪೇಸ್ಟ್ ಹಾಕಿ ಎಲ್ಲವನ್ನೂ ಚೆನ್ನಾಗಿ ಬೆಯಲು ಬಿಡಿ. ಹದವಾಗಿ ಬೆಂದ ನಂತರ ನಿಂಬೆ ರಸ ಹಾಕಿದರೆ, ಉತ್ತರ ಕರ್ನಾಟಕ ಶೈಲಿಯ ಹುಬ್ಬಳ್ಳಿ ವಿಶೇಷ ಮಟನ್ ಸಾರು ತಯಾರು. ಅನ್ನ, ಜೋಳದ ರೊಟ್ಟಿ ಅಥವಾ ಅಕ್ಕಿ ರೊಟ್ಟಿ ಜೊತೆಗೆ ಮಜವಾದ ಬಾಡೂಟ ಇದಾಗಿರುತ್ತದೆ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

LPG Partner Indane | Hygiene Partner EXO | Special Partner KSDA | Associate Sponsors PHILIPS, Preethi, SSP HING, Vencobb | Rice Partner India Gate Basmati Rice | Supported by Sujay Water Saving Irrigation Systems



ರಾಜ್ಯಮಟ್ಟದ ಗಾಲಿಕುರ್ಚಿ ಟೆನಿಸ್ ಟೂರ್ನಿ

ಶೇಖರ್, ಪ್ರತಿಮಾಗೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಖರ್ ವೀರಸ್ವಾಮಿ ಮತ್ತು ಪ್ರತಿಮಾ ಎನ್. ರಾವ್ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯಮಟ್ಟದ ಗಾಲಿಕುರ್ಚಿ ಟೆನಿಸ್ ಟೂರ್ನಿಯಲ್ಲಿ ಡಬಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಕರ್ನಾಟಕ ವೀಲ್‌ಚೇರ್ ಟೆನಿಸ್ ಸಂಸ್ಥೆ (ಕೆಡಬ್ಲ್ಯುಟಿಎ) ಆಶ್ರಯದಲ್ಲಿ ಇಲ್ಲಿನ ಕೆಎಸ್‌ಎಲ್‌ಟಿಎ ಟೆನಿಸ್ ಅಂಗಣದಲ್ಲಿ ನಡೆದ ₹50 ಸಾವಿರ ಬಹುಮಾನ ಮೊತ್ತದ ಟೂರ್ನಿಯಲ್ಲಿ 24 ಮಹಿಳೆಯರು ಮತ್ತು 35 ಪುರುಷರು ಸೇರಿದಂತೆ 59 ಸ್ಪರ್ಧಿಗಳು ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ್ದರು.

ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ಶೇಖರ್ 6–1, 6–0ಯಿಂದ ಬಸವರಾಜ ಕುಂದರಗಿ ಅವರನ್ನು ಮಣಿಸಿದರು. ಡಬಲ್ಸ್ ಫೈನಲ್‌ನಲ್ಲಿ ಶೇಖರ್ ಮತ್ತು ಅನಿಲ್ ಡಿ. ಜೋಡಿಯು 8–2ರಿಂದ ಪಾಂಡುರಂಗಸ್ವಾಮಿ ಮತ್ತು ಬಸವರಾಜ ಕುಂದರಗಿ ಅವರನ್ನು ಸೋಲಿಸಿತು.

ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಪ್ರತಿಮಾ 6–2, 6–1ರಿಂದ ಶಿಲ್ಪಾ ಕೆ. ಅವರನ್ನು ಪರಾಭವಗೊಳಿಸಿದರು. ಡಬಲ್ಸ್‌ನ ಪ್ರಶಸ್ತಿ ಸುತ್ತಿನಲ್ಲಿ ಪ್ರತಿಮಾ ಅವರು ಮುಬೀನಾ ಕೆ. ಜೊತೆಗೂಡಿ 8–0ಯಿಂದ ಶಿಲ್ಪಾ ಮತ್ತು ಕಮಲಾಕ್ಷಿ ಎಸ್.ಡಿ. ಅವರನ್ನು ಮಣಿಸಿದರು.



ಟ್ರೋಫಿಯೊಂದಿಗೆ ಪ್ರತಿಮಾ ಎನ್. ರಾವ್ (ಮಹಿಳೆಯರ ಸಿಂಗಲ್ಸ್) ಮತ್ತು ಶೇಖರ್ ವೀರಸ್ವಾಮಿ (ಪುರುಷರ ಸಿಂಗಲ್ಸ್) ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಇಲ್ಲಿನ ಕೆಎಸ್‌ಎಲ್‌ಟಿಎಯಲ್ಲಿ ಬಾಲ್ಬಾಯ್ ಆಗಿದ್ದ ಶೇಖರ್ ವೀರಸ್ವಾಮಿ ಅಪಘಾತದಲ್ಲಿ ಗಾಯಗೊಂಡು ಅಂಗವಿಕಲರಾದರು. ನಂತರ ಕೆಡಬ್ಲ್ಯುಟಿಎ ಸದಸ್ಯರ ಪ್ರೋತ್ಸಾಹದಿಂದ ಗಾಲಿಕುರ್ಚಿ ಟೆನಿಸ್‌ನಲ್ಲಿ ತೊಡಗಿಕೊಂಡರು. ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 246ನೇ ಸ್ಥಾನ ಗಳಿಸಿದ್ದಾರೆ.

ಕಾರ್ಲೆ ಇನ್ಫ್ರಾ ಪ್ರಾಯೋಜಕತ್ವ ಮತ್ತು ಬಾಲ್ಡೋಟಾ ಗ್ರೂಪ್ ಸಹ ಪ್ರಾಯೋಜಕತ್ವದ ಈ ಟೂರ್ನಿಯು ವಿಶೇಷ ಸಾಮರ್ಥ್ಯದ ಟೆನಿಸ್ ಪ್ರತಿಭೆಗಳಿಗೆ ಸಮಾನ ಆಟದ ಅಂಗಣದಲ್ಲಿ ಸ್ಪರ್ಧಿಸಲು ವೇದಿಕೆ ಒದಗಿಸಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 117ನೇ ಸ್ಥಾನದಲ್ಲಿರುವ ಶಿಲ್ಪಾ ಕೆ.ಪಿ, ದೇಶದ ಎರಡನೇ ಅಗ್ರಮಾನ್ಯ ಆಟಗಾರ್ತಿ ಪ್ರತಿಮಾ ರಾವ್, ಮಧು, ಅನಿಲ್ ಡಿ.ಅಲ್ಮೇಡ, ದೇವೇಗೌಡ ಅಂಜಿನಪ್ಪ ಮೊದಲಾದವರು ಸೆಲೆಬ್ರಿಟಿ ಸ್ಪರ್ಧಿಗಳಾಗಿ ಟೂರ್ನಿಯಲ್ಲಿ ಭಾಗವಹಿಸಿದ್ದರು.

ಬಹುಮಾನ ವಿತರಣಾ ಸಮಾರಂಭದಲ್ಲಿ ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಮಹೇಶ್ವರ ರಾವ್, ಜಂಟಿ ಕಾರ್ಯದರ್ಶಿ ಸುನಿಲ್ ಯಜಮಾನ್, ಕೆಡಬ್ಲ್ಯುಟಿಎ ಅಧ್ಯಕ್ಷ ಬಿ.ಆರ್. ಚಂದ್ರಕಾಂತ್, ಉಪಾಧ್ಯಕ್ಷ ಸೀತಾರಾಮ್ ಟಿ, ಜಂಟಿ ಕಾರ್ಯದರ್ಶಿ ಗೋಪಿನಾಥ್ ಕೆ, ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ ಪ್ರತಿನಿಧಿ ಶ್ರೀಧರ್, ಕಾರ್ಲೆ ಇನ್ಫ್ರಾ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ಕಾರ್ಲೆ ಇದ್ದರು.

ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಚೆಸ್ ತರಬೇತಿಗೆ ಯೋಜನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ದುಬಾರಿ ತರಬೇತಿ ವೆಚ್ಚ, ಪ್ರವೇಶ ಶುಲ್ಕ ಮೊದಲಾದ ಕಾರಣಗಳಿಂದ ಚೆಸ್ ಕಲಿಕೆಯಿಂದ ಅವಕಾಶವಂಚಿತರಾದ ಸರ್ಕಾರಿ ಶಾಲೆಗಳ ಮಕ್ಕಳನ್ನು ಗುರುತಿಸಿ ಉಚಿತ ತರಬೇತಿ ನೀಡುವ ಯೋಜನೆಯೊಂದನ್ನು ವಿಲಿಯಂ ಡಿ ಪಿಚ್ಚಮುತ್ತು ಇನ್‌ಕ್ಲೂಸಿವ್ ಚೆಸ್ ಸಮಿತಿಯು ಜಾರಿಗೊಳಿಸುತ್ತಿದೆ.

ಎರಿನ್ ಫೌಂಡೇಷನ್ ಸಹಯೋಗದೊಂದಿಗೆ ಈ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮೊದಲ ಹಂತವಾಗಿ ಚೆಸ್ ಪ್ರತಿಭೆಗಳನ್ನು ಆಯ್ಕೆ ಮಾಡಲಾಗುತ್ತಿದೆ. ಅನೇಕಲ್ ವಲಯದಲ್ಲಿ ಈಗಾಗಲೇ ಆರು ವಿದ್ಯಾರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗಿದೆ. ಅವರಿಗೆ ತರಬೇತಿ ಜೊತೆಗೆ ಟೂರ್ನಿಗಳಲ್ಲಿ ಭಾಗವಹಿಸಲು ಪ್ರವೇಶ ಶುಲ್ಕವನ್ನು ಸಹ ಸಮಿತಿಯಿಂದ ನೀಡಲಾಗುತ್ತದೆ ಎಂದು ಸಮಿತಿಯ ಅಧ್ಯಕ್ಷ ಡೇವಿಡ್ ಪಿಚ್ಚಮುತ್ತು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅನೇಕಲ್ ವ್ಯಾಪ್ತಿಯಲ್ಲಿ ಒಳ್ಳೆಯ ಸ್ಪಂದನೆ ವ್ಯಕ್ತವಾಗಿದೆ. ನಗರ ವ್ಯಾಪ್ತಿಯಲ್ಲಿ ಇದೇ ರೀತಿ ಇನ್ನೂ 5–6 ಕಡೆ ಆಯ್ಕೆ ಟ್ರಯಲ್ಸ್ ನಡೆಸಲಾಗುವುದು. ಅನೇಕಲ್‌ನ ಪರ್ಲ್ ವ್ಯಾಲಿಯಲ್ಲಿ ವಸತಿ ಸಹಿತ ತರಬೇತಿಗೆ ವ್ಯವಸ್ಥೆ ಮಾಡಲಾಗಿದೆ' ಎಂದು ಸಮಿತಿ ಗೌರವ ಕಾರ್ಯದರ್ಶಿ ಸಾಯಿ ಪ್ರಕಾಶ್ ತಿಳಿಸಿದರು.

ವಿವಿಧ ವಲಯಗಳಿಂದ ಆಯ್ಕೆಯಾದ (ಎಂಟರಿಂದ ಹತ್ತನೇ ತರಗತಿವರೆಗಿನ) 50 ಮಕ್ಕಳಿಗೆ ನವೆಂಬರ್ 23ರಂದು ಅಂತಿಮ ಟ್ರಯಲ್ಸ್ ನೃಪತುಂಗ ರಸ್ತೆಯ ವೈಎಂಸಿಎನಲ್ಲಿ ನಡೆಯಲಿದೆ. ಅಲ್ಲಿ ಆಯ್ಕೆಯಾದ ಹತ್ತು ಮಕ್ಕಳಿಗೆ ಉನ್ನತ ತರಬೇತಿಗೆ ವ್ಯವಸ್ಥೆ ಮಾಡಲಾಗುವುದು ಎಂದರು.

ಸಮಿತಿ ಗೌರವ ಕಾರ್ಯದರ್ಶಿ ಪ್ರಸನ್ನ ಪಿಚ್ಚಮುತ್ತು, ತರಬೇತುದಾರ ಡೇವಿಡ್ ಪಡುವಾ ಅವರೂ ಮಾತನಾಡಿದರು.



ಸ್ಯಾಫ್ ಮಹಿಳಾ ಫುಟ್‌ಬಾಲ್: ನೇಪಾಳಕ್ಕೆ ಮಣಿದ ಭಾರತ

ಕಠ್ಮಂಡು (ಪಿಟಿಐ): ಐದು ಬಾರಿಯ ಚಾಂಪಿಯನ್ ಭಾರತ ತಂಡವು ಭಾನುವಾರ ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ನೇಪಾಳ ವಿರುದ್ಧ ಪರಾಭವಗೊಂಡಿತು. ಇದಕ್ಕೂ ಮೊದಲು ರೆಫರಿ ನಿರ್ಧಾರವನ್ನು ವಿರೋಧಿಸಿ ಆತಿಥೇಯ ತಂಡವು ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟಿಸಿದ ಘಟನೆಯೂ ನಡೆಯಿತು.

ಆಶಾಲತಾ ದೇವಿ ನಾಯಕತ್ವದ ಭಾರತ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 2–4ರಿಂದ ನೇಪಾಳಕ್ಕೆ ಮಣಿಯಿತು. ಫೈನಲ್‌ನಲ್ಲಿ ಆತಿಥೇಯ ತಂಡವು ಬಾಂಗ್ಲಾದೇಶವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ 7–1ರಿಂದ ಭೂತಾನ್ ತಂಡವನ್ನು ಮಣಿಸಿತು.

ಇಲ್ಲಿನ ದಶರಥ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ನಿಗದಿತ ಅವಧಿಯಲ್ಲಿ 1–1 ಗೋಲುಗಳಿಂದ ಸಮಬಲಗೊಂಡಿತ್ತು. 62ನೇ ನಿಮಿಷದಲ್ಲಿ ಸಂಗೀತಾ ಬಾಸ್ಫೋರ್ ಅವರು ಅದ್ಭುತ ಕಾಲ್ಚಳಕದ ಮೂಲಕ ಭಾರತಕ್ಕೆ ಮುನ್ನಡೆ ಒದಗಿಸಿದರು.

ಅದರ ಬೆನ್ನಲ್ಲೇ ನೇಪಾಳ ಗೋಲು ಗಳಿಸಿತು. ಆದರೆ, ರೆಫರಿ ಗೋಲನ್ನು ನಿರಾಕರಿಸಿದರು. ಹೀಗಾಗಿ, ಆತಿಥೇಯ ತಂಡದ ಆಟಗಾರ್ತಿಯರು ರೆಫರಿಯ ನಿರ್ಧಾರವನ್ನು ಪ್ರತಿಭಟಿಸಿ ಆಟವನ್ನು ಮುಂದುವರಿಸಲು ನಿರಾಕರಿಸಿದರು. ಹೀಗಾಗಿ, ಪಂದ್ಯವನ್ನು 70 ನಿಮಿಷಗಳ ಕಾಲ ತಡೆಹಿಡಿಯಲಾಯಿತು.

ಮೇಲ್ವಿಚಾರಣಾ ಅಧಿಕಾರಿಗಳು ಮತ್ತು ನೇಪಾಳ ತಂಡದ ನಡುವೆ ಸಾಕಷ್ಟು ಚರ್ಚೆಯ ನಂತರ ಪಂದ್ಯ ಪುನರಾರಂಭವಾಯಿತು. ಅದಾದ ಕೆಲವೇ ಸೆಕೆಂಡ್‌ನಲ್ಲಿ ನೇಪಾಳದ ಸಬಿತ್ರಾ ಭಂಡಾರಿ, ಚೆಂಡನ್ನು ಗುರಿ ಸೇರಿಸಿದ್ದರಿಂದ ತಂಡಗಳ ಸ್ಕೋರ್ ಸಮಬಲಗೊಂಡಿತು. ಹೀಗಾಗಿ, ಪೆನಾಲ್ಟಿ ಶೂಟೌಟ್‌ನ ಮೊರೆ ಹೋಗಲಾಯಿತು.





#Cashback Offer available on all Honda two-wheeler models for EMI transactions made using HDFC Bank credit cards & IDFC First Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. ^3 years of standard and 7 years of free extended warranty only on Shine 100. ^This scheme is offered by Authorised Main Dealers and Associate Dealers. ^Offer valid until 31st October 2024. Product shown in the picture may vary from actual product available in the market. Accessories shown in the picture are not part of standard equipment. **Instant online booking facility available at selected Dealership only.

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com